ಸೊಫೊಕ್ಲೇಸ್ ಮಹಾಕವಿಯ

ಅಂತಿಗೊನೆ

ಸೊಫೊಕ್ಲೇಸ್ ಮಹಾಕವಿಯ

ಅಂತಿಗೊನೆ

(ರುದ್ರನಾಟಕ)

ಕನ್ನಡಿಸಿದ್ದು :

ಕ. ವೆಂ. ರಾಘವಾಚಾರ್

ಪ್ರಕಾಶಕರು :

ಶ್ರೀ ರಾಮಚಂದ್ರ ಬುಕ್ ಡಿಪೋ

ಮೈಸೂರು

೧೯೫೬

ಎರಡೂಮುಕ್ಕಾಲು ರೂಪಾಯಿ

ಮೊದಲ ಅಚ್ಚು ೧೯೩೮
ಎರಡನೆಯ ಅಚ್ಚು ೧೯೫೬

ಮೈಸೂರು
ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್



ಮೌಲ್ಟನ್ ದಂಪತಿಗಳು

ನನ್ನ ಗ್ರೀಕ್ ಗುರುದಂಪತಿಗಳಾದ

ಪೂಜ್ಯ ಹ್ಯಾರಲ್ಡ್ ಕೀಲಿಂಗ್ ಮೌಲ್ಟನ್

ಮತ್ತು

ಶ್ರೀಮತಿ ಮಾರ್ಜೋರಿ ಮೌಲ್ಟನ್

ಅವರ ತಿರುವಡಿಯಲ್ಲಿ ಒಪ್ಪಿಸಿದ

ಭಕ್ತಿಯ ಕಾಣಿಕೆ

ಮುನ್ನುಡಿ

ಅನುವಾದ: ಇದು ಗ್ರೀಕ್ ಮೂಲದಿಂದ ಕನ್ನಡಕ್ಕೆ ನೇರವಾದ ಅನುವಾದ. ನಾಟಕದ ಮೊದಲರ್ಧವನ್ನು ಹಳಗನ್ನಡ ಗದ್ಯದಲ್ಲಿ ಅನುವಾದಿಸಿ ಅಭಿಪ್ರಾಯ ಬುದ್ಧಿವಾದ ಮಾರ್ಗದರ್ಶನಗಳಿಗಾಗಿ ನನ್ನ ಗುರುವರ್ಯರಾದ ಶ್ರೀಯವರಿಗೆ ಒಪ್ಪಿಸಿದೆನು. ಅವರು ಕೃಪೆಯಿಟ್ಟು ಓದಿ "ಚೆನ್ನಾಗಿ ಏನೋ ಇದೆ. ಆದರೆ, ಹಳಗನ್ನಡದಲ್ಲಿ ಏಕೆ ಬರೆದೆ? ಒಂದು ಗ್ರೀಕಿನಿಂದ ಮತ್ತೊಂದು ಗ್ರೀಕಿಗೆ ಕನ್ನಡಿಸಿದಂತಿದೆ ಎಂದು ಯಾರಾದರೂ ಆಕ್ಷೇಪಣೆಮಾಡಬಹುದಲ್ಲವೇ? ಹೋಗಲಿ, ಛಂದಸ್ಸಿನಲ್ಲಾದರೂ ಇದ್ದರೆ ಏನೋ ಸಮಾಧಾನ ಹೇಳಬಹುದು. ಈಗಲಾದರೂ ಸರಿ; ಇಲ್ಲ ಹೊಸಗನ್ನಡ ಗದ್ಯಕ್ಕೆ ತಿರುಗಿಸು, ಇಲ್ಲ ಹಳಗನ್ನಡ ಛಂದಸ್ಸಿಗೆ ತಿರುಗಿಸು" ಎಂದು ಹೇಳಿದರು. "ನಾನೆಂದೂ ಪದ್ಯ ಹೆಣೆದವನಲ್ಲ, ಅದರ ಅಭ್ಯಾಸವೇ ನನಗಿಲ್ಲ" ಎಂದು ಅವರಲ್ಲಿ ಅರಿಕೆ ಮಾಡಿಕೊಂಡಾಗ "ಏನೋ, ನೋಡಪ್ಪ! ಹಳಗನ್ನಡವೇ ಬೇಕಾದರೆ, ಒಂದು ಕೈನೋಡು" ಎಂದು ಎಚ್ಚರಿಸಿ ಹುರಿದುಂಬಿಸಿದರು. ಹಳಗನ್ನಡದ ಮೇಲೆ ನನಗೆ ಅಷ್ಟೊಂದು ಕಟ್ಟೊಲುಮೆ, ಗೀಳು, ಇಲ್ಲದೆಹೋಗಿದ್ದರೆ, ಈ ಛಂದಸ್ಸು ಹೆಣೆಯುವ ಕೆಲಸಕ್ಕೆ ಕೈಹಾಕುತ್ತಿರಲಿಲ್ಲ. ಅದರಲ್ಲಿಯೂ 'ಅಶ್ವತ್ಥಾಮನ್'ನಿನ ಘೋಷ ಕಿವಿಯಲ್ಲಿ ಮೊರೆಯುತ್ತಿರುವಾಗ, ಸೊಫೊಕ್ಲೀಸಿನ ಗಾಂಭೀರ್ಯದಲ್ಲಿ ಮನಮುಳುಗಿರುವಾಗ ಛಂದಸ್ಸನ್ನಾದರೂ ಹೆಣೆದು—ತಿಣುಕಿಯಾದರೂ ಹೆಣೆದು—ಹಳಗನ್ನಡಕ್ಕೇ ಹಾಕಬೇಕೆಂಬ ಹಂಬಲಿನಿಂದ ಬಿಡಿಸಿ ತಪ್ಪಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಹಳಗನ್ನಡವನ್ನು ನಾವು ಎಂದೂ ಬಿಡುವಂತಿಲ್ಲ; ಬಿಟ್ಟರೆ ನಮ್ಮ ಸಾಹಿತ್ಯದ ತಳಹದಿಯೇ ಕೊಚ್ಚಿಹೋಗಿಬಿಡುತ್ತದೆ. ಅಲ್ಲದೆ, ಇತರ ಹಲವು ಭಾಷೆಗಳಲ್ಲಿಯಂತೆ ಕನ್ನಡದಲ್ಲಿ ಹಳನುಡಿಗೂ ಹೊಸನುಡಿಗೂ ಗುರುತುಸಿಕ್ಕದಷ್ಟು ಮಾರ್ಪಾಟಿಲ್ಲ. ಆದ್ದರಿಂದ, ಹಳಗನ್ನಡವನ್ನು ಆಲೋಡನೆಯಲ್ಲಿಟ್ಟುಕೊಳ್ಳುವುದು ಅಷ್ಟೇನೂ ಕಷ್ಟವಲ್ಲ. ಹೊಸಗನ್ನಡದ ಬೆಳವಣಿಗೆಗೆ ಎಲ್ಲರೂ ದುಡಿಯಬೇಕಾಗಿದೆಯಾದರೂ ಕೆಲವರಾದರೂ ಒಮ್ಮೊಮ್ಮೆ ಹಳ

ಗನ್ನಡದ ಕೃಷಿಗೆ ಕೈಹಾಕುವುದರಲ್ಲಿ ತಪ್ಪೇನೂ ಕಾಣಲಿಲ್ಲ. ಈ ಹಲಕೆಲವು ಕಾರಣಗಳಿಂದ ನಾಟಕವನ್ನು ಹಳಗನ್ನಡದಲ್ಲಿ ಅನುವಾದಿಸಿದೆ. ಅಲ್ಲದೆ, ಮೂಲ ಗ್ರೀಕಿನ ಭಾವಬಂಧಗಳನ್ನೂ ಅಡಕ ನುಡಿಗಟ್ಟುಗಳನ್ನೂ ಸಾಧ್ಯವಾದಷ್ಟು ಕನ್ನಡದಲ್ಲಿ ಅಚ್ಚೊತ್ತಿಸುವುದಕ್ಕೆ ನನ್ನ ಕೈಯಲ್ಲಿ ಹೊಸಗನ್ನಡಕ್ಕಿಂತ ಹಳಗನ್ನಡ ಹೆಚ್ಚು ಅನುವಾಗಿ ಕಂಡುಬಂದದ್ದೂ ಒಂದು ಕಾರಣವೆನ್ನಬಹುದು. ಆದಷ್ಟು ಮಟ್ಟಿಗೆ ಮೂಲವನ್ನೇ ಅಚ್ಚೊತ್ತಿಸಬೇಕೆಂಬ ಹಟದಿಂದ ಅಲ್ಲಲ್ಲಿ ಕೊಂಚ ತೊಡಕಾಗಿರಬಹುದು; ಹೆಣಿಗೆಯಲ್ಲಿ ಕೈಪಳಕವಿಲ್ಲದ್ದರಿಂದ ಅಲ್ಲಲ್ಲಿ ಸಾಲುಗಳು ಕುಂಟಬಹುದು; ಸಂಸ್ಕೃತ ಶಬ್ದಗಳನ್ನು ಹಿಂದೊತ್ತಿ ಹಳಗನ್ನಡ ಶಬ್ದಗಳನ್ನೂ ದ್ರಾವಿಡ ಶಬ್ದಗಳನ್ನೂ ಹೆಚ್ಚಾಗಿ ಬಳಸಿರುವುದರಿಂದ ಅಲ್ಲಲ್ಲಿ ಅರ್ಥ ಕಷ್ಟವಾಗಿರಬಹುದು. ಈ ಕುಂದುಕೊರತೆಗಳ ತಪ್ಪಿಗಾಗಿ ಓದುಗರ ತಾಳ್ಮೆಯನ್ನು ಬೇಡುತ್ತೇನೆ.

ನಾಟಕವನ್ನು ಪೂರ್ತಿಯಾಗಿ ಅನುವಾದಿಸಿ ಶ್ರೀಯವರಿಗೆ ಒಪ್ಪಿಸಲು ಅವರು ಅದನ್ನು ಮೂಲದೊಡನೆ ಹೋಲಿಸಿಕೊಂಡು ಸಾವಧಾನದಿಂದ ಒಮ್ಮೆ ಓದಿ, ಬಳಿಕ ನನ್ನನ್ನೂ ಪಕ್ಕದಲ್ಲಿ ಕೂರಿಸಿಕೊಂಡು ಮತ್ತೊಮ್ಮೆ ಜತೆಯಲ್ಲಿ ಸಾಲುಸಾಲಾಗಿ ಮೊದಲಿನಿಂದ ಕೊನೆಯ ವರೆಗೂ ಓದಿ ತಪ್ಪುಗಳನ್ನೆಲ್ಲಾ ತಿದ್ದಿಕೊಟ್ಟಿದ್ದಾರೆ. ಎಷ್ಟೋ ದಿನ ಇದಕ್ಕಾಗಿ ನಿದ್ದೆಕೆಟ್ಟು ನಟ್ಟಿರುಳಿನ ವರೆಗೂ ಕೂತು ನನಗೆ ತುಂಬ ಉಪಕಾರಮಾಡಿದ್ದಾರೆ. ಇದೊಂದು ಅನುಗ್ರಹಕ್ಕೇ ಅವರನ್ನು ಎಂದೆಂದೂ ನಾನು ಮರೆಯುವಂತಿಲ್ಲ. ಅಲ್ಲದೆ, ಅಚ್ಚಿನ ಕರಡುಗಳನ್ನೆಲ್ಲ ಮೊದಲಿನಿಂದ ಕೊನೆಯ ವರೆಗೆ ನೋಡಿಕೊಟ್ಟಿದ್ದಾರೆ. ಅವರ ತಿದ್ದುಗೆಯನ್ನೂ ತಪ್ಪಿಸಿಕೊಂಡು ತಪ್ಪುಗಳು ಉಳಿದಿದ್ದರೆ ಅದಕ್ಕೆ ನಾನು ಮಾತ್ರ ಹೊಣೆ.

ನನ್ನ ಗ್ರೀಕ್ ಕಲ್ಕೆ : ನನ್ನನ್ನು ಗ್ರೀಕ್ ಕಲಿಯುವಂತೆ ಹಲವು ಬಗೆಯಲ್ಲಿ ಪ್ರೇರಿಸಿದವರು ನನ್ನ ಗುರುವರ್ಯರಾದ ಶ್ರೀಯವರು. ಅದಕ್ಕಾಗಿ ನನ್ನ ಮೊದಲ ಪರದನೆಗಳನ್ನು ಅವರಿಗೆ ಒಪ್ಪಿಸುತ್ತೇನೆ. ಪಾದ್ರಿಗಳು ಗ್ರೀಕನ್ನು ಅಭ್ಯಾಸಮಾಡಿರುತ್ತಾರೆಂದು ನನಗೆ ತಿಳಿದಿದ್ದದ್ದರಿಂದ ೧೯೩೩ ನೆಯ ಮುಂಬೇಸಗೆಯಲ್ಲಿ ಒಂದು ದಿನ ಬೆಂಗಳೂರಿನಲ್ಲಿರುವ ಪೂಜ್ಯ ಎಸ್. ಜೆ. ಕಾಕ್ಸ್, ಎಂ.ಎ.,

ಅವರ ಮನೆಗೆ ಹೋಗಿ, ಅವರ ಗುರುತು ನನಗೆ ಇಲ್ಲದಿದ್ದರೂ ನನ್ನ ಆಸೆಯನ್ನು ಅವರಲ್ಲಿ ಹೇಳಿ ಅವರ ನೆರವನ್ನು ಕೋರಿದೆನು. ಅವರು ನಾನು ಗ್ರೀಕ್ ಕಲಿಯ ಬೇಕೆಂದಿರುವುದನ್ನು ಕೇಳಿ, ಆಶ್ಚರ್ಯ ಸಂತೋಷಗಳನ್ನು ಸೂಚಿಸಿ "ನನಗೆ ಚೆನ್ನಾಗಿ ಬರುವುದು, ನ್ಯೂ ಟೆಸ್ಟಮೆಂಟ್ ಗ್ರೀಕ್, ಮಹಾಕಾವ್ಯಗಳ (ಕ್ಲ್ಯಾಸಿ ಕಲ್) ಗ್ರೀಕ್ ಬಳಕೆ ತಪ್ಪಿಹೋಗಿದೆ" ಎಂದು ಹೇಳಿದರು. ಆದರೂ ಅಂದೇ ಅಲ್ಲಿಯೇ ಅಕ್ಷರಾಭ್ಯಾಸ ಮಾಡಿಸಿದ್ದಲ್ಲದೆ, ಯಾವುದಾದರೂ ವ್ಯಾಕರಣವನ್ನೂ ಬಾಲಪಾಠವನ್ನೂ ನನಗೆ ಸೂಚಿಸಬೇಕಾಗಿ ದಂಡಿನಲ್ಲಿರುವ ಯುನೈಟೆಡ್ ಥಿಯೊಲಾಜಿಕಲ್ ಕಾಲೇಜಿನ ಗ್ರೀಕ್ ಅಧ್ಯಾಪಕರಾದ ಪೂಜ್ಯ ಎಚ್. ಕೆ. ಮೌಲ್ಟನ್, ಎಂ.ಎ., ಅವರಿಗೆ ಒಂದು ಕಾಗದ ಬರೆದುಕೊಟ್ಟರು. ಅಲ್ಲದೆ, ತಾವು ಮರುದಿನವೇ ಬೇಸಗೆಗಾಗಿ ಎರಡು ತಿಂಗಳು ಬೆಂಗಳೂರನ್ನು ಬಿಟ್ಟು ಹೋಗುವುದಾಗಿಯೂ ಅಂಚೆಯ ಮೂಲಕ ಪ್ರತಿ ವಾರವೂ ಪಾಠಗಳನ್ನು ಬರೆದು ಕಳಿಸುವುದಾಗಿಯೂ ಹೇಳಿ, ಹಾಗೆಯೇ ಸುಮಾರು ಎಂಟು ಪಾಠ ಗಳನ್ನು ಕಲಿಸಿದರು. ಅದಕ್ಕಾಗಿ ನನ್ನ ವಂದನೆಗಳನ್ನು ಅವರಿಗೆ ಒಪ್ಪಿಸುತ್ತೇನೆ. ಅವರು ಕೊಟ್ಟ ಕಾಗದವನ್ನು ಮರುದಿನವೇ ತೆಗೆದುಕೊಂಡು ಹೋಗಿ ಪೂಜ್ಯ ಮೌಲ್ಟನ್ನವರಿಗೆ ಕೊಟ್ಟೆನು. ಅವರು ನನ್ನನ್ನು ಬಹಳ ಆದರದಿಂದ ಬರಮಾಡಿ ಕೊಂಡು ಎಲ್ಲವನ್ನೂ ಸಾವಧಾನವಾಗಿ ಕೇಳಿ, ತರುವಾಯ ಎರಡು ಪುಸ್ತಕಗಳ ಹೆಸರನ್ನು ಬರೆದುಕೊಟ್ಟು, ಅವನ್ನು ಬಹುಶಃ ಇಂಗ್ಲೆಂಡಿನಿಂದ ತರಿಸಬೇಕಾಗ ಬಹುದೆಂದು ಹೇಳಿದರು. ಅಲ್ಲದೆ, ಪುಸ್ತಕಗಳು ಬಂದ ಮೇಲೆ ಬೇಕಾದರೆ ಮತ್ತೊಮ್ಮೆ ತಮ್ಮನ್ನು ಬಂದು ಕಾಣಬಹುದೆಂದೂ ತಿಳಿಸಿದರು. ಜೂನ್ ತಿಂಗಳಲ್ಲಿ ಪುಸ್ತಕಗಳು ಬಂದೊಡನೆಯೇ ಅವರಿಗೆ ಕಾಗದವನ್ನು ಬರೆಯಲು, ತಮ್ಮನ್ನು ಬಂದು ನೋಡುವಂತೆ ಉತ್ತರ ಬಂತು. ಹಾಗೆಯೇ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಅವರನ್ನು ನೋಡಲು ಅಂದೇ ನನಗೆ ಮೊದಲ ಪಾಠ ಹೇಳಿಕೊಟ್ಟು, ನಾನು ಅಲ್ಲಿಗೆ ಪ್ರತಿ ವಾರವೂ ಬರುವುದಾದರೆ ಕೆಲವು ಕಾಲ ಪಾಠ ಹೇಳಿಕೊಡುವುದಾಗಿ ಹೇಳಿದರು. ಅಂದಿನ ಅವರ ಅಪ್ರಾರ್ಥಿತ ಔದಾರ್ಯವನ್ನು ಎಂದೆಂದೂ ಕೃತಜ್ಞತೆಯಿಂದ ನೆನೆಯುತ್ತೇನೆ. ಅವರಲ್ಲಿ ಅಂದು ಮೊದಲುಗೊಂಡ ನನ್ನ ಶಿಷ್ಯವೃತ್ತಿ ಇಂದಿನ ವರೆಗೂ ಅವಿಚ್ಛಿನ್ನವಾಗಿ

ನಡೆದುಬಂದಿರುವುದಲ್ಲದೆ, ದಿನದಿನಕ್ಕೂ ಅಭಿವೃದ್ಧಿಯಾಗುತ್ತಿದೆ. ಅವರು ನನ್ನಲ್ಲಿ ತೋರಿಸುತ್ತಿರುವ ಅವ್ಯಾಜ ಶಿಷ್ಯವಾತ್ಸಲ್ಯಕ್ಕಾಗಿ ಅವರನ್ನು ಎಷ್ಟು ವಂದಿಸಿದರೂ ಸಾಲದು. ಅವರಂತೆಯೇ ಅವರ ಧರ್ಮಪತ್ನಿಯರಾದ ಶ್ರೀಮತಿ ಮಾರ್ಜೊರಿ ಮೌಲ್ಟನ್ನವರೂ ಪುತ್ರವಾತ್ಸಲ್ಯವನ್ನಿಟ್ಟು ಆದರಿಸುತ್ತಿದ್ದಾರೆ. ನನ್ನ ಈ ಗುರುದಂಪತಿಗಳಿಗೂ ನನಗೂ ಇರುವ ವಾತ್ಸಲ್ಯ ಭಕ್ತಿಸಂಬಂಧ ಬಹು ಪವಿತ್ರವಾಗಿದ್ದು ಮಾತಿಗೆ ನಿಲುಕದಿರುವುದರಿಂದ ಅದನ್ನು ಕುರಿತು ಇಲ್ಲಿ ಹೆಚ್ಚಾಗಿ ಹೇಳುವುದಿಲ್ಲ. ನನ್ನ ಕೊನೆಯ ದಿನಗಳ ವರೆಗೂ ಈ ಒಂದು ಭಾಗ್ಯ ನನಗೆ ಸಂದುಬರಲೆಂದು ಭಗವಂತನಲ್ಲಿ ಬೇಡುತ್ತೇನೆ. ಇದೇ ಸಂದರ್ಭದಲ್ಲಿ ಮತ್ತೊಬ್ಬರನ್ನು ನೆನೆಯುವುದು ನನ್ನ ಸಂತೋಷದ ಕರ್ತವ್ಯ. ಪೂಜ್ಯ ಮೌಲ್ಟನ್ನವರು ತಮ್ಮ ತಾಯಿನಾಡಾದ ಇಂಗ್ಲಂಡಿಗೆ ತೆರಳಿದ್ದಾಗ, ಅವರ ಕೋರಿಕೆಯ ಮೇಲೆ, ಈಗ ಯುನೈಟೆಡ್ ಥಿಯೊಲಾಜಿಕಲ್ ಕಾಲೇಜಿನ ಪ್ರಿನ್ಸಿಪಲ್ ಆಗಿರುವ ಡಾಕ್ಟರ್ ರೆವರೆಂಡ್ ಎಂ. ಎಚ್. ಹ್ಯಾರಿಸನ್ನವರು ಒಂದು ವರ್ಷಕಾಲ ನನಗೆ ಗ್ರೀಕ್ ಹೇಳಿಕೊಟ್ಟು ಉಪಕಾರ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸುತ್ತೇನೆ.

ನನಗೆ ಕನ್ನಡ ಹೇಳಿಕೊಟ್ಟವರು ಗುರುವರ್ಯ ಶ್ರೀಯವರು; ಗ್ರೀಕ್ ಹೇಳಿಕೊಟ್ಟವರು ಪೂಜ್ಯ ಮೌಲ್ಟನ್ನವರು. ಹೀಗೆ, ಒಬ್ಬರು ಹೇಳಿಕೊಟ್ಟ ಗ್ರೀಕನ್ನು ಒಬ್ಬರು ಹೇಳಿಕೊಟ್ಟ ಕನ್ನಡಕ್ಕೆ ಹಾಕಲು ಪ್ರಯತ್ನಪಟ್ಟಿದ್ದೇನೆ. ಪ್ರಯತ್ನ ಎಷ್ಟರಮಟ್ಟಿಗೆ ಸಫಲವಾಗಿದೆಯೋ ತಿಳಿಯದು. ಇದರಲ್ಲಿ "ನೀನು ಮಾಡಿದ್ದೇನು?" ಎಂದು ಯಾರಾದರೂ ಕೇಳಬಹುದು. ಅವರಿಗೆ ನಾನು ಕೊಡಲಿರುವ ಉತ್ತರವನ್ನು ಹಿಂದೆಯೇ ಬೇರೆ ಪ್ರಸಂಗದಲ್ಲಿ ದಾಸರು ಕೊಟ್ಟಿದ್ದಾರೆ—"ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆಯುವಂತೆ. . . ." ನನ್ನ ಕೈಮುಟ್ಟಿನಿಂದ ತಿಳಿನೀರು ಕೊಳೆಯಾಗದಿದ್ದರೆ ಅಷ್ಟಕ್ಕೇ ನಾನು ಧನ್ಯ.

ಕಾಣಿಕೆಯೊಪ್ಪಿಕೆ : ನನ್ನ ಮೊದಲ ಹೂವನ್ನು ನನ್ನ ಗುರುವರ್ಯರಾದ ಶ್ರೀಯವರ ತಿರುವಡಿಯಲ್ಲಿ ಒಪ್ಪಿಸಬೇಕಾದ್ದು ನನ್ನ ಕರ್ತವ್ಯ, ನಾನು ಅವರಿಗೆ ಹೊತ್ತ ಕಡ. ಆದರೆ, ನನ್ನ ಈ ಅನುವಾದ ಯಾರ ನಿರ್ವ್ಯಾಜಪ್ರೇಮದಿಂದ ಸಾಧ್ಯವಾಯಿತೋ ಅವರಡಿಯಲ್ಲಿ ಒಪ್ಪಿಸುವುದು ಹೆಚ್ಚು ಉಚಿತವೆಂದು

ಎಣಿಸಿ ನನ್ನ ಗ್ರೀಕ್ ಗುರುದಂಪತಿಗಳ ತಿರುವಡಿಯಲ್ಲಿ ಕಾಣಿಕೆಯಾಗಿ ಒಪ್ಪಿಸಿದ್ದೇನೆ. ಸೊಟ್ಟುಗಳನ್ನೆಲ್ಲ ಸಮರಿ ಕರೆಯಿಲ್ಲದ ಬಾಳು ಬಾಳಿ, ಅದನ್ನು ಅವರ ಹೆಗ್ಗುರಿಯ ಕಡೆಗೆ ನೇರವಾಗಿ ತಿದ್ದಿಕೊಂಡರೆ ಶ್ರೀ ಗುರುಗಳಿಗೆ ನನ್ನ ಕಾಣಿಕೆ ಸಂದಿತೆಂದು ನಂಬುತ್ತೇನೆ.

ಕಡನೆನವು : 'ಪ್ರಬುದ್ಧ ಕರ್ಣಾಟಕ'ದಲ್ಲಿ ಮೊದಲು ಇದನ್ನು ಪ್ರಕಟಿಸಿದ್ದಕ್ಕಾಗಿಯೂ ಅದರಿಂದ ಎತ್ತಿ ತನಿಯಾಗಿ ಅಚ್ಚಿಡುವುದಕ್ಕೆ ಅಪ್ಪಣೆ ಕೊಟ್ಟದ್ದಕ್ಕಾಗಿಯೂ 'ಪ್ರಬುದ್ಧ ಕರ್ಣಾಟಕ'ದ ಸಂಪಾದಕರೂ ನನ್ನ ವಿದ್ಯಾಗುರುಗಳೂ ಆದ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ, ಎಂ.ಎ., ಅವರನ್ನು ವಂದಿಸುತ್ತೇನೆ. ಸೊಫೊಕ್ಲೇಸಿನ ಮತ್ತು ಪುರಾತನ ಗ್ರೀಕ್ ನಾಟಕಶಾಲೆಯ ಚಿತ್ರಗಳ ಪಡಿಯಚ್ಚುಗಳನ್ನು ಬಳಸಿಕೊಳ್ಳಲು ಒಪ್ಪಿಗೆ ಕೊಟ್ಟದ್ದಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಉಪಾಧ್ಯಕ್ಷರೂ ನನ್ನ ವಿದ್ಯಾಗುರುಗಳೂ ಆದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿ, ಎಂ.ಎ., ಅವರಿಗೂ, ಪುರಾತನ ಗ್ರೀಕ್ ನಾಟಕಶಾಲೆಯ ನಕ್ಷೆಯನ್ನು ಬರೆದುಕೊಟ್ಟದ್ದಕ್ಕಾಗಿ ನನ್ನ ಕೆಳೆಯರಾದ ಶ್ರೀಮಾನ್ ಎಂ. ವಿ. ಸೀತಾರಾಮಯ್ಯ, ಎಂ.ಎ., ಅವರಿಗೂ, ಶ್ರೀ ಮೌಲ್ಟನ್ ದಂಪತಿಗಳ ಛಾಯಾಚಿತ್ರ ತೆಗೆದುಕೊಟ್ಟದ್ದಕ್ಕಾಗಿ ನನ್ನ ಕೆಳೆಯರಾದ ಶ್ರೀಮಾನ್ ಎಂ. ಕೆ. ತಿಪ್ಪಯ್ಯ, ಬಿ.ಎ., ಅವರಿಗೂ, ಪುಸ್ತಕವನ್ನು ಅಂದವಾಗಿ ಅಚ್ಚುಹಾಕಿ ಕೊಟ್ಟದ್ದಕ್ಕಾಗಿ ಮೈಸೂರಿನ ವೆಸ್ಲಿ ಪ್ರೆಸ್ಸಿನವರಿಗೂ, ಇನ್ನೂ ಹಲವು ಬಗೆಯಲ್ಲಿ ನನಗೆ ನೆರವಾಗಿರುವ ನನ್ನ ಹಲವು ಕೆಳೆಯರಿಗೂ ನನ್ನ ವಂದನೆಗಳು. ಕೊನೆಯದಾಗಿ, ನಾಟಕದ ಅನುವಾದದಲ್ಲಿಯೂ ಪೀಠಿಕಾಭಾಗಗಳನ್ನು ಬರೆಯುವುದರಲ್ಲಿಯೂ ನಾನು ಉಪಕಾರ ಪಡೆದ ಗ್ರಂಥಗಳ ಕರ್ತೃಗಳಿಗೆ ಋಣಿಯಾಗಿದ್ದೇನೆ.

೪೧. ಗವೀಪುರದ ಹರವು, ಬಸವನಗುಡಿ,
೨-೧೧-೧೯೩೮.

ಕೆ. ವಿ. ರಾಘವಾಚಾರ್

ಗ್ರಂಥಋಣ

SIR RICHARD JEBB: *The Antigone* (a critical edition with notes and translation)

LEWIS CAMPBELL: *Antigone and other Plays* (a critical edition with notes)

F. STORR: *Antigone* (a critical edition. The Loeb Classical Library)

SIR GEORGE YOUNG: *The Drama of Sophocles* (translated into English Verse)

A. E. HAIGH: *The Tragic Drama of the Greeks*

GILBERT NORWOOD: *Greek Tragedy*

J. T. SHEPPARD: *Greek Tragedy*

H. R. JAMES: *Our Hellenic Heritage*

Encyclopaedia Britannica

ಎರಡನೆಯ ಮುದ್ರಣ

ಇದು ಮೊದಲ ಮುದ್ರಣದ ಪುನರ್ಮುದ್ರಣ.

ಸರಸ್ವತೀಪುರ, ಮೈಸೂರು
ಮಾರ್ಚಿ ೧೯೫೬

ಕೆ. ವೆಂ. ರಾಘವಾಚಾರ್

ಒಳಪಿಡಿ

ಗ್ರೀಕ್ ರುದ್ರನಾಟಕ

(ಸ್ಥೂಲಪರಿಚಯ)

೧. ಹುಟ್ಟು ಮತ್ತು ಬೆಳವಣಿಗೆ

ಅನುಕರಣ ಅಭಿನಯಗಳು ಮನುಷ್ಯನಿಗೆ ಅನಾದಿಕಾಲದಿಂದಲೂ ಬಂದ ಹುಟ್ಟುಗುಣಗಳೇ ಆಗಿದ್ದರೂ ಅವುಗಳಲ್ಲಿ ಅಡಗಿದ್ದ ಸಾಮರ್ಥ್ಯಸಾಧ್ಯತೆಗಳನ್ನು ನಾಟಕರೂಪದಲ್ಲಿ ಸಾಧಿಸಿಕೊಂಡದ್ದು ಮಾನವಪ್ರಗತಿಯಲ್ಲಿ ಒಂದು ಮಹತ್ವದ ಸನ್ನಿವೇಶ. ನಾಟಕವೂ ಅದರ ಅನಂತ ಸಾಧ್ಯತೆಗಳೂ ನಮಗೆ ಚಿರಪರಿಚಿತವಾಗಿದ್ದರೂ ನಟರ ಸಂವಾದದ ಮೂಲಕ ಕಥಾನಿರೂಪಣಮಾಡುವ ಕಲೆ ಅನಾದಿಯಲ್ಲ, ಅನಾಯಾಸವಾಗಿ ಬಂದದ್ದಲ್ಲ. ಒಂದೊಂದು ಜನತೆಯ ನಾಟಕ ಚರಿತ್ರೆಯೂ ಒಂದೊಂದು ರೀತಿಯಾಗಿದೆ. ರೋಮನ್ ನಾಟಕಕ್ಕೂ ಅದರ ಮೂಲಕ ಬೈಬಲ್ ಕಥೆಗಳನ್ನು ಕುರಿತ ಪವಾಡ ನಾಟಕಕ್ಕೂ ಆ ಮೂಲಕ ಆಧುನಿಕ ಪಾಶ್ಚಾತ್ಯ ನಾಟಕಕ್ಕೂ ತವರಾದ ಗ್ರೀಕ್ ನಾಟಕದ ಹುಟ್ಟು ಬೆಳವಣಿಗೆಗಳನ್ನು ಬಹು ಸ್ಥೂಲವಾಗಿ ಇಲ್ಲಿ ಗುರುತಿಸುತ್ತದೆ.

ಹುಟ್ಟು : ಸಾಮಾನ್ಯವಾಗಿ, ಎಲ್ಲಾ ದೇಶಗಳಲ್ಲಿಯೂ ಸಾಹಿತ್ಯ ಕಲೆಗಳ ಮೂಲ ಆಯಾ ಜನತೆಯ ಧರ್ಮಪ್ರಕ್ರಿಯೆಗಳಲ್ಲಿ ಕಾಣಬರುತ್ತದೆ. ಗ್ರೀಕ್ ನಾಟಕದ ಒಗೆತವೂ ಹೀಗೆಯೇ. ಗ್ರೀಕ್ ನುಡಿಯಲ್ಲಿ ನಾಟಕ ಎಂಬುದಕ್ಕೆ ಸರಿಮಾತು ದ್ರಾಮ (ಇಂಗ್ಲಿಷ್, ಡ್ರಾಮ). ದ್ರಾಮ ಎಂದರೆ ಮಾಡಿದ್ದು, ಮಾಟ, ಕೃತಿ, ಕಾರ್ಯ ಎಂದರ್ಥ. ಹಾಗೆಯೇ ನಾಟಕಶಾಲೆ ಎಂಬುದಕ್ಕೆ ಸರಿಮಾತು ಥೆಯಾತ್ರೊನ್ (ಇಂಗ್ಲಿಷ್, ಥಿಯೇಟರ್). ಥೆಯಾತ್ರೊನ್ ಎಂದರೆ ನೋಡುವ ಸ್ಥಳ ಎಂದರ್ಥ. ಎಂದರೆ, ನಾಟಕದಲ್ಲಿ ಮಾತಿಗಿಂತ ಮೊದಲು ಮಾಟ, ಕಿವಿಗಿಂತ ಮೊದಲು ಕಣ್ಣು. ಮಾಟ ಯಾವುದು? ನೋಟ ಯಾವುದು? ಮಾಟ—ದೇವತೆಯ ಅಥವಾ ವೀರನ ಪೂಜೆ. ನೋಟ—ಕುಣಿತ. ಗ್ರೀಕ್ ನಾಟಕದ ಹುಟ್ಟು ಗ್ರೀಕರ ಧರ್ಮಪ್ರಕ್ರಿಯೆಗಳಲ್ಲಿದೆ ಎಂದು ಎಲ್ಲರೂ ಒಪ್ಪುತ್ತಾರಾದರೂ ಯಾವ ನಿರ್ದಿಷ್ಟ ಧರ್ಮಪ್ರಕ್ರಿಯೆಯಿಂದ ಅದು ಬಂತೆಂದು ಹೇಳುವಲ್ಲಿ

ಒಮ್ಮತವಿಲ್ಲ. ಹಲವರು ಹಲವು ಬಗೆಯಾಗಿ ಎಣಿಸುತ್ತಾರೆ. ಆದರೆ, ಈ ವಿಚಾರದಲ್ಲಿ ಇಲ್ಲಿಯ ವರೆಗೆ ಬಂದಿರುವ ಅಭಿಪ್ರಾಯಗಳನ್ನೂ ವಾದಗಳನ್ನೂ ಸಾಮಾನ್ಯವಾಗಿ ಎರಡು ಪಂಗಡವಾಗಿ ವಿಂಗಡಿಸಬಹುದು. ಗ್ರೀಕ್ ನಾಟಕದ ಆದಿಮೂಲವನ್ನು ಪ್ರಕೃತಿ ವ್ಯಾಪಾರದಲ್ಲಿ, ಅದರಲ್ಲಿಯೂ ಸಸ್ಯಜೀವನದಲ್ಲಿ, ಕಂಡುಬರುವ ಅಳಿವು ಮತ್ತು ಮರುಹುಟ್ಟು, ಮರಣ ಮತ್ತು ಪುನರ್ಜನ್ಮ—ಈ ಭಾವವನ್ನು ಗರ್ಭೀಕರಿಸಿ ಜನರು ನಡಸುತ್ತಿದ್ದ ವರ್ಷೋತ್ಸವದಲ್ಲಿ ಕಾಣಬಹುದೆಂದು ಒಂದು ಪಂಗಡದವರೂ ಸತ್ತವರ ಪ್ರೇತಪೂಜೆ ಸಮಾಧಿಪೂಜೆಗಳಲ್ಲಿ ಕಾಣಬಹುದೆಂದು ಮತ್ತೊಂದು ಪಂಗಡದವರೂ ವಾದಿಸುತ್ತಾರೆ.

ಮೊದಲನೆಯ ಪಂಗಡದವರ ವಾದ: ಪ್ರಕೃತಿಯಲ್ಲಿ ಕಂಡುಬರುವ ಜೀವಶಕ್ತಿ ಚೈತನ್ಯಗಳನ್ನು ಮನುಷ್ಯನು ಅನುಭವಿಸಿ ಕುಣಿತ ಮತ್ತು ಹಾಡುಗಳ ಮೂಲಕ ಹೊರದೋರಿಸುತ್ತಿದ್ದನು. ಕಾಲಗತಿಯಲ್ಲಿ ಹೋದ ವರ್ಷದ ನಷ್ಟ ಚೈತನ್ಯಕ್ಕೂ ಬರುವ ವರ್ಷದ ನವಚೈತನ್ಯಕ್ಕೂ ಎಡೆಬಿಡದೆ ನಡೆಯುವ ಹೋರಾಟ ತಿಕ್ಕಾಟಗಳು ಈ ನಿರೂಪಣೆಗಳಲ್ಲಿ ಮೂಡಿ ಕಾಣುತ್ತಿದ್ದುವು. ಥ್ರೇಸ್ ಮೊದಲಾದ ಹಲವೆಡೆಯ ಹಳೆಯ ಗ್ರೀಕ್ ಹಳ್ಳಿಗಳಲ್ಲಿ ಜನರು ತಮಗೇ ತಿಳಿಯದೆ, ದಿಯೊನೂಸೊಸ್ ದೇವತೆಯ ಉಪಾಸನಾ ಪ್ರಕ್ರಿಯೆಗಳಲ್ಲಿ ಕೆಲವನ್ನು ಹಿಂದಿನಿಂದಲೂ ಉಳಿಸಿಕೊಂಡು ಬಂದು ಈಗಲೂ ಅವನ್ನು ನಡಸುತ್ತಿದ್ದಾರೆ. ಮೂಕನಟರು ಆಡಿನ ತೊಗಲು ಹೊದೆದು, ತೊಗಲ ಮೊಗವಾಡ ವಿಟ್ಟು ಆಟವಾಡುತ್ತಾರೆ. ಆ ಆಟದಲ್ಲಿ ಕರಿಯ ಆಡಿನ ವೇಷದವನೊಬ್ಬನು ಬಿಳಿಯ ಆಡಿನ ವೇಷದವನೊಬ್ಬನನ್ನು ಕೊಂದುಬಿಡುತ್ತಾನೆ. ಮಡಿದ ವೀರನ ಮಡದಿ ತನ್ನೊಡೆಯನ ಅಳಿವಿಗಾಗಿ ಅಳುತ್ತಾಳೆ. ಪ್ರಕೃತಿಯ ಸಸ್ಯಜೀವನದಲ್ಲಿ ಕಂಡುಬರುವ ಸಾವು ಮರುಹುಟ್ಟುಗಳನ್ನು ಗರ್ಭೀಕರಿಸಿ ತೋರಿಸುವ ಇಂಥ ಯಾವುದಾದರೂ ಒಂದು ಉತ್ಸವಪ್ರಕ್ರಿಯೆ ಎಲ್ಯೂಥೆರಯ್[1]-ದಿಯೊನೂಸೊಸ್ ದೇವತೆಯ ಪೂಜೆಯಲ್ಲಿ ಇದ್ದಿರಬೇಕು. ಆ ದೇವತಾಸ್ವರೂಪವಾದ ಆಡನ್ನು ಸಿಗಿದು ಸೀಳುವುದು, ಅಳುವುದು, ಸತ್ತ ಆಡನ್ನು ಅರಸುವುದು, ಮತ್ತೆ ಕಾಣುವುದು, ಮರುಹುಟ್ಟಿನ ಆಡನ್ನು ಕಂಡು ನಲಿದು ಕುಣಿವಾಡುವುದು—

1 ಎಲ್ಯೂಥೆರಯ್ ಅಟಿಕದ ಬಡಗು ಎಲ್ಲೆಯಲ್ಲಿಯ ಒಂದು ಹಳ್ಳಿ.

ಇದು ಆ ಪೂಜೆಯಲ್ಲಿ ಪ್ರಧಾನಾಂಗವಾಗಿ ಸೇರಿದ್ದಿರಬಹುದು. ರುದ್ರನಾಟಕದ ಹೆಸರು—ತ್ರಗೋದಿಯ (ಇಂಗ್ಲಿಷ್, ಟ್ರ್ಯಾಜೆಡಿ), ಅಜಗೀತೆ, ಆಡಿನ ಹಾಡು,—ಮೊಗವಾಡ, ಕುಣಿತ, ಹಾಡು, ಮೇಳ, ಕೊನೆಗೆ ರುದ್ರನಾಟಕದ ವಸ್ತು ಕೂಡ—ಯಾವುದಾದರೊಂದು ದೇವತೆಯ ಅಥವಾ ವೀರನ ಪಾಡು, ಅಳಲು, ಮುರಿತ—ಇವೆಲ್ಲವೂ ಆ ಉಪಾಸನಾಪ್ರಕ್ರಿಯೆಯಲ್ಲಿ ಅಡಗಿವೆ ಎನ್ನಬಹುದು.

ಎರಡನೆಯ ಪಂಗಡದವರ ವಾದ: ಗ್ರೀಕ್ ನಾಡಿನ ಸಮೃದ್ಧಿ ಮಡಿದ ವೀರರಿಗೂ ಅವರ ಸಮಾಧಿಗಳಿಗೂ ತಪ್ಪದೆ ಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದದ್ದರ ಮೇಲೆ ನಿಂತಿತ್ತು. ಸುಮಾರು ಕ್ರಿ.ಪೂ. ೬ ನೆಯ ಶತಮಾನದ ವರೆಗೂ ಆಟಿಕದವರ ಧರ್ಮಜೀವನದಲ್ಲಿ ಒಲುಂಪೊಸ್ ದೇವತೆಗಳಿಗಿಂತ ಹೆಚ್ಚಾಗಿ ಸ್ಥಳೀಯ ವೀರರೇ ಪ್ರಾಮುಖ್ಯಗೊಂಡಿದ್ದರು. ಪ್ರತಿ ವರ್ಷವೂ ಭಕ್ತರು ವೀರಸಮಾಧಿಗಳ ಸುತ್ತ ನೆರೆದು ಅವರ ಸಾಹಸಗಳನ್ನು ನೆನೆದು ಹಾಡಿ ಕುಣಿದು ಜಾತ್ರೆ ನಡಸುತ್ತಿದ್ದರು. ಕೆಲವು ವೇಳೆ ತಾವೇ ಆ ವೀರರ ವೇಷವನ್ನು ಹಾಕಿಕೊಂಡು ಅವರ ತೇಜಸ್ಸು ತಮ್ಮೊಳಹೊಗುವಂತೆ ಮಾಡಿಕೊಳ್ಳುತ್ತಿದ್ದರು. ಆ ವೀರ (ಸಮಾಧಿ) ಪೂಜೆಯೇ ನಾಟಕಕ್ಕೆ ಆದಿಮೂಲ. ಇದಕ್ಕೆ ನಿದರ್ಶನವಾಗಿ, ಈಗ ಉಳಿದುಬಂದಿರುವ ಕೆಲವು ಗ್ರೀಕ್ ರುದ್ರನಾಟಕಗಳು ಯಾರಾದರೊಬ್ಬ ವೀರನ ಸಮಾಧಿಯ ಸುತ್ತ ಕಟ್ಟಿದುವಾಗಿವೆ ಅಥವಾ ಅವುಗಳಲ್ಲಿ ವೀರಸಮಾಧಿ ಮುಖ್ಯಭಾಗ ವಹಿಸಿದುವಾಗಿವೆ.[2]

ಈ ಎರಡು ಪಂಗಡದವರ ವಾದಗಳಲ್ಲಿ ಯಾವೊಂದನ್ನೂ ಸಂಪೂರ್ಣವಾಗಿ ಒಪ್ಪುವಂತೆಯೂ ಇಲ್ಲ, ಬಿಡುವಂತೆಯೂ ಇಲ್ಲ. ದಿಯೊನೂಸೊಸ್ ದೇವತೋಪಾಸನೆ, ವೀರ (ಸಮಾಧಿ) ಪೂಜೆ, ನೃತ್ಯಗೀತಗಳ ಮೇಳ, ಹೋಮರ್ ಕವನಗಳ ಪಠನ—ಇವೆಲ್ಲವೂ ಒಂದೊಂದೂ ಒಂದೊಂದು ಬಗೆಯಲ್ಲಿ ಗ್ರೀಕ್ ರುದ್ರನಾಟಕದ ಬೆಳವಣಿಗೆಗೆ ನೆರವಾಗಿವೆಯೆಂದರೆ ಹೆಚ್ಚು ತಪ್ಪಾಗಲಾರದು. ಗ್ರೀಕ್ ರುದ್ರನಾಟಕದ ಆದಿಮೂಲ ಎಲ್ಲಿಯಾದರೂ ಇರಲಿ, ಅದು ನಮಗೆ ಈಗ

---

[2] ಇದು ನಿಜವಾದರೂ ಯಾವ ರೀತಿಯಲ್ಲೂ ಸಮಾಧಿ ಸಂಬಂಧವಿಲ್ಲದ ಕೆಲವು ಪ್ರಖ್ಯಾತ ಗ್ರೀಕ್ ನಾಟಕಗಳು ಇವೆ.

ಪರಿಚಿತವಾಗಿರುವ ರೂಪದಲ್ಲಿ ದಿಯೊನೂಸೊಸ್ ದೇವತೋಪಾಸನೆಯೊಡನೆ ಜೀವಂತ ಸಂಬಂಧವುಳ್ಳದ್ದಾಗಿದೆ. ಅದರ ವೈಶಿಷ್ಟ್ಯವನ್ನೂ ಸೊಬಗು ಬೆಡಗುಗಳನ್ನೂ ಅರಿತು ಅನುಭವಿಸಬೇಕಾದರೆ ದಿಯೊನೂಸೊಸ್ ದೇವತೆಯ ವಿಷಯವನ್ನು ಕೊಂಚಮಟ್ಟಿಗೆ ತಿಳಿಯುವುದು ಆವಶ್ಯಕ.

ದಿಯೊನೂಸೊಸ್ ದೇವತೆ : ದಿಯೊನೂಸೊಸ್ ಗ್ರೀಕ್ ದೇವತೆಗಳಲ್ಲಿ ಬಹು ಮುಖ್ಯರಾದವರಲ್ಲೊಬ್ಬನಾದರೂ ಹೊರಗಿನಿಂದ ಬಂದು ಸೇರಿದ ದೇವತೆ. ಏಷ್ಯಾಮೈನರಿನ ಫ್ರಿಜಿಯ, ಲಿಡಿಯ ಮೊದಲಾದೆಡೆಗಳಿಂದ ಹೊರಟು ಈಜಿಯನ್ ಕರೆನಾಡುಗಳನ್ನು ಹಾದು ಕ್ರಮೇಣ ಗ್ರೀಸಿನಲ್ಲಿ ಬೇರೂರಿದಂತೆ ಕಾಣುತ್ತದೆ. ಮೊದಮೊದಲು ಅವನಿಗೆ ಒಲುಂಪೊಸ್ ದೇವತೆಗಳ ಪಂಕ್ತಿಯಲ್ಲಿ ಅಷ್ಟಾಗಿ ಮನ್ನಣೆ ದೊರೆಯದಿದ್ದರೂ ಬರುಬರುತ್ತ ಆ ದೇವತೆಯ ಪ್ರಾಬಲ್ಯ ಹೆಚ್ಚಿತು. ದಿಯೊನೂಸೊಸ್ಸಿಗೆ ಬಾಖೊಸ್ ಎಂಬ ಮತ್ತೊಂದು ಹೆಸರೂ ಬಹಳ ಬಳಕೆಯಲ್ಲಿದೆ. ಅವನು ಸಸ್ಯಾಧಿದೇವತೆ ; ಅದರಲ್ಲಿಯೂ ಅವನಿಗೆ ದ್ರಾಕ್ಷಾಲತೆ ಬಹು ಪ್ರಿಯ. ವಸಂತಕಾಲ ಆ ದೇವತೆಯ ಉತ್ಸವಕ್ಕೆ ಮೀಸಲಾದ್ದು. ವಸಂತಕಾಲದಲ್ಲಿ ಮಾಗಿಯ ಜಾಡ್ಯವನ್ನು ನೀಗಿ ಕಾವೇರಿಸಿ ಹೊಸ ಜೀವ ತುಂಬಿ ನೆಲವನ್ನು ಹುಲಿಸುಮಾಡಿ ಹಸುರು ಹೊದಿಸುವವನು ಆ ದೇವತೆಯೇ. ಇದರಿಂದ ಗ್ರೀಕರ ಭಾವನೆಯಲ್ಲಿ ಅವನು ಪ್ರಕೃತಿಯ ಸರ್ವವಿಧ ಪ್ರಭವಶಕ್ತಿಗಳಿಗೂ ಅಧಿದೇವತೆಯಾಗಿ ಪರಿಣಮಿಸಿದನು. ಅಲ್ಲದೆ ಜನನಶಕ್ತಿಯ ಚಿಹ್ನೆಯಾದ ಲಿಂಗ ಆ ದೇವತೆಗೆ ಲಾಂಛನವಾಗಿ ಅವನ ಪೂಜಾ ಪ್ರಕ್ರಿಯೆಯಲ್ಲಿ ವಿಶೇಷಸ್ಥಾನ ಪಡೆಯಿತು. ಆದರೂ ದಿಯೊನೂಸೊಸ್ ದೇವತೆಯನ್ನು ಮುಖ್ಯವಾಗಿ ದ್ರಾಕ್ಷಾವನಾಧಿದೇವತೆಯನ್ನಾಗಿಯೂ ಮದ್ಯಾಧಿದೇವಯತೆನ್ನಾಗಿಯೂ ಭಾವಿಸಿ ಗೌರವಿಸಿರುವುದೇ ಹೆಚ್ಚು. ಕಳ್ಳು ಕುಡಿಸಿ, ನೋವು ಮರಸಿ, ನಲಿವು ತಂದು, ಬದುಕನ್ನು ಹೊರೆಯಿಳಿಸಿ ಹಗುರಮಾಡುವವನು ಅವನು. ಆಳುಗಳ ಒರಟುತನವನ್ನು ಸಯಕ್ಕೆ ತಿದ್ದುವವನು ಅವನು.

ದಿಯೊನೂಸೊಸ್ ದೇವತೆಯ ಪರ್ಯಟನೆಗಳಲ್ಲೂ ಸಾಹಸಕೃತ್ಯಗಳಲ್ಲೂ ಅವನಿಗೆ ಪರಿವಾರವಾಗಿ ಹಲವು ಚಿತ್ರವಿಚಿತ್ರ ಪೌರಾಣಿಕ ವ್ಯಕ್ತಿಗಳಿದ್ದರು. ಅವರಲ್ಲಿ ಅಗ್ರಗಣ್ಯರಾದವರು 'ಸತುರೊಸ್'ಗಳೆಂಬುವರು. ಪೊದೆನವಿರು,

ನಿಡುಗಿವಿ, ಮೊಂಡುಮೂಗು, ಆಡಿನ ಕಾಲು ಮತ್ತು ಬಾಲ—ಇವುಗಳಿಂದ ಕೂಡಿ ಅರ್ಧ ಮನುಷ್ಯ ಅರ್ಧ ಪ್ರಾಣಿಗಳಾದ ಆ ರೂಕ್ಷವ್ಯಕ್ತಿಗಳು ತಮ್ಮ ಕ್ಲೈಬ್ಯಕ್ಕೂ ವಿಷಯಲಾಂಪಟ್ಯಕ್ಕೂ ಪ್ರಖ್ಯಾತರಾಗಿದ್ದರು. ಆದರೆ ಹಸನ್ಮುಖರೂ ಕ್ರೀಡಾಸಕ್ತರೂ ವಿನೋದಪ್ರಿಯರೂ ಆಗಿದ್ದರು. ಆ ಪರಿವಾರದವರಲ್ಲಿ ಸುತರೊಸ್‍ಗಳಷ್ಟೇ ಪ್ರಖ್ಯಾತರಾದವರು 'ಬಾಖೇ'ಗಳೆಂಬುವರು. ತಲೆ ಕೆದರಿಕೊಂಡು ಜಾಲರಿ ಬಡಿಯುತ್ತ, ದಿಯೊನೂಸೊಸ್ಸಿನ ಇಂದ್ರಜಾಲ ದಂಡವನ್ನು ಝುಳಪಿಸುತ್ತ, ಆವೇಶಗೊಂಡು ಕೊಳಲಗಾನಕ್ಕೆ ಕುಣಿಯುವ ಹೆಣ್ಣುಗಳಿವರು. ಇವರಲ್ಲದೆ, ಕಿನ್ನರಾದ್ಯರೂ ಶಾಂತಿ, ಕಾಮ, ಕಲಾ ಮೊದಲಾದ ಅಧಿದೇವತೆಗಳೂ ದಿಯೊನೂಸೊಸ್ಸಿನ ಆಸ್ಥಾನವನ್ನು ಮಂಡಿಸುತ್ತಿದ್ದರು. ದಿಯೊನೂಸೊಸ್ ಮದ್ಯಪ್ರಿಯನೆಂದು ಮೊದಲೆ ಹೇಳಿದೆ. ಮದ್ಯ ನೃತ್ಯಕ್ಕೂ ಗೀತಕ್ಕೂ ಪ್ರೇರಕವಾದ್ದರಿಂದ ಆ ದೇವತೆ ಅಪೊಲ್ಲೋನ್ ದೇವತೆಯಂತೆ ಸಂಗೀತ ಸಾಹಿತ್ಯಾಧಿದೇವತೆಯೂ ಆಗಿದ್ದನು. ಆದರೆ, ಅಪೊಲ್ಲೋನಿಗೆ ಮೀಸಲಾದ ಸ್ತೋತ್ರಗಳಲ್ಲಿ ಸಪ್ರಮಾಣ ಬಂಧವೂ ಗಂಭೀರೋದಾತ್ತ ಭಾವವೂ ದಿಯೊನೂಸೊಸ್ಸಿಗೆ ಮೀಸಲಾದುವುಗಳಲ್ಲಿ ಸ್ವಚ್ಛಂದ ಬಂಧವೂ ಸರ್ವಭಾವ ಸ್ವಾತಂತ್ರ್ಯವೂ ಕಂಡುಬರುತ್ತವೆ. ಈ ಸ್ವಚ್ಛಂದ ವೃತ್ತಿಯೂ ಭಾವ ಸ್ವಾತಂತ್ರ್ಯವೂ ಸರ್ವವಿಧವಾದ ಭಾವ ಬಂಧ ವೈವಿಧ್ಯಗಳಿಗೂ ಅವಕಾಶ ಕೊಟ್ಟು ಆ ವೈವಿಧ್ಯದಿಂದ ದಿಯೊನೂಸೊಸ್ ಮೇಳಗೀತಕ್ಕೆ ಒಂದು ವಿಶಿಷ್ಟ ಸಾಮರ್ಥ್ಯ ದೊರೆತು, ಪರಸ್ಪರ ವಿರುದ್ಧಪ್ರಕೃತಿಯವಾದ ರುದ್ರನಾಟಕ, ಅಣಕನಾಟಕ, ಹರ್ಷನಾಟಕಗಳಿಗೂ ದಿಯೊನೂಸೊಸ್ ಮೇಳವೇ ಮೂಲವಾಯಿತು.

ದಿಯೊನೂಸೊಸ್ ಉತ್ಸವ: ಗ್ರೀಕ್ ರುದ್ರನಾಟಕ ಕೊನೆಗೆ ಎಲ್ಲಾ ಗ್ರೀಕರ ಒಡವೆಯೂ ಹೆಮ್ಮೆಯೂ ಆಗಿ ಪರಿಣಮಿಸಿತಾದರೂ ಅದನ್ನು ಬೆಳಸಿ, ಮೆರಸಿ, ಹಿರಿಯ ನೆಲೆಗೆ ತಂದವರು ಅಥೆನ್ಸಿನವರು. ಅದರ ಸರ್ವ ವೈಶಿಷ್ಟ್ಯವೂ ಅಥೆನ್ಸಿನದು. ಗ್ರೀಕ್ ರುದ್ರನಾಟಕ ಅಥೆನ್ಸಿನಲ್ಲಿ ನಡೆಯುತ್ತಿದ್ದ ದಿಯೊನೂಸೊಸ್ ದೇವತೆಯ ಜಾತ್ರೆಯಿಂದ ಬೆಳೆಯಿತು. ಆದ್ದರಿಂದ, ಗ್ರೀಸಿನ ಉಳಿದೆಡೆಗಳಲ್ಲಿಯೂ ಆ ದೇವತೆಯ ಉತ್ಸವಗಳು ನಡೆಯುತ್ತಿದ್ದುವಾದರೂ ಇಲ್ಲಿ ಅಥೆನ್ಸಿನದನ್ನು ಮಾತ್ರ ಕುರಿತು ಹೇಳುತ್ತದೆ. ದಿಯೊನೂಸೊಸ್ ಉತ್ಸವ

ಮೊದಲು ಅಟಿಕದ ಬಡಗು ಎಲ್ಲೆಯಲ್ಲಿಯ ಎಲ್ಯೂಥೆರಯ್ ಎಂಬ ಹಳ್ಳಿಯಲ್ಲಿ ನಡೆಯುತ್ತಿತ್ತು. ಆ ದೇವತೆಯನ್ನು ಅಥೆನ್ಸ್ ಪಟ್ಟಣಕ್ಕೆ ಕರೆತಂದು ದೇವಾಲಯ ಕಟ್ಟಿಸಿ ಪ್ರತಿ ವರ್ಷವೂ ಜಾತ್ರೆ ಏರ್ಪಡಿಸಿ ಅದರ ಅಂಗವಾಗಿ ನಾಟಕ ಸ್ಪರ್ಧೆ ಏರ್ಪಡಿಸಿದವನು ಪಿಸಿಸ್ತ್ರತೊಸ್ ಪ್ರಭು ಎನ್ನುತ್ತಾರೆ. ಅದು ಹೇಗಾದರೂ ಇರಲಿ, ಆ ಜಾತ್ರೆಯ ಮಹತ್ವವನ್ನು ಹೆಚ್ಚಿಸಿ ವಿಜೃಂಭಣೆಯಿಂದ ನಡಸಿದವನೇನೋ ಪಿಸಿಸ್ತ್ರತೊಸ್.

ಅಥೆನ್ಸಿನಲ್ಲಿ ದಿಯೊನೂಸೊಸ್ ದೇವತೆಗೆ ಎರಡು ಜಾತ್ರೆಗಳು ನಡೆಯುತ್ತಿದ್ದುವು. ಒಂದು—ಗಿಡಮರಗಳೆಲ್ಲಾ ಕುಡಿಯಿಟ್ಟು ತಳಿತು, ಹೊಸ ಜೀವಕಳೆಯಿಂದ ನೆಲ ನಲಿಯುವ ಮತ್ತು ಹೋದ ವರ್ಷದ ದ್ರಾಕ್ಷಾರಸ ಹುಳಿತು ಬಲಿತು ಕುಡಿತಕ್ಕೆ ಸಿದ್ಧವಾಗುವ ವಸಂತದಲ್ಲಿ. ಮತ್ತೊಂದು—ವರ್ಷದ ದುಡಿಮೆಯೆಲ್ಲವೂ ಮುಗಿದು ಬೆಳಸು ಕೈಗೆ ಬಂದ ತರುವಾಯ ಮಾಗಿಯಲ್ಲಿ. ಆ ಜಾತ್ರೆಗಳಿಗೆ ಊರಿನವರೆಲ್ಲರೂ—ಗಂಡಸರು, ಹೆಂಗಸರು, ಮಕ್ಕಳು ನೆರೆಯುತ್ತಿದ್ದರು. ಜಾತ್ರೆಯ ಮೊದಲ ಅಂಗವಾಗಿ ದಿಯೊನೂಸೊಸ್ ದೇವತೆಯ ವಿಗ್ರಹವನ್ನು ದೇವಾಲಯದಿಂದ ಹೊರಗೆ ಎಲ್ಯೂಥೆರಯ್ ಹಳ್ಳಿಯ ಬೀದಿಯಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಿ ಮತ್ತೆ ಹಿಂದೆಗೆದುಕೊಂಡು ಬಂದು, ಗುಡಿಯ ಮುಂದಣ ಬಲಿಪೀಠದ ಎದುರಿಗೆ ಜಾತ್ರೆಯ ಅಧ್ಯಕ್ಷದೇವತೆಯಾಗಿ ಬಿಜಯ ಮಾಡಿಸುತ್ತಿದ್ದರು. ಮೆರವಣಿಗೆಯಲ್ಲಿ ಮುಂದುಗಡೆ ಹೊಂದೊಡವು ತೊಟ್ಟು ತಲೆಯ ಮೇಲೆ ಕಳಸದಲ್ಲಿ ರೊಟ್ಟಿ, ಹೂಮಾಲೆ, ಕತ್ತಿಗಳನ್ನು ಹೊತ್ತು ಹೆಣ್ಣೊಬ್ಬಳು ನಡೆಯುತ್ತಿದ್ದಳು. ಉಳಿದವರು ಅವಳ ಹಿಂದೆ ದ್ರಾಕ್ಷಿ, ಅಂಜೂರ, ಮದ್ಯ ಮೊದಲಾದುವನ್ನು ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲದೆ, ದಿಯೊನೂಸೊಸ್ ಲಾಂಛನವಾದ ಲಿಂಗವನ್ನು ಎತ್ತರದಲ್ಲಿ ತೂಗಿ ಹಿಡಿದುಕೊಂಡು ಹೋಗುತ್ತಿದ್ದರು. ಮೆರವಣಿಗೆ ಬಂದು ದೇವತೆ ಬಿಜಯ ಮಾಡಿದೊಡನೆಯೇ ಆಡೊಂದನ್ನು ಬಲಿಕೊಟ್ಟು, ಬಲಿಯ ಸಮಯದಲ್ಲಿ ನೃತ್ಯ ಗೀತಗಳನ್ನು ನಡಸುತ್ತಿದ್ದರು. ಕುಡಿತ ಕುಣಿತಗಳಿಂದ ದಿನ ಕೊನೆಗೊಳ್ಳುತ್ತಿತ್ತು. ಮಾಗಿಯ ಉತ್ಸವ ಹರ್ಷನಾಟಕಗಳಿಗೂ ವಸಂತದ ಉತ್ಸವ ರುದ್ರನಾಟಕಗಳಿಗೂ ತವರಾದುವು.

ದೀಥುರಂಬೊಸ್ ಗೀತ : ವಸಂತಜಾತ್ರೆಯಲ್ಲಿ ಉಪಾಸನಾದೇವತೆಯಾದ ದಿಯೊನೂಸೊಸ್ಸಿನ ಮಹಿಮೆಗಳನ್ನೂ ಉಪಕಾರಗಳನ್ನೂ ಕುರಿತು 'ದೀಥುರಂಬೊಸ್'ಗಳೆಂಬ ಗೀತಗಳನ್ನು ಹಾಡುತ್ತಿದ್ದರು. ಈ ದೀಥುರಂಬೊಸ್ ಗೀತವೇ ಗ್ರೀಕ್ ರುದ್ರನಾಟಕಕ್ಕೆ ನೇರ ತವರು. ಈ ಗೀತವೂ ದಿಯೊನೂಸೊಸ್ ಉಪಾಸನೆಯ ಇತರ ಪ್ರಕ್ರಿಯೆಗಳಂತೆಯೇ ಫ್ರಿಜಿಯದಿಂದ ಬಂದಿರಬಹುದು. ಈ ಗೀತವನ್ನು ಮೇಳದವರು ನೃತ್ಯಾಭಿನಯಗಳಿಂದ ಕೊಳಲ ಹಿಮ್ಮೇಳಕ್ಕೆ ಹಾಡುತ್ತಿದ್ದರು. ಮೇಳದವರು ದಿಯೊನೂಸೊಸ್ ಪರಿವಾರದವರಾದ 'ಸತುರೊಸ್'ಗಳಂತೆ ವೇಷ ಹಾಕಿಕೊಂಡು ಬೇಳುಗಂಬದ ಹೊಗೆಯ ಸುತ್ತಲೂ ಹಾಡುತ್ತಾ ಕುಣಿಯುತ್ತಿದ್ದರು. ದಿಯೊನೂಸೊಸ್ಸಿನ ಸಾಹಸ ಪರಾಕ್ರಮಗಳನ್ನು ವರ್ಣಿಸುವುದೇ ಅದರ ಉದ್ದೇಶವಾಗಿತ್ತು.

ಆರಿಯೋನ್ : ಈ ದೀಥುರಂಬೊಸ್ ಬಹುಕಾಲ ಜನಪದಗೀತವಾಗಿಯೇ ಉಳಿದು ಹಳ್ಳಿಯ ಒಕ್ಕಲಿಗರಲ್ಲಿ ಮಾತ್ರ ನಿಂತಿತ್ತು. ಅದಕ್ಕೆ ಸರಿಯಾದ ಸಾಹಿತ್ಯಸ್ಥಾನವನ್ನು ದೊರಕಿಸಿಕೊಟ್ಟವರು ಡೋರಿಯನ್ನರು. ಅದಕ್ಕಾಗಿ ದುಡಿದವರಲ್ಲಿ ಅಗ್ರಗಣ್ಯನಾದವನು ಆರಿಯೋನ್ (ಕ್ರಿ.ಪೂ. ೬-೭ ಶತಮಾನ). ದೀಥುರಂಬೊಸ್ಸನ್ನು ಕಂಡುಹಿಡಿದವನೂ ಅವನೇ ಎಂದು ಕೆಲವರು ನಂಬಿದ್ದರು. ಅದು ನಿಜವಲ್ಲದಿದ್ದರೂ ಆ ಮೇಳಗೀತಕ್ಕೆ ಒಂದು ಕ್ರಮ, ನಿಯಮ, ಪದ್ಧತಿ ಕೊಟ್ಟು ಅದನ್ನು ವ್ಯವಸ್ಥೆಗೊಳಿಸಿದವನು ಅವನೇ ಎಂದು ತೋರುತ್ತದೆ. ಬಹುಶಃ ಮೇಳದವರ ಸಂಖ್ಯೆಯನ್ನು ಐವತ್ತಾಗಿ ಗೊತ್ತುಪಡಿಸಿದವನೂ ಅವನೇ. ಅಲ್ಲದೆ, ಗೀತಗಳನ್ನು ಬಲಮುರಿ ಎಡಮುರಿಗಳಾಗಿ ಕಟ್ಟಿದ್ದೂ ಅವನೇ ಇರಬಹುದು. ಆದರೆ, ನಾಟಕದೃಷ್ಟಿಯಿಂದ ಆರಿಯೋನ್ ಮಾಡಿದ್ದೆಂದು ಹೇಳುವ ಮಾರ್ಪಾಟುಗಳಲ್ಲಿ ಬಹು ಮುಖ್ಯವಾದ್ದೆಂದರೆ ಮೇಳಗೀತಗಳ ನಡುವೆ 'ಭಾಷಣಪದ್ಯ'ಗಳನ್ನು ಸೇರಿಸಿದ್ದು. ಮೇಳನಾಯಕನು ಒಮ್ಮೊಮ್ಮೆ ಅಟ್ಟಣೆ (ವೇದಿಕೆ) ಹತ್ತಿನಿಂತು ಕೆಳಗೆ ಕಣ (ರಂಗ)ದಲ್ಲಿ ನಿಂತ ತನ್ನ ಮೇಳದವರೊಡನೆ ಸಂವಾದ ನಡಸತೊಡಗಿದನು. ಮೇಳದ ಈ ಸಂವಾದ ಛಂದಸ್ಸು ಗೀತದ ಛಂದಸ್ಸಿನಿಂದ ಕೊಂಚ ಬೇರೆಯಾಗಿತ್ತು. ಸಂವಾದಗಳೂ ದಿಯೊನೂಸೊಸ್ ಸಾಹಸ ಕಥೆಗಳನ್ನೇ ಕುರಿತುವಾಗಿದ್ದು ಮೇಳಗೀತದಲ್ಲಿ

ಹೇಳಿದ ವಿಷಯುಗಳನ್ನು ಅಲ್ಲಲ್ಲಿ ವಿವರಿಸಿ ವಿಶದಗೊಳಿಸುತ್ತಿದ್ದುವು. ಮೇಳ ನಾಯಕನ ಈ ಸಂವಾದಪದ್ಯಗಳೇ ನಾಟಕಕ್ಕೆ ಅಂಕುರವೆನ್ನಬಹುದು.

ಒಟ್ಟಿನಲ್ಲಿ ಆರಿಯೋನಿನ ಕೈವಾಡದ ಪ್ರಭಾವದಿಂದ ದೀಥುರಂಬೊಸ್ ಮೇಳಗೀತ ಒಂದು ಕಟ್ಟುಗೊಂಡು ಅದರಲ್ಲಿ ಒಡೆದುಮೂಡಿದ ಲಕ್ಷಣ ಗಳೆಂದರೆ: ಐವತ್ತು ಮಂದಿ ಮೇಳದವರು ಅಂಗವಿನ್ಯಾಸ ಅಭಿನಯಗಳಿಂದ ಬಲಮುರಿ ಎಡಮುರಿಗಳಲ್ಲಿ ಗೀತಹಾಡಿ ಬಲಿಪೀಠದ ಸುತ್ತಲೂ ಕುಣಿಯುವುದು, ಮೇಳನಾಯಕನು ಒಮ್ಮೊಮ್ಮೆ ಅಟ್ಟಣೆ ಹತ್ತಿ ಪ್ರಶ್ನೋತ್ತರ ರೂಪವಾಗಿ ಮೇಳದವರೊಡನೆ ಸಂವಾದ ನಡಸುವುದು. ಆದರೆ ಆ ದೀಥುರಂಬೊಸ್ ಮೇಳಗೀತದ ಒಟ್ಟು ಭಾವ ಘನವೂ ಗಂಭೀರಮುದ್ರೆಯದೂ ಆಗಿತ್ತೋ ಲಘುವೂ ಹಾಸ್ಯಮುದ್ರೆಯದೂ ಆಗಿತ್ತೋ ಎಂಬ ವಿಚಾರದಲ್ಲಿ ಊಹಾ ಪೋಹಾತ್ಮಕವಾದ ಬಹು ಚರ್ಚೆ ನಡೆದಿದ್ದರೂ ಯಾವುದೂ ಇತ್ಯರ್ಥವಾಗಿಲ್ಲ. ದೀಥುರಂಬೊಸ್ ಗೀತ ಮದ್ಯಪ್ರೇರಿತವೂ ಸಂತೋಷ ವಿನೋದ ಸಾಧನವೂ ಆಗಿತ್ತೆಂಬುದು ನಿಜ. ಆದರೆ, ಅದರಲ್ಲಿ ಬಹು ಭಾವ ವೈವಿಧ್ಯಕ್ಕೆ ಅವಕಾಶ ವಿದ್ದಿರಬಹುದು. ಆದ್ದರಿಂದ, ದೀಥುರಂಬೊಸ್ಸಿನಲ್ಲಿ ಗಂಭೀರೋದಾತ್ತ ಭಾವಗಳೂ ಲಘುಹಾಸ್ಯ ಭಾವಗಳೂ ವಿಡಂಬ ಪ್ರಹಸನ ಭಾವಗಳೂ ಸಂದರ್ಭೋಚಿತವಾಗಿ ಬೆರೆದಿದ್ದಿರಬಹುದೆಂದು ಇಟ್ಟುಕೊಂಡರೆ ಅಷ್ಟೇನೂ ತಪ್ಪಾಗಲಾರದು. ಆ ಬೆರಕೆಯಲ್ಲಿ ಉಳಿದ ಭಾವಗಳನ್ನೆಲ್ಲಾ ಅದುಮಿ ಗಂಭೀರೋದಾತ್ತ ಭಾವವನ್ನೇ ಪೋಷಿಸಿ ಪ್ರಬಲಗೊಳಿಸಿ ರುದ್ರನಾಟಕವನ್ನು ಕಟ್ಟುವುದು ಅಷ್ಟೇನೂ ಅಸಾಧ್ಯವಲ್ಲ.

ಆರಿಯೋನಿನ ಮತ್ತು ಅವನ ತರುವಾಯದವರ ದೀಥುರಂಬೊಸ್ ಮೇಳ ಗಳಿಗೆ ಕ್ರಮೇಣ ತ್ರಗೋದಿಯ (ಟ್ರ್ಯಾಜೆಡಿ)ಗಳೆಂದು ಹೆಸರಾಯಿತು. ಆದರೆ, ಆ ಹೊತ್ತಿಗೆ ಆ ಪದಕ್ಕೆ ತರುವಾಯ ಬಂದ ಅರ್ಥವ್ಯಾಪ್ತಿ ಇರಲಿಲ್ಲ. ತ್ರಗೋದಿಯ ಎಂಬುದರ ಪದಶಃ ಅರ್ಥ ಆಡಿನ ಹಾಡು ಅಥವಾ ಅಜಗೀತೆ. ಆ ಮೇಳಗೀತಕ್ಕೆ ಆ ಹೆಸರು ಏಕೆ ಬಂತೆಂದು ನಿರ್ಧಾರವಾಗಿ ಹೇಳುವುದು ಕಷ್ಟ. ದಿಯೊನೂಸೊಸ್ ದೇವತೆಗೆ ಆಡನ್ನು ಬಲಿಕೊಡುವಾಗ ದೀಥು ರಂಬೊಸ್ಸನ್ನು ನಡಸುತ್ತಿದ್ದರಾದ್ದರಿಂದ ಆ ಹೆಸರು ಬಂದಿರಬಹುದು. ಮೇಲಾಟ

ದಲ್ಲಿ ಗೆದ್ದ ಕವಿಗೆ ಆಡನ್ನು ಮೆಚ್ಚಿಗೆಯಾಗಿ ಕೊಡುತ್ತಿದ್ದರಾದ್ದರಿಂದ ಬಂದಿರಬಹುದು. ಅಥವಾ ತಮ್ಮ ಸ್ವರೂಪದಿಂದಲೂ ವಿಷಯಲಾಂಪಟ್ಯದಿಂದಲೂ ಆಡುಗಳೆಂದು ಕರಸಿಕೊಳ್ಳುತ್ತಿದ್ದ ಸತುರೊಸ್‌ಗಳು ಮೇಳ ನಡಸುತ್ತಿದ್ದರಾದ್ದರಿಂದ ಬಂದಿರಬಹುದು. ಈ ಮೂರನೆಯ ವ್ಯುತ್ಪತ್ತಿ ಸಾಮಾನ್ಯವಾಗಿ ಕೊಡುವ ಕೋಮೋದಿಯ (ಕಾಮೆಡಿ) ಪದದ ವ್ಯುತ್ಪತ್ತಿಯೊಡನೆ ಸರಿಹೊಂದುತ್ತದೆ. ಕೋಮೋದಿಯ ಎಂದರೆ ಕೋಮೊಸ್ ದಳದ (ಗೆಲವಿನಿಂದ ಹಾಡಿ ಕುಣಿದು, ಮೆರೆದು ಬೀದಿಯಲ್ಲೆಲ್ಲಾ ಮೆರವಣಿಗೆ ಬರುತ್ತಿದ್ದ ಹರ್ಷೋತ್ಸವ ದಳದ) ಗೀತೆ[3]. ಹಾಗೆಯೇ ತ್ರಗೋದಿಯ ಎಂದರೆ ಸತುರೊಸ್ ದಳದ ಗೀತೆ. ಮೊದಮೊದಲು ಪರ್ಯಾಯ ಪದಗಳಾಗಿ ಪ್ರಯೋಗವಾಗುತ್ತಿದ್ದ ದೀಥುರಂಬೊಸ್ ಮತ್ತು ತ್ರಗೋದಿಯ ಎಂಬ ಪದಗಳು ಕ್ರಮೇಣ ಹೆಚ್ಚು ಹೆಚ್ಚು ನಿಷ್ಕೃಷ್ಟವೂ ಸಂಕುಚಿತವೂ ಆದ ಭಿನ್ನಾರ್ಥಗಳಲ್ಲಿ ಪ್ರಯೋಗವಾಗ ತೊಡಗಿ ಕೊನೆಗೆ ಶುದ್ಧ ಮೇಳಸ್ವರೂಪದ್ದಕ್ಕೆ ಮಾತ್ರ ದೀಥುರಂಬೊಸ್ ಎಂದೂ ನಾಟಕಸ್ವರೂಪದ್ದಕ್ಕೆ ತ್ರಗೋದಿಯ ಎಂದೂ ಹೆಸರುಗಳು ಬಳಕೆಯಾದುವು.

ಡೋರಿಯನ್ನರು ಒಂದು ಬಗೆಯ ನಾಟಕರೂಪ ಕೊಟ್ಟಿದ್ದ ಈ ದೀಥುರಂಬೊಸ್ ಗೀತಗಳನ್ನು ಉಳಿದವರೂ, ಅದರಲ್ಲಿಯೂ ಹೆಚ್ಚಾಗಿ ಅಟಿಕದವರು, ತಮ್ಮ ಜಾತ್ರೆಗಳಲ್ಲಿ ಬಳಸುತ್ತ ಬಂದರು. ಡೋರಿಯನ್ನರ ಪ್ರಭಾವಕ್ಕೆ ಸಿಕ್ಕಿ ಬೆಳೆದ ಅಟಿಕದ ಈ ಹೊಸ ದೀಥುರಂಬೊಸ್ ಗ್ರೀಕ್ ರುದ್ರನಾಟಕಕ್ಕೆ ಬೀಜ.

ಥೆಸ್‌ಪಿಸ್ : ಥೆಸ್‌ಪಿಸ್ಸನ್ನು ಗ್ರೀಕ್ ರುದ್ರನಾಟಕದ ಜನಕನೆನ್ನಬಹುದು. ಅವನು ಅಟಿಕಪ್ರಾಂತದ ಇಕರಿಯ ಎಂಬ ಒಂದು ಹಳ್ಳಿಯಲ್ಲಿ ಸುಮಾರು ಕ್ರಿ.ಪೂ. ೬ ನೆಯ ಶತಮಾನದ ಮೊದಲಿನಲ್ಲಿ ಹುಟ್ಟಿದವನು. ಇಕರಿಯದ ಮೂರ್ತಸ್ವರೂಪನಾದ ಇಕರೊಸ್ ಎಂಬ ಪೌರಾಣಿಕವ್ಯಕ್ತಿ ಅಟಿಕಕ್ಕೆ ದಿಯೊನೂಸೊಸ್ ದೇವತೆಯನ್ನು ಬರಮಾಡಿಕೊಂಡವರಲ್ಲಿ ಮೊದಲಿಗನೆಂದು ಪ್ರತೀತಿ ಇದೆ. ಇಕರಿಯವೂ ಅದರ ಸುತ್ತಮುತ್ತಣ ಪ್ರಾಂತವೂ ದಿಯೊನೂಸೊಸ್ ದೇವತೆಯ ಉಪಾಸನೆಗೆ ಬಹು ಪ್ರಸಿದ್ಧವಾದುವು. ಥೆಸ್ಪಿಸ್ ಚಿಕ್ಕಂದಿ

---

[3] ಆದರೆ, ಕೋಮೋದಿಯ ಪದಕ್ಕೆ ಕೋಮೇ (ಹಳ್ಳಿ) ಹಾಡು ಎಂದು ಬೇರೊಂದು ವ್ಯುತ್ಪತ್ತಿ ಹೇಳುವುದೂ ಉಂಟು.

ನಿಂದಲೂ ಆ ದೇವತೆಯ ಉಪಾಸನೆಯ ವಾತಾವರಣದಲ್ಲಿ, ಅವನ ಸಂಬಂಧ ವಾದ ಕಥೆ, ಹಾಡು, ಕುಣಿತ, ಮೇಳಗಳ ಸಂಪೂರ್ಣ ಪ್ರಭಾವದಲ್ಲಿ ಬೆಳೆದವನು. ದೊಡ್ಡವನಾದ ಮೇಲೆ ದೀಥುರಂಬೊಸ್ ಮೇಳದ ಕಟ್ಟಡವನ್ನು ಮಾರ್ಪಡಿಸಿ ಅದರಲ್ಲಿ ನಾಟಕಬೀಜ ಬಿತ್ತಿದನು. ಅವನು ಮಾಡಿದ ಮಾರ್ಪಾಡನ್ನು ಒಂದೆರಡು ಮಾತಿನಲ್ಲಿ ಹೇಳಬಹುದಾದರೂ ಅದರ ಮಹತ್ವ ಹೆಚ್ಚು. ಥೆಸ್ಪಿಸ್ ಮೇಳದವರ ಜತೆಗೆ ಒಬ್ಬ ನಟನನ್ನು ಸೇರಿಸಿದನು. ಮೇಳದ ಗೀತಭಾಗದಿಂದ ಪ್ರತ್ಯೇಕವಾದ ಸಂವಾದಭಾಗ ಆ ನಟನಿಗೂ ಮೇಳನಾಯಕನಿಗೂ ನಡೆದು, ಹೆಚ್ಚು ಹೆಚ್ಚಾಗಿ ಗಮನ ಸೆಳೆದು, ಪ್ರಾಮುಖ್ಯ ಪಡೆಯಿತು. ಅಲ್ಲಿಯ ವರೆಗೂ ಒಟ್ಟು ಮೇಳವೆಲ್ಲಾ ದಿಯೊನೂಸೊಸ್ ಮೊದಲಾದ ದೇವತೆಗಳ ಮತ್ತು ಮಹಾವ್ಯಕ್ತಿಗಳ ಅದ್ಭುತ ವ್ಯಾಪಾರಗಳ ಪ್ರೇಕ್ಷಕವೃಂದ ಮಾತ್ರವಾಗಿತ್ತು. ಮೇಳದ ಗೀತಗಳೆಲ್ಲಾ ಆ ದಿವ್ಯ ವ್ಯಕ್ತಿಗಳ ಲೀಲೆಗಳನ್ನೂ ಸಾಹಸಗಳನ್ನೂ ಕುರಿತುವು. ನಡುನಡುವೆ ಮೇಳನಾಯಕನಿಗೂ ಮೇಳದವರಿಗೂ ನಡೆಯುತ್ತಿದ್ದ ಸಂವಾದಗಳೂ ಆ ಅದ್ಭುತ ವ್ಯಾಪಾರಗಳನ್ನು ನೋಡುತ್ತಿದ್ದ ಪ್ರೇಕ್ಷಕರ ಸಂವಾದಗಳೇ ಹೊರತು ಕಥಾವ್ಯಕ್ತಿಗಳವಲ್ಲ. ಮೇಳದ ಜತೆಗೆ ನಟನೊಬ್ಬನನ್ನು ತಂದುಹಾಕಿದ್ದು ಇದನ್ನೆಲ್ಲಾ ಮಾರ್ಪಡಿಸಿಬಿಟ್ಟಿತು. ಸಂವಾದಗಳು ಬರಿಯ ಪ್ರೇಕ್ಷಕ ಮೇಳದವರವಾಗಿದ್ದದ್ದು ತಪ್ಪಿ ಕಥಾವ್ಯಕ್ತಿಗಳವೇ ಆದುವು. ಒಬ್ಬನೇ ನಟ ಸಂದರ್ಭೋಚಿತವಾಗಿ ದೇವತೆಯ ಮೊದಲುಗೊಂಡು ದೂತನ ವರೆಗೂ ಕಥೆಯಲ್ಲಿ ಬರುವ ಎಲ್ಲ ವ್ಯಕ್ತಿಗಳ ಪಾತ್ರವನ್ನೂ ವಹಿಸುತ್ತಿದ್ದನು. ಸಂವಾದ ಭಾಗ ಹೆಚ್ಚು ಹೆಚ್ಚಾಗಿ ಬೆಳೆದು ಪ್ರಾಮುಖ್ಯಕ್ಕೆ ಬಂದಂತೆಲ್ಲಾ ಮೇಳದ ಕಥನಸ್ವರೂಪ ಹಿಮ್ಮೆಟ್ಟಿ ನಾಟಕಸ್ವರೂಪ ವಿಕಾಸವಾಯಿತು. ನಾಟಕವಸ್ತುವಿನ ಆಕರವನ್ನು ವಿಸ್ತರಿಸಿದವನೂ ಥೆಸ್ಪಿಸ್ಸೇ ಎಂದು ಹಲವು ವಿದ್ವಾಂಸರ ಅಭಿಪ್ರಾಯ. ಮೊದಮೊದಲು ನಾಟಕವಸ್ತು ದಿಯೊನೂಸೊಸ್ ದೇವತೆಯ ಸಂಬಂಧವಾದ ಕಥೆಗಳು ಮಾತ್ರವಾಗಿತ್ತು. ಕ್ರಮೇಣ ಇತರ ಗ್ರೀಕ್ ಪುರಾಣಕಥೆಗಳೂ ನಾಟಕಕ್ಕೆ ವಸ್ತುವಾದುವು.

ಮೊದಮೊದಲ ಗ್ರೀಕ್ ನಾಟಕಕಾರರಂತೆ ಥೆಸ್ಪಿಸ್ಸೂ ನಟನಾಗಿ ತನ್ನ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದನು. ಪಾತ್ರಭೇದವನ್ನು ತೋರಿಸುವುದಕ್ಕಾಗಿ

ಮೊದಮೊದಲು ಮುಖಕ್ಕೆ ಬಣ್ಣಗಳನ್ನು ಬಳಿದುಕೊಳ್ಳುತ್ತಿದ್ದನು. ಕ್ರಮೇಣ ಒಂದು ಬಗೆಯ ಬಟ್ಟೆಯ ಮೊಗವಾಡವನ್ನು ಕಂಡುಹಿಡಿದನು. ಬಟ್ಟಬಯಲಲ್ಲಿ ಆಡುತ್ತಿದ್ದ ನಟರಿಗೆ ಆ ಮೊಗವಾಡ ಬಹು ಅನುಕೂಲವಾಗಿ ಬಂದು ಗ್ರೀಕ್ ರುದ್ರನಾಟಕದ ಕೊನೆಯ ವರೆಗೂ ಅದು ಉಳಿದುಹೋಯಿತು. ಹಿಂದೆ ಮೇಳ ನಾಯಕನು ಮೇಳದವರೊಡನೆ ಸಂವಾದ ನಡಸುವಾಗ ತಾನು ಹತ್ತಿ ನಿಲ್ಲುತ್ತಿದ್ದ ಅಟ್ಟಣೆ ಈಗ ನಟನಿಗೆ ಬಿಡುವಾಯಿತು. ಅಟ್ಟಣೆಯ ಹಿಂದೆ ಹಾಕಿರುತ್ತಿದ್ದ ಸಣ್ಣ ಗೂಡಾರಕ್ಕೆ ನಟನು ತನ್ನ ವೇಷವನ್ನು ಬದಲಾಯಿಸಿಕೊಳ್ಳಲು ಆಗಾಗ ಹೋಗಿ ಬರುತ್ತಿದ್ದನು. ಮುಂದೆ ಆ ಅಟ್ಟಣೆಯೇ ನಟರಂಗವಾಗಿಯೂ ಆ ಗೂಡಾರವೇ ನೇಪಥ್ಯವಾಗಿಯೂ ಪರಿಣಮಿಸಿದುವು. ಥೆಸ್ಪಿಸ್ ಮೇಳ ಮಂಡಲಿಯೊಂದನ್ನು ಕಟ್ಟಿ ಬಂಡಿಯ ಮೇಲೆ ಊರೂರು ತಿರುಗಿ ಪ್ರದರ್ಶನ ಮಾಡುತ್ತಿದ್ದನು.

ಥೆಸ್ಪಿಸ್ಸಿನ ರುದ್ರನಾಟಕದ ಕಟ್ಟಡ ಬಹಳ ಸರಳವಾದ್ದು. ಮೊದಲು ನಟನು ಅಟ್ಟಣೆ ಹತ್ತಿ ಕಥಾವಸ್ತುವನ್ನು ವಿವರಿಸಿ ಒಂದು ಉಪಕ್ರಮ ಭಾಷಣವನ್ನು (ಪ್ರೊಲೊಗೊಸ್, ಇಂಗ್ಲಿಷ್, ಪ್ರೊಲೋಗ್) ಮಾಡುತ್ತಿದ್ದನು. ತರುವಾಯ ಮುಂಗಣದಲ್ಲಿ ಮೇಳಗೀತಗಳ ಸರಣಿ ಆರಂಭವಾಗುತ್ತಿತ್ತು. ನಡುನಡುವೆ ಆ ಗೀತಗಳ ಬಿಡುವುಗಳಲ್ಲಿ ನಟನು ಸಂದರ್ಭೋಚಿತವಾದ ಪಾತ್ರವನ್ನು ಧರಿಸಿ ಅಟ್ಟಣೆಯ ಮೇಲೆ ಕಾಣಿಸಿಕೊಂಡು ದೀರ್ಘ ಕಥನ ಭಾಷಣ ಮಾಡುತ್ತಿದ್ದನು. ಅಥವಾ ಮೇಳನಾಯಕನೊಡನೆ ಸಂವಾದ ನಡಸುತ್ತಿದ್ದನು. ಮೊದಲು ಒಬ್ಬನೇ ನಟ ಇದ್ದದ್ದರಿಂದ ಉಪಕ್ರಮ ಭಾಷಣ, ದೀರ್ಘ ಕಥನ ಭಾಷಣ, ಮೇಳನಾಯಕನೊಡನೆ ಸಂವಾದ—ಇವೆಲ್ಲವೂ ಅಗತ್ಯವಾಗಿದ್ದರೂ ಅವುಗಳ ಪ್ರಭಾವ ಮುಂದೆಯೂ ಗ್ರೀಕ್ ರುದ್ರನಾಟಕ ಚೆನ್ನಾಗಿ ಬೆಳೆದು ನೆರತೆಗೊಂಡ ಮೇಲೂ ಬಹಳ ಮಟ್ಟಿಗೆ ಇದ್ದೇ ಇತ್ತು.

ಥೆಸ್ಪಿಸ್ಸಿನ ಕೈಯಲ್ಲಿ ಗ್ರೀಕ್ ರುದ್ರನಾಟಕದ ಬೀಜ ಇನ್ನೂ ಮೊಳೆಯುವುದರಲ್ಲಿತ್ತು. ನಾಟಕ ಪ್ರಭಾವಕ್ಕಿಂತ ಮೇಳಗೀತಗಳ ಪ್ರಭಾವವೇ ಹೆಚ್ಚಾಗಿತ್ತು. ವಸ್ತುವಿನಲ್ಲಿ ವೈವಿಧ್ಯವಿರಲಿಲ್ಲ. ಸಂವಾದಗಳು ಗೀತಗಳ ನಡುವಣ ಬಿಡುವನ್ನು ತುಂಬತಕ್ಕುವಾಗಿದ್ದುವೇ ಹೊರತು ನಾಟಕದ ಹಾಸುಹೊಕ್ಕಾಗಿ

ಅದರ ತಿರುಳೂ ಹುರುಳೂ ಆಗಿರಲಿಲ್ಲ. ಥೆಸ್ಪಿಸ್ ಗ್ರೀಕ್ ರುದ್ರನಾಟಕಕ್ಕೆ ಸಲ್ಲಿಸಿದ ದೊಡ್ಡ ಸೇವೆಯೆಂದರೆ—ತರುವಾಯ ಬಂದ ಅಯ್‌ಸ್ಕುಲೊಸ್, ಸೊಫೊಕ್ಲೇಸ್ ಮತ್ತು ಯುರಿಪಿದೇಸ್—ಈ ಮೂವರು ಮಹಾ ರುದ್ರನಾಟಕ ಕಾರರ ಕೃಷಿಯಿಂದ ಮುಂದೆ ಬೆಳೆದು ಚಿಗುತು ಹೂತು ಹಣ್ಣುಬಿಟ್ಟ ದೊಡ್ಡ ಮರಕ್ಕೆ ಬೀಜ ನೆಟ್ಟದ್ದು.

ಪಿಸಿಸ್ತ್ರತೊಸ್ ಪ್ರಭು ದಿಯೊನೂಸೊಸ್ ಜಾತ್ರೆಯ ಸಂದರ್ಭದಲ್ಲಿ ಕ್ರಿ.ಪೂ. ೫೩೫-೩೪ ರಲ್ಲಿ ಏರ್ಪಡಿಸಿದ ಮೊತ್ತಮೊದಲನೆಯ ರುದ್ರನಾಟಕ ಸ್ಪರ್ಧೆಯಲ್ಲಿ ಥೆಸ್ಪಿಸ್ ಭಾಗವಹಿಸಿ ಮೊದಲ ಮೆಚ್ಚು ಪಡೆದನು. ಅಂದು ಆರಂಭ ವಾದ ರುದ್ರನಾಟಕ ಸ್ಪರ್ಧೆ ಮುಂದೆ ಪ್ರತಿ ವರ್ಷವೂ ತಪ್ಪದೆ ನಡೆದುಬಂತು. ಆ ಸ್ಪರ್ಧೆಗಳಲ್ಲಿ ಹಲವರು ಭಾಗವಹಿಸುತ್ತಿದ್ದಿರಬೇಕಾದರೂ ಮುಂದೆ ಮೂವತ್ತು ವರ್ಷಗಳನ್ನು ದಾಟಿ ನಾವು ಅಯ್‌ಸ್ಕುಲೊಸ್ ಕವಿಗೆ ಬರುವ ವರೆಗೆ ಮೂವರ ಹೆಸರುಗಳು ಮಾತ್ರ ನಮಗೆ ಸಿಕ್ಕುತ್ತವೆ—ಖೊಯ್‌ರಿಲೊಸ್, ಪ್ರಾತಿನೊಸ್ ಮತ್ತು ಫ್ರುನಿಖೊಸ್. ಇವರು ರುದ್ರನಾಟಕದ ಬೆಳವಣಿಗೆಗೆ ಯಥಾಶಕ್ತಿ ಸಹಾಯಮಾಡಿದ್ದರೂ ಪ್ರಕೃತದಲ್ಲಿ ನಮಗೆ ಅಷ್ಟು ಮುಖ್ಯರಲ್ಲ.[4]

ಅಯ್‌ಸ್ಕುಲೊಸ್ (ಕ್ರಿ.ಪೂ. ೫೨೫-೪೫೬): ರುದ್ರನಾಟಕದ ಹುಟ್ಟು ಬೆಳವಣಿಗೆಗಳಲ್ಲಿ ಥೆಸ್ಪಿಸ್ ಮೊದಲನೆಯ ಮೆಟ್ಟಲಾದರೆ ಅಯ್‌ಸ್ಕುಲೊಸ್ ಎರಡನೆಯ ಮೆಟ್ಟಲು. ಇವನು ಗ್ರೀಕ್ ರುದ್ರನಾಟಕಕಾರರಲ್ಲಿ ಹೆಸರು ಗೊಂಡ ರತ್ನತ್ರಯದಲ್ಲಿ ಮೊದಲಿಗನು; ಉಳಿದಿಬ್ಬರು ಸೊಫೊಕ್ಲೇಸ್ ಮತ್ತು ಯುರಿಪಿದೇಸ್. ರುದ್ರನಾಟಕದ ಮೇಲೆ ಅಯ್‌ಸ್ಕುಲೊಸ್ಸಿನ ಪ್ರತಿಭೆಯ ಪ್ರಭಾವ ಎಷ್ಟರ ಮಟ್ಟಿಗೆ ಬಿದ್ದಿದೆ ಎಂದರೆ, ಅವನು ರುದ್ರನಾಟಕದ ಎರಡ ನೆಯ ಜನಕನೆಂದು ಹೆಸರುಗೊಂಡಿದ್ದಾನೆ. ಥೆಸ್ಪಿಸ್ಸಿನ ಮತ್ತು ಅವನ

[4] ಖೊಯ್‌ರಿಲೊಸ್ ಮುಖಕ್ಕೆ ಬಳಿದುಕೊಳ್ಳುತ್ತಿದ್ದ ದ್ರಾಕ್ಷೀಚರಟಕ್ಕೆ ಬದಲು ಮೊಗವಾಡಗಳನ್ನೂ ಗಂಭೀರ ವೇಷವಸ್ತ್ರವನ್ನೂ ಕಂಡುಹಿಡಿದವನೆಂದು ಪ್ರತೀತಿ.

ಪ್ರಾತಿನೊಸ್ ಅಣಕನಾಟಕಗಳನ್ನು ಕಂಡುಹಿಡಿದನು. ಕಾವ್ಯವನ್ನು ಸಂಗೀತ ಅನ್ಯಾಯಾಕ್ರಮಣಮಾಡುತ್ತಿದೆ ಎಂದು ಪ್ರತಿಭಟಿಸಿದವರಲ್ಲಿ ಮೊದಲಿಗನು.

ಫ್ರುನಿಖೊಸ್ ನಾಟಕದಲ್ಲಿ ಸ್ತ್ರೀ ಪಾತ್ರಗಳನ್ನು ಮೊತ್ತಮೊದಲು ತಂದವನೆಂದು ಪ್ರತೀತಿ. (ಪಾತ್ರ ಧರಿಸುತ್ತಿದ್ದವರೇನೋ ಗಂಡಸರೇ ಆಗಿದ್ದರು).

ತರುವಾಯುದವರ ಕೈಯಲ್ಲಿ ಇನ್ನೂ ಭ್ರೂಣಾವಸ್ಥೆಯಲ್ಲಿದ್ದ ರುದ್ರನಾಟಕವನ್ನು ಅಯ್‌ಸ್ಕಲೊಸ್ ತೆಗೆದುಕೊಂಡು ಕೃಷಿಮಾಡಿ ಬೆಳಸಿ ಅದಕ್ಕೆ ನಿರ್ದಿಷ್ಟ ನಾಟಕಸ್ವರೂಪಕೊಟ್ಟು ಅದು ಬೇರೂರಿ ನೆಲಸುವಂತೆ ಮಾಡಿದನು. ಮುಂದೆ ಬಂದವರು ಅಲ್ಲಿಷ್ಟು ಇಲ್ಲಿಷ್ಟು ಮಾರ್ಪಾಟು ಮಾಡಿದರೆ ಹೊರತು ಕಟ್ಟಡ ಕದಲಿಸಲಿಲ್ಲ.

ಅಯ್‌ಸ್ಕಲೊಸ್ ಅಟ್ಟಣೆಯ ಮೇಲೆ ಎರಡನೆಯ ನಟನೊಬ್ಬನನ್ನು ತಂದನು. ಇದು ಬಹು ಮಹತ್ವದ ವಿಷಯ. ಇದರಿಂದ ನಾಟಕದ ಅವಕಾಶ ಸಾಧ್ಯತೆಗಳು ಇಮ್ಮಡಿ ಮಾತ್ರವಾಗಲಿಲ್ಲ; ನೂರು ಮಡಿಯಾದುವು. ಇದರಿಂದ ರುದ್ರನಾಟಕದ ಹಿಂದಿನ ಕಥನಸ್ವರೂಪ ಸಂಪೂರ್ಣವಾಗಿ ಮಾರ್ಪಟ್ಟು, ನಾಟಕದ ಜೀವಾಳವಾದ ಸಂವಾದಕ್ಕೆ—ರಂಗದ ಮೇಲೆ ಎರಡು ಪ್ರತ್ಯಕ್ಷ ವ್ಯಕ್ತಿಗಳಿಗೆ ನಡೆಯುವ ಜೀವಂತ ಸಂವಾದಕ್ಕೆ—ಪೂರ್ಣಾವಕಾಶ ದೊರೆಯಿತು. ನಾಟಕದ ಕಟ್ಟಡ ಬೆಳವಣಿಗೆಗಳಿಗೆ ಆವಶ್ಯಕವಾದ, ಪ್ರೇಕ್ಷಕರ ಆಸಕ್ತಿಗೆ ಮುಖ್ಯಕಾರಣವಾದ, ವಿರುದ್ಧಭಾವಗಳ ಮತ್ತು ತತ್ವಗಳ ಪರಸ್ಪರ ಹೋರಾಟ ತಿಕ್ಕಾಟಗಳನ್ನು ಜೀವಂತ ವ್ಯಕ್ತಿಗಳ ಮೂಲಕ ಮುನ್ನೆಲೆಯಲ್ಲಿ ತಂದೊಡ್ಡಿ ತೋರಿಸುವುದು ಸಾಧ್ಯವಾಯಿತು. ನಾಟಕದ ತಿರುಳಾದ ಸಂವಾದ ಭಾಗಕ್ಕೆ ಹೆಚ್ಚು ಪ್ರಾಶಸ್ತ್ಯ ದೊರೆತು ಮೇಳದ ಪ್ರಾಮುಖ್ಯ ಕಡಮೆಯಾಗಿ ಅದು ಹಿಂಬೀಳತೊಡಗಿತು. ನೋಟಕರ ಕಣ್ಣು ಕಿವಿ ಮೇಳದ ಮುಂಗಣದಿಂದ ತೆಗೆದು ನಟರ ಅಟ್ಟಣೆಯ ಮೇಲೆ ನೆಟ್ಟುವು. ಈ ಮಾರ್ಪಾಟುಗಳನ್ನೆಲ್ಲಾ ಅಯ್‌ಸ್ಕಲೊಸ್ ಒಂದೇ ದಿನದಲ್ಲಿ ತನ್ನ ಮೊದಲನೆಯ ನಾಟಕದಲ್ಲಿಯೇ ಸಾಧಿಸಿ ಬಿಟ್ಟನೆಂದಲ್ಲ. ಅವನ ಮೊಡಮೊದಲ ನಾಟಕಗಳಿಗೂ ಹಿಂದಿನವರ ನಾಟಕಗಳಿಗೂ ಕಟ್ಟಡದಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಅವನ ನಡುಗಾಲದ ನಾಟಕಗಳಲ್ಲಿ ಮೇಳದ ಪ್ರಾಮುಖ್ಯವಾಗಲಿ, ಕಥೆಯೊಡನೆ ಅದಕ್ಕಿರುವ ಜೀವಂತ ಸಂಬಂಧವಾಗಲಿ ಅಷ್ಟೇನೂ ಕಡಮೆಯಾದ್ದಲ್ಲ. ಆದರೆ ಅವನ ಪಕ್ವ ಕಾಲದ ನಾಟಕಗಳಲ್ಲಿ ಮೇಳ ಬಲುಮಟ್ಟಿಗೆ ಕಥೆಯಿಂದ ಬೇರ್ಪಟ್ಟು ಹಿನ್ನೆಲೆಯಲ್ಲಿದ್ದು ನಾಟಕಕ್ರಿಯೆ ಪಾತ್ರ, ಸಂವಾದ, ಪ್ರದರ್ಶನ ಮೊದಲಾದುವು ಮುನ್ನೆಲೆಗೆ ಬಂದು ಅಟ್ಟಣೆಯ ಮೇಲೆ ನಿಜವಾದ ಆಟ ನಡೆಯುತ್ತದೆ.

ಎರಡನೆಯದಾಗಿ, ಅಯ್‌ಸ್ಕಿಲೊಸ್ಸಿನ ರುದ್ರನಾಟಕಗಳಲ್ಲಿ ನಮಗೆ ಕಂಡು ಬರುವ ಮಹಾಲಕ್ಷಣಗಳೆಂದರೆ : ಘನತೆ, ಗಾಂಭೀರ್ಯ, ಔನ್ನತ್ಯ, ಉದಾತ್ತತೆ, ಗುರುತ್ವ, ಬೃಹತ್ವ, ವಿಶ್ವವ್ಯಾಪ್ತಿ. ಅವನದೆಲ್ಲವೂ ಬೃಹತ್ ಸೃಷ್ಟಿ. ವಸ್ತು, ಪಾತ್ರ, ಭಾಷೆ, ಛಂದಸ್ಸು—ಎಲ್ಲದರಲ್ಲೂ ಒಂದು ಬೃಹನ್‌ಮಹಿಮೆ, ಮಹದ್ ವೈಭವ ಕಂಡುಬರುತ್ತದೆ. ಬರುವ ವ್ಯಕ್ತಿಗಳೆಲ್ಲಾ ಮಹಾವ್ಯಕ್ತಿಗಳು ; ಅವರ ವ್ಯಾಪಾರಗಳೆಲ್ಲಾ ವಿಶ್ವವ್ಯಾಪಕ ವ್ಯಾಪಾರಗಳು; ಅವರ ವ್ಯವಹಾರಕ್ಷೇತ್ರ ಸಮಸ್ತವಿಶ್ವ. ಅವನ ರುದ್ರನಾಟಕಗಳಲ್ಲೆಲ್ಲಾ ಒಂದು ವಿಶ್ವಧರ್ಮ, ವಿಶ್ವನೀತಿ, ವಿಶ್ವತತ್ವ ಜೀವಾಳವಾಗಿ, ಹಾಸುಹೊಕ್ಕಾಗಿ ನೆಯ್ದಿರುತ್ತದೆ.

ಅಯ್‌ಸ್ಕಿಲೊಸ್ಸಿನ ಉದ್ದೇಶ ಮನುಷ್ಯನ ಪ್ರಾಪಂಚಿಕ ವ್ಯಾಪಾರಗಳನ್ನು ಅಡಿನೆಲೆಯಾಗಿಟ್ಟುಕೊಂಡು, ಅವನ ಹೃದಯವನ್ನು ಹೊಕ್ಕು, ಅವನ ಮನಸ್ಸನ್ನು ಅಲೆಯುವ ವಿವಿಧ ಭಾವಗಳನ್ನೂ ರಾಗಗಳನ್ನೂ ವಿವೇಚಿಸುವುದಕ್ಕಿಂತ ಹೆಚ್ಚಾಗಿ ವಿಶ್ವದಲ್ಲಿ ಮನುಷ್ಯನ ಸ್ಥಾನವೇನು, ದೈವಿಕ ಶಕ್ತಿಗಳ ಮತ್ತು ವಿಧಿವಿಲಾಸದ ವ್ಯಕ್ತನಿರೂಪಣಕ್ಕೆ ಮನುಷ್ಯನು ಹೇಗೆ ಸಾಧನ ಅಥವಾ ಹಿನ್ನೆಲೆ ಮಾತ್ರ, ವಿಧಿವ್ಯಾಪಾರದ ರಹಸ್ಯಗಳನ್ನು ತಿಳಿದು ನಿಯತಿಯನ್ನು ಮೀರದೆ ದೈವಸಂಕಲ್ಪಕ್ಕೆ ತನ್ನ ಜೀವನವನ್ನು ಹೇಗೆ ಸಮರಸದಲ್ಲಿ ಹೊಂದಿಸಿಕೊಂಡು ಹೋಗಬೇಕು, ಇಲ್ಲದಿದ್ದರೆ ಸಂಭವಿಸುವ ಅನರ್ಥಗಳೂ ದುರಂತಗಳೂ ಎಂಥವು—ಎಂಬುವನ್ನು ನಿರೂಪಿಸುವುದು. ಗ್ರೀಕ್ ಪುರಾಣದ ಸಾಮಾನ್ಯ ಕಥೆಗಳನ್ನೆಲ್ಲಾ ಅವನು ತನ್ನ ಆ ಬೃಹದ್‌ವಿಶ್ವದ ಹಿನ್ನೆಲೆಯಲ್ಲಿ ಚಿತ್ರಿಸಿಕೊಂಡು, ಆ ಕಥೆಗಳ ಹಿಂದಿನ ಸರಳ ಸುಲಭ ಕಟ್ಟಡವನ್ನು ಉಳಿಸಿಕೊಂಡರೂ ಅವಕ್ಕೆ ಹಿಂದೆ ಇಲ್ಲದಿದ್ದ ಮಹತ್ವ, ಔನ್ನತ್ಯ, ಔದಾರ್ಯ, ಗಾಂಭೀರ್ಯ, ವಿಶ್ವವ್ಯಾಪ್ತಿಗಳನ್ನು ಕೊಟ್ಟನು.

ಅಯಾಸ್ಕಿಲೊಸ್ ಇತರ ಹಲವು ಹಳೆಯ ಕವಿಗಳಂತೆ ನಾಟಕ ಕರ್ತೃವೂ ನಾಟಕ ವ್ಯವಸ್ಥಾಪಕನೂ ಆಗಿದ್ದನು. ನಾಟಕರಚನೆಯಲ್ಲಿ ತನ್ನ ಪ್ರತಿಭೆಯನ್ನೂ ಕಲಾನೈಪುಣ್ಯವನ್ನೂ ತೋರಿರುವಂತೆಯೇ ನಾಟಕ ಪ್ರದರ್ಶನದಲ್ಲೂ ತೋರಿದ್ದಾನೆ. ಗ್ರೀಕ್ ನಟನು ಸಾಮಾನ್ಯ ಮನುಷ್ಯನನ್ನು ಅನುಕರಿಸುತ್ತಿರಲಿಲ್ಲ; ಅವನು ಅನುಕರಿಸುತ್ತಿದ್ದದ್ದು ಮನುಷ್ಯ ಜೀವನಕ್ಕಿಂತ ದೊಡ್ಡದಾದ್ದನ್ನು.

ಅದಕ್ಕಾಗಿ ಅವನ ವೇಷಭಾಷೆಗಳೆಲ್ಲವೂ ದೊಡ್ಡ ಪ್ರಮಾಣದಲ್ಲಿರಬೇಕಾದ್ದು ಸಹಜವಾಗಿತ್ತು. ಅಯ್‌ಸ್ಕುಲೊಸ್ ರುದ್ರನಾಟಕದ ಘನತೆ ಗಾಂಭೀರ್ಯ ಗಳಿಗೆ ತಕ್ಕ ಉಡುಪನ್ನು ಹವಣಿಸಿದನು. ಮರದ ಅಟ್ಟೆಗಳಿಂದಲೂ ಒಳಮೆತ್ತೆ ಗಳಿಂದಲೂ ನಟರ ಎತ್ತರವನ್ನೂ ಗಾತ್ರವನ್ನೂ ಹೆಚ್ಚಿಸಿ, ಅವರಲ್ಲಿ ಗಂಭೀರ ಸ್ವರೂಪ ಮೂಡಿಬರುವಂತೆ ಅಳವಡಿಸಿದನು. ಅವನು ಅಂದು ನಟರಿಗೆ ಕೊಟ್ಟ ಮುಡಿಯಿಂದ ಅಡಿಯ ವರೆಗೆ ತೊಂಗುವ ನಿಲುವುಡುಪು, ಗಂಭೀರಮುದ್ರೆಯ ಮೊಗವಾಡ, ಬಣ್ಣಬಣ್ಣದ ಅಲಂಕಾರ ಮೊದಲಾದ ನಟರ ಅಣಿಗಳು ಗ್ರೀಕ್ ರುದ್ರನಾಟಕದ ಕೊನೆಯ ವರೆಗೂ ನಿಂತುವು.

ನಟನನ್ನು ನೆಲದಿಂದ ಮೇಲಕ್ಕೆ ಎತ್ತಿ ಗಾಳಿಯಲ್ಲಿ ತೂಗಿಸುವ 'ಎತ್ತಿಗೆ', ಬಾಂದಳದ ದೇವತೆಗಳನ್ನು ತೋರಿಸುವ 'ಮೇಲಟ್ಟಣೆ', ಅರಮನೆ ಮೊದ ಲಾದುವುಗಳ ಒಳಗಡೆ ನಡೆದ ಕೃತ್ಯಗಳ ನೆಲೆನೋಟ ತೋರಿಸುವ ತಿರುಗಟ್ಟಣೆ— ಇವೇ ಮೊದಲಾದ ಉಪಾಯಗಳನ್ನು ಹೂಡಿದವನೂ ಅಯ್‌ಸ್ಕುಲೊಸ್ಸೇ ಎಂದು ಪ್ರತೀತಿ.

ಮುಕ್ಕೂಟ ಮತ್ತು ನಾಲ್ಕೂಟ ನಾಟಕಗಳು : ದಿಯೊನೂಸೊಸ್ ಜಾತ್ರೆಯಲ್ಲಿ ರುದ್ರನಾಟಕ ಸ್ಪರ್ಧಿಯಾಗಿ ಬಂದ ಪ್ರತಿಯೊಬ್ಬ ಕವಿಯೂ ಮೂರು ರುದ್ರನಾಟಕಗಳನ್ನೂ ಪ್ರಹಸನರೂಪವಾದ ಒಂದು ಅಣಕನಾಟಕ ವನ್ನೂ ಪ್ರದರ್ಶಿಸಬೇಕಾಗಿತ್ತು. ಈ ನಾಲ್ಕನ್ನೂ ಒಂದೇ ಹಗಲಲ್ಲಿ ಬೆಳಗಿ ನಿಂದ ಬೈಗಿನ ವರೆಗೆ ಒಂದಾದಮೇಲೊಂದರಂತೆ ಆಡಬೇಕಾಗಿತ್ತು. ಹಿಂದಿನ ಕವಿಗಳು ತಮ್ಮ ನಾಲ್ಕು ನಾಟಕಗಳನ್ನು ಪರಸ್ಪರ ಸಂಬಂಧವಿರಬೇಕಾಗಿಲ್ಲದ ಬೇರೆ ಬೇರೆ ಕಥೆಗಳಿಂದ ಎತ್ತಿಕಟ್ಟುತ್ತಿದ್ದರು. ಕೇವಲ ಬಾಹ್ಯಾನುಕೂಲ ಕ್ಕಾಗಿ ಏರ್ಪಟ್ಟ ಈ ನಾಲ್ಕು ನಾಟಕಗಳ ಗುಂಪನ್ನು ಅಯ್‌ಸ್ಕುಲೊಸ್ ತನ್ನ ಅಪ್ರತಿಮ ಪ್ರತಿಭೆಯ ಪ್ರಭಾವದಿಂದ ಅನ್ಯೋನ್ಯ ಜೀವಂತ ಸಂಬಂಧ ವಿರುವ ಒಂದು ನಾಟಕಕೂಟವನ್ನಾಗಿ ಮಾರ್ಪಡಿಸಿದನು. ಮೂರು ರುದ್ರ ನಾಟಕಗಳೂ ಯಾವುದಾದರೂ ಒಂದು ದೊಡ್ಡ ರುದ್ರಕಥೆಯ ಪರಿವಿಡಿಯಾಗಿ ಬರುವ ಮೂರು ಪ್ರಕರಣಗಳಾಗಿಯೂ ಕೊನೆಯ ಅಣಕನಾಟಕ ಕೂಡ ಅದೇ ರುದ್ರಕಥೆಗೆ ಸಂಬಂಧಿಸಿದ್ದಾಗಿಯೂ ಇರುವಂತೆ ರಚಿಸಿದನು. ಹೀಗೆ,

ಮೂರು ರುದ್ರನಾಟಕಗಳಿಗೂ ಅನ್ಯೋನ್ಯ ಸಂಬಂಧವಿದ್ದಾಗ ಅವಕ್ಕೆ ಮುಕ್ಕೂಟ ನಾಟಕವೆಂದೂ ಅಣಕನಾಟಕವೂ ಆ ಮುಕ್ಕೂಟಕ್ಕೇ ಸಂಬಂಧಿಸಿದಾಗ ಒಟ್ಟಿಗೆ ನಾಲ್ಕೂಟ ನಾಟಕವೆಂದೂ ಹೆಸರಾಯಿತು. ಆದರೆ, ಅಯ್‌ಸ್ಕಿಲೊಸ್ ತನ್ನ ನಾಟಕಗಳೆಲ್ಲವನ್ನೂ ಮುಕ್ಕೂಟ ನಾಲ್ಕೂಟ ಕಟ್ಟಡಗಳಲ್ಲಿಯೇ ಕಟ್ಟಲಿಲ್ಲ. ತನಿನಾಟಕಗಳನ್ನೂ ರಚಿಸಿದ್ದಾನೆ. ಗ್ರೀಕ್ ರುದ್ರನಾಟಕಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಎರಡು ದೊಡ್ಡ ತತ್ವಗಳೆಂದರೆ—(i) ಒಬ್ಬನು ಮಾಡಿದ ಪಾಪ ಅವನಲ್ಲಿಯೇ ಕೊನೆಗೊಂಡು ನಿಲ್ಲದೆ ತಲೆಮೊರೆಯಿಂದ ತಲೆಮೊರೆಗೆ ಹಬ್ಬಿ ಅವನ ಮನೆತನವನ್ನೆಲ್ಲಾ ಕಾಡುವುದು. (ii) ಮನುಷ್ಯನಿಗೂ ವಿಧಿಗೂ ನಿರಂತರವಾಗಿ ನಡೆಯುವ ಹೋರಾಟದಲ್ಲಿ ಕೊನೆಗೆ ವಿಧಿಯೇ ಗೆಲ್ಲುವುದು. ಈ ಎರಡು ದೊಡ್ಡ ತತ್ವಗಳನ್ನು, ಅದರಲ್ಲಿಯೂ ಮೊದಲನೆಯದನ್ನು ಪ್ರತಿಪಾದಿಸುವುದಕ್ಕೆ ಒಂದು ನಾಟಕದ ಕಿರಿಯಂಕಣಕ್ಕಿಂತ ಮೂರು ನಾಟಕಗಳ ಒಟ್ಟು ಹರವು ಅಯ್‌ಸ್ಕಿಲೊಸ್ಸಿಗೆ ಬಹಳ ಅನುವಾಗಿ ಬಂತು. ಅಲ್ಲದೆ, ಅವನ ಭಾವಗಳು ಸರಳವೂ ವಿಶ್ವವ್ಯಾಪ್ತಿಯವೂ ಆಗಿದ್ದು ಅವನ ಪ್ರತಿಭೆಯ ಬೃಹತ್ ಕಲ್ಪನೆಗಳಿಗೆ ಮುಕ್ಕೂಟನಾಟಕದ ಅವಕಾಶ ಬೇಕಾಗಿತ್ತು.

ಸೊಫೊಕ್ಲೀಸ್ : (ಕ್ರಿ.ಪೂ. ೪೯೭, ೪೯೬—೪೦೬, ೪೦೫) ಗ್ರೀಕ್ ರುದ್ರನಾಟಕದ ಬೆಳವಣಿಗೆಯಲ್ಲಿ ಅಯ್‌ಸ್ಕಿಲೊಸ್ ಎರಡನೆಯ ಮೆಟ್ಟಲಾದರೆ ಸೊಫೊಕ್ಲೀಸ್ ಮೂರನೆಯ, ಕೊನೆಯ ಮೆಟ್ಟಲು. ಅವನು ಕೊರತೆಗಳನ್ನೆಲ್ಲ ತುಂಬಿ ಕಳಪೆಗಳನ್ನೆಲ್ಲ ತೆಗೆದು ನಾಟಕದ ನಾನಾ ಅಂಗಗಳನ್ನು ಸಮರಸದಲ್ಲಿ ಅಳವಡಿಸಿ ರುದ್ರನಾಟಕವನ್ನು ಪರಿಪೂರ್ಣಾವಸ್ಥೆಗೆ ತಂದನು. ಅವನು ನಾಟಕದ ಕಟ್ಟಡದಲ್ಲಿ ಮಾಡಿದ ಮುಖ್ಯ ಮಾರ್ಪಾಟೆಂದರೆ—ಮೂರನೆಯ ನಟನನ್ನು ತಂದದ್ದು. ಅಗ್ರಸ್ಥಾನಕ್ಕಾಗಿ ನಟರಿಗೂ ಮೇಳದವರಿಗೂ ಗ್ರೀಕ್ ರುದ್ರರಂಗದ ಮೇಲೆ ಆಗಿಂದಾಗ ನಡೆಯುತ್ತಿದ್ದ ಹೋರಾಟಮೇಲಾಟಗಳನ್ನು ಅದು ತೀರಿಸಿ, ಪ್ರಧಾನಸ್ಥಾನವನ್ನು ನಟರಿಗೆ ಕೊಡಿಸಿ, ಮೇಳದವರು ಹಿನ್ನೆಲೆಯಲ್ಲಿದ್ದು ಸಮಯೋಚಿತವಾಗಿ ಪಾತ್ರನಟರಿಗೆ ಸಹಾಯಕರಾಗಿ ಮಾತ್ರ ಇರುವಂತೆ ಮಾಡಿತು. ಪಾತ್ರಗಳನ್ನು ಹೆಚ್ಚಿಸಿ ನಾಟಕವನ್ನೆಲ್ಲ ಕೇವಲ ಪಾತ್ರಗಳ ಸಂವಾದಗಳ ಮೂಲಕವೇ ಸಾಗಿಸುವುದಕ್ಕೂ ಸಂವಿಧಾನದಲ್ಲಿ

ವೈವಿಧ್ಯ ತರುವುದಕ್ಕೂ ನೋಟಕರ ಕಣ್ಣನ್ನೂ ಕಿವಿಯನ್ನೂ ಮುಂಗಣದ ಮೇಳದವರ ಹಾಡು ಕುಣಿತಗಳಿಂದ ತೆಗೆದು ಅಟ್ಟಣೆಯ ಮೇಲಿನ ಕಥಾ ಘಟನೆಗಳ ಮೇಲೆ ನೆಡುವುದಕ್ಕೂ ಅದು ಬಹಳ ಅನುಕೂಲವಾಯಿತು. ಬರು ಬರುತ್ತ ಮೇಳ ಹೆಚ್ಚು ಹೆಚ್ಚಾಗಿ ನಾಟಕದ ನಡುವಣ ಬಿಡುವುಗಳನ್ನು ತುಂಬುವುದಕ್ಕೆ ಮಾತ್ರ, ಆಲಂಕಾರಿಕ ಅಂಗವಾಗಿ, ಉಪಯೋಗವಾಗಬಂತು. ಆದರೂ, ಮೇಳಕ್ಕೂ ನಾಟಕದ ಕಥೆಗೂ ಇರುವ ಸಂಬಂಧ ಅಷ್ಟೇನೂ ಕೃತಕ ವಾದ್ದಲ್ಲ. ಮೇಳ ನಾಟಕದ ಒಟ್ಟಂದವನ್ನು ಹೆಚ್ಚಿಸಿದೆ; ಸಂವಾದಭಾಗದಲ್ಲಿ ಉದಾತ್ತವೂ ಗಂಭೀರವೂ ಆದ ಮಹಾಪಾತ್ರಗಳಿಗೆ ಹಿನ್ನೆಲೆಯಾಗಿ ಆ ಪಾತ್ರಗಳ ಘನತೆಯನ್ನು ಮತ್ತಷ್ಟು ಹೆಚ್ಚಿಸಿದೆ; ನಡುವಣ ಬಿಡುವುಗಳಲ್ಲಿ ತನ್ನ ಗಂಭೀರ ಗೀತಗಳಿಂದ ನಾಟಕದ ರೌದ್ರಭೀಷಣದ ಮೇಲೆ ಒಂದು ಶಾಮಕ ಪ್ರಭಾವವನ್ನು ಬೀರಿದೆ.

ಸೊಫೊಕ್ಲೇಸ್ ರಂಗಪ್ರಸಾಧನ, ನೇಪಥ್ಯ ಮೊದಲಾದ ರಂಗಾಲಂಕಾರ ಗಳಿಗೆ ಹೆಚ್ಚು ಪ್ರಾಧಾನ್ಯ ಕೊಟ್ಟನು. ದೃಶ್ಯಗಳನ್ನು (ಸೀನರಿ) ಚಿತ್ರಿಸುವುದಕ್ಕೆ ಅವನೇ ಮೊದಲು. ಅಲ್ಲದೆ, ಐವತ್ತರಿಂದ ಹನ್ನೆರಡಕ್ಕೆ ಇಳಿದಿದ್ದ ಮೇಳದವರ ಸಂಖ್ಯೆಯನ್ನು ಹದಿನೈದಕ್ಕೆ ಏರಿಸಿದ್ದೇ ಮೊದಲಾದ ಇತರ ಹಲಕೆಲವು ಸಣ್ಣ ಪುಟ್ಟ ಮಾರ್ಪಾಟುಗಳನ್ನೂ ಮಾಡಿದನು. ಒಂದು ಮೇಲಾಟದಲ್ಲಿ ಒಬ್ಬ ಕವಿ ಪ್ರದರ್ಶಿಸಿದ ನಾಟಕಗಳು ಮುಕ್ಕೂಟ ನಾಲ್ಕೂಟ ಬಂಧಗಳಲ್ಲಿರಬೇಕೆಂಬ ಪದ್ಧತಿಯನ್ನು ಅವನು ಮನ್ನಿಸಲಿಲ್ಲ. ಪ್ರತಿಯೊಂದು ನಾಟಕವೂ ಸ್ವತಂತ್ರವೂ ಪರಿಪೂರ್ಣವೂ ಆದ ಅಖಂಡ ವ್ಯಕ್ತಿಯಾಗಿರಬೇಕೆಂಬುದು ಅವನ ಮತ. ಅಲ್ಲದೆ, ಅವನ ಪ್ರತಿಭೆ ಕಲ್ಪನಾಶಕ್ತಿಗಳು ಹೆಚ್ಚು ಅಡಕವೂ ಸೂಕ್ಷ್ಮವೂ ಆಗಿದ್ದು ಅವನ ಕೈವಾಡಕ್ಕೆ ಒಂದು ಬಿಡಿನಾಟಕದ ಅವಕಾಶ ಅನುವಾಗಿ ಬಂದಂತೆ ಕಾಣುತ್ತದೆ.

ಸೊಫೊಕ್ಲೇಸ್ ರುದ್ರನಾಟಕದ ಹೊರಕಟ್ಟಡದಲ್ಲಿ ಮಾಡಿದ ಮಾರ್ಪಾಟು ಗಳಿಗಿಂತಲೂ ಅದರ ಅಂತರಂಗದಲ್ಲಿ, ಆತ್ಮದಲ್ಲಿ, ಸಾಧಿಸಿದ ಪರಿವರ್ತನೆ ಹೆಚ್ಚು ಮಹತ್ವದ್ದು. ಒಟ್ಟಿನಲ್ಲಿ ಹೇಳುವುದಾದರೆ, ಸೊಫೊಕ್ಲೇಸ್ ರುದ್ರನಾಟಕವನ್ನು ಬಾನಿಂದ ಭೂಮಿಗೆ ತಂದನು. ದೇವತಾ ಭೂಯಿಷ್ಠವಾದ ಅಯ್‌ಸ್ಕಿಲೊಸ್ಸಿನ

ನಾಟಕವಸ್ತು ಅದರ ದೈವೀಪ್ರಭಾವವನ್ನು ಕಳೆಯದೆ ಮಾನವೀಕರಿಸಿದನು. ಅಯ್‌ಸ್ಕಲೊಸ್ಸಿನ ನಾಟಕಗಳಲ್ಲಿ ಕಂಡುಬರುವ ಭಯಭಕ್ತಿಪ್ರಚೋದಕವಾದ ಭೀಷಣ ಗಾಂಭೀರ್ಯ ಸೊಫೊಕ್ಲೇಸಿಸ ನಾಟಕಗಳಲ್ಲಿ ಅನಿರ್ವಚನೀಯವಾದ ಲಲಿತಸೌಂದರ್ಯವಾಗಿ ಪರಿಣಮಿಸಿತು. ಅಯ್‌ಸ್ಕಲೊಸ್ಸಿನ ರಂಗವನ್ನು ಆಕ್ರಮಿಸಿಕೊಂಡಿದ್ದ ಅಮಾನುಷ ವ್ಯಕ್ತಿಗಳು, ಅಲೌಕಿಕ ವ್ಯಾಪಾರಗಳು, ವಿಶ್ವತತ್ವಗಳು, ದೈವಲೀಲೆಗಳು ಸೊಫೊಕ್ಲೇಸಿಸಲ್ಲಿ ಹಿಮ್ಮೆಟ್ಟಿ ಮನುಷ್ಯ ವ್ಯಕ್ತಿಗಳಿಗೂ ಮನುಷ್ಯ ವ್ಯಾಪಾರಗಳಿಗೂ ಮುನ್ನೆಡೆಗೊಟ್ಟವು. ಸೊಫೊಕ್ಲೇಸಿಸಲ್ಲಿ ಮನುಷ್ಯಸ್ವಭಾವ, ಅವನ ಬುದ್ಧಿರಾಗಗಳು, ಕಾಮಕ್ರೋಧಗಳು, ಕಷಾಯಗಳು, ಹೋರಾಟತಿಕ್ಕಾಟಗಳು—ಇವು ರುದ್ರನಾಟಕದ ಹುರುಳೂ ತಿರುಳೂ ಆದುವು. ಅದಕ್ಕೆ ತಕ್ಕಂತೆ ಭಾಷೆಯೂ ಮಾರ್ಪಾಟಾಯಿತು. ಅಯ್‌ಸ್ಕಲೊಸ್ಸಿನ ಉದಾತ್ತ ಗಂಭೀರ ಬೃಹಚ್ಛೈಲಿ ಸೊಫೊಕ್ಲೇಸಿಸಲ್ಲಿ ಔನ್ನತ್ಯದಲ್ಲೂ ಗಾಂಭೀರ್ಯದಲ್ಲೂ ಕಡಮೆಯೇನೂ ಅಲ್ಲದ ಸುಂದರ ಮೃದು ಲಲಿತಶೈಲಿಗೆ ಎಡೆಗೊಟ್ಟಿತು.

ಯುರುಪಿದೇಸ್ (ಕ್ರಿ.ಪೂ. ೪೮೦—೪೦೭, ೪೦೬): ಹೆಸರುಗೊಂಡ ಮೂವರು ಗ್ರೀಕ್ ಮಹಾ ರುದ್ರನಾಟಕಕಾರರಲ್ಲಿ ಯುರಿಪಿದೇಸೇ ಕೊನೆಯವನು. ಅವನಲ್ಲಿ ಹಿಂದಿನ ಸಂಪ್ರದಾಯಗಳು ಪೂರ್ತಿಯಾಗಿ ಬಿಡದೆ ಇದ್ದರೂ ನವೀನ ಭಾವನೆಗಳೂ ಆಶಯಗಳೂ ತತ್ವಗಳೂ ಬೇಕಾದಷ್ಟು ತುಂಬಿವೆ. ಯುರಿಪಿದೇಸಿನ ಮುಖ್ಯ ವಿಶೇಷ ಲಕ್ಷಣವೆಂದರೆ, ಅವನ ನಾಟಕಗಳಲ್ಲಿ ಕಂಡುಬರುವ ಮಾನವಸ್ವಭಾವದ ಸ್ವಸ್ವರೂಪನಿರೂಪಣ. ಉಳಿದಿಬ್ಬರಂತೆ ಅವನೂ ತನ್ನ ನಾಟಕವಸ್ತುಗಳನ್ನು ಗ್ರೀಕ್ ಪುರಾಣಕಥೆಗಳಿಂದಲೇ ತೆಗೆದುಕೊಂಡರೂ ಆ ವ್ಯಕ್ತಿಗಳಿಗೆ ದಿವ್ಯವೇಷ ಹಾಕದೆ ಅವರನ್ನು ಸಂಪೂರ್ಣ ಮಾನವರನ್ನಾಗಿ ಚಿತ್ರಿಸಿದ್ದಾನೆ. ಅಲ್ಲದೆ, ಪುರಾಣಕಥೆಗಳನ್ನು ಬದಲಾಯಿಸುವುದರಲ್ಲಿ ಉಳಿದಿಬ್ಬರಿಗಿಂತ ಹೆಚ್ಚು ಸ್ವಾತಂತ್ರ್ಯ ವಹಿಸಿದ್ದಾನೆ. ಮಾನವ ಮಹತ್ವ ಮಾತ್ರವಲ್ಲ, ಮಾನವ ಸೈಚ್ಛ್ಯವೂ ಅಷ್ಟೇ ತಥ್ಯನಿಷ್ಠೆಯಿಂದ ನಿರೂಪಿತವಾಗಿದೆ. ಅವನ ಪಾತ್ರಗಳಲ್ಲಿ ಮನುಷ್ಯನ ಉದಾತ್ತ ವೀರಗುಣಗಳು ಮಾತ್ರವಲ್ಲ, ನೀಚಗುಣಗಳೂ ದೋಷಗಳೂ ಇದ್ದಹಾಗೆಯೇ ವರ್ಣಿತವಾಗಿವೆ.

ಒಟ್ಟಿನಲ್ಲಿ, ಅವನ ಪಾತ್ರಗಳು ನಮ್ಮಿಂದ ಬಹು ದೂರವೂ ಬೇರೆಯೂ ಆದ ಕೇವಲ ಪೌರಾಣಿಕ ವ್ಯಕ್ತಿಗಳಲ್ಲ, ರಕ್ತಮಾಂಸಗಳಿಂದ ಕೂಡಿದ ನಮ್ಮಂಥ ಮನುಷ್ಯವ್ಯಕ್ತಿಗಳು. ಅವನ ನಾಟಕಗಳಲ್ಲೆಲ್ಲಾ ಮಾನವ ಸಹಾನುಭೂತಿ, ಮೃದುಭಾವಗಳು ಮತ್ತು ಕೋಮಲಪ್ರಕೃತಿ ಕಂಡುಬರುತ್ತವೆ. ದಾಂಪತ್ಯ ಪ್ರೇಮವನ್ನಾಗಲಿ, ಬಾಲಲೀಲೆಯನ್ನಾಗಲಿ ಚಿತ್ರಿಸುವಲ್ಲಿ ಯುರಿಪಿದೇಸಿನಲ್ಲಿ ಕಂಡುಬರುವ ಸಹಾನುಭೂತಿ, ಮಾರ್ದವ ಲಾಲಿತ್ಯಗಳು ಉಳಿದಿಬ್ಬರ ಉದಾತ್ತ ಗಾಂಭೀರ್ಯದಲ್ಲಿ ಕಂಡುಬರಲಾರವು. ಅವನ ನಾಟಕಗಳಲ್ಲಿ ಸ್ತ್ರೀಪುರುಷ ಪ್ರಣಯ ನಿಸ್ಸಂಕೋಚವಾಗಿ, ಸಂಪ್ರದಾಯಬಿಟ್ಟು ವರ್ಣಿತವಾಗಿದೆ. ಮನುಷ್ಯಜೀವನದಲ್ಲಿ ಹರ್ಷಘಟನೆಗಳೂ ರುದ್ರಘಟನೆಗಳೂ ಬೆರೆದಿರುವಂತೆಯೇ ಅವನ ಕೆಲವು ನಾಟಕಗಳಲ್ಲಿ ಹರ್ಷರೌದ್ರಗಳ ಉದ್ದೇಶಪೂರ್ವಕ ಮಿಶ್ರ ನಿರೂಪಣವಿದೆ. ಎಂದರೆ ನವೀನ ಹರ್ಷರುದ್ರನಾಟಕದ ಬೀಜವೂ ಯುರಿಪಿದೇಸೇ ಬಿತ್ತಿದ್ದೆನ್ನಬಹುದು.

ಅಯ್‌ಸ್ಕಿಲೊಸ್ಸಿನಲ್ಲಿ ಮುನ್ನೆಲೆಯಲ್ಲಿದ್ದ ಪ್ರತ್ಯಕ್ಷ, ಸ್ಪಷ್ಟ ಧರ್ಮತತ್ವ ನಿರೂಪಣೆ ಸೊಫೊಕ್ಲೇಸಿನಲ್ಲಿ ಹಿನ್ನೆಲೆಗೆ ಸರಿದು ಯುರಿಪಿದೇಸಿನಲ್ಲಿ ತೆರೆಯ ಹಿಂದೆ ಮರೆಯಾಗಿದೆ ಎನ್ನಬಹುದು. ಧರ್ಮಬೋಧೆ ಇಲ್ಲವೆಂದ ಮಾತ್ರಕ್ಕೆ ಯುರಿಪಿದೇಸಿನ ನಾಟಕಗಳಲ್ಲಿ ಘನೋದ್ದೇಶಗಳಾಗಲಿ, ಮಹದಾಶಯಗಳಾಗಲಿ ಇಲ್ಲವೆಂದಲ್ಲ. ಆದರೆ, ಮತೋಪದೇಶಕನಾಗಿಯೂ ಧರ್ಮಬೋಧಕನಾಗಿಯೂ ಅವನು ನಾಟಕ ಬರೆಯಲಿಲ್ಲ. ಈ ದೃಷ್ಟಿಭೇದದಿಂದಲೂ ಮನುಷ್ಯಜೀವನ ಘಟನೆಗಳ, ಮನುಷ್ಯವ್ಯಾಪಾರಗಳ ಮತ್ತು ಮನುಷ್ಯಸ್ವಭಾವದ ಸ್ವಸ್ವರೂಪ ನಿರೂಪಣೆಯೇ ತನ್ನ ಮುಖ್ಯಧ್ಯೇಯವಾಗಿದ್ದದ್ದರಿಂದಲೂ ಅವನಲ್ಲಿ ಒಟ್ಟು ನಾಟಕಪರಿಸ್ಥಿತಿಯೇ ಹಿಂದಿನವರಿಂದ ಬೇರೆಯಾಗಿದೆ. ಅಯ್‌ಸ್ಕಿಲೊಸ್ ಮತ್ತು ಸೊಫೊಕ್ಲೇಸಿನಲ್ಲಿ ಮನುಷ್ಯನು ವಿಶ್ವರಂಗದಲ್ಲಿ ದೈವನಿಯಮಗಳಿಂದ ನಿಯಂತ್ರಿತನಾಗಿ ಬಾಹ್ಯಶಕ್ತಿಗಳಿಗೆ ಬಲಿಬಿದ್ದು ವಿಧಿಯೊಡನೆ ಸದಾ ಹೋರಾಡುತ್ತಿರುವ ವ್ಯಕ್ತಿ ಮಾತ್ರ. ಆದರೆ, ಯುರಿಪಿದೇಸಿನಲ್ಲಿ ಮನುಷ್ಯನಿಂದ ಹೊರಗಾದ ಮತ್ತು ಅವನ ಮೇಲೆ ಆಡಳಿತ ನಡಸುವ ವಿಧಿಯ ಪ್ರಾಧಾನ್ಯ ಕಡಮೆಯಾಗಿ, ಮನುಷ್ಯನ ಹೋರಾಟಗಳು ಬಾಹ್ಯವಿಧಿಯೊಡನೆ ಇರದೆ ಅವನ

ಒಳಗೇ ಒಳತೋಟಿಯಾಗಿ ಪರಿಣಮಿಸುತ್ತವೆ. ಅವನ ಹೋರಾಟಗಳೆಲ್ಲ ಅವನಲ್ಲಿಯ ಗುಣದೋಷಗಳಿಗೆ, ಸದಸತ್ತುಗಳಿಗೆ, ಶಕ್ತಿದೌರ್ಬಲ್ಯಗಳಿಗೆ. ಇದು ಆಧುನಿಕ ನಾಟಕಗಳಲ್ಲಿ ಚೆನ್ನಾಗಿ ಕಾಣಬರುತ್ತದೆ.

ಯುರಿಪಿದೇಸ್ ಮಾಡಿದ ಇತರ ಬದಲಾವಣೆಗಳಿಂದ ಅವನ ನಾಟಕದಲ್ಲಿ ಮೇಳದ ಆವಶ್ಯಕತೆ ಬಹಳ ಕಡಮೆಯಾಯಿತು. ಧರ್ಮತತ್ವ ಪ್ರಕಾಶಕ್ಕೆ ಅದು ಬೇಕಾಗಿರಲಿಲ್ಲ. ಪಾತ್ರಗಳ ಮತ್ತು ಪಾತ್ರಸಂವಾದಗಳ ಮೇಲೆ ದೃಷ್ಟಿಯೆಲ್ಲಾ ನೆಟ್ಟದ್ದರಿಂದ ಮೇಳದ ನಾಟಕೀಯ ಪ್ರಭಾವವೂ ಬಹಳ ಕಡಮೆಯಾಯಿತು. ಅಲ್ಲದೆ ನಾಟಕಸಂವಿಧಾನ ಹೆಚ್ಚು ಹೆಚ್ಚು ಜಟಿಲವಾಗ ಬಂದಂತೆಲ್ಲ ಮೇಳ ಅನುಕೂಲವಾಗುವುದಕ್ಕಿಂತ ಅಡ್ಡಿಯಾಗಿ, ನೆರವಾಗುವುದು ಬಿಟ್ಟು ಹೊರೆ ಯಾಯಿತು. ಮೊದಲೆ ತಿಳಿಯದಂತೆ ಉದ್ದೇಶಪೂರ್ವಕವಾಗಿ ಕಾದಿಡ ಬೇಕಾಗಿದ್ದ ಕಥಾಸಂವಿಧಾನದ ರಹಸ್ಯವನ್ನು ನಾಟಕದ ಮೊದಲಿನಿಂದ ಕೊನೆಯ ವರೆಗೂ ರಂಗದಲ್ಲಿರುವ ಮೇಳದವರ ಗುಂಪಿನಿಂದ ಮರೆಯಾಗಿಡುವುದು ಅಸಾಧ್ಯ ವಾಯಿತು. ಈ ಹಲವು ಕಾರಣಗಳಿಂದ ಕ್ರಮೇಣ ಮೇಳದ ಸ್ಥಾನ ಬಹಳವಾಗಿ ಮಾರ್ಪಟ್ಟು ವಸ್ತುಸಂವಿಧಾನಕ್ಕೂ ಅದಕ್ಕೂ ಇದ್ದ ನಿಕಟ ಸಂಬಂಧ ತಪ್ಪಿ ಹೋಗಿ ಕೊನೆಗೆ ಅದು ಮಧ್ಯೇ ಮಧ್ಯೇ ಕೇವಲ ವಿನೋದಕ್ಕಾಗಿ ಬರುವ ಸಂಗೀತದ ಮೇಳವಾಗಿಬಿಟ್ಟಿತು. ಈ ಮಾರ್ಪಾಟು ಮುಂದೆ ಅಗಥೋನಿನಲ್ಲಿ ಸಂಪೂರ್ಣವಾಗಿ ಕಂಡುಬಂದರೂ ಯುರಿಪಿದೇಸಿನಲ್ಲಿ ಅದರ ಸ್ಪಷ್ಟ ಆರಂಭ ವನ್ನು ಕಾಣಬಹುದು. ಯುರಿಪಿದೇಸ್ ಕೊಂಚಮಟ್ಟಿಗಾದರೂ ಹಿಂದಿನ ಸಂಪ್ರದಾಯಕ್ಕೆ ಕಟ್ಟುಬಿದ್ದಿದ್ದನಾದ್ದರಿಂದ ಮೇಳದ ಸ್ಥಾನವನ್ನು ಪೂರ್ತಿ ಯಾಗಿ ಕದಲಿಸಲು ಇಷ್ಟವಿಲ್ಲದೆ, ನಾಟಕಕ್ಕೂ ಅದಕ್ಕೂ ಇದ್ದ ಸ್ವಾಭಾವಿಕ ಆಂತರಿಕ ಸಂಬಂಧ ತಪ್ಪಿಹೋದರೂ ಕೆಲವು ಬಾಹ್ಯಸಂಬಂಧಗಳನ್ನು ಕಲ್ಪಿ ಸಿದ್ದನು. ಅಲ್ಲದೆ, ಬರುಬರುತ್ತ ಮೇಳದಲ್ಲಿ ಅರ್ಥಕ್ಕಿಂತಲೂ ಗಾನಯೋಗ್ಯತೆಗೆ ಹೆಚ್ಚು ಗಮನಕೊಡುತ್ತ ಬಂದನು.

ಯುರಿಪಿದೇಸ್ ತನ್ನ ನಾಟಕಗಳಲ್ಲಿ ಸಾಮಾನ್ಯವಾಗಿ ಹಿಂದಿನ ಕಥೆಯನ್ನು ಸೂಚಿಸುವ ಉಪಕ್ರಮಭಾಷಣವನ್ನೂ ಮುಂದಿನ ಕಥೆಯನ್ನು ಸೂಚಿಸುವ ಉಪಸಂಹಾರ ಭಾಷಣವನ್ನೂ ಸೇರಿಸಿದ್ದಾನೆ. ಇವು ಹಲವು ವೇಳೆ ನಾಟಕದ

ಕಥೆಗೆ ಹೊಂದಿಕೊಂಡು ಬಂದಿದ್ದರೂ ಕೆಲವುವೇಳೆ ಬಹು ಕೃತಕವಾಗಿವೆ. ಉಪಸಂಹಾರ ಭಾಷಣಗಳು ಸಾಮಾನ್ಯವಾಗಿ ನಾಟಕದ ಕೊನೆಯಲ್ಲಿ ಬಗೆಹರಿಸಲಾಗದ ಯಾವುದಾದರೂ ಕಷ್ಟಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಪ್ರತ್ಯಕ್ಷವಾದ ದೇವತೆಯಿಂದ ನಡೆಯುತ್ತವೆ. ಉಪಕ್ರಮ ಭಾಷಣಗಳು ಸಾಮಾನ್ಯವಾಗಿ ಯಾವುದಾದರೂ ನಾಟಕಪಾತ್ರದಿಂದಲೋ ದೇವತೆಯಿಂದಲೋ ನಡೆಯುತ್ತವೆ. ಈ ಉಪಕ್ರಮ ಉಪಸಂಹಾರ ಭಾಷಣಗಳು ಅಯ್‌ಸ್ಕಿಲೊಸ್ಸಿನಲ್ಲೂ ಸೊಫೊಕ್ಲೇಸಿನಲ್ಲೂ ಇಲ್ಲ. ಇವನ್ನು ತಂದುಹಾಕುವುದರಲ್ಲಿ ಯುರಿಪಿದೇಸಿನ ಉದ್ದೇಶ ಏನಿತ್ತೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

ಯುರಿಪಿದೇಸ್ ತರ್ಕ, ಅಲಂಕಾರ, ತತ್ವಶಾಸ್ತ್ರ ಮೊದಲಾದುವುಗಳಲ್ಲಿ ಘನಪಂಡಿತನಾಗಿದ್ದನು. ಆ ಕಾರಣದಿಂದಲೋ ಏನೋ ಅವನ ನಾಟಕಗಳಲ್ಲಿ ಹಲವು ವೇಳೆ ಅವುಗಳ ಪ್ರಭಾವ ಔಚಿತ್ಯಮಿಾರಿ ಅದು ದೌರ್ಬಲ್ಯವಾಗಿ ಪರಿಣಮಿಸಿದೆ. ತರುವಾಯದ ಆಲಂಕಾರಿಕ ಭಾಷಾಪ್ರಯೋಗಕಾರರಿಗೆಲ್ಲ ಒಂದು ದೃಷ್ಟಿಯಿಂದ ಯುರಿಪಿದೇಸೇ ಗುರುವೆನ್ನಬಹುದು. ಅವನ ಅಲಂಕಾರ ಭೂಯಿಷ್ಠ ಭಾಷಾವೈಖರಿಯೇ ಮುಂದಿನ ರುದ್ರನಾಟಕಗಳಲ್ಲಿ ಮಾತ್ರವಲ್ಲದೆ ಇತರ ಸಾಹಿತ್ಯ ಶಾಖೆಗಳಲ್ಲಿಯೂ ನೆಲಸಿಬಿಟ್ಟಿತು. ಅವನ ಆಲಂಕಾರಿಕ ಭಾಷೆ ನಿಸ್ಸತ್ವವಾಗಿರಲಿಲ್ಲ. ಕುಸುಮಶೈಲಿಯಲ್ಲಿ ಮೊನಚೂ ಇತ್ತು; ಆಭರಣದ ಹೊರೆಯಲ್ಲಿ ಸರಳ ನಡಗೆಯೂ ಇತ್ತು; ನಿಜ. ಆದರೆ ಸೊಫೊಕ್ಲೇಸಿನೊಡನೆ ಹೋಲಿಸಿದರೆ ಯುರಿಪಿದೇಸಿನಲ್ಲಿ ಅಷ್ಟು ನಯವಿಲ್ಲ, ಅಚ್ಚುಕಟ್ಟಿಲ್ಲ, ಬೆಡಗಿಲ್ಲ.

ಯುರಿಪಿದೇಸಿನ ಕಾಲಕ್ಕಾಗಲೇ ಜನರಲ್ಲಿ ವಿದ್ಯೆಯೂ ಜ್ಞಾನವೂ ಹರಡಿ ಹಿಂದಿನ ಪುರಾಣಕಥೆಗಳಲ್ಲಿ ನಂಬಿಕೆ ಕಡಮೆಯಾಗಿತ್ತು. ಜನಸಾಮಾನ್ಯದಲ್ಲಿ ಇನ್ನೂ ಒಂದು ತರದ ಮೂಢಭಕ್ತಿಯಿತ್ತಾದರೂ ವಿದ್ಯಾವಂತರಲ್ಲಿ ಆ ಪುರಾಣಗಳೆಲ್ಲ ಕಟ್ಟುಕಥೆಯೆಂಬ ಭಾವನೆಯೂ ಆ ಪೋಕರಿ ದೇವತೆಗಳೆಲ್ಲ ಮಾನವ ರಾಗದ್ವೇಷಾದಿ ಕಷಾಯಗಳ ಮೂರ್ತೀಕೃತ ವ್ಯಕ್ತಿಗಳೇ ಹೊರತು ದಿವ್ಯ ಮೂರ್ತಿಗಳಲ್ಲವೆಂಬ ಭಾವನೆಯೂ ತಲೆದೋರಿತ್ತು. ಅದು ಯುರಿಪಿದೇಸಿನ ಪ್ರತಿಭೆಗೆ, ಜಾಯಮಾನಕ್ಕೆ, ಶಿಕ್ಷಣಕ್ಕೆ ಬಹಳ ಅನುವಾಗಿ ಬಂತು. ಅಲ್ಲದೆ, ಅಂಥ ಸನ್ನಿವೇಶದಲ್ಲಿ ಪುರಾಣಕಥೆಗಳನ್ನು ತೆಗೆದುಕೊಂಡು ಹಿಂದಿನಂತೆಯೇ

ನಾಟಕ ರಚಿಸುವುದು ಕಷ್ಟವೂ ಆಯಿತು. ಮತ್ತು ಸೊಫೊಕ್ಲೇಸಿಸಂತೆ ಹಿಂದಿನದನ್ನೂ ತರುವಾಯದ್ದನ್ನೂ ಹೊಂದಿಸಿಕೊಂಡು ಹೋಗಲು ಯುರಿಪಿ ದೇಸಿಗೆ ಮನಸ್ಸಿರಲಿಲ್ಲ. ಆದ್ದರಿಂದ ಅವನು ತನ್ನ ನಾಟಕಗಳಲ್ಲಿ ದೇವತೆಗಳ ದೋಷಗಳನ್ನೆಲ್ಲಾ ನಿರ್ಭಯವಾಗಿ ಘಂಟಾಘೋಷವಾಗಿ ಉದ್ಘಾಟನೆ ಮಾಡಿದ್ದಾನೆ.

ತರುವಾಯದ ಚರಿತ್ರೆ : ಅಯ್‌ಸ್ಕೈಲೊಸ್, ಸೊಫೊಕ್ಲೇಸ್ ಮತ್ತು ಯುರಿಪಿದೇಸ್—ಈ ಮೂವರು ಮಹಾ ರುದ್ರನಾಟಕಕಾರರು ಹಿಂದಿನ, ತಮ್ಮ ಕಾಲದ ಮತ್ತು ತರುವಾಯದ ಉಳಿದ ರುದ್ರನಾಟಕಕಾರರನ್ನೆಲ್ಲ ಕವಿದು ಮರಸಿಬಿಟ್ಟಿದ್ದಾರೆ. ಯುರಿಪಿದೇಸಿನ ತರುವಾಯ ಗ್ರೀಕ್ ರುದ್ರನಾಟಕ ಒಮ್ಮೆಗೇ ಬರಡುಬಿದ್ದು ಹೋಗಲಿಲ್ಲ. ಮುಂದೆ ಮೂರು ನಾಲ್ಕು ಶತಮಾನಗಳ ವರೆಗೂ ಸ್ವತಂತ್ರ ರುದ್ರನಾಟಕಗಳು ರಚಿತವಾಗುತ್ತ ಹೋದುವು. ಅಯ್‌ಸ್ಕೈ ಲೊಸ್ಸಿನ ಮನೆತನವೊಂದೇ ಸುಮಾರು ಇನ್ನೂರು ವರ್ಷಗಳ ಕಾಲ ರುದ್ರನಾಟಕ ಕಾರರನ್ನು ಪರಂಪರೆಯಾಗಿ ಒದಗಿಸುತ್ತ ಬಂತು. (ಒಂದು ಮನೆತನದಲ್ಲಿ ಪರಂಪರೆಯಾಗಿ ನಾಟಕಕಾರರು ನಾಟಕ ಕಲೆಯನ್ನು ಕೃಷಿಮಾಡಿಕೊಂಡು ಬಂದಿರುವುದು ಗ್ರೀಕ್ ನಾಟಕ ಚರಿತ್ರೆಯಲ್ಲಿ ಒಂದು ವಿಶೇಷ.) ಆದರೆ ಎಲ್ಲವೂ ಎರಡನೆಯ ಮೂರನೆಯ ದರ್ಜೆಯವೇ ಹೊರತು ಹಿಂದಿನ ಮಹಾ ರುದ್ರನಾಟಕಗಳ ಪಂಕ್ತಿಗೆ ಸೇರತಕ್ಕದ್ದು ಒಂದೂ ಇಲ್ಲ. ಅಲ್ಲದೆ, ನಮ್ಮ ಅದೃಷ್ಟವೋ ದುರದೃಷ್ಟವೋ! ಆ ರುದ್ರನಾಟಕಗಳಲ್ಲಿ ಒಂದಾದರೂ ಸಂಪೂರ್ಣವಾಗಿ ಉಳಿದುಬಂದಿಲ್ಲ. ತರುವಾಯದವರಲ್ಲಿ ಹೆಸರುಹೇಳಬಹು ದಾದವರು ಇಯೋನ್ ಮತ್ತು ಆಗಥೋನ್.

ಗ್ರೀಕ್ ರುದ್ರನಾಟಕದ ಸಾಧ್ಯತೆಗಳನ್ನೆಲ್ಲಾ ಹಿಂದಿನ ಮೂವರು ಸಂಪೂರ್ಣ ವಾಗಿ ಸಾಧಿಸಿಬಿಟ್ಟಿದ್ದರು. ಗ್ರೀಕ್ ರುದ್ರನಾಟಕದ ವಸ್ತುವಿಗೆ ಆಕರವಾದ ಗ್ರೀಕ್ ಪುರಾಣಕಥೆಗಳಲ್ಲಿ ಒಂದನ್ನೂ ಬಿಡದೆ ಎಲ್ಲವನ್ನೂ ಉಪಯೋಗಿಸಿ ಕೊಂಡುಬಿಟ್ಟಿದ್ದರು. ಗ್ರೀಕ್ ರುದ್ರನಾಟಕಕ್ಕೂ ಗ್ರೀಕ್ ಧರ್ಮಜೀವನಕ್ಕೂ ಇದ್ದ ನಿಕಟಸಂಬಂಧ ಕೇವಲ ಲೌಕಿಕವಸ್ತುವಿನಿಂದ ನಾಟಕ ಕಟ್ಟುವುದಕ್ಕೆ ಅಡಚಣೆಯಾಗಿತ್ತು. ಅಲ್ಲದೆ, ತರುವಾಯದವರಲ್ಲಿ ಸಾಹಿತ್ಯ ನಿರ್ಮಾಣ

ಶಕ್ತಿಯೂ ಪ್ರತಿಭೆಯೂ ಅಷ್ಟಾಗಿ ಇರಲಿಲ್ಲ. ಇದ್ದ ಅಲ್ಪಸ್ವಲ್ಪ ಶಕ್ತಿಯೂ ಕೂಡ ಹರ್ಷನಾಟಕ ಕೃಷಿಗೆ ವಿನಿಯೋಗವಾಗಿ ಹೋಯಿತು. ಈ ಹಲವು ಕಾರಣಗಳಿಂದ ಗ್ರೀಕ್ ರುದ್ರನಾಟಕದ ಹೊನಲು ಮುಂದೆ ಹರಿಯದೆ ಮಡುಗಟ್ಟಿ ನಿಂತು ಮಲೆತುಹೋಯಿತು. ಕ್ರಿ.ಪೂ. ೪ ನೆಯ ಶತಮಾನದ ಹೊತ್ತಿಗೆಯೇ ಸ್ವತಂತ್ರ ರುದ್ರನಾಟಕಗಳ ರಚನೆ ಕಡಮೆಯಾಗುತ್ತ ಬಂದು ಸ್ಪರ್ಧೆಗಳಲ್ಲಿ ಹೊಸ ನಾಟಕಗಳ ಜತೆಗೆ ಹಿಂದಿನ ಮಹಾಕವಿಗಳ ನಾಟಕಗಳನ್ನೂ ಪ್ರದರ್ಶಿಸುವುದಕ್ಕೆ ಮೊದಲಾಯಿತು. ಬಲು ಬೇಗನೆ ಆ ಒಂದೆರಡು ಹೊಸ ನಾಟಕಗಳೂ ನಿಂತುಹೋಗಿ ಬರಿಯ ಹಿಂದಿನವೇ ಗ್ರೀಕ್ ರುದ್ರರಂಗವನ್ನೆಲ್ಲಾ ಆಕ್ರಮಿಸಿ ನಿಂತುವು. ಹಿಂದಿನವರಲ್ಲಿ ಕೂಡ ಬರುಬರುತ್ತ ಮೊದಲು ಆಯ್‌ಸ್ಕುಲೊಸ್ಸೂ ತರುವಾಯ ಸೊಫೊಕ್ಲೇಸೂ ಹಿಂಜಿದ್ದು ಯುರಿಪಿದೇಸ್ ಒಬ್ಬನೇ ಕ್ರಿ.ಶ. ೩-೪ ನೆಯ ಶತಮಾನದ ವರೆಗೆ ನಿಂತನು.

ಮಹಾವೀರ ಅಲೆಕ್ಸಾಂಡರ್ ಹಲವು ನಾಡುಗಳನ್ನು ಗೆದ್ದು ಗ್ರೀಕ್ ಸಾಮ್ರಾಜ್ಯ ವಿಸ್ತರಿಸಿದಂತೆಲ್ಲಾ ಗ್ರೀಕ್ ನಾಟಕವೂ ಹರಡಿತು. ಎಲ್ಲಿ ಒಂದು ಗ್ರೀಕ್ ಪಟ್ಟಣ ಕಟ್ಟಿತು, ಎಲ್ಲಿ ಒಂದು ಗ್ರೀಕ್ ನೆಲಸೆ ನೆಲಸಿತು, ಅಲ್ಲಿ ಒಂದು ಗ್ರೀಕ್ ನಾಟಕರಂಗ ಏರ್ಪಟ್ಟಿತು. ಕೆಲವುಕಾಲ ಅಲೆಕ್ಸಾಂಡ್ರಿಯ ಪಟ್ಟಣ ತನ್ನ ರುದ್ರನಾಟಕ ಪ್ರದರ್ಶನ ವೈಭವದಲ್ಲಿ ಗ್ರೀಕ್ ರುದ್ರನಾಟಕಕ್ಕೆ ತವರು ಮನೆಯಾದ ಅಥೆನ್ಸನ್ನು ಕೂಡ ಮೀರಿಸಿಬಿಟ್ಟಿತ್ತೆಂದು ಹೇಳಬಹುದು. ಹೀಗೆ, ಒಳಗೆ ಹುರುಳೂ ತಿರುಳೂ ಕೂಡಿಕೊಳ್ಳದೆ ಹೊರಗೆ ಮಾತ್ರ ಉಬ್ಬಿ ಹಿಗ್ಗಿಕೊಂಡದ್ದೂ ಗ್ರೀಕ್ ರುದ್ರನಾಟಕದ ಅಳಿವಿಗೆ ಒಂದು ಕಾರಣವಾಯಿತು.

೨. ರುದ್ರನಾಟಕ ಪ್ರದರ್ಶನ

ನಗರ ದಿಯೊನೂಸೊಸ್ ಜಾತ್ರೆ ವಸಂತಕಾಲದಲ್ಲಿ ನಾಲ್ಕೈದು ದಿನಗಳಿಗೆ ಮೇಲ್ಪಟ್ಟು ನಡೆಯುತ್ತಿತ್ತು. ಹಲವು ದಿಯೊನೂಸೊಸ್ ಜಾತ್ರೆಗಳಲ್ಲಿ ಇದೇ ಬಹಳ ದೊಡ್ಡದೂ ವೈಭವದ್ದೂ ಆದ್ದು.[೬] ಮೊದಲನೆಯ ದಿನ ಪಟ್ಟಣಿಗರೆಲ್ಲರೂ

[೬] ದಿಯೊನೂಸೊಸ್ಸಿಗೆ ವರ್ಷಕ್ಕೆ ಹಲವು ಜಾತ್ರೆಗಳು ನಡೆಯುತ್ತಿದ್ದುವು. ಅವುಗಳಲ್ಲಿ ಮೂರು ಮುಖ್ಯವಾದುವು—i. ನಗರ ದಿಯೊನೂಸಿಯ; ಇದಕ್ಕೆ ದೊಡ್ಡ ದಿಯೊನೂಸಿಯ

ಸೇರಿ ದೇವತೆಯ ಮೆರವಣಿಗೆ ನಡಸಿ ಬಲಿಕೊಡುತ್ತಿದ್ದರು. ಮಾರನೆಯ ಮೂರು ದಿನಗಳೂ ನಾಟಕ ಸ್ಪರ್ಧೆ ನಡೆಯುತ್ತಿತ್ತು. ಒಂದೊಂದು ದಿನವೂ ಒಬ್ಬೊಬ್ಬ ರುದ್ರನಾಟಕಕಾರನು ಮೂರು ರುದ್ರನಾಟಕಗಳನ್ನೂ ಒಂದು ಅಣಕನಾಟಕವನ್ನೂ ಒಬ್ಬೊಬ್ಬ ಹರ್ಷನಾಟಕಕಾರನು ಒಂದೊಂದು ಹರ್ಷ ನಾಟಕವನ್ನೂ ಪ್ರದರ್ಶಿಸುತ್ತಿದ್ದರು. ರುದ್ರನಾಟಕಗಳು ಬೆಳಗ್ಗೆಯೂ ಅವು ಮುಗಿದೊಡನೆಯೇ ಬೈಗಿನಲ್ಲಿ ಹರ್ಷನಾಟಕವೂ ನಡೆಯುತ್ತಿದ್ದುವು. ಬಲು ಬೇಗನೆ ಹರ್ಷನಾಟಕಕಾರರ ಸಂಖ್ಯೆ ಐದಕ್ಕೆ ಏರಿ ಐದು ಹರ್ಷನಾಟಕಗಳು ಆಡುತ್ತಿದ್ದುವು.

ಮೇಲ್ವಿಚಾರಣೆ: ಜಾತ್ರೆಯ ಮತ್ತು ಅದರ ಅಂಗವಾದ ನಾಟಕ ಪ್ರದರ್ಶನದ ಮೇಲ್ವಿಚಾರಣೆಯನ್ನು ಒಟ್ಟು ಅಥೆನ್ಸ್ ರಾಜ್ಯವೇ ತನ್ನ ದಂಡ ನಾಯಕರ ಮೂಲಕ ನೋಡಿಕೊಳ್ಳುತ್ತಿತ್ತು. ಒಂದೊಂದು ಜಾತ್ರೆಯ ಮೇಲ್ವಿಚಾರಣೆ ಒಬ್ಬೊಬ್ಬ ದಂಡನಾಯಕನಿಗೆ ಸೇರಿತ್ತು. ನಾಯಕನ ಕೆಲಸ ವೆಂದರೆ—ಆ ವರ್ಷದ ಮೇಲಾಟಕ್ಕೆ ಮೂರು ನಾಟಕವ್ಯೂಹಗಳನ್ನು ಗೊತ್ತು ಮಾಡಿ, ಒಂದೊಂದು ನಾಟಕವ್ಯೂಹದ ಪ್ರದರ್ಶನಕ್ಕೂ ಮೂವರನ್ನು—ನಾಟಕಕಾರ, ಮೇಳನಿರ್ವಾಹಕ, ಮೊದಲನೆಯ ನಟ—ಗೊತ್ತುಮಾಡುವುದು. ನಾಟಕಕಾರರೆಲ್ಲರೂ ಮೊದಲೇ ದಂಡನಾಯಕನಿಗೆ ತಮ್ಮ ನಾಟಕಗಳನ್ನು ಒಪ್ಪಿಸಬೇಕಾಗಿತ್ತು. ಅವನು ಅವರಲ್ಲಿ ಮೂವರನ್ನು ಆಯ್ದು ಅವರಿಗೆ ನಾಟಕ ವಾಡಲು ಅವಕಾಶ ಕೊಡುತ್ತಿದ್ದನು. ಹಾಗೆಯೇ ಹರ್ಷನಾಟಕಕಾರರನ್ನೂ

ಎಂದೂ ಹೆಸರು; ii. ಲೇನಯ್ಯ; iii. ಹಳ್ಳಿಯ ದಿಯೊನೂಸಿಯ; ಇದಕ್ಕೆ ಚಿಕ್ಕ ದಿಯೊ ನೂಸಿಯ ಎಂದೂ ಹೆಸರು. ನಗರ ದಿಯೊನೂಸಿಯ ಮಾರ್ಚಿ-ಏಪ್ರಿಲ್‌ಗಳಲ್ಲಿ ನಡೆದು, ಆಗ ರುದ್ರನಾಟಕ ಸ್ಪರ್ಧೆ ಹರ್ಷನಾಟಕ ಸ್ಪರ್ಧೆ ಎರಡೂ ನಡೆಯುತ್ತಿತ್ತು. ಆದರೆ, ರುದ್ರನಾಟಕ ಸ್ಪರ್ಧೆಯೇ ಮುಖ್ಯವಾದ್ದು. ಲೇನಯ್ಯ ಜನವರಿ-ಫೆಬ್ರುವರಿಗಳಲ್ಲಿ ನಡೆಯುತ್ತಿತ್ತು. ರುದ್ರನಾಟಕಗಳೂ ಆಡುತ್ತಿದ್ದುವಾದರೂ ಹರ್ಷನಾಟಕಗಳೇ ಇದರಲ್ಲಿ ಮುಖ್ಯ. ಹಳ್ಳಿ ದಿಯೊನೂಸಿಯ ಹಲವು ಹಳ್ಳಿಗಳಲ್ಲಿಯೂ ಸಣ್ಣ ಊರುಗಳಲ್ಲಿಯೂ ಡಿಸೆಂಬರ್-ಜನವರಿ ತಿಂಗಳಲ್ಲಿ ನಡೆಯುತ್ತಿತ್ತು. ಆಗ ಆಡುತ್ತಿದ್ದ ನಾಟಕಗಳು ಬಲುಪಾಲು ನಗರ ದಿಯೊನೂಸಿಯದಲ್ಲಿ ಪ್ರಶಸ್ತಿ ಪಡೆದುವಾಗಿರುತ್ತಿದ್ದುವು. ಇದಕ್ಕಾಗಿ ನಾಟಕಮಂಡಲಿಗಳು ಬಂಡಿಯ ಮೇಲೆ ಊರಿಂದೂರಿಗೆ ಹೋಗುತ್ತಿದ್ದುವು.

ಆಯಿಸುತ್ತಿದ್ದನು. ಅಥೆನ್ಸಿನವರಲ್ಲದವರಿಗೂ ಈ ಸ್ಪರ್ಧೆಯಲ್ಲಿ ಸೇರಲು ಅವಕಾಶವಿತ್ತು.

ನಾಟಕಕಾರನದು ನಾಟಕ ಬರೆದು ಅದಕ್ಕೆ ಬೇಕಾದ ಸಂಗೀತವನ್ನು ಅಳವಡಿಸುವುದು ಮಾತ್ರವಾಗಿರಲಿಲ್ಲ; ಮೊದಮೊದಲು ನಟರನ್ನೂ ಮೇಳದವರನ್ನೂ ತಾನೇ ಶಿಕ್ಷಣಕೊಟ್ಟು ಸಜ್ಜುಗೊಳಿಸುತ್ತಿದ್ದನು. ಆದರೆ. ಕ್ರಿ.ಪೂ. ೫ನೆಯ ಶತಮಾನದ ವೇಳೆಗೆ ಒಬ್ಬ ಶಿಕ್ಷಕನನ್ನು ನೇಮಿಸಿಕೊಳ್ಳುವುದು ವಾಡಿಕೆಯಾಯಿತು. ಒಮ್ಮೊಮ್ಮೆ ನಾಟಕಕಾರನು ತನ್ನ ನಾಟಕಗಳನ್ನು ಬೇರೊಬ್ಬನಿಂದ ಪ್ರದರ್ಶಿಸುವುದಕ್ಕೂ ಅವಕಾಶವಿರುತ್ತಿತ್ತು. (ಇಯೋಫೋನ್ ತನ್ನ ತಂದೆ ಸೊಫೊಕ್ಲೇಸ್ ಬರೆದ ನಾಟಕಗಳನ್ನು ಕೆಲವು ಸಲ ಹಾಗೆ ಪ್ರದರ್ಶಿಸಿದ್ದಾನೆ). ಮೊದಮೊದಲು ನಾಟಕಕಾರನೇ ಮೊದಲನೆಯ ನಟನನ್ನು ಗೊತ್ತುಮಾಡಿಕೊಳ್ಳುತ್ತಿದ್ದನು. ಆದರೆ, ಕ್ರಿ.ಪೂ. ೫ನೆಯ ಶತಮಾನದ ಉತ್ತರಾರ್ಧದಿಂದ ಈಚೆಗೆ ದಂಡನಾಯಕನೇ ಒಬ್ಬೊಬ್ಬ ನಾಟಕಕಾರನಿಗೂ ಒಬ್ಬೊಬ್ಬ ಮೊದಲನೆಯ ನಟನನ್ನು ಆಯ್ಕೆಹಾಕಿ ಗೊತ್ತುಪಡಿಸುತ್ತಿದ್ದನು. ಆ ಮೊದಲನೆಯ ನಟ ತನ್ನ ಜತೆಯ ಉಳಿದಿಬ್ಬರು ನಟರನ್ನು ಹೊಂದಿಸಿಕೊಳ್ಳುತ್ತಿದ್ದನು. ನಟರು ಸಮಾಜದಲ್ಲಿ ಗಣ್ಯರಾದವರಾಗಿದ್ದರು. ಅವರು ಬರಿಯ ನಾಟಕ ನಟರಲ್ಲ; ದಿಯೊನೂಸೊಸ್ ದೇವತೆಯ ಉಪಾಸನೆಯಲ್ಲಿ ಅವರೂ ಒಂದು ಮುಖ್ಯ ಅಂಗ. ಸೈನಿಕಸೇವೆಯಿಂದ ಬಿಡುಗಡೆ, ಶತ್ರುರಾಜ್ಯದಲ್ಲಿ ನಿರಪಾಯ ಗಮನ—ಇವೇ ಮೊದಲಾದ ವಿಶೇಷ ಹಕ್ಕುಗಳು ಅವರಿಗೆ ಇದ್ದುವು. ಮೇಲಾಟದಲ್ಲಿ ಮೊದಲನೆಯ ನಟರಿಗೂ ಮೆಚ್ಚಿಗೆ ದೊರೆಯುತ್ತಿತ್ತು.

ಮೇಳನಿರ್ವಾಹಕನ ಕೆಲಸ ಬಲು ದೊಡ್ಡದು. ನಾಟಕದ ವೆಚ್ಚವನ್ನೆಲ್ಲಾ ಅವನೇ ವಹಿಸುತ್ತಿದ್ದನು. ಒಬ್ಬೊಬ್ಬ ನಿರ್ವಾಹಕನಿಗೂ ಒಬ್ಬೊಬ್ಬ ಕೊಳಲಿನವನನ್ನು ಗೊತ್ತುಮಾಡಿಕೊಡುತ್ತಿತ್ತು.[6] ಮೇಳನಿರ್ವಾಹಕನಾಗಿ ಆಯ್ಕೆ ಪಡೆಯುವುದು ಬಲು ದೊಡ್ಡ ಗೌರವವಾಗಿತ್ತು. ಆ ಗೌರವ ಸಮಾಜದಲ್ಲಿ ಗಣ್ಯರಾದ ಶ್ರೀಮಂತ ಮನೆತನದವರಿಗೆ ಮಾತ್ರ ಸಲ್ಲುತ್ತಿತ್ತು. ಒಮ್ಮೊಮ್ಮೆ

---

[6] ಹಿಮ್ಮೇಳಕ್ಕೆ ಸಾಮಾನ್ಯವಾಗಿ ಕೊಳಲೂ ಒಮ್ಮೊಮ್ಮೆ ಹಾರ್ಪ್ ಎಂಬ ತಂತೀವಾದ್ಯವೂ ಇರುತ್ತಿತ್ತು.

ಮೇಲಾಟದ ತೀರ್ಪು ಮೇಳನಿರ್ವಾಹಕನ ಪ್ರಭಾವದ ಮೇಲೆ ಕೂಡ ಅವಲಂಬಿಸಿರುತ್ತಿದ್ದುದುಂಟು.

ಮೇಲಾಟದ ತೀರ್ಪು : ಮೇಲಾಟದ ತೀರ್ಪಿಗೆ ಐವರು ತೀರ್ಪಿಗರು ಇರುತ್ತಿದ್ದರು. ಮೇಲಾಟ ನಡೆಯುವುದಕ್ಕೆ ಕೆಲವು ದಿನಗಳ ಮೊದಲೇ ರಾಜ್ಯಸಭೆಯೂ ಮೇಳನಿರ್ವಾಹಕರೂ ಸೇರಿ ಅಥೆನ್ಸಿನ ಒಂದೊಂದು ಬುಡಕಟ್ಟಿನಿಂದಲೂ ಕೆಲಕೆಲವರಂತೆ ಹತ್ತು ಬುಡಕಟ್ಟುಗಳಿಂದಲೂ ಹೆಸರುಗಳನ್ನು ಆಯ್ದು ಒಂದೊಂದು ಬುಡಕಟ್ಟಿನವರ ಹೆಸರುಗಳ ಚೀಟಿಗಳನ್ನೂ ಒಂದೊಂದು ಪಾತ್ರೆಯಲ್ಲಿ ಹಾಕಿ ಮುದ್ರೆಯೊತ್ತಿ, ಜಾತ್ರೆಯ ದಿನ ದಂಡನಾಯಕನು ಒಂದೊಂದರಿಂದಲೂ ಒಂದೊಂದು ಚೀಟಿಯನ್ನು ತೆಗೆದು, ಹಾಗೆ ಆಯ್ದು ಬಂದ ಹತ್ತುಮಂದಿ ತೀರ್ಪಿಗರಾಗಿ ನೇಮಕವಾಗುತ್ತಿದ್ದರು. ಮೇಲಾಟದ ಕೊನೆಯಲ್ಲಿ ಆ ಹತ್ತುಮಂದಿಯೂ ತಮ್ಮ ತಮ್ಮ ತೀರ್ಪನ್ನು ಫಲಕಗಳ ಮೇಲೆ ಕೊಡುತ್ತಿದ್ದರು. ದಂಡನಾಯಕನು ಆ ಹತ್ತು ಫಲಕಗಳಲ್ಲಿ ಯಾವುದಾದರೂ ಐದನ್ನು ಎಳೆದು, ಆ ಐದು ತೀರ್ಪುಗಳ ಆಧಾರದ ಮೇಲೆ ಮೇಲಾಟವನ್ನು ತೀರ್ಮಾನಿಸುತ್ತಿದ್ದನು. ತೀರ್ಮಾನವಾದೊಡನೆಯೇ ದೂತನೊಬ್ಬನು ಗೆದ್ದ ನಾಟಕಕಾರನ ಹೆಸರನ್ನೂ ಮೇಳನಿರ್ವಾಹಕನ ಹೆಸರನ್ನೂ ಸಾರುತ್ತಿದ್ದನು. ಗೆದ್ದವರಿಗೆ ಕೊಡುತ್ತಿದ್ದ ಮೆಚ್ಚಿಗೆಯೆಂದರೆ ದಿಯೊನೂಸೊಸ್ಸಿಗೆ ಪ್ರಿಯವಾದ ಐವೀ ಬಳ್ಳಿಯ ಮುಡಿ. ಮೊದಮೊದಲು ನಾಟಕಕಾರನಿಗೆ ಒಂದು ಆಡೂ ದೊರೆಯುತ್ತಿತ್ತಂತೆ. ಮೇಲ್ವಿಚಾರಣೆ ರಾಜ್ಯಸಭೆಗೆ ಸೇರಿದ ಮೇಲೆ ಗೆದ್ದವರೆಲ್ಲರಿಗೂ ಕೊಂಚ ಹಣವೂ ಕೊಡುತ್ತಿತ್ತು. ಗೆದ್ದವರ ಹೆಸರುಗಳನ್ನು ಫಲಕಗಳ ಮೇಲೆ ಕೆತ್ತಿಡುತ್ತಿದ್ದರು.[7]

ಪ್ರೇಕ್ಷಕರು : ದಿಯೊನೂಸೊಸ್ ಜಾತ್ರೆಯೆಂದರೆ ಅಥೆನ್ಸಿನವರಿಗೆಲ್ಲ ದೊಡ್ಡ ಹಬ್ಬ. ಆ ಜಾತ್ರೆಯಲ್ಲಿ ಕಣ್ಸೆಳೆ ಮನಸೆಳೆಗಳೆಂದರೆ ನಾಟಕ. ಉತ್ಸವ ಒಟ್ಟು ರಾಜ್ಯದ್ದೇ ಆದ್ದರಿಂದ, ಪ್ರೇಕ್ಷಕರು ಒಟ್ಟು ಜನಾಂಗವೇ ಆಗಿದ್ದರು. ಒಟ್ಟು ಊರನ್ನೇ ಒಳಗೊಳ್ಳುವಂತೆ ಯಾರೂ ನಾಟಕಶಾಲೆಯನ್ನು ಕಟ್ಟಿ ಪೂರೈಸುವಂತಿರಲಿಲ್ಲ. ಅಥೆನ್ಸಿನ ನಾಟಕಶಾಲೆಯೆಂದರೆ ಊರ ಮೇಡಿನಲ್ಲಿ

[7] ನಮಗೆ ಈಗ ತಿಳಿದುಬಂದಿರುವ ಎಷ್ಟೋ ಅಂಶಗಳಿಗೆ ಆ ಫಲಕಗಳೇ ಆಧಾರ.

ಮೇಲ್ಛಾವಣಿಯಿಲ್ಲದ ಬಟ್ಟಬಯಲಿನಲ್ಲಿ ಸುತ್ತಣ ಗುಡ್ಡಗಳನ್ನು ಕೂರೆಡೆಗಳಾಗಿ ಕಡಿದು ಮಾಡಿದ ದೊಡ್ಡ ಆವರಣ. ಅಥೆನ್ಸಿನ ನಾಟಕಶಾಲೆಯಲ್ಲಿ ೩೦,೦೦೦ ಜನಕ್ಕೆ ಅವಕಾಶವಿತ್ತೆಂದು ಹೇಳುತ್ತಾರೆ. (ಆಧುನಿಕ ಶೋಧಕರು ೧೭,೦೦೦ ಜನಕ್ಕೆ ಮಾತ್ರ ಅವಕಾಶವಿದ್ದಿರಬಹುದೆಂದು ಗಣಿಸುತ್ತಾರೆ). ಸುತ್ತಲೂ ದುಂಡಗೆ ಕಲ್ಲಿನ ಕೂರೆಡೆ ಸಾಲುಗಳು ಒಂದರ ಹಿಂದೆ ಒಂದು, ಒಂದರ ಮೇಲೊಂದು ಅಣಿಅಣಿಯಾಗಿ ಕಡೆದಿದ್ದುವು.[8] ದಂಡನಾಯಕರೇ ಮೊದಲಾದ ಅಧಿಕಾರಿಗಳಿಗೂ ಇತರ ಕೆಲವು ಗೌರವಸ್ಥರಿಗೂ ತನಿಯಾದ ಕೂರೆಡೆಗಳಿರುತ್ತಿದ್ದುವು. ಅಧಿಕಾರಿಗಳದು ಅಮೃತಶಿಲೆಯಿಂದ ಮಾಡಿ ಮೊದಲ ಸಾಲಿನಲ್ಲಿರುತ್ತಿತ್ತು. ನಡುವೆ ದಿಯೊನೂಸೊಸ್ ಅರ್ಚಕನಿಗೂ ಇಕ್ಕೆಲದಲ್ಲಿ ದಂಡನಾಯಕರಿಗೂ ಪಡೆವಳರಿಗೂ ಮೇಲಾಟದ ತೀರ್ಪಿಗರಿಗೂ ದೇಶೋದ್ಧಾರಕರಿಗೂ ರಾಯಭಾರಿಗಳಿಗೂ ಗದ್ದುಗೆಗಳಿದ್ದುವು. ಉಳಿದೆಡೆಗಳಲ್ಲಿ ಯಾವೊಂದು ಪಕ್ಷಪಾತವಾಗಲಿ ಭೇದವ್ಯತ್ಯಾಸಗಳಾಗಲಿ ಇಲ್ಲದೆ ಎಲ್ಲರಿಗೂ ಒಂದೇ ಸಮವಾದ ಅವಕಾಶವಿರುತ್ತಿತ್ತು. ಹೆಂಗಸರಿಗಾಗಿ ಪ್ರತ್ಯೇಕ ಸ್ಥಳವಿತ್ತು. ಒಂದೊಂದು ಅಂಕಣ ಒಂದೊಂದು ಬುಡಕಟ್ಟಿಗಾಗಿ ಬಿಟ್ಟಿರುತ್ತಿತ್ತೆಂದು ಕಾಣುತ್ತದೆ. ನೋಟಕರು ತಮಗೆ ಬೇಕಾದಾಗ ದಿಂಬು ಮೆತ್ತೆಗಳನ್ನು ಮನೆಯಿಂದ ತರುತ್ತಿದ್ದರು.

ನಾಟಕಕ್ಕೆ ಪ್ರತಿಯೊಬ್ಬ ಸ್ವತಂತ್ರ ಪ್ರಜೆಗೂ ಪ್ರವೇಶಾಧಿಕಾರವಿತ್ತು. ಹೆಂಗಸರೂ ಮಕ್ಕಳೂ ಅಪ್ಪಣೆಪಡೆದು ಬರಬಹುದಾಗಿತ್ತು. ಹಾಗೆಯೇ ಗುಲಾಮರೂ ಹೊರನಾಡಿನವರೂ ಅಪ್ಪಣೆಪಡೆದು ಬರಬಹುದಾಗಿತ್ತು. ಮೊದ ಮೊದಲು ಪ್ರವೇಶ ಬಿಟ್ಟಿಯಾಗಿತ್ತು. ಆದರೆ ಬರುಬರುತ್ತ ಜನರ ಕಿಕ್ಕಿರಿತ ಹೆಚ್ಚಿದ್ದರಿಂದ ಕ್ರಿ. ಪೂ. ೫ನೆಯ ಶತಮಾನದ ಹೊತ್ತಿಗೆಯೇ ದುಡ್ಡು ಹಾಕಬೇಕಾಗಿ ಬಂತು. ಆ ಶತಮಾನದ ಕೊನೆಯ ವೇಳೆಗೆ ಪ್ರವೇಶಧನವನ್ನು ಕೇಳಿದವರಿಗೆಲ್ಲಾ ಸರ್ಕಾರವೇ ಕೊಡುತ್ತಿತ್ತು. ಅದಕ್ಕಾಗಿ ಪ್ರದರ್ಶನನಿಧಿಯೆಂಬ ಒಂದು ಪ್ರತ್ಯೇಕನಿಧಿಯೇ ಏರ್ಪಟ್ಟಿತು.

---

[8] ಕ್ರಿ. ಪೂ. ೬ನೆಯ ಶತಮಾನದಲ್ಲಿ ಅಯ್‌ಸ್ಕಿಲೊಸ್ಸಿನ ಕಾಲದಲ್ಲಿ ಮರದ ಕಾಲುಮಣೆಗಳಿದ್ದುವು. ತರುವಾಯ ಕಲ್ಲಿನ ಕೂರೆಡೆಗಳು ಬಂದುವು.

ಹೊತ್ತು ಮೂಡುವುದೇ ತಡ ನಾಟಕಶಾಲೆ ಕಿಕ್ಕಿರಿದು ತುಂಬಿಹೋಗುತ್ತಿತ್ತು. ನಡುವೆ ತಿಂಡಿತೀರ್ಥಗಳಿಗೆ ಕೂಡ ಹೋಗದೆ ಬೆಳಗಿನಿಂದ ಬೈಗಿನವರೆಗೆ ಬಯಲ ಬಂಡೆಯ ಮೇಲೆ ಬಿಸಿಲಿನಲ್ಲಿ ಕೂತಿರುತ್ತಿದ್ದರು. ಒಂದೊಂದು ನಾಟಕವಾದ ಮೇಲೂ ಪ್ರೇಕ್ಷಕರಿಗೆ ಸರಾಗವಾಗಿ ಉಸಿರಾಡುವುದಕ್ಕೂ ಮಡಿಚಿ ಇರಿಕಿ ಸೆಡೆತ ಕೈಕಾಲುಗಳನ್ನು ಆಡಿಸುವುದಕ್ಕೂ ಕೊಂಚ ಅವಕಾಶ ಸಿಕ್ಕುತ್ತಿತ್ತು. ಅಲ್ಲದೆ, ಅದೇ ಹೊತ್ತಿನಲ್ಲಿ ಮನೆಯಿಂದ ಕಟ್ಟಿಕೊಂಡು ಬಂದಿದ್ದ ಬುತ್ತಿಯನ್ನು ಕೂತೆಡೆಯೇ ಮುಗಿಸುತ್ತಿದ್ದರು. ಅದರಲ್ಲಿಯೂ ನಾಟಕದಲ್ಲಿ ನೀರಸಭಾಗಗಳೇನಾದರೂ ಬಂತೆಂದರೆ ತಿಂಡಿಕುರುಕುವುದಕ್ಕೆ ಒಳ್ಳೆಯ ಹೊತ್ತು.


ನಾಟಕಕ್ಕೆ ಬಂದ ಸಾವಿರಾರು ಮಂದಿಗಳೆಲ್ಲರೂ ಗಂಭೀರ ಮೂರ್ತಿಗಳಾಗಿ ಮುಖಮುರಿಯದೆ ತುಟಿಯಲುಗಿಸದೆ ಕೂತಿರುತ್ತಿದ್ದರೆಂದು ತಿಳಿಯಬೇಕಾಗಿಲ್ಲ. ನಾಟಕಸಂದರ್ಭವಾದ ದೇವತೆಯ ಜಾತ್ರೆ ಮರ್ಯಾದೋಲ್ಲಂಘನೆಗೂ ಅಶ್ಲೀಲ ವರ್ತನೆಗೂ ಔಚಿತ್ಯಭಂಗಕ್ಕೂ ಸಾಕಷ್ಟು ತಡೆಯಾಗಿದ್ದರೂ ಕೆಟ್ಟ ಆಟವೇನಾದರೂ ಆಡಿತೆಂದರೆ ಗುಲ್ಲೆಬ್ಬಿಸದೆ ಬಿಡುತ್ತಿರಲಿಲ್ಲ. ಕಾಲು ಬಡಿದು, ಹುಚ್ಚಾಬಟ್ಟೆ ಕೂಗಿ, ಕೈಯಲ್ಲಿದ್ದ ಹಣ್ಣು ಹಂಪಲನ್ನು (ಕೆಲವು ವೇಳೆ, ಅಪರೂಪವಾಗಿ ಕಲ್ಲನ್ನೂ) ಎಸೆದು ಗಲಭೆಮಾಡುತ್ತಿದ್ದರು. ಹಾಗೆಯೇ ನಾಟಕ ಚೆನ್ನಾಗಿತ್ತೆಂದರೆ ಚಪ್ಪಾಳೆ ತಟ್ಟಿ, ಬಾಯಾರ ಕೂಗಿ, ಹೊಗಳಿ ಮೆಚ್ಚಿಗೆಯನ್ನು ತೋರುತ್ತಲೂ ಇದ್ದರು. "ಮತ್ತೊಮ್ಮೆ, ಮತ್ತೊಮ್ಮೆ" ಎಂಬ ಕೂಗು ಈಗಿನವರ ಹಕ್ಕು ಮಾತ್ರವಲ್ಲ; ಆಗಲೂ ಇತ್ತು. ಒಮ್ಮೊಮ್ಮೆ ದುಡ್ಡುಕೊಟ್ಟು ಹೊಗಳುಭಟ್ಟರ ತಂಡವನ್ನು ಗಳಿಸಿಕೊಳ್ಳುತ್ತಿದ್ದುದ್ದೂ ಉಂಟು.

ನಾಟಕಶಾಲೆ: ಗ್ರೀಕ್ ನಾಟಕಶಾಲೆಯನ್ನು ಮೂರು ಭಾಗ ಮಾಡಬಹುದು—i. ಪ್ರೇಕ್ಷಕಾಂಗಣ ; ii. ಮೇಳರಂಗ ; iii. ನೇಪಥ್ಯ ಅಥವಾ ನಟರ ಮನೆ. ಪ್ರೇಕ್ಷಕಾಂಗಣವನ್ನು ಕುರಿತು ಮೇಲೆಯೇ ಕೊಂಚ ಹೇಳಿದೆ. ಮೇಳರಂಗ ನಾಟಕಶಾಲೆಗೆ ಹೃದಯಪ್ರಾಯವಾಗಿತ್ತು. ನಾಟಕದ ಉದ್ದಕ್ಕೂ ಮೇಳದವರು ಅಲ್ಲಿ ನಿಂತಿರುತ್ತಿದ್ದರು. ಮೇಳರಂಗ ಮೊದಲು ಗಟ್ಟಿಸಿಮಾಡಿದ ದುಂಡನೆಯ ಕಣ; ಕ್ರಮೇಣ ಅಮೃತಶಿಲೆಯ ನೆಲಗಟ್ಟು ಹದಿಸಲಾಯಿತು. ಅದರ ವ್ಯಾಸ ಲ೦-೯೦ ಅಡಿಗಳಿರುತ್ತಿತ್ತು. ಕಣ ಕೆಳಮಟ್ಟದಲ್ಲಿದ್ದು ಸುತ್ತಲೂ

ಪ್ರೇಕ್ಷಕರು ಮೇಲುಮಟ್ಟದಲ್ಲಿ ಕೂತಿರುತ್ತಿದ್ದರು. ಮೊದಮೊದಲು ಕಣದ ಬಲಿಗಂಬದ ಪಕ್ಕದಲ್ಲಿ ಬಲಿಪೀಠದ ಮೇಲೆ ಏರಿ ತನಿನಟನು ಮೇಳದವರೊಡನೆ ಸಂಭಾಷಣೆ ನಡಸುತ್ತಿದ್ದನು. ಮೇಳರಂಗದ ಆಚೆಯ ಕಡೆಗೆ ಪ್ರೇಕ್ಷ ಕಾಂಗಣಕ್ಕೆ ಎದುರಾಗಿ ನೇಪಥ್ಯ ಅಥವಾ ನಟರ ಮನೆ ಇರುತ್ತಿತ್ತು. ಮೊದಲು ಆ ನಟರ ಮನೆ ಒಂದು ಗೂಡಾರ ಮಾತ್ರವಾಗಿತ್ತು. ಆಗಾಗ ನಟರು ವೇಷ ಬದಲಾಯಿಸಿಕೊಳ್ಳುವುದಕ್ಕೆ ಅಲ್ಲಿಗೆ ಹೋಗುತ್ತಿದ್ದರು. ಕ್ರಮೇಣ ಆ ಗೂಡಾರವೇ ಮುಂದೆ ದೃಶ್ಯಸಾಧನವಾಗಿ (ಸೀನರಿ) ಉಪಯೋಗವಾಗ ಬಂತು. ಕೆಲವು ಕಾಲದ ಮೇಲೆ ಗೂಡಾರಕ್ಕೆ ಬದಲು ಮರದ ಕಟ್ಟಡ ಕಟ್ಟಲಾಯಿತು. ಸೊಫೊಕ್ಲೀಸ್ ಅದರ ಮುಂಭಾಗವನ್ನು ಬಟ್ಟೆಗಳಿಂದ ಮುಚ್ಚಿ ಚಿತ್ರಗಳಿಂದ ಅಲಂಕರಿಸಿ ದೃಶ್ಯ (ಸೀನರಿ)ಗಳನ್ನು ಅಳವಡಿಸಿದನು. ತೆರೆಗಳು ಮಾತ್ರ ಇರಲಿಲ್ಲ. ಕ್ರಮೇಣ ಮರದ ಕಟ್ಟಡವೂ ಹೋಗಿ ಕಲ್ಲುಕಟ್ಟಡ ಎದ್ದಿತು. ನಾಟಕದ ಸಾಮಾನುಗಳನ್ನಿಡುವುದಕ್ಕೂ ವೇಷ ಹಾಕಿಕೊಳ್ಳುವುದಕ್ಕೂ ಆ ಮನೆ ಉಪ ಯೋಗವಾಗುತ್ತಿತ್ತು. ಕಟ್ಟಡದ ಮುಂಭಾಗದಲ್ಲಿ ಮೊದಮೊದಲು ಮೂರು ಬಾಗಿಲುಗಳೂ ಬರುಬರುತ್ತ ಐದು ಬಾಗಿಲುಗಳೂ ಇದ್ದುವು. ನಡುವಿನದು ದೊಡ್ಡದಾಗಿಯೂ ಪಕ್ಕಗಳದು ಚಿಕ್ಕದಾಗಿಯೂ ಇದ್ದುವು. ನಟರು ಆ ಮನೆಯಿಂದ ಬಾಗಿಲುಗಳ ಮೂಲಕ ಎಲ್ಲಿಗೆ ಪ್ರವೇಶಿಸುತ್ತಿದ್ದರು? ಗ್ರೀಕ್ ನಾಟಕಶಾಲೆಯಲ್ಲಿ ಮೇಳರಂಗದಿಂದ ಬೇರೆಯಾದ ನಟರಂಗವೊಂದಿತ್ತೆ? ಇದು ಬಹು ಜಟಿಲವಾದ ಪ್ರಶ್ನೆ, ವಾದ ಭೂಮಿ. ಪ್ರತ್ಯೇಕ ನಟರಂಗವಿರಲಿಲ್ಲ ವೆಂಬುದೇ ಹೆಚ್ಚು ಸಂಭಾವ್ಯವೆಂದು ತೋರುತ್ತದೆ. ಹೀಗೆ ಹೇಳುವವರು ಮೇಳ ದವರು ಒಟ್ಟು ಮೇಳರಂಗವನ್ನೂ ನಟರು ಗೂಡಾರದ (ಕಟ್ಟಡದ) ಹತ್ತಿರದ ಮೇಳರಂಗ ಭಾಗವನ್ನೂ ಉಪಯೋಗಿಸುತ್ತಿದ್ದರೆಂದು ಅಭಿಪ್ರಾಯಪಡುತ್ತಾರೆ.


ರಂಗಸಲಕರಣೆಗಳು : ಕ್ರಿ.ಪೂ. ೫ನೆಯ ಶತಮಾನದ ರಂಗಸಲಕರಣೆ ಗಳಲ್ಲಿ ಮುಖ್ಯವಾದುವು ನಾಲ್ಕು :

i. ಮೇಲಟ್ಟ : ಮಾಳಿಗೆಯ ಮೇಲೋ ಗುಡ್ಡದ ಮೇಲೋ ಇರುವಂತೆ ತೋರಿಸಬೇಕಾದಾಗ ಒಮ್ಮೊಮ್ಮೆ ನಟರು ರಂಗಕ್ಕಿಂತ ಮೇಲ್ಮಟ್ಟದಲ್ಲಿ ಹಾಕಿರು ತ್ತಿದ್ದ ಅಟ್ಟದ ಮೇಲೆ ಕಾಣಿಸಿಕೊಳ್ಳುತ್ತಿದ್ದರು.



ಪುರಾತನ ಗ್ರೀಕ್ ನಾಟಕಶಾಲೆಯ ನಕ್ಷೆ

ಮೇಳದವರು ಮೇಳರಂಗಕ್ಕೆ ಸಾಮಾನ್ಯವಾಗಿ ಇಕ್ಕಡೆಯ ಪ್ರವೇಶಗಳ ಮೂಲಕ ಹಾಡು ಬರುತ್ತಿದ್ದರು. ಪ್ರೇಕ್ಷಕರು ಪ್ರೇಕ್ಷಕಾಂಗಣಕ್ಕೆ ಯಾವಾಗಲೂ ಆ ಇಕ್ಕಡೆಯ ಪ್ರವೇಶಗಳ ಮೂಲಕವೇ ಹೋಗಬೇಕಾಗಿತ್ತು. ಪ್ರೇಕ್ಷಕಾಂಗಣದಲ್ಲಿ ಅಂಕಣದ ಕೂರೆಡೆಗಳಿಗೆ ಹೋಗಲು ಅನುಕೂಲಿಸುವಂತೆ ಅಡ್ಡಡ್ಡನಾಗಿ ಹಲವು ಅಂಕಣದಾರಿಗಳಿದ್ದುವು. ಕೆಲವು ನಾಟಕಶಾಲೆಗಳಲ್ಲಿ ಹೆಚ್ಚು ಅನುಕೂಲಕ್ಕಾಗಿ ನಡುವೆ ಸುತ್ತಲೂ ಒಂದು ನಿಡುದಾರಿಯಿತ್ತು. ನೇಪಥ್ಯದಿಂದ ಹೊರಗಿನ ಬಯಲಿನ ಮುಂಗಣಕ್ಕೆ ಪ್ರವೇಶಕೊಡಲು (ಮೊದಲು) ಮೂರು (ತರುವಾಯ ಐದು) ಬಾಗಿಲುಗಳಿದ್ದುವು. ನಡುವಣ ಬಾಗಿಲ ಮೂಲಕ ಮೊದಲನೆಯ ನಟನೂ ಪಕ್ಕ ಬಾಗಿಲುಗಳ ಮೂಲಕ ಉಳಿದಿಬ್ಬರು ನಟರೂ ಬರುತ್ತಿದ್ದರು. ನಟರು ಅಟ್ಟಣೆಯನ್ನು ಹತ್ತಿ ಇಳಿಯುವುದಕ್ಕಾಗಿ ಮೆಟ್ಟಲಿತ್ತು. ಬರುತ್ತ ಬರುತ್ತ ನೇಪಥ್ಯದ ಮುಂಗಟ್ಟಡ ಮುಂಜರಿಯುತ್ತ ಬಂದು ಮೇಳರಂಗದೊಳಕ್ಕೆ ಚಾಚಿಕೊಂಡು ಇಕ್ಕಡೆಯ ಪ್ರವೇಶಗಳನ್ನೂ ಮುಚ್ಚಿಬಿಟ್ಟಿತು. ಆಗ ಪ್ರೇಕ್ಷಕರು ಪ್ರೇಕ್ಷಕಾಂಗಣಕ್ಕೆ ಹೋಗುವುದಕ್ಕಾಗಿ ಪ್ರೇಕ್ಷಕಾಂಗಣದ ಗುಡ್ಡಗಳಲ್ಲಿ ಸುರಂಗಗಳನ್ನು ಕೊರೆದು ದಾರಿ ಮಾಡಲಾಯಿತು.



ಪುರಾತನ ಗ್ರೀಕ್ ನಾಟಕಶಾಲೆಯ ಚಿತ್ರ

ii ದೇವವೇದಿಕೆ: ದೇವತೆಗಳೂ ವೀರರೂ ಅವರು ಆಕಾಶದಿಂದ ಇಳಿದಂತೆ ತೋರಿಸಬೇಕಾಗಿಲ್ಲದಾಗ ಇದನ್ನು ಹತ್ತಿ ಕಾಣಿಸಿಕೊಳ್ಳುತ್ತಿದ್ದರು.

iii. ಎತ್ತಿಗೆ: ಆಕಾಶದಿಂದ ಇಳಿಯುವುದನ್ನಾಗಲಿ, ಆಕಾಶಕ್ಕೆ ಏರುವುದನ್ನಾಗಲಿ ತೋರಿಸುವುದಕ್ಕೆ ಉಪಯೋಗಿಸುತ್ತಿತ್ತು. ನಟರ ಮೈಗೆ ಸೂಲು ಕಟ್ಟಿ ಈ ಎತ್ತಿಗೆಯ ಮೂಲಕ ಮೇಲಕ್ಕೂ ಕೆಳಕ್ಕೂ ಎತ್ತಿಳಿಸುವಂತೆ ಅಳವಡಿಸಿರುತ್ತಿತ್ತು.

iv. ತಿರುಗಟ್ಟಣೆ: ಅರಮನೆಯ ಒಳಗಡೆ ನಡೆದ ಕೃತ್ಯಗಳನ್ನು ಪ್ರೇಕ್ಷಕರಿಗೆ ನೆಲೆನೋಟ ತೋರಿಸುವುದಕ್ಕೆ ಇದನ್ನು ಉಪಯೋಗಿಸುತ್ತಿದ್ದರು. ಇದರ ನಿಷ್ಕೃಷ್ಟಸ್ವರೂಪ ಸರಿಯಾಗಿ ತಿಳಿಯದು. ಗಾಲಿಗಳ ಮೇಲೆ ಅಟ್ಟಣೆಯೊಂದನ್ನು ಹಾಕಿ, ಹಿಂದಕ್ಕೂ ಮುಂದಕ್ಕೂ ಆಡುವಂತಿದ್ದ ಬಾಗಿಲ ಮೂಲಕ ಅದನ್ನು ಸರಕ್ಕನೆ ಮುನ್ನೂಕುವುದಕ್ಕೂ ಹಿಂದೆಳೆಯುವುದಕ್ಕೂ ಅನುಕೂಲಿಸುವಂತೆ ಅಳವಡಿಸಿತ್ತೆಂದು ಇಟ್ಟುಕೊಳ್ಳಬಹುದು. ನಡುವಣ ತಿರುಗಣೆಯ ಮೇಲೆ ಅಟ್ಟಣೆ ಹಿಂದುಮುಂದಾಗಿ ತಿರುಗಿ ಹಿಂಭಾಗ ಮುಂದಾಗಿ ಕಾಣುವಂತೆ ಅಳವಡಿಸಿತ್ತೆಂದಾದರೂ ಇಟ್ಟುಕೊಳ್ಳಬಹುದು.

ನಟರ ವೇಷ: ನಾಟಕದಲ್ಲಿ ಪಾತ್ರವಹಿಸುವವರೆಲ್ಲರೂ ಮೇಳದವರೂ ಕೂಡ ಮರಸನ್ನೋ ಮೊಗವಾಡವನ್ನೋ ಹಾಕಿಕೊಳ್ಳುತ್ತಿದ್ದರು. ಮೊದ ಮೊದಲು ಥೆಸ್ಪಿಸ್ಸಿನ ಕಾಲದಲ್ಲಿ ಮುಖಕ್ಕೆ ದ್ರಾಕ್ಷೀ ಚರಟವನ್ನು ಮೆತ್ತಿ ಕೊಳ್ಳುತ್ತಿದ್ದರು. ಎಲ್ಲರೂ ಎತ್ತರವಾದ ಜೋಡುಗಳನ್ನು ಮೆಟ್ಟಿ, ಮೆತ್ತೆ ತುಂಬಿದ ನಿಲುವಂಗಿಯನ್ನು ತೊಟ್ಟು ಗಂಭೀರಮೂರ್ತಿಗಳಾಗಿ ಕಾಣು ತ್ತಿದ್ದರು. ಮೊಗವಾಡಗಳು ಆಯಾ ಪಾತ್ರಗಳಿಗೆ ತಕ್ಕಂತೆ ಗಂಭೀರ, ರೌದ್ರ, ಸೌಮ್ಯ, ದೈನ್ಯ ಮೊದಲಾದ ಭಾವನೆಗಳನ್ನು ಸೂಚಿಸುವುದಕ್ಕೆ ಬೇರೆ ಬೇರೆ ಬಗೆಯವಾಗಿರುತ್ತಿದ್ದುವು. ಆದರೆ ಬಹು ಭಾರವೂ ತೊಡಕೂ ಆದ ಆ ವೇಷದ ಹೊರೆ ಮುಖದಲ್ಲಿ ಭಾವಭಂಗಿಗಳನ್ನು ತೋರಿಸುವುದಕ್ಕಾಗಲಿ, ಚಳಕನಡೆಗಾಗಲಿ, ಕೈಕಾಲಾಟಕ್ಕಾಗಲಿ ಅಡಚಣೆಯಾಗಿತ್ತು. ಗ್ರೀಕ್ ರುದ್ರನಾಟಕಗಳಲ್ಲಿ ವರ್ಣನಭಾಗ ಹೆಚ್ಚಾಗಿರುವುದಕ್ಕೆ ಅಭಿನಯಕ್ಕಿದ್ದ ಈ ತೊಡಕೂ ಒಂದು ಕಾರಣವೆನ್ನಬಹುದು.

೩. ರುದ್ರನಾಟಕದ ಬಂಧ ಮತ್ತು ವಿಶೇಷಾಂಶಗಳು

ಗ್ರೀಕ್ ರುದ್ರನಾಟಕವನ್ನು ಮೊದಲು ಸ್ಥೂಲವಾಗಿ ಎರಡು ಭಾಗ ಮಾಡಬಹುದು—i. ಸಂವಾದಭಾಗ; ii. ಮೇಳಭಾಗ. ಎರಡು ಮೇಳಗೀತಗಳ ನಡುವೆ ಬರುವ ಸಂವಾದಭಾಗವನ್ನು ಒಂದು ಅಂಕವಾಗಿ ಪರಿಗಣಿಸಬಹುದು. ಕ್ರಿ.ಪೂ. ೫ನೆಯ ಶತಮಾನದ ವೇಳೆಗೆ ಇನ್ನೂ ಇಷ್ಟೇ ಅಂಕಗಳಿರಬೇಕೆಂಬ ಕಟ್ಟುಪಾಡು ಯಾವುದೂ ಆಗಿರಲಿಲ್ಲ. ನಾಲ್ಕರಿಂದ ಏಳರ ವರೆಗೆ ಇರುತ್ತಿದ್ದುವಾದರೂ ಸಾಮಾನ್ಯವಾಗಿ ಐದು ಅಂಕಗಳಿರುವುದೇ ಹೆಚ್ಚು. ಅಲ್ಲದೆ, ಮೊದಮೊದಲು ಸಂವಾದಭಾಗಕ್ಕೂ ಮೇಳಭಾಗಕ್ಕೂ ಅಷ್ಟು ಸ್ಪಷ್ಟವೂ ನಿಷ್ಕೃಷ್ಟವೂ ಆದ ವಿಂಗಡಿಕೆ ಇಲ್ಲದಿದ್ದ ಕಾರಣ ಈ ಭಾಗಗಳು ಎಷ್ಟಿರಬೇಕು, ಹೇಗಿರಬೇಕು ಎಂಬ ವಿವೇಚನೆ ಇರಲಿಲ್ಲ. ಕ್ರಮೇಣ ಎರಡೂ ಸ್ಪಷ್ಟವಾಗಿ ಬೇರ್ಪಟ್ಟು ಒಂದು ನೆಲೆಗೆ ಬಂದ ಮೇಲೆ, ಐದು ಅಂಕಗಳಿರಬೇಕೆಂಬ ಕಟ್ಟಾಯಿತು. ಇವಲ್ಲದೆ ಉಪಕ್ರಮಾಂಕ ಮುಕ್ತಾಯಾಂಕಗಳಿರಬಹುದು. (ಮೊದಲನೆಯ) ಆಗಮಮೇಳಕ್ಕೆ ಮೊದಲು ಬರುವ ಭಾಗವಷ್ಟೂ ಉಪಕ್ರಮ. (ಕೊನೆಯ) ನಿರ್ಗಮಮೇಳವಾದ ಮೇಲೆ ಬರುವ ಭಾಗವಷ್ಟೂ ಮುಕ್ತಾಯ. (ಅಂತ್ಯದಲ್ಲಿ ಬರುವ ಭರತವಾಕ್ಯ ಮೇಳವೆನಿಸುವುದಿಲ್ಲ).

ಗೀತಭಾಗವನ್ನು ಮೂರಾಗಿ ವಿಂಗಡಿಸಬಹುದು—i. ಬರಿಯ ಮೇಳದವರೇ ಹಾಡುವುದು; ii. ಬರಿಯ ಪಾತ್ರಗಳೇ ಹಾಡುವುದು; iii. ಮೇಳದವರೂ ಪಾತ್ರಗಳೂ ಸೇರಿ ಹಾಡುವುದು. ಮೇಳಗೀತಗಳಲ್ಲಿ ಮೊದಲನೆಯದಕ್ಕೆ ಆಗಮಮೇಳ ಅಥವಾ ಉಪಕ್ರಮಮೇಳವೆಂದೂ ಕೊನೆಯದಕ್ಕೆ ನಿರ್ಗಮಮೇಳ ಅಥವಾ ಮುಕ್ತಾಯಮೇಳವೆಂದೂ ನಡುವಣವಕ್ಕೆ ಸ್ಥಾಯಿಮೇಳಗಳೆಂದೂ ಹೆಸರು. ಸಾಮಾನ್ಯವಾಗಿ ಮೇಳದವರು ಮುಂಗಣಕ್ಕೆ ಪ್ರವೇಶಿಸುವಾಗ ಮೊದಲನೆಯ ಗೀತವನ್ನು ಹಾಡಿಕೊಂಡು ಬರುತ್ತಿದ್ದರಾದ್ದರಿಂದ ಅದಕ್ಕೆ ಆಗಮಮೇಳವೆಂದು ಹೆಸರಾಯಿತು. (ಆದರೆ ಮೌನವಾಗಿ ಪ್ರವೇಶಿಸಿ ಕೊಂಚ ಹೊತ್ತಾದ ಮೇಲೆ ಮೊದಲಗೀತವನ್ನು ಹಾಡುತ್ತಿದ್ದದ್ದೂ ಉಂಟು). ಮೇಳದವರು ಆಗಮದಲ್ಲಾಗಲಿ, ನಿರ್ಗಮದಲ್ಲಾಗಲಿ ಇರದೆ,

ರಂಗದಲ್ಲಿ ತಮ್ಮ ಸ್ಥಾನದಲ್ಲಿ ಹಾಡುತ್ತಿದ್ದರಾದ್ದರಿಂದ ನಡುವಣ ಗೀತಗಳಿಗೆ ಸ್ಥಾಯಿಮೇಳಗಳೆಂದು ಹೆಸರಾಯಿತೆನ್ನುತ್ತಾರೆ. ನೃತ್ಯವಾಗಲಿ ಚಲನವಾಗಲಿ ಇಲ್ಲದೆ, ಒಂದೆಡೆ ನಿಂತು ಹಾಡುತ್ತಿದ್ದರಾದ್ದರಿಂದ ಆ ಹೆಸರು ಬಂತೆಂದೂ ಕೆಲವರು ಹೇಳುವುದುಂಟು. ಮೇಳದವರೇನಾದರೂ ನಡುವೆ ರಂಗ ಬಿಟ್ಟುಹೋಗಿ ಮತ್ತೆ ಬರಬೇಕಾದರೆ, (ಇದು ಬಹಳ ಅಪರೂಪ), ಹಾಗೆ ಬರುವಾಗ ಹಾಡುವ ಗೀತಕ್ಕೆ ಪುನರಾಗಮಮೇಳವೆಂದು ಹೆಸರು. ಮೇಳಗೀತವನ್ನು ಒಟ್ಟು ಮೇಳವೇ ಹೇಳಬಹುದು; ಎರಡಾಗಿ ಭಾಗಿಸಿಕೊಂಡು ಅರೆಮೇಳಗಳಾಗಿ ಎರಡು ಪಂಗಡದವರು ಹೇಳಬಹುದು; ಅಥವಾ ತನಿತನಿಯಾಗಿ ಬಿಡಿಸಿ ಒಬ್ಬೊಬ್ಬ ಮೇಳದವನೂ ಒಂದೊಂದು ಭಾಗವನ್ನು ಹೇಳಬಹುದು. ಅರೆಮೇಳಗಳಾಗಿ ಹಾಡುವಾಗ ಒಂದೊಂದು ಅರ್ಧಕ್ಕೂ ಒಬ್ಬೊಬ್ಬ ನಾಯಕನಿರುತ್ತಾನೆ. ಪಾತ್ರಗಳೂ ಮೇಳದವರೂ ಸೇರಿ ಜವಾಬಾಗಿ ಚರಣಗಳನ್ನು ಹಾಡುವ ಗೀತಕ್ಕೆ ಮರುಗೀತೆಯೆಂದು ಹೆಸರು. ಶವಸಂಸ್ಕಾರ ಕಾಲದಲ್ಲಿ ಮನಮರುಗಿ ಎದೆ ಚಚ್ಚಿಕೊಂಡು ಅಂಥ ಗೀತಗಳನ್ನು ಹಾಡುತ್ತಿದ್ದರಾದ್ದರಿಂದ ಅವಕ್ಕೆ ಆ ಹೆಸರು ಬಂತು. ಆದರೆ ಕ್ರಮೇಣ ರುದ್ರನಾಟಕದಲ್ಲಿ ಉದ್ರೇಕ ಸಂದರ್ಭದಲ್ಲಿ ಭಾವಪರವಶತೆಯನ್ನು ತೋರಿಸಬೇಕಾದಾಗ ಪಾತ್ರಗಳೂ ಮೇಳದವರೂ ಮರುನುಡಿಗಳಲ್ಲಿ ಅವನ್ನು ಹಾಡುತ್ತ ಬಂದರು. ಈ ಮರುಗೀತೆ ಕೇವಲ ಗೀತಭಾಗಗಳಿಂದ ಕೂಡಿರಬಹುದು; ಅಥವಾ ಕಥನಛಂದಸ್ಸೂ ಗೀತಛಂದಸ್ಸೂ ಬೆರೆತಿರಬಹುದು. ಒಂದು ಪಾತ್ರ ಅಥವಾ ಹಲವು ಪಾತ್ರಗಳು, ಒಟ್ಟು ಮೇಳ ಅಥವಾ ಅವರಲ್ಲಿ ಕೆಲವರು ಮಾತ್ರ ಅದರಲ್ಲಿ ಭಾಗವಹಿಸಬಹುದು.

ಎಲ್ಲ ಗ್ರಿಕ್ ಭಾವಗಳಲ್ಲಿಯೂ ಕಲೆಗಳಲ್ಲಿಯೂ ಎದ್ದುಕಾಣುವ ಪ್ರಧಾನ ಗುಣವೆಂದರೆ—ಸಮರೂಪತೆ, ಸಪ್ರಮಾಣಭಾಗಗಳನ್ನು ಸಮರಸದಲ್ಲಿ ಹೊಂದಿಸುವುದರಿಂದ ಬರುವ ಒಟ್ಟಂದ. ಈ ಸಮರೂಪತೆ ಗ್ರೀಕ್ ರುದ್ರನಾಟಕದಲ್ಲಿಯೂ ಕಂಡುಬರುತ್ತದೆ. ಕಥಾಸಂವಿಧಾನದಲ್ಲಿ ಮಾತ್ರವಲ್ಲದೆ ನಾಟಕದ ಪ್ರತಿಯೊಂದು ಸೂಕ್ಷ್ಮಾಂಶದಲ್ಲಿಯೂ ಮೂಡಿ ಕಾಣುತ್ತದೆ. ನಿದರ್ಶನವಾಗಿ ಮೇಳಗೀತಗಳನ್ನೂ ಒಂದಡಿ, ಎರಡಡಿ, ಮೂರಡಿ ಮೊದಲಾದ ಸಂವಾದ

ಗಳನ್ನೂ ಕೊಡಬಹುದು. ಎರಡು ಪಾತ್ರಗಳು ನುಡಿಗೆ ನುಡಿಗೆ, ಅಡಿಗೆ ಅಡಿ—ಹೀಗೆ ಜವಾಬಾಗಿ ಸಂಭಾಷಣೆ ನಡಸುವ ಮರುನುಡಿಗಳು ಗ್ರೀಕ್ ರುದ್ರನಾಟಕದ ಒಂದು ವೈಶಿಷ್ಟ್ಯ. ಮೇಳಗೀತಗಳು ಬಲಮುರಿ ಎಡಮುರಿಗಳಾಗಿ ಎರಡು ಸದೃಶಭಾಗಗಳಲ್ಲಿರುತ್ತವೆ. ಭಾವ, ಬಂಧ, ಛಂದಸ್ಸು, ರಾಗ, ತಾಳ—ಎಲ್ಲದರಲ್ಲಿಯೂ ಎಡಮುರಿ ಬಲಮುರಿಯ ಪಡಿಯಚ್ಚು. ಈ ಬಲಮುರಿ ಎಡಮುರಿಗಳಿಗೆ ಸೇರಿಕೊಂಡು ಬರುವ ಗೀತಗಳಿಗೆ ಅನುಗೀತಗಳೆಂದು ಹೆಸರು. ಈ ಅನುಗೀತದಲ್ಲಿಯೂ ಇದೇ ಕಟ್ಟಡ ಕಂಡುಬಂದರೂ ಬಲಮುರಿ ಎಡಮುರಿಗಳಿಗಿರುವಷ್ಟು ಸಂಪೂರ್ಣ ಸಾಮ್ಯ ಇದ್ದೇಯಿರಬೇಕೆಂಬ ನಿಯಮವಿಲ್ಲ. ಒಂದು ಮೇಳಗೀತದ ಬಲಮುರಿ ಎಡಮುರಿಗಳೆಲ್ಲವೂ ಮುಗಿದ ಮೇಲೆ ಬರುವ ಚರಣಕ್ಕೆ ಕೊನೆವಾಡು ಎಂದು ಹೆಸರು.

ಮೂರು ಐಕ್ಯಗಳು : ಲಕ್ಷಣಕಾರರು ಗ್ರೀಕ್ ರುದ್ರನಾಟದಲ್ಲಿ ಮೂರು ಐಕ್ಯಗಳನ್ನು ಹೇಳುತ್ತಾರೆ—i. ಕ್ರಿಯೈಕ್ಯ ; ii. ಕಾಲೈಕ್ಯ ; iii. ಸ್ಥಳೈಕ್ಯ. ಇವು ಮೂರೂ ಮೊದಲಿನಿಂದಲೂ ಇದ್ದುವೆ? ಇವು ಯಾವಾಗಲೂ ಮೀರಬಾರದ ನಿಯತ ನಿಯಮಗಳೇ ? ಈ ನಿಯಮಗಳಿಗೆ ಆಂತರಿಕ ಕಾರಣಗಳೇನು? ಬಾಹ್ಯಕಾರಣಗಳೇನು? ಇವೇ ಮೊದಲಾದ ಪ್ರಶ್ನೆಗಳಿಗೆ ಇಲ್ಲಿ ಎಡೆಯಿಲ್ಲ. ಈ ಐಕ್ಯಗಳ ಸ್ಥೂಲಸ್ವರೂಪವೇನೆಂಬುದನ್ನು ಮಾತ್ರ ಇಲ್ಲಿ ತಿಳಿಸುತ್ತದೆ.

i. ಕ್ರಿಯೈಕ್ಯ : ಕಥೆಯಲ್ಲಿ ತೊಡಕುಗಳಾಗಲಿ, ಅಪ್ರಾಸಂಗಿಕ ವಿಷಯಗಳಾಗಲಿ ಇಲ್ಲದೆ ಪ್ರತಿಯೊಂದು ಭಾಗಕ್ಕೂ ಮತ್ತೊಂದರೊಡನೆ ನೇರವೂ ಹತ್ತಿರವೂ ಆದ ಸಂಬಂಧವಿರಬೇಕು. ಗಮನವೆಲ್ಲಾ ಒಂದೇ ಕಥಾ ವಿಷಯದ ಮೇಲೆ, ಅದರಲ್ಲಿಯೂ ಒಂದೇ ಪ್ರಧಾನಭಾಗದ ಮೇಲೆ ನೆಟ್ಟಿದ್ದು ಒಬ್ಬ ಪ್ರಧಾನ ವ್ಯಕ್ತಿ, ಒಂದು ಪ್ರಧಾನ ಘಟನಜಾಲ—ಇವು ನಮ್ಮ ಮುಂದೆ ಎದ್ದು ಕಾಣಬೇಕು. ಕಥೆಯ ಪೂರ್ವೋತ್ತರಗಳೆಲ್ಲ ಪ್ರೇಕ್ಷಕರಿಗೆ ಪ್ರಾಯಶಃ ತಿಳಿದೇ ಇರುತ್ತದೆ, ಅಥವಾ ಉಪಕ್ರಮ ಭಾಗದಲ್ಲಿ ಎಲ್ಲವೂ ಅಡಕವಾಗಿ ಸೂಚಿತವಾಗಿಬಿಟ್ಟಿರುತ್ತದೆ. ನಾಟಕಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಕಥೆಯ ಪರಿಪಕ್ವಭಾಗ ಮಾತ್ರ ಅನುಗೂಡಿ ಪ್ರತಿಪಾದಿತವಾಗಬೇಕು.

ii. ಕಾಲೈಕ್ಯ : ಮೊದಮೊದಲು ಕಾಲೈಕ್ಯ ನಿಯಮವಿರಲಿಲ್ಲ. ಆದರೆ ಬಲು

ಬೇಗನೆ ಬಳಕೆಗೆ ಬಂತು. ನಾಟಕ ಬೆಳಗಿನಿಂದ ಬೈಗಿನ ವರೆಗೆ ಆಡುತ್ತಿತ್ತಾದ್ದ ರಿಂದಲೂ ಅದು ವಾಸ್ತವಿಕ ಪ್ರದರ್ಶನವಾಗಿರಬೇಕಾಗಿತ್ತಾದ್ದರಿಂದಲೂ ಸಹಜ ವಾಗಿ ಒಂದು ದಿನದಲ್ಲಿ ನಡೆಯುವ ಕಥೆಯಷ್ಟನ್ನೇ ತೋರಿಸಬೇಕೆಂಬ ಕಟ್ಟು ಏರ್ಪಟ್ಟಿತು.

iii ಸ್ಥಳೈಕ್ಯ : ನಾಟಕದ ಕಥೆಯ ಸ್ಥಳ ಎಡೆಯಿಂದೆಡೆಗೆ, ಊರಿಂದೂರಿಗೆ ಬದಲಾಯಿಸಕೂಡದು. (ಎರಡು ನಾಟಕಗಳಲ್ಲಿ ಮಾತ್ರ ಈ ನಿಯಮ ಸಡಿಲಿದೆ. ಅಯ್‌ಸ್ಕಲೊಸ್ಸಿನ ಯುಮೆನಿದೆಸ್ಸಿನಲ್ಲಿ ಡೆಲ್ಫಿಯಿಂದ ಅಥೆನ್ಸಿಗೂ, ಸೊಫೊಕ್ಲೇಸಿನ ಅಯಾಸ್ ಅಥವಾ ಏಜಾಕ್ಸಿನಲ್ಲಿ ಬಿಡಾರದಿಂದ ಕಡಲ ಕರೆಗೂ ಬದಲಾಯಿಸುತ್ತದೆ).

ಅಪ್ರದರ್ಶ್ಯಗಳು : ಗ್ರೀಕ್ ರಂಗದ ಮೇಲೆ ಸಾಮಾನ್ಯವಾಗಿ ಯುದ್ಧ, ಕೊಲೆ, ಸಾವು ಮೊದಲಾದುವನ್ನು ತೋರಿಸಕೂಡದೆಂಬ ನಿಯಮವುಂಟು. (ಆದರೆ, ಅಯಾಸ್ ಮೊದಲಾದ ಒಂದೆರಡು ನಾಟಕಗಳಲ್ಲಿ ಈ ನಿಯಮ ಮಾನ್ಯವಾಗಿಲ್ಲ). ಈ ನಿಯಮಕ್ಕೆ ನಟರ ಸರಾಗಚಲನೆಗೆ ಎಡೆಯಿಲ್ಲದ ವೇಷದ ಭಾರ ಎಷ್ಟು ಕಾರಣವೋ ಜನರ ನಯಭಾವಗಳು ಎಷ್ಟು ಕಾರಣವೋ ನಾಟಕದಲ್ಲಿ ಎಲ್ಲವೂ ವಾಸ್ತವಿಕ ಪ್ರದರ್ಶನವಾಗಿರಬೇಕೆಂಬ ಭಾವನೆ ಎಷ್ಟು ಕಾರಣವೋ ಹೇಳುವುದಕ್ಕೆ ಆಗುವುದಿಲ್ಲ.

ಥೀಬ್ಸ್ ಮತ್ತು ಈಡಿಪಸ್

ಥೀಬ್ಸ್ ಗ್ರೀಸ್ ದೇಶದ ಬಹು ಪುರಾತನ ಪಟ್ಟಣಗಳಲ್ಲೊಂದು. ಬಿಯೋಷಿಯ ನಾಡಿನ ತಲೆಯೂರು. ಮೂಡಲಿನಲ್ಲಿ ಇಸ್ಮೀನಸ್ ಹೊಳೆ; ಪಡುವಲಿನಲ್ಲಿ ಡರ್ಸಿ ಹೊಳೆ; ನಡುವೆ ಕೋಟೆ ಬಳಸಿದ ಹೊಳಲು. ಅದನ್ನು ಕಟ್ಟಿದವನು ಹೆಸರಾದ ಅಯೋವಿನ ಮರಿಮಗ ಕಾಡ್ಮಸ್. ಅಯೋ ಇನಕಸ್ಸಿನ ಮಗಳು; ಅರ್ಗಾಸಿನಲ್ಲಿಯ ಹೀರಾದೇವಿಯ ಪೂಜಾರಿಣಿ. ಸ್ಯೂಸ್ ದೇವನು ಒಮ್ಮೆ ಅಯೋವನ್ನು ಹೀರಾ ದೇವಸ್ಥಾನದಲ್ಲಿ ನೋಡಿ, ಅವಳ ಚೆಲುವಿಗೆ ಮನಸೋತು, ತನ್ನ ಮಡದಿ ಹೀರಾದೇವಿಯ ಮುಂದೆ ಅವಳ ಸೊಬಗನ್ನು ಕೊಂಡಾಡಿದನು. ಗಂಡನ ಹುಚ್ಚನ್ನು ಕಂಡು ಹೀರಾದೇವಿ ತನ್ನ ಪೂಜಾರಿಣಿಯ ಮೇಲೆಯೇ ಏವಗೊಂಡು, ಅವಳನ್ನು ಒಂದು ಬಿಳಿಯ ಹಸುವನ್ನಾಗಿ ಮಾರ್ಪಡಿಸಿ, ಅದನ್ನು ಯಾರೂ ಹೊದ್ದದಂತೆ ನೂರು ಕಣ್ಣಿನ ಆರ್ಗಸ್ ನಾಯನ್ನು ಕಾವಲು ಹಾಕಿದಳು. ಆರ್ಗಸನ್ನು ಕೊಲ್ಲುವುದಕ್ಕಾಗಿ ಸ್ಯೂಸ್ ತನ್ನ ದೂತನಾದ ಹರ್ಮೀಸನ್ನು ಕಳುಹಿದನು. ಅದನ್ನು ತಿಳಿದು ಹೀರಾ ಆ ಹಸುವನ್ನು ಕಚ್ಚಿ ಹುಚ್ಚು ಹಿಡಿಸುವಂತೆ ಒಂದು ತೊಣಚಿಯನ್ನು ಅಟ್ಟಿದಳು. ತೊಣಚಿಯ ಕಾಟ ತಪ್ಪಿಸಿಕೊಳ್ಳುವುದಕ್ಕಾಗಿ ಹಸು ನಿಂತೆಡೆ ನಿಲ್ಲದೆ ಓಡಹತ್ತಿತ್ತು. ಕಾಡು ಮೇಡು, ನೆಲ ನೀರು—ಎಲ್ಲೆಲ್ಲಿ ಅಲೆದರೂ ಬಿಡುಗಡೆ ಕಾಣಲಿಲ್ಲ. ಹೊಟ್ಟೆಗೆ ಮೇವಿಲ್ಲದೆ, ಕಣ್ಣಿಗೆ ನಿದ್ದೆಯಿಲ್ಲದೆ ಸತ್ತುಸುಣ್ಣವಾಗಿ, ಏಷ್ಯ ಯೂರೋಪುಗಳನ್ನೆಲ್ಲಾ ಅಲೆದು ಜೇಸತ್ತು, ಕೊನೆಗೆ ಈಜಿಪ್ಟಿಗೆ ಬಂತು. ತನ್ನ ನಿಮಿತ್ತದಿಂದ ಅಷ್ಟು ಪಾಡುಪಟ್ಟು ತೊಳಲಿದ ಹೆಣ್ಣಿಗೆ ಸ್ಯೂಸ್ ಮರುಗಿ ಮತ್ತೆ ಹೆಣ್ಣಿ ರೂಪನ್ನು ಕರುಣಿಸಿದನು. ಹೀಗೆ ಮರುಹುಟ್ಟು ಪಡೆದ ಅಯೋವಿಗೆ ಅಲ್ಲಿ ಎಪಫಸ್ ಎಂಬ ಮಗ ಹುಟ್ಟಿದನು. ಅವನಿಗೆ ಬೀಲಸ್ ಮತ್ತು ಅಜೀನಾರ್ ಎಂಬ ಗಂಡುಮಕ್ಕಳಾದರು. ಫಿನೀಷಿಯಕ್ಕೆ ಅರಸಾದ ಅಜೀನಾರಿಗೆ ಕಾಡ್ಮಸ್ ಮತ್ತು ಸಿಲಿಕ್ಸ್ ಎಂಬ ಗಂಡುಮಕ್ಕಳೂ ಯುರೋಪ ಎಂಬ ಮಗಳೂ ಹುಟ್ಟಿದರು. ರೂಪವತಿಯಾದ ಯುರೋಪಳನ್ನು ಸ್ಯೂಸ್ ದೇವನು ಒಂದು ಗೂಳಿಯ ಮೇಲೆ ಹಾರಿಸಿಕೊಂಡು ಹೊರಟುಹೋಗಲು, ಅವಳನ್ನು ಬಿಡಿಸಿ

ಕೊಂಡು ಬರುವುದಕ್ಕಾಗಿ ಅಜೇನಾರ್ ತನ್ನ ಇಬ್ಬರು ಗಂಡುಮಕ್ಕಳನ್ನೂ ಕಳಿಸಿದನು. ಅವರು ಎಲ್ಲೆಲ್ಲಿ ಎಷ್ಟೆಷ್ಟು ಅಲೆದರೂ ಅವಳ ಸುಳಿವು ಕಾಣಲಿಲ್ಲ, ಸೆಲೆ ಕೇಳಲಿಲ್ಲ. ಹೀಗೆ ಕೊಂಡ ಕೆಲಸ ಕೈಗೂಡದೆ ಬೇಸತ್ತು ಸಿಲಿಕ್ಸ್ ತನ್ನ ಹೆಸರನ್ನೇ ಕೊಂಡ ಸಿಲಿಷಿಯ ನಾಡಿನಲ್ಲಿ ನೆಲಸಿಬಿಟ್ಟನು. ಆದರೆ, ಕಾಡ್ಮಸ್ ಒಂದೆಡೆ ನಿಲ್ಲದೆ ಸೋದರಿಯನ್ನು ಅರಸಿಕೊಂಡು ಅಲೆಯುತ್ತ ಥ್ರೇಸಿನ ಬಳಿ ಬಂದು, ಡೆಲ್ಫಿಯ ದೇವವಾಣಿಯನ್ನು ಕೇಳಿದನು. ಎಷ್ಟು ಹುಡುಕಿದರೂ ಯುರೋಪ ಸಿಕ್ಕುವುದಿಲ್ಲವೆಂದೂ, ಆದ್ದರಿಂದ ಅವಳನ್ನು ಅರಸುವುದು ಬಿಟ್ಟು ದಾರಿಯಲ್ಲಿ ಎದುರುಗೊಳ್ಳುವ ಹಸುವೊಂದರ ಬೆನ್ನು ಹಿಡಿದುಹೋಗಿ, ಅದು ಮಲಗಿದೆಡೆ ಊರೊಂದನ್ನು ಕಟ್ಟಬೇಕೆಂದೂ ವಾಣಿ ನುಡಿಯಿತು. ಆ ನುಡಿಯಂತೆ ಕಾಡ್ಮಸ್ ದಾರಿ ನಡೆಯುತ್ತಿರಲು ಫೋಸಿಸ್ ಬಳಿ ಹಸುವೊಂದು ಅವನನ್ನು ಎದುರುಗೊಂಡಿತು. ಹಸು ಹಲವು ನಾಡುಗಳನ್ನು ಕಳೆದು ಬಿಯೋಷಿಯ ನಾಡಿಗೆ ಬಂದು, ಅಲ್ಲಿ ಒಂದೆಡೆ ಮಲಗಿಕೊಂಡಿತು. ಮಲಗಿಕೊಂಡ ಆ ಹಸುವನ್ನು ದೇವತೆಗಳಿಗೆ ಬಲಿಕೊಡಲೆಣಿಸಿ, ಬಳಿಯ ಹೊನಲಿನಿಂದ ನೀರು ತರಲು ತನ್ನವರನ್ನು ಕಳುಹಿಕೊಟ್ಟನು. ಅಲ್ಲಿಯ ಡ್ರೇಗನ್ ಹಾವು ಅವರನ್ನೆಲ್ಲ ತಿಂದು ಹಾಕಿಬಿಟ್ಟಿತು. ಕಾಡ್ಮಸ್ ಆ ಹಾವನ್ನು ಕೊಂದು, ಅಥೀನೆಯಿಂದ ಪ್ರೇರಿತನಾಗಿ ಅದರ ಹಲ್ಲುಗಳನ್ನೆಲ್ಲ ಕಿತ್ತು ನೆಲದಲ್ಲಿ ಬಿತ್ತಿದನು. ಒಡನೆಯೆ ನೆಲದಿಂದ ಕೈದುತೊಟ್ಟ ಕರಾಳಭಟರು ಎದ್ದರು. ಅವರಿಗೆ ಸ್ಪಾರ್ಟರು (ಬಿತ್ತಿಗರು) ಎಂದು ಹೆಸರಾಯಿತು. ಕಾಡ್ಮಸ್ ಅವರ ನಡುವೆ ಒಂದು ಕಲ್ಲೆಸೆದು ಅವರು ತಮ್ಮತಮ್ಮಲ್ಲೆ ಕಾದಾಡುವಂತೆ ಮಾಡಿದನು. ಕೊನೆಗೆ ಅಳಿದುಳಿದ ಐವರ ನೆರವಿನಿಂದ ಅಲ್ಲಿಯೇ ದುರ್ಗವೊಂದನ್ನು ಕಟ್ಟಿದನು. ಅದಕ್ಕೆ ಕಾಡ್ಮಿಯ ಎಂದು ಹೆಸರಾಯಿತು. ಅದರ ಸುತ್ತ ಎದ್ದ ಪಟ್ಟಣವೇ ಥೀಬ್ಸ್. ಆ ಐವರು ಭಟರೂ ಥೀಬ್ಸಿನ ಹಿರಿಯ ಮನೆತನಗಳಿಗೆ ಮೊದಲಿಗರಾದರು. ಕಾಡ್ಮಸ್ ಕೊಂದ ಡ್ರೇಗನ್ ಏರೀಸ್ ದೇವತೆಯ ಮೀಸಲಿನದು. ಆ ಪಾಪದ ಶಾಂತಿಗಾಗಿಯೂ ರಕ್ತಪಾತಕ್ಕೆ ಪ್ರಾಯಶ್ಚಿತ್ತವಾಗಿಯೂ ಕಾಡ್ಮಸ್ ಎಂಟು ವರ್ಷಗಳ ಕಾಲ ತೊಳಲಿ ಸವೆದು, ಕೊನೆಗೆ ದೇವತೆಗಳಿದಿರಿನಲ್ಲಿ ಹಾರ್ಮೋನಿಯಳನ್ನು ಮದುವೆಯಾದನು. ಹಾರ್ಮೋನಿಯ ಏರೀಸ್ ಮತ್ತು

ಆಫ್ರೊಡೈಟಿಯರ ಮಗಳು. ಮದುವೆಯಲ್ಲಿ ಅವಳಿಗೆ ಅಥೀನೆಯೇ ಕೈಯಿಂದ ಹಾಕಿದ ವಸ್ತ್ರವೊಂದೂ, ಹಿಫೀಸ್ಟಸ್ ತಾನೇ ಸಮೆದ ಸರವೊಂದೂ ಉಡುಗೊರೆ ದೊರೆತುವು. ಆ ಸರ ಮೊದಲು ಯುರೋಪಳಿಗೆ ಕೊಟ್ಟದ್ದು. ಅದು ಮುಂದೆ ತನ್ನ ಮನೆತನವೆಲ್ಲವನ್ನೂ ಕಾಡಿ ತಿನ್ನುತ್ತದೆಂದು ಕಾಡ್ಮಸ್ ಅಂದು ಅರಿಯದೇಹೋದನು.

ಕಾಡ್ಮಸಿಗೆ ಹಾರ್ಮೋನಿಯಳಲ್ಲಿ ಐದು ಮಕ್ಕಳಾದರು. ಹಿರಿಯ ಮಗನಾದ ಪಾಲಿಡೋರಸ್ ತಂದೆಯು ತರುವಾಯ ಥೀಬ್ಸಿಗೆ ಒಡೆಯನಾದನು. ಹಿರಿಯ ಮಗಳಾದ ಸೆಮೆಲಿ ಪಟ್ಟಪಾಡು ಬಹು ವಿಚಿತ್ರವಾದ್ದು. ತನ್ನ ಒಲವನ್ನು ಕದ್ದ ಸ್ಯೂಸ್ ದೇವನನ್ನು ಹೀರಾದೇವಿಗೆ ಪರಿಚಿತವಾದ ಸಿಡಿಲು ಮಿಂಚುಗಳ ರೂಪ ವೈಭವದಿಂದಲೇ ತನ್ನಲ್ಲೂ ಸೇರೆಯಬೇಕೆಂದು ಮುನ್ನರಿಯದೇ ಕೇಳಿಕೊಂಡಳು. ತನ್ನ ಕೋರಿಕೆಯನ್ನು ಸಲಿಸಿ ಅವನು ಬಂದಾಗ ಸಿಡಿಲೇಟಿಗೆ ಸಿಕ್ಕಿ ಸೊಂದು ಸಮೆದಳು. ಆದರೆ, ಸ್ಯೂಸ್ ಅವಳ ಮಗುವನ್ನು ಕರುಣಿಸಿ, ನೀಸಾಮಲೆಯ ದೇವಿಯರಿಗೆ ಅದನ್ನು ಸಲಹಲು ಕೊಟ್ಟನು. ಮಗು ದೊಡ್ಡವನಾಗಿ ಇಂಡಿಯ, ಏಷ್ಯ, ಥ್ರೇಸ್ ಮೊದಲಾದ ನಾಡುಗಳನ್ನೆಲ್ಲಾ ತಿರುಗಿಬಂದನು. ತವರೂರಿಗೆ ಮರಳುವಾಗ ತನ್ನೊಡನೆ ಆವೇಶೋಪಾಸಕರ ಗುಂಪೊಂದನ್ನು ಕಟ್ಟಿಕೊಂಡು ಬಂದನು. ಆ ಸೆಮೆಲಿಯ ಮಗನೇ ಡಯೊನೈಸಸ್ ದೇವತೆ. ಅವನಿಗೆ ಬಾಕಸ್ ಎಂದು ಮತ್ತೊಂದು ಹೆಸರೂ ಉಂಟು. ಅವನ ಉಪಾಸಕರು ಜಿಂಕೆಯ ಚರ್ಮ ಹೊದೆದು, ಐವೀ ಮತ್ತು ದ್ರಾಕ್ಷೀ ಬಳ್ಳಿ ಮುಡಿದು, ದ್ರಾಕ್ಷೀ ಗೊಂಚಲನ್ನು ಕಿವಿಗಿಟ್ಟು, ಕೈಯಲ್ಲಿ ಪಂಜುಹಿಡಿದು, ಉನ್ಮತ್ತರಾಗಿ ಯಾವುದೋ ಅತೀಂದ್ರಿಯ ರಹಸ್ಯಗಾನದ ಮೇಳಕ್ಕೆ ಮಲೆಗಳ ಮೇಲೆ ಕುಣಿಯುತ್ತಿದ್ದರು. ಡಯೊನೈಸಸ್ ದೇವತೆಯನ್ನು ಒಪ್ಪಿ ಬರಮಾಡಿಕೊಂಡ ಪಟ್ಟಣಗಳಲ್ಲಿ ಥೀಬ್ಸೇ ಮೊದಲನೆಯದು. ಮುತ್ತ ಕಾಡ್ಮಸನೂ ಆ ದೇವತೆಯನ್ನು ಒಪ್ಪಿಕೊಂಡು, ತಾನೂ ತನ್ನ ಹೆಣ್ಣುಮಕ್ಕಳೂ ಕಣಿಯ ಟೈರೀಸಿಯಸನ್ನೂ ಸೇವಿಸತೊಡಗಿದರು. ಆದರೆ, ಕಾಡ್ಮಸಿನ ಕಿರಿಯ ಮಗಳಾದ ಅಗೇವಿಯ ಮಗ ಪೆಂಥ್ಯೂಸ್ ಆ ದೇವತೆಯನ್ನು ನಂಬದೆ ಅವನ ಭಕ್ತರನ್ನು ಏಳಿಸತೊಡಗಿದನು. ಒಮ್ಮೆ ತನ್ನ ತಾಯಿಯೂ ಥೀಬ್ಸಿನ ಹಲವು

ಹೆಂಗಸರೂ ಸಿಥೀರಾನ್ ಮಲೆಯ ಮೇಲೆ ಡಯೊನೈಸಸ್ ಉತ್ಸವಕ್ಕಾಗಿ ನೆರೆದಿದ್ದಾಗ, ಪೆಂಥ್ಯೂಸ್ ಕದ್ದು ನೋಡಬಯಸಿ ಬಳಿಯ ಮರವೊಂದನ್ನಡರಿ ಕುಳಿತನು. ಆವೇಶಗೊಂಡು ಕುಣಿಯುತ್ತಿದ್ದ ಹೆಣ್ಣುಗಳ ಕಣ್ಣು ಒಮ್ಮೆ ಕಳ್ಳನನ್ನು ಕೊಂಡಿತು. ಒಡನೆಯೇ ಕೆರಳಿ ಎಲ್ಲರೂ, ಅದರಲ್ಲೂ ಅಗೇವಿ ಮುಂದಾಗಿ, ಅವನನ್ನು ಕೆಳಕ್ಕೆಳೆದು ನೈಸುಲಿದು ತುಂಡುತುಂಡು ಮಾಡಿ ಹಾಕಿದರು. ಅಗೇವಿ ಮಗನ ತಲೆಯನ್ನು ತನ್ನ ದಂಡಕ್ಕೇರಿಸಿ ಮೆರವಣಿಗೆ ಮಾಡಿಕೊಂಡು ಜಯಭೇರಿಯೊಡನೆ ಥೀಬ್ಸನ್ನು ಹೊಕ್ಕಳು. ಆ ಘೋರವನ್ನು ಕಂಡು ಮುತ್ತ ಕಾಡ್ಮಸ್ ದೊರೆತನವನ್ನು ಪಾಲಿಡೋರಸ್ಸಿಗೆ ಒಪ್ಪಿಸಿ, ಹೆಂಡತಿಯೊಡನೆ ಊರು ಬಿಟ್ಟು ಇಲಿರಿಯದಲ್ಲಿ ವಾಸಮಾಡಲು ಹೊರಟುಹೋದನು. ಅಲ್ಲಿ ಕಾಡ್ಮಸನೂ ಹಾರ್ಮೋನಿಯಳೂ ಸತ್ತಮೇಲೆ, ಅವರು ಸ್ಯೂಸ್ ದೇವನಿಂದ ಹಾವುಗಳಾಗಿ ಪರಿಣಮಿಸಿ ಇಲಿಪಿಯದ ಬಯಲಿನಲ್ಲಿ ಇದ್ದುಕೊಂಡಿದ್ದರೆಂದು ಜನರು ನಂಬಿದ್ದರು.

ಥೀಬ್ಸಿನಲ್ಲಿ ಪಾಲಿಡೋರಸ್ಸಿನ ತರುವಾಯ ಅವನ ಮಗ ಲಾಬ್ಡಕಸ್ ಆಳಿದನು. ಲಾಬ್ಡಕಸ್ ಸಾಯುವಾಗ ಅವನ ಮಗ ಲೇಯಿಯಸ್ ಇನ್ನೂ ಹುಡುಗನಾಗಿದ್ದದ್ದರಿಂದ, ಪಾಲಕನಾದ ಲೈಕಸ್ ಪ್ರತಿನಿಧಿಯಾಗಿ ಆಳುತ್ತಿದ್ದನು. ಲೈಕಸ್ಸಿಗೆ ಆಂಟಿಯೊಪಿ ಎಂಬ ಸೋದರಮಗಳೊಬ್ಬಳಿದ್ದಳು. ಅವಳು ಬಲು ಚೆಲುವೆ. ಒಮ್ಮೆ ಕಾಡಿನಲ್ಲಿ ತಿರುಗುತ್ತ, ಸೆತ್ತಿ ಬಿಸಲುಕಾದು ಬಳಲಿ ಮರದಡಿಯಲ್ಲಿ ಮಲಗಿಕೊಂಡಳು. ಎಚ್ಚೆತ್ತು ನೋಡುವಾಗ ಆಡುಮೊಗದ ಮನುಷ್ಯರೂಪವೊಂದು ಅವಳನ್ನೇ ಎವೆಯಿಕ್ಕದೆ ನೋಡುತ್ತಿತ್ತು. ಸ್ಯೂಸ್ ದೇವನೇ ಆ ರೂಪದಲ್ಲಿ ಬಂದು ಅವಳನ್ನು ಮೋಹಿಸಿದ್ದನು. ಆಂಟಿಯೊಪಿಗೆ ಆ ವ್ಯಕ್ತಿ ಯಾರೆಂಬ ಅರಿವಿಲ್ಲದಿದ್ದರೂ ಅವನ ಕೂಟದಲ್ಲಿ ನಲಿದಳು. ಇಬ್ಬರಿಗೂ ಗುಟ್ಟಿನಲ್ಲೇ ಮದುವೆಯಾಗಿ ಅಂಫಿಯೊನ್ ಮತ್ತು ಸಥ್ಯೂಸ್ ಎಂಬ ಅವಳಿ ಮಕ್ಕಳಾದರು. ಲೈಕಸ್ಸಿಗೆ ಅದು ತಿಳಿದು, ತುಂಬ ರೇಗಿ ಮಕ್ಕಳಿಬ್ಬರನ್ನೂ ಅವಳಿಂದ ಕಿತ್ತುಕೊಂಡು ಕಾಡಿನಲ್ಲಿ ಬಿಟ್ಟುಬಂದನು. ಅತ್ತ ಆಂಟಿಯೊಪಿ ಸೆರೆಯಲ್ಲಿದ್ದು ಲೈಕಸ್ಸಿನ ಮತ್ತು ಅವನ ಹೆಂಡತಿ ಡರ್ಸಿಯ ಕೈಯಲ್ಲಿ ಪಡಬಾರದ ಕಷ್ಟಗಳನ್ನೆಲ್ಲ ಪಟ್ಟು, ಕೊನೆಗೆ ತಾಳಲಾರದೆ ಒಂದು ದಿನ ತಪ್ಪಿಸಿಕೊಂಡು ಕಾಡಿಗೆ

ಓಡಿಹೋದಳು. ಅಲ್ಲಿ ಕುರುಬರ ಕೈಗೆ ಸಿಕ್ಕಿ ತಂದೆತಾಯಿ ಯಾರೆಂದು ತಿಳಿಯದೆ ದೊಡ್ಡವರಾಗಿ ಬೆಳೆದು ಬಂದ ತನ್ನ ಮಕ್ಕಳ ಕೈಗೆ ಸಿಕ್ಕಿದಳು. ಅವಳನ್ನು ಅಟ್ಟಿಕೊಂಡು ಬಂದ ಡರ್ಸಿಯ ಬೈಗುಳಿಂದ, ದಿಕ್ಕೆಟ್ಟು ಬಂದ ಆ ಹೆಣ್ಣು ತಮ್ಮ ತಾಯೆಂದು ಹುಡುಗರಿಗೆ ತಿಳಿಯಿತು. ಒಡನೆಯೇ ಅವರು ಡರ್ಸಿಯನ್ನು ಒಂದು ಕಾಡುಗೂಳಿಯ ಕೊಂಬಿಗೆ ಬಿಗಿದುಹಾಕಿದರು. ಅದು ಓಡುತ್ತ ಅವಳನ್ನು ನೆಲದಲ್ಲಿ ಎಳೆದು ಸಾಯಿಸಿತು. ತರುವಾಯ ಆ ಇಬ್ಬರು ಹುಡುಗರೂ ಅರಮನೆಗೆ ನುಗ್ಗಿ ಲೈಕಸ್ಸನ್ನು ಕೊಂದು ತಾವೇ ಅರಸರಾದರು. ಅಂಫಿಯೊನ್ ಒಳ್ಳೆಯ ಸಂಗೀತಗಾರ. ಹರ್ಮಿಸೇ ಅವನಿಗೆ ವೀಣೆ ಕಲಿಸಿದ್ದನು. ಅವನು ವೀಣೆ ನುಡಿಸಿದಂತೆಲ್ಲ, ನುಡಿನುಡಿಗೂ ಸುತ್ತಮುತ್ತಲಿನ ಕಲ್ಲುಗಳೆಲ್ಲ ಕುಣಿದೆದ್ದು ಓರಣ ವಾಗಿ, ಅಣಿಯಾಗಿ, ಥೀಬ್ಸಿನ ಸುತ್ತ ಗೋಡೆಕಟ್ಟಿ ನಿಂತುವು. ಆ ಗೋಡೆಯೇ ಥೀಬ್ಸಿಗೆ ಕೋಟೆಯಾಯಿತು.

ಸೋದರರಿಬ್ಬರೂ ತೀರಿಕೊಂಡ ತರುವಾಯ ಎಳವೆಯಲ್ಲಿ ಕೈಬಿಟ್ಟು ಹೋಗಿದ್ದ ರಾಜ್ಯ ಲೇಯಿಯಸ್ಸಿಗೆ ಮತ್ತೆ ಬಂತು. ಅವನಿಗೆ ಬಹುಕಾಲ ಮಕ್ಕಳಾಗಲಿಲ್ಲ. ತಾನೂ ತನ್ನ ಅರಸಿ ಜೊಕಾಸ್ಟಳೂ ಅಪಾಲೊ ದೇವತೆಗೆ ಹರಕೆಹೊತ್ತು ಪುತ್ರವರವನ್ನು ಬೇಡಿದರು. ಆ ದೇವತೆ ಪ್ರಸನ್ನನಾಗಿ ಒಲಿದು ವರವನ್ನೇನೋ ಕರುಣಿಸಿದನು. ಆದರೆ, ಆ ಮಗನ ಕೈಯಿಂದಲೇ ತಂದೆಯು ಕೊಲೆಯೆಂದು ತನ್ನ ದೇವವಾಣಿಯ ಮೂಲಕ ಮುನ್ನರಿಕೆಯನ್ನೂ ನುಡಿದನು. ಅದನ್ನು ಕೇಳಿ ನಡುಗಿ, ದೊರೆ ಹೇಗಾದರೂ ಮಾಡಿ ಅದನ್ನು ಮೀರಲೆಣಿ ಸಿದನು. ಮಗು ಹುಟ್ಟಿದೊಡನೆಯೇ ತಂದೆತಾಯಿಗಳು ಅದರ ಕಾಲುಗಳನ್ನು ತೊಗಲಹುರಿಕೋದು ಬಿಗಿದು, ಅದನ್ನು ಕೊಂದುಹಾಕುವಂತೆ ಬೆಸನಿಟ್ಟು ಆಳೊಬ್ಬನ ಕೈಗೆ ಕೊಟ್ಟರು. ಆಳು ಮಗುವನ್ನು ಸಿಥೀರಾನ್ ಮಲೆಯ ತಪ್ಪಲಿಗೆ ಕೊಂಡುಯ್ದನು. ಆದರೆ, ಎಸಳು ಮಗುವನ್ನು ಕೊಲ್ಲಲು ಮನವೊಪ್ಪದೆ ಅದನ್ನು ಕಾರಿಂಥಿನ ಕುರುಬನೊಬ್ಬನಿಗೆ ಕೊಟ್ಟುಬಿಟ್ಟನು. ಕುರುಬನು ಆ ಅರುಮೆ ಮಗು ವನ್ನು ತನ್ನ ದೊರೆ ಪಾಲಿಬಸ್ಸಿಗೆ ಒಪ್ಪಿಸಿದನು. ಪಾಲಿಬಸ್ಸೂ ಮಡದಿ ಮೆರೊ ಪಿಯೂ ತಮಗೆ ಮಕ್ಕಳಿಲ್ಲದ್ದರಿಂದ ಆ ಮಗುವನ್ನು ಸಾಕಿಕೊಂಡರು. ತೊಗಲ ಹುರಿಯ ಬಿಗಿತದಿಂದ ಮಗುವಿನ ಅಡಿಗಳು ಊದಿಕೊಂಡಿದ್ದದ್ದರಿಂದ ಅದಕ್ಕೆ

ಈಡಿಪಸ್ (ಒಯ್ದಿಪೌಸ್=ಸ್ಫೀತಪಾದ, ಊದಡಿ) ಎಂದು ಹೆಸರಿಟ್ಟರು. ಈಡಿಪಸ್ಸಿಗೆ ತಾನು ಪಾಲಿಬಸ್ ಮತ್ತು ಮೆರೊಪಿಯ ಹುಟ್ಟುಮಗನಲ್ಲವೆಂದು ತಿಳಿಯುವುದಕ್ಕೆ ಮಾರ್ಗವೇ ಇರಲಿಲ್ಲ.

ಹೀಗೆಯೇ ಬೆಳೆದು ಬರುತ್ತಿರಲು, ಒಂದು ದಿನ ಔತಣವೊಂದರಲ್ಲಿ ತನ್ನ ಒಡನಾಡಿಯೊಬ್ಬನು ಈಡಿಪಸ್ಸನ್ನು ತಂದೆಯ ಹೆಸರು ತಿಳಿಯದ 'ಸಿಕ್ಕು ಮಗು' ಎಂದು ಮೂದಲಿಸಿದನು. ಮನನೊಂದು ಈಡಿಪಸ್ ಒಡನೆಯೇ ಅದನ್ನು ತನ್ನ ತಾಯಿತಂದೆಯರಲ್ಲಿ ಹೇಳಿದನು. ಅವರ ಮಾತು ಸಮಾಧಾನ ತರುವುದು ಬಿಟ್ಟು ಕಳವಳಕ್ಕೆ ಕಾರಣವಾಯಿತು. ಕೂಡಲೆ ಈಡಿಪಸ್ ಡೆಲ್ಫಿಯ ದೇವವಾಣಿಯನ್ನು ಕೇಳಹೊರಟನು. ಅವನ ತಂದೆತಾಯಿಗಳು ಯಾರೆಂದು ತಿಳಿಸುವುದನ್ನು ಬಿಟ್ಟು, ಆ ವಾಣಿ ಈಡಿಪಸ್ ತನ್ನ ತಂದೆಯನ್ನು ಕೊಂದು, ತಾಯಲ್ಲಿ ನೆರೆದು, ಅಳಿಮಕ್ಕಳ ಅಯ್ಯನಾಗುವುದಾಗಿ ನುಡಿಯಿತು. ಆ ಘೋರವನ್ನು ಕೇಳಿ ತಲ್ಲಣಿಸಿ ಈಡಿಪಸ್ ಮತ್ತೆ ಕಾರಿಂಥಿಗೆ ಮರಳುವುದಿಲ್ಲವೆಂದು ಪ್ರತಿಜ್ಞೆಮಾಡಿ, ಅದಕ್ಕೆ ಬೆನ್ನುತಿರುಗಿಸಿ ದಾರಿಕೊಂಡುಯ್ದು ಕಡೆಗೆ ನಡೆದನು. ಪಾಲಿಬಸ್ ಮತ್ತು ಮೊರೊಪಿಯರೇ ತನ್ನನ್ನು ಪಡೆದವರೆಂದೂ ಅವರಿಗೆ ಆ ಘೋರವಾಣಿ ಮೊದಲೆ ತಿಳಿದಿದ್ದದ್ದರಿಂದಲೆ ಅವರು ತನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಡಲಿಲ್ಲವೆಂದೂ ನಂಬಿಕೊಂಡನು. ದಾರಿ ನಡೆಯುತ್ತ ಹೆಲಿಕಾನ್ ಮಲೆಯ ಒಂದು ಕಡಿದುಕಣಿವೆಗೆ ಬಂದನು. ಅಲ್ಲಿ ಬಲು ಇಕ್ಕಟ್ಟಾದ ಒಂದೇ ಒಂದು ಕವಲುದಾರಿ; ಡೆಲ್ಫಿಯ ಮತ್ತು ಡಾಲಿಸ್ಸಿನ ದಾರಿಗಳ ಕೂಡಲು; ಅದಕ್ಕೆ ಫೋಸಿಸ್ ಎಂದು ಹೆಸರು. ಆ ಕಿರುದಾರಿಯಲ್ಲಿ ಒಂದು ಬಂಡಿ ಅಡ್ಡಲಾಗಿತ್ತು. ಬಂಡಿಯಲ್ಲಿ ಮುದುಕನೊಬ್ಬನು ಕುಳಿತಿದ್ದನು. ಸುತ್ತ ಕೆಲವು ಆಳುಗಳಿದ್ದರು. ಅವರಲ್ಲೊಬ್ಬನು ಮುಂದೆ ಬಂದು ಒರಟುತನದಿಂದ ಈಡಿಪಸ್ಸನ್ನು ಬದಿಗೊತ್ತಿ ನೂಕಿದನು. ಬಂಡಿಯವನು ಬಂಡಿಯನ್ನು ದಾರಿಯನ್ನೆಲ್ಲಾ ತುಂಬುವಂತೆ ಹೊಡೆದನು. ಮನಸ್ಸಿಲ್ಲದಿದ್ದರೂ ಈಡಿಪಸ್ ಪಕ್ಕಕ್ಕೆ ಸರಿದು, ತನಗೆ ಕಿರಿದೆಡೆಯಾದರೂ ಇಲ್ಲವೆಂದು ಕೂಗಿದನು. ಅದನ್ನು ಕಂಡು ಬಂಡಿಯೊಳಗಿದ್ದ ಮುದುಕನು ತನ್ನ ಕೈಯ ದೊಣ್ಣೆಯಿಂದ ಈಡಿಪಸ್ಸಿನ ತಲೆ ಮಟ್ಟಿದನು. ಒಡನೆಯೇ

ಎಳೆಯನ ಕೆರಳು ಉರುಬಿ ಮುದುಕನನ್ನು ತೆಗೆದಪ್ಪಳಿಸಿದನು. ಮುದುಕನು ಗೋಣುಮುರಿದು ಕೆಳಗುರುಳಿ ಪ್ರಾಣಬಿಟ್ಟನು. ಬಳಿಕ, ಈಡಿಪಸ್ ಬಳಿಯು ರನ್ನೆಲ್ಲ ಕೊಂದುಹಾಕಿದನು. ಅವರಲ್ಲಿ ಒಬ್ಬನು ಮಾತ್ರ ಕೈಸುಣುಚಿ ತಪ್ಪಿಸಿ ಕೊಂಡು ಥೀಬ್ಸಿಗೆ ಮರಳಿದನು. ತನ್ನ ಹೇಡಿತನವನ್ನು ಮುಚ್ಚಿ ಹಾಕಿಕೊಳ್ಳು ವುದಕ್ಕಾಗಿ ನಡೆದ ಸಂಗತಿಗೆ ಬೇರೆ ಬಣ್ಣಕೊಟ್ಟು ಲೇಯಿಯಸ್ ದೊರೆ ಕಳ್ಳರ ಕೈಗೆ ಸಿಕ್ಕಿ ಕೊಲೆಯಾದನೆಂದು ಸುದ್ದಿ ಹರಡಿಬಿಟ್ಟನು. ಬಂಡಿಯಲ್ಲಿದ್ದ ಮುದುಕ ಥೀಬ್ಸಿನ ಅರಸು ಲೇಯಿಯಸ್. ನಾಡಿನ ನೆಮ್ಮದಿಯನ್ನು ಕುರಿತು ಡೆಲ್ಫಿಯ ದೇವವಾಣಿಯನ್ನು ಕೇಳಿಬರಲು ಹೊರಟಿದ್ದನು. ದೊರೆಯ ಕೊಲೆ ಜನರಲ್ಲಿ ಹೆಚ್ಚು ಕೋಲಾಹಲವೆಬ್ಬಿಸಲಿಲ್ಲ. ಅವರ ನೆಮ್ಮದಿಗೇ ಸಂಚಕಾರ ತಂದಿದ್ದ ಪ್ರಸಂಗವೊಂದು ಥೀಬ್ಸಿಗೆ ಒದಗಿತ್ತು. ದೇವತೆಗಳು ಮುಳಿದು ಥೀಬ್ಸ್ ನಾಡನ್ನು ಕಾಡಲು ಸ್ಫಿಂಕ್ಸ್ ಎಂಬ ವಿಚಿತ್ರ ರಾಕ್ಷಸ ಜಂತು ವೊಂದನ್ನು ಕಳಿಸಿದ್ದರು. ಅದಕ್ಕೆ ಹೆಂಗಸಿನ ಮುಖವೂ, ಸಿಂಹದ ಕಾಲು ಮತ್ತು ಬಾಲವೂ, ಹಕ್ಕಿಯ ರೆಕ್ಕೆಯೂ ಇದ್ದುವು. ಆ ರಾಕ್ಷಸಿ ಫಿಕಿಯಮ್ ಗುಡ್ಡದ ಮೇಲೆ ಬೀಡುಬಿಟ್ಟು, ಬಂದವರಿಗೆ ಒಂದು ಸಮಸ್ಯೆಕೊಟ್ಟು, ಅದನ್ನು ಬಿಡಿಸದವರನ್ನೆಲ್ಲಾ ನುಂಗಿಹಾಕುತ್ತ ಊರನ್ನೇ ಕಾಡತೊಡಗಿದಳು. ಆಗಲೇ ಆ ರಾಕ್ಷಸಿಗೆ ಹಲವರು ಆಹುತಿಯಾಗಿದ್ದರು. ಈಡಿಪಸ್ ಥೀಬ್ಸಿನ ಬಳಿ ಬಂದಾಗ ಅವಳ ವಿಚಾರ ತಿಳಿಯಿತು. ಅವಳನ್ನು ಎದುರುಗೊಂಡು ಅವಳ ವಿಕಾರಕ್ಕೆ ಕೊಂಚವೂ ಅಂಜದೆ, ಹಿಂದೆ ಹಲವರು ಆಹುತಿಯಾಗಿದ್ದದ್ದನ್ನು ಕೇಳಿಯೂ ಕೊಂಚವೂ ಅಳುಕದೆ ಸಮಸ್ಯೆ ಏನೆಂದು ಕೇಳಿದನು. "ಏರು ಹೊತ್ತು ನಾಗಾಲಿ, ಇಳಿಹೊತ್ತು ಮೂಗಾಲಿ, ನೆತ್ತಿಹೊತ್ತು ಇಗ್ಗಾಲಿ— ಇದು ಯಾವುದು" ಎಂದು ಕೇಳಿದಳು. ಒಡನೆಯೆ ಅವನು "ಮನುಷ್ಯ. ಹಸುಳೆತನದಲ್ಲಿ ಅಂಬೆಗಾಲಿಟ್ಟು ನಾಗಾಲಿ; ಮುಪ್ಪಿನಲ್ಲಿ ಕೋಲೂರಿ ಮೂಗಾಲಿ; ನಡುವೆ ನೆಟ್ಟಗೆ ನಡೆದು ಇಗ್ಗಾಲಿ" ಎಂದು ಉತ್ತರ ಕೊಟ್ಟನು. ಅದನ್ನು ಕೇಳಿದ ಕೂಡಲೇ ಆ ಸ್ಫಿಂಕ್ಸ್ ರಾಕ್ಷಸಿ ಕೋಡಿನಿಂದ ಕೆಳಗುರುಳಿ ತನ್ನನ್ನು ತಾನೇ ಕೊಂದುಕೊಂಡು ಕಣ್ಮರೆಯಾದಳು.

ಊರಿಗೆ ಎರಗಿದ್ದ ಆ ದೊಡ್ಡ ಕುತ್ತವನ್ನು ಕಳೆದ ಈಡಿಪಸ್ಸಿಗೆ ಅವರ ಮುಂದಾಳು ಕ್ರಿಯಾನ್ ಮೊದಲೆ ಹೇಳಿದ್ದಂತೆ ಪಟ್ಟಕಟ್ಟಿದರು. ಅಲ್ಲದೆ, ಕ್ರಿಯಾನ್ ತನ್ನ ತಂಗಿಯೂ ಲೇಯಿಯಸ್ಸಿನ ವಿಧವೆಯೂ ಆದ ಜೊಕಾಸ್ಟೆಳನ್ನು ಈಡಿಪಸ್ಸಿಗೆ ಮದುವೆಮಾಡಿಕೊಟ್ಟನು. ಈಡಿಪಸ್ ಯಾವ ಕುಂದು ಕೊರತೆಗಳೂ ಇಲ್ಲದೆ ಕರೆಯಿಲ್ಲದ ಬದುಕು ನಡಸಿ, ಜನರೆಲ್ಲರ ಮೆಚ್ಚಿಕೆಗೊಂಡು ನಿಡುಗಾಲ ನೆಮ್ಮದಿಯಿಂದ ರಾಜ್ಯವಾಳಿದನು. ಅವನಿಗೆ ಜೊಕಾಸ್ಟಳಲ್ಲಿ ಪಾಲಿನೀಸೀಸ್ ಮತ್ತು ಇಟೀಯೊಕ್ಲೀಸ್ ಎಂಬ ಗಂಡುಮಕ್ಕಳೂ ಆಂಟಿಗೊನಿ ಮತ್ತು ಇಸ್ಮೀನಿ ಎಂಬ ಹೆಣ್ಣುಮಕ್ಕಳೂ ಆಗಿ, ಅವನ ಬಾಳಿನ ಸುಖ ನೆರತೆಗೊಂಡಿತ್ತು; ಮತ್ತೆ ಯಾವುದನ್ನೂ ಬಯಸುವಂತಿರಲಿಲ್ಲ. ಬೆನ್ನಹಿಂದೆಯೇ ಸುಳಿವು ಕೊಡದೆ ಹೊಂಚುತ್ತಿದ್ದ ಘೋರವಿಧಿ ತನ್ನ ಕರಾಳಮುಖದ ಮುಸುಕನ್ನು ಇನ್ನೂ ಕಳಚಿರಲಿಲ್ಲ. ದೇವತೆಗಳು ಸೇಡು ತೀರಿಸಿಕೊಳ್ಳುವುದಕ್ಕೆ ಹೊಂಚಿ ಸಮಯ ಕಾಯುತ್ತಿದರು. ಲೇಯಿಯಸ್ ಮತ್ತು ಜೊಕಾಸ್ಟ ಹೆತ್ತಮಗುವನ್ನು ಕೊಲ್ಲಕೊಟ್ಟು ದೈವಸಂಕಲ್ಪವನ್ನು, ವಿಧಿಯನ್ನು, ಮೀರಲೆಳಸಿ ಪಾಪಿಗಳಾಗಿದ್ದರು. ಈಡಿಪಸ್ ಕವಲುದಾರಿಯಲ್ಲಿ ಲೇಯಿಯಸ್ಸನ್ನು ಕೊಂದು, ದೇವವಾಣಿ ತನ್ನ ವಿಷಯದಲ್ಲಿ ನಿಜವಾಗುವುದಿಲ್ಲವೆಂದು ನಂಬಿದ್ದನು. ಅರಿವಿಲ್ಲದೆ ನಡೆದ ಕೆಲಸವಾದರೂ ಈಡಿಪಸ್ಸೂ ಪಾಪಿಯೆ. ಒಮ್ಮೆ ಇದ್ದಕ್ಕಿದ್ದ ಹಾಗೆ ನಾಡಿಗೆ ದೊಡ್ಡ ಕುತ್ತವೊಂದೆರಗಿತು. ಪ್ರತಿ ದಿನವೂ ನೂರರಗಟ್ಟಳೆ ಮನುಷ್ಯರೂ ದನಕರುಗಳೂ ಸಾಯುತ್ತ ಬಂದು ಊರಿಗೆ ಊರೇ ಹಾಳಾಗುತ್ತ ಬಂತು. ಕುತ್ತಕ್ಕೆ ಯಾವ ಮದ್ದೂ ತೋರದೆ ಹೋಯಿತು. ಈಡಿಪಸ್ ಧರ್ಮಿಷ್ಠನೂ ದೈವಭಕ್ತನೂ ಆಗಿದ್ದದ್ದರಿಂದ, ನಾಡಿನಲ್ಲಿ ನಡೆದ ಘೋರಪಾಪವೇನಾದರೂ ಇರಬಹುದೆ ಎಂದು ಅಂಜಿ, ದೇವಾಣಿಯನ್ನು ಕೇಳಿಬರಲು ಕ್ರೀಯಾನನ್ನು ಡೆಲ್ಫಿಗೆ ಕಳಿಸಿದನು. ಅವನು ಮರಳುವುದರೊಳಗೆ ಊರಿನವರೆಲ್ಲ ಅರಮನೆಯ ಮುಂದೆ ನೆರೆದು ಅರಸಿಗೆ ಮೊರೆಯಿಟ್ಟರು. ಈಡಿಪಸ್ ಹೊರಗೆ ಬಂದು "ಮಕ್ಕಳಿರ! ಏನು ಈ ಮೊರೆ? ಕಯ್ಯೊಳಗೆ ಆಲಿವ್ ತಳಿರೇಕೆ? ಹೊಳಲಿನಲ್ಲೆಲ್ಲ ಏನು ಈ ಧೂಪ? ಏನು ಈ ಗೋಳು, ಈ ಸ್ತೋತ್ರ? ನನ್ನ ಮಕ್ಕಳ ಪಾಡನ್ನು ಕಿವಿಯಾರ ಕೇಳಲು ನಾನೇ ಬಂದಿದ್ದೇನೆ, ಹೇಳಿ" ಎಂದು

ಎದೆಕರಗಿ ಕೇಳಿದನು. ಒಡನೆಯೇ, ಮುಂದಾಳಾಗಿದ್ದ ಪೂಜಾರಿ "ಒಡೆಯ! ನಾಡಿಗೆರಗಿದ ಕುತ್ತ ನೀನೆ ಬಲ್ಲೆ; ತೆನೆ ಸೀದು ಪಯಿರು ಬತ್ತಿತು; ದನಕರುಗಳು ಬರಡಾದುವು; ಬಸಿರಿಯರು ಬರಿಯ ನೋವುಂಡರು; ಸಾಯುವರ ನರಳಾಟವೇ ಎಲ್ಲೆಲ್ಲೂ; ಸತ್ತವರಿಗೆ ಗೋಳಾಟವೇ ಎಲ್ಲೆಲ್ಲೂ. ನೀನು ಸಾಕ್ಷಾತ್ ದೇವತೆಯಲ್ಲದಿದ್ದರೂ ಮಾನವರ ಬಾನವರ ಕುತ್ತಗಳಿಗೆಲ್ಲ ಮದ್ದು ಕಂಡಿರುವ ಪುರುಷೋತ್ತಮನೆಂದು ನಿನ್ನ ಬಳಿಗೆ ಮೊರೆಯಿಡಬಂದೆವು. ನಿನ್ನೊಂದು ದಿವ್ಯಶಕ್ತಿಯಿಂದ ಮುನ್ನೆರಗಿದ್ದ ಕುತ್ತವನ್ನು, ಸ್ಫಿಂಕ್ಸ ಕಾಟವನ್ನು, ಕಳೆದು ಬದುಕಿಸಿಡೆ. ಈಗಿನ ಕುತ್ತಕ್ಕೂ ನೀನೆ ಮದ್ದು ಕಂಡಿರುವೆ. 'ಕೆಳಗುರುಳಿಸುವುದಕ್ಕಾಗಿ ಮೇಲೆತ್ತಿದನು' ಎಂದು ಜನರೆನ್ನದಿರಲಿ ನಿನ್ನನ್ನು" ಎಂದನು. ಆ ಮಾತು ಕೇಳಿ ಮೊದಲೇ ಬೆಂದೆದೆ ಮತ್ತೆ ಮರುಗಿ ಈಡಿಪಸ್ "ಮಕ್ಕಳಿರ! ನಿಮ್ಮ ಪಾಡು ನಾನು ಬಲ್ಲೆ; ನಿಮಗಿಂತ ಹೆಚ್ಚಾಗಿ ನೊಂದೆ. ನಿಮ್ಮ ಒಬ್ಬೊಬ್ಬರ ಅಳಲೂ ಅವನವನಿಗೆ ಮಾತ್ರ; ನಿಮ್ಮೆಲ್ಲರ ಅಳಲೂ ನನಗೆ" ಎಂದು ಹೇಳಿ ಆಗಲೇ ಕ್ರೇಯಾನನ್ನು ಡೆಲ್ಫಿಗೆ ಕಳಿಸಿರುವುದನ್ನು ತಿಳಿಸಿದನು. ಅಷ್ಟು ಹೊತ್ತಿಗೆ ಕ್ರೇಯಾನೂ ಹಿಂದಿರುಗಿ ಬಂದನು. ತಂದ ಸುದ್ದಿಯನ್ನು ಒಳಗೆ ಹೇಳಬೇಕೋ, ಎಲ್ಲರ ಮುಂದೆಯೂ ಹೇಳಬಹುದೋ ಎಂದು ಅವನು ಕೇಳಲು, ಈಡಿಪಸ್ ತಾನು ಹೊತ್ತ ಹೊರೆ ಜನರೆಲ್ಲರದು, ಅದರಿಂದ ಎಲ್ಲರ ಮುಂದೆಯೇ ಹೇಳಬೇಕೆಂದು ನುಡಿಯಲು, ಕ್ರೇಯಾನ್ ತಂದ ಸುದ್ದಿಯನ್ನೊರೆದನು.

ಲೇಯಿಯಸ್ಸಿನ ಕೊಲೆಗಾರನನ್ನು ಕೊಲ್ಲುವುದು, ಇಲ್ಲವೆ ಥೀಬ್ಸಿನಿಂದ ಹೊಡೆದಟ್ಟುವುದು—ಅದು ಹೊರತು ಕುತ್ತಕ್ಕೆ ಬೇರೆ ಮದ್ದಿಲ್ಲ. ಅದೇ ದೇವವಾಣಿ ನುಡಿದದ್ದು. ಅದನ್ನು ಕೇಳಿ ತನ್ನ ಗೆಯ್ಮೆ ಅರಿಯದ ಕುರುಡ ಈಡಿಪಸ್ "ಕೊಲೆಗಾರ ಯಾರೇ ಆಗಿರಲಿ; ಅವನಿಗೆ ಇಂದೇ ಬಹಿಷ್ಕಾರ ಹಾಕಿದ್ದೇನೆ. ಯಾರೂ ಅವನಿಗೆ ನೀರೂ ನೆರಳೂ ಕೊಡದಿರಲಿ. ಊರಿಂದ ಹೊರದಬ್ಬಿಬಿಡಲಿ. ಆ ಪಾಪಿ ಮನೆಯಿಲ್ಲದೆ, ಬಿಕಾರಿಯಾಗಿ ಅಲೆದು, ತಿರುಪೆಯೆತ್ತಿ ಪಾಡುಪಡಲಿ. ಸತ್ತ ದೊರೆ ನನ್ನಯ್ಯನೇ ಆಗಿದ್ದರೆ ಹೇಗೊ ಹಾಗೆ ನಾನು ಶ್ರದ್ಧೆಯಿಂದ ಕೊಲೆಗಾರನನ್ನು ಹುಡುಕಿಸಿ ತಕ್ಕ ಪ್ರಾಯಶ್ಚಿತ್ತಮಾಡುತ್ತೇನೆ" ಎಂದು

ಘೋರ ಪ್ರತಿಜ್ಞೆ ಮಾಡಿದನು. ಕ್ರೇಯಾನಿನ ಮಾತಿನ ಮೇರೆ ಕಣಿಯ ಟೈರೀಸಿಯಸ್ಸಿಗೆ ಹೇಳಿಕಳಿಸಿ, ಅವನ ಬರವನ್ನೇ ಎದುರುನೋಡುತ್ತಿದ್ದನು. ಕಣಿಯನೇನೋ ಬಂದನು. ಆದರೆ ಎಷ್ಟು ಕೇಳಿದರೂ ಬಾಯಿಬಿಡಲಿಲ್ಲ. ಈಡಿಪಸ್ ಬಹುವಾಗಿ ಪೀಡಿಸಿದನು, ಕೆಣಕಿದನು; ಕೊನೆಗೆ ಟೈರೀಸಿಯಸ್ಸೇ ಲೇಯಿಯಸ್ಸಿನ ಕೊಲೆಯ ಸಂಚುಗಾರನೆಂದು ಚುಚ್ಚಿ ನುಡಿದನು. ಟೈರೀಸಿಯಸ್ಸಿಗೆ ತಡೆಯದೆ ಕೆರಳಿ ಬಾಯಿತೆರೆದು ಪಾಪಿಯ ಮುಸುಕನ್ನು ಓರೆಮಾಡಿದನು. ಈಡಿಪಸ್ಸೇ ಆ ಕೊಲೆಗಾರನೆಂದು ನುಡಿದುಬಿಟ್ಟನು. ಈಡಿಪಸ್ ನಂಬಲಿಲ್ಲ; ಅದೆಲ್ಲ ಕಣಿಯನ ಮತ್ತು ರಾಜ್ಯಕ್ಕೆ ಆಸೆಪಟ್ಟ ಕ್ರೇಯಾನಿನ ಸಂಚು ಎಂದು ಮೂದಲಿಸಿದನು. ಟೈರೀಸಿಯಸ್ ಈಡಿಪಸ್ಸಿಗೂ ಅವನ ಮಕ್ಕಳಿಗೂ ಬರಲಿರುವ ಕೇಡುಗಳನ್ನೆಲ್ಲ ಮುನ್ನುಡಿದು ಹೊರಟು ಹೋದನು. ಈಡಿಪಸ್ಸಿಗೂ ಕ್ರೇಯಾನಿಗೂ ಜಗಳ ಹತ್ತಿತು. ವಿಪರೀತಕ್ಕೆ ಇಟ್ಟುಕೊಳ್ಳುವ ಹೊತ್ತಿಗೆ ಒಳಗಿನಿಂದ ಅರಸಿ ಬಂದು ಸಮಾಧಾನಮಾಡಿದಳು. ಜನರಿಗಾಗಿಯೂ ಅರಸಿಗಾಗಿಯೂ ಕ್ರೇಯಾನನ್ನು ಮನ್ನಿಸಿದರೂ, ಅವನು ಎಂದೆಂದೂ ತನ್ನ ಹಗೆಯೆಂಬುದನ್ನು ಈಡಿಪಸ್ ನಿಶ್ಚಯಿಸಿಕೊಂಡನು. ಕಳವಳಕ್ಕೆ ಕಾರಣವಿಲ್ಲವೆಂದು ಹೇಳಿ, ಹುಟ್ಟಿದ ಮಗುವನ್ನು ಕಾಲುಬಿಗಿದು ಬೆಟ್ಟದ ಮೇಲೆ ಎಸೆದುಬಿಡುವಂತೆ ಹೇಳಿ ಆಳಿನ ಕೈಗೆ ಕೊಟ್ಟುಬಿಟ್ಟದ್ದನ್ನೂ ಲೇಯಿಯಸ್ ಮೂರುದಾರಿ ಕೂಡುವೆಡೆ ಕಳ್ಳರ ಕೈಯಿಂದ ಕೊಲೆಯಾದ್ದನ್ನೂ ಆ ಪ್ರಕಾರ ದೇವವಾಣಿ ಸುಳ್ಳಾದ್ದನ್ನೂ ಜೊಕಾಸ್ಟ ತಿಳಿಸಿದಳು. ಆದರೆ, ಮೂರುದಾರಿ ಕೂಡುವೆಡೆ ಎನ್ನುತ್ತಲೇ ಈಡಿಪಸ್ಸಿಗೆ ಏನೇನೋ ನೆನಪುಗಳು ಕೆರಳಿದುವು. ಅದು ನಡೆದುದೆಲ್ಲಿ, ಎಷ್ಟು ದಿನವಾಯಿತು. ಅವನ ಬಳಿ ಎಷ್ಟು ಮಂದಿಯಿದ್ದರು, ಆಳು ಹೇಗಿದ್ದ—ಇವೇ ಮುಂತಾದ ಪ್ರಶ್ನೆಗಳನ್ನು ಹಾಕುತ್ತ ಹಾಕುತ್ತ ಬಂದ ಉತ್ತರಗಳಿಂದ ಈಡಿಪಸ್ಸಿನ ಮನಸ್ಸು ತಲ್ಲಣಿಸಿತು. ಈಡಿಪಸ್ ತನ್ನ ಡೆಲ್ಫಿಯ ಪ್ರಯಾಣವನ್ನೂ ಹಿಂದಿರುಗುವಾಗ ದಾರಿಯಲ್ಲಿ ನಡೆದದ್ದನ್ನೂ ತಿಳಿಸಲು, ಜೊಕಾಸ್ಟ ಲೇಯಿಯಸ್ಸಿನ ಕೊಲೆಯ ಸುದ್ದಿ ತಂದ ಆಳಿಗೆ ಹೇಳಿ ಕಳಿಸಿರುವುದಾಗಿಯೂ ಅವನು ಬಂದು ಸಮಸ್ಯೆ ಬಗೆಹರಿಯುವವರೆಗಾದರೂ ತಡೆದಿರಬಹುದೆಂದೂ ಸಂತೈಸಿದಳು. ಆದರೂ ಹೊತ್ತುಹೊತ್ತಿಗೆ ಈಡಿಪಸ್ಸಿನ

ಕಳವಳ ಹೆಚ್ಚಾಗುತ್ತ ಹುಚ್ಚನಂತೆ ಆಡುತ್ತಿರಲು, ಜೊಕಾಸ್ಟ ದೇವತೆಗಳಿಗೆ ಹರಕೆಹೊತ್ತು ಪೂಜೆಗೆ ಅಣಿಯಾದನು.

ಆ ಹೊತ್ತಿಗೆ ಸರಿಯಾಗಿ ಕಾರಿಂಥಿನಿಂದ ದೂತನೊಬ್ಬನು ಅತಿ ಸಂಭ್ರಮ ದಿಂದ ಓಡಿಬಂದು ಪಾಲಿಬಸ್ ದೊರೆ ಸತ್ತದ್ದನ್ನೂ ಪ್ರಜೆಗಳು ಈಡಿಪಸ್ಸನ್ನು ದೊರೆಯಾಗಿ ಆಯ್ದುದ್ದನ್ನೂ ತಿಳಿಸಿದನು. ಪಾಲಿಬಸ್ ಈಡಿಪಸ್ಸಿನ ಕೈಯಿಂದ ಅಳಿಯಲಿಲ್ಲವಾಗಿ ದೇವವಾಣಿ ಖಂಡಿತವಾಗಿ ಸುಳ್ಳಾಯಿತೆಂದು ಹಿಗ್ಗಿ ಜೊಕಾಸ್ಟ ಆ ಸುದ್ದಿಯನ್ನು ಮಂಕುಬಡಿದಿದ್ದ ಅರಸನಿಗೆ ತಿಳಿಸಿದಳು. ಈಡಿ ಪಸ್ ಚೇತರಿಸಿಕೊಂಡು ಮತ್ತೆ ಮೇಲೆದ್ದು ಕೊನೆಗೂ ದೇವವಾಣಿ ಸುಳ್ಳಾಯಿ ತೆಂದು ನಲಿದನು. ಅಥವಾ ಕೊನೆಗಾಲದಲ್ಲಿ ತಾನು ಇಲ್ಲದ ಕೊರಗೇ ತಂದೆಯನ್ನು ಸಾಯಿಸಿರಬಹುದೆಂದೂ, ಆ ಮೂಲಕ ತಾನು ತಂದೆಯ ಮರಣಕ್ಕೆ ಪರೋಕ್ಷವಾಗಿಯಾದರೂ ಕಾರಣವಾಗಿ ದೇವವಾಣಿ ನೆರವೇರಿರಬಹುದೆಂದೂ ಸಮಾಧಾನ ಮಾಡಿಕೊಂಡನು. ಆದರೂ ತಾಯೊಡನೆ ನಡೆಯುವ ಭಯ ವೊಂದು ಇನ್ನೂ ಉಳಿದೇ ಉಳಿಯಿತು. ಅದಕ್ಕೆ ಹೆದರುವ ಕೆಲಸವಿಲ್ಲವೆಂದೂ, ಎಷ್ಟೋ ಸಲ ಕನಸಿನಲ್ಲಿ ತಾಯಿ ಮಗ ನೆರೆಯುವರೆಂದೂ, ಆ ದೋಷ ಆ ರೀತಿ ಪರಿಹಾರವಾಗಿಬಿಡುತ್ತದೆಂದೂ ಸಮಾಧಾನಮಾಡಿದಳು. ಅಲ್ಲದೆ, ಕಾರಿಂಥಿನ ದೂತನೊಡನೆ ನಡೆದ ಮಾತುಕತೆಯಿಂದ ಈಡಿಪಸ್ ಪಾಲಿಬಸ್ಸಿನ ಹುಟ್ಟುಮಗನಲ್ಲವೆಂಬುದೂ ತಿಳಿಯಿತು. ದೈವ ನಂಬಿಸಿ ನಂಬಿಸಿ ಮೋಸಮಾಡು ತ್ತದೆ. ಲೇಯಿಯಸ್ಸಿನ ಮನೆಯ ಆಳೊಬ್ಬನು ಕಾಲಿಗೆ ತೊಗಲಹುರಿಕೋದ ಮಗುವೊಂದನ್ನು ಸಿಥೀರಾನ್ ಮಲೆಯೆಡೆಯಲ್ಲಿ ತನಗೆ ಕೊಟ್ಟದ್ದನ್ನೂ, ಅದನ್ನು ತೆಗೆದುಕೊಂಡು ಹೋಗಿ ಮಕ್ಕಳಿಲ್ಲದ ತನ್ನ ದೊರೆ ಪಾಲಿಬಸ್ಸಿಗೆ ತಾನು ಕೊಟ್ಟದ್ದನ್ನೂ ಕಾರಿಂಥಿನ ದೂತ ಹೇಳಿದನು. ಕಥೆಯನ್ನು ಮುಂದೆ ಮುಂದೆ ಬೆದಕಹೋದಂತೆಲ್ಲ ಜೊಕಾಸ್ಟಳಿಗೆ ಕಳವಳ ಹೆಚ್ಚಿ, ಅದರ ವಿಚಾರವನ್ನು ಮುಂದುವರಿಸಕೂಡದೆಂದು ಗಂಡನನ್ನು ಬೇಡಿಕೊಂಡಳು. ಗಂಡನು ಕೇಳ ದಿರಲು 'ಅಯ್ಯೋ ಪಾಪಿ' ಎಂದು ಕೊನೆಯ ಸಲ ಒದರಿ ಹೊರಟುಹೋದಳು. ಈಡಿಪಸ್ ಜೊಕಾಸ್ಟಳ ಎದೆಗುದಿಯನ್ನು ಅರಿತುಕೊಳ್ಳದೆ, ತಾನೇನಾದರೂ ಕೀಳುಹುಟ್ಟಿನ ಮಗನೆಂದು ಹೊರಬಿದ್ದರೆ ಅವಳಿಗೆ ಅವಮಾನವಾಗುವುದೆಂದು

ಹೆದರಿ ಅವಳು ಆ ಮಾತನ್ನಾಡಿದಳೆಂದುಕೊಂಡು ಅದನ್ನು ಲೆಕ್ಕಿಸದೆ ಹೋದನು. ಅಷ್ಟುಹೊತ್ತಿಗೆ ಹೇಳಿಕಳಿಸಿದ್ದ ಲೇಯಿಯಸ್ಸಿನ ಮನೆಯ ಹಿಂದಿನ ಆಳು ಬಂದು ಎಲ್ಲವೂ ಬಯಲಾಯಿತು. ತಂದೆಯನ್ನು ಕೊಂದ ಪಾಪಿ ತಾನೇ ; ತಾಯೊಡನೆ ಸೆರೆದ ಪಾಪಿ ತಾನೇ ; ತನ್ನ ಮಕ್ಕಳಿಗೆ ಅಣ್ಣನಾದವನು ತಾನೇ— ಎಂಬ ಘೋರ ಸತ್ಯವನ್ನು ಕಂಡನು. ಯಾವ ಮಾತನ್ನೂ ಆಡದೆ ಈಡಿಪಸ್ ಮಡದಿಯ ಮನೆಯನ್ನು ನೇರವಾಗಿ ಹೊಕ್ಕನು. ಜೊಕಾಸ್ಟ ಕೊರಲಿಗೆ ನೇಣಹಾಕಿಕೊಂಡು ಸತ್ತುಹೋಗಿದ್ದಳು. ಆ ಕೊನೆಯ ಘೋರವನ್ನೂ ಕಣ್ಣಾರ ಕಂಡು, ಅವಳು ತೊಟ್ಟಿದ್ದ ಚಿನ್ನದ ಸೂಜಿಯೊಂದನ್ನು ಸೆಳೆದು ಎರಡು ಕಣ್ಣನ್ನೂ ಇರಿದುಕೊಂಡನು. ತನ್ನ ಒಲುಮೆಯಊರನ್ನೂ ಮೆಚ್ಚಿನ ಜನರನ್ನೂ ತೊರೆದುಕೊಳ್ಳ ಬಯಸಿ, ಕ್ರೀಯಾನಿಗೆ ಆಳಿಕೆ ಒಪ್ಪಿಸಿ, ಮಕ್ಕಳನ್ನು ಅವನ ಮಡಿಲಿನಲ್ಲಿ ಹಾಕಿ, ತವರಿಲ್ಲದ ತಬ್ಬಲಿಗಳಿಗೆ ಮಾವನೇ ತವರೆಂದು ಹೇಳಿ, ತನ್ನನ್ನು ದೂರದ ಯಾವುದಾದರೂ ಮರಳುಕಾಡಿನಲ್ಲಿ ಬಿಟ್ಟುಬಿಡಬೇಕೆಂದು ಅವನನ್ನು ಕೇಳಿಕೊಂಡನು. ಅದಕ್ಕೆ ತನ್ನ ಮಕ್ಕಳಾಗಲಿ, ಕ್ರೀಯಾನ್ ಆಗಲಿ ಆಗ ಒಪ್ಪಲಿಲ್ಲ. ಈಡಿಪಸ್ಸಿನ ಪಾಪದ ಬಟ್ಟಲು ಇನ್ನೂ ತುಂಬಿರಲಿಲ್ಲ. ಆದರೆ, ಹಾಗೆಯೇ ಕೆಲವು ದಿನಗಳು ಕಳೆದ ಮೇಲೆ, ಗಂಡು ಮಕ್ಕಳು ತಂದೆಯನ್ನು ಆಗ ಅವನು ಬೇಡವೆಂದು ಬೇಡಿಕೊಂಡರೂ ಬಿಡದೆ, ಅವನ ಇರವನ್ನು ಕಂಡು ಮರುಗದೆ, ಹೊಡೆದೋಡಿಸಿದರು.

ಹಾಗೆ ನಾಡುಗೇಡಿಯಾಗಿ ಊರೂರು ಅಲೆಯುತ್ತಿದ್ದ ಮುದಿ ಕುರುಡನಿಗೆ ಕಣ್ಣಾಗಿ ಒಡನಡೆದವಳು ಅಚ್ಚುಮೆಚ್ಚಿನ ಮಗಳಾದ ಆಂಟಿಗೊನಿ ಒಬ್ಬಳೆ. ಹೊಟ್ಟೆಗೆ ಹಿಟ್ಟಿಲ್ಲದೆ, ಮೈಗೆ ಬಟ್ಟೆಯಿಲ್ಲದೆ, ಕಂಗೆಟ್ಟು ಬಿಕಾರಿಯಾಗಿ ಅಲೆದು, ತೊಳಲಿ ನಿಡುಗಾಲ ಪಾಡುಪಟ್ಟ ಮೇಲೆ, ಈಡಿಪಸ್ಸನ್ನು ಕಿತ್ತು ತಿನ್ನುತ್ತಿದ್ದ ಪಾಪ ಶಾಂತವಾಗುತ್ತ ಬಂದಹಾಗೆ ಕಂಡಿತು. ಕೊನೆಗೆ ಅಟಿಕ ನೆಲದಲ್ಲಿ, ಅಥೆನ್ಸಿನ ಬಳಿ, ಕೊಲೋನಸ್ಸಿನೆಡೆ ಒಂದು ತೋಪು ಸಿಕ್ಕಿತು. ಆ ತೋಪು ಫ್ಯೂರೀಸ್ ಅಥವಾ ಯುಮೆನಿಡೀಸ್ ಎಂದು ಪ್ರಸಿದ್ಧರಾದ ಅಡಿನೆಲದ ಉಗ್ರ ಕನ್ನಿಕೆಯರಿಗೆ ಮೀಸಲಾದ್ದು. ಈಡಿಪಸ್ ಅಲ್ಲಿ ನಿಂತು “ಮಗು ! ನಾವೆಲ್ಲಿಗೆ ಬಂದೆವು ? ಇಂದು ನಮಗೆ ತಿರುಪೆಯೆಲ್ಲಿ ?” ಎಂದು ಕೇಳಿದನು. ಅದಕ್ಕೆ

ಮಗಳು ಊರಗೋಪುರಗಳು ಇನ್ನೂ ದೂರವಿರುವುದಾಗಿಯೂ, ಬಳಿಯಲ್ಲೇ ಒಂದು ತೋಪಿರುವುದಾಗಿಯೂ, ತನಗೆ ಸರಿಯಾಗಿ ತಿಳಿಯದಿದ್ದರೂ ಅಥೆನ್ಸಿನ ನೆಲವನ್ನು ಮೆಟ್ಟಿದಂತೆ ತೋರುತ್ತದೆಂದೂ ಹೇಳಿದಳು. ಈಡಿಪಸ್ ತೋಪಿನ ಬಂಡೆಯೊಂದರ ಮೇಲೆ ಕುಳಿತು ಕೊಂಚ ದಣಿವಾರಿಸಿಕೊಂಡು, ದಾರಿಗನೊಬ್ಬನನ್ನು ಆ ಊರು ಯಾವುದೆಂದು ಕೇಳಹೋದನು. ದಾರಿಗನು ಪ್ರಶ್ನೆಗೆ ಉತ್ತರಕೊಡದೆ, ಒಡನೆಯೇ ಆ ಬಂಡೆಯನ್ನು ಬಿಟ್ಟು ಇಳಿಯಬೇಕೆಂದೂ ಅದು ಅಡಿಲೋಕದ ಉಗ್ರಕನ್ನಿಕೆಯರಿಗೆ ಮೀಸಲಾದ್ದೆಂದೂ ಹೇಳಿದನು. ಅದನ್ನು ಕೇಳಿ ಈಡಿಪಸ್ ಮತ್ತೂ ಒಳ್ಳೆಯದೇ ಆಯಿತೆಂದುಕೊಂಡು ಆ ಶರಣಸ್ಥಾನವನ್ನು ಬಿಟ್ಟುಬರುವುದಿಲ್ಲವೆಂದೂ, ಆ ಮಾತೆಯರೇ ತನ್ನನ್ನು ಕರುಣಿಸಿ ಕಾಯಬೇಕೆಂದೂ ಹೇಳಿ ಅಲ್ಲಿಯೇ ಕುಳಿತುಬಿಟ್ಟನು. ಆ ನಾಡಿನ ದೊರೆಯನ್ನು ಕರೆತರಬೇಕೆಂದೂ ಆ ಸ್ವಲ್ಪಸಹಾಯಕ್ಕೆ ಮುಂದೆ ಮಹದುಪಕಾರವಾಗುತ್ತದೆಂದೂ ಈಡಿಪಸ್ ಹೇಳಲು, ದಾರಿಗನು ಊರೊಳಕ್ಕೆ ಹೋಗಿ ಹಿರಿಯರನ್ನಾದರೂ ಕರೆತರುವುದಾಗಿ ಹೇಳಿಹೋದನು. ಹಿರಿಯರು ಬರುತ್ತಲೆ "ಆ ಪಾಪಿಯೆಲ್ಲಿ? ಪಾತಕಿಯೆಲ್ಲಿ? ದೇವತೆಗಳನ್ನು ಕೆಣಕಬಯಸಿದವನೆಲ್ಲಿ?" ಎಂದು ಅಬ್ಬರಿಸಿದರು. ಈಡಿಪಸ್ ಅವರಿಂದ ಅಭಯಪಡೆದು, ಮಗಳ ಕೈಹಿಡಿದು ಬಂಡೆಯಿಳಿದು ಕೊಂಚದೂರ ಸರಿದುಬಂದು ಚಾಚೊಂದರ ಮೇಲೆ ಕುಳಿತು, ಅವರು ಒತ್ತೊತ್ತಿ ಕೇಳಲು ತನ್ನ ಕಥೆಯನ್ನೆಲ್ಲಾ ಹೇಳಿದನು. ಮೊದಮೊದಲು ಅವರು ಅವನ ಪಾಡಿಗೆ ಮರುಗಿದರು. ಆದರೆ, ಅವನ ಹೆಸರು ಈಡಿಪಸ್ ಎಂದು ಕೇಳಿದೊಡನೆಯೇ ಎದೆ ತಲ್ಲಣಿಸಿ, ಹುಚ್ಚು ಕೆರಳಿ, ತಮ್ಮೂರನ್ನು ಬಿಟ್ಟು ತೊಲಗಬೇಕೆಂದು ಅವನನ್ನು ತರುಬತೊಡಗಿದರು. ಆಂಟಿಗೊನಿ ಈಡಿಪಸ್ಸಿನ ಪಾಪಗಳಿಗೆ ಅವನೇ ಕಾರಣನಲ್ಲವೆಂದೂ, ಯಾವುದೋ ದುಷ್ಟದೈವ ಅವನನ್ನು ಎಳೆತಂದು ಪಾಪದಲ್ಲಿ ಕೆಡವಿತೆಂದೂ, ತನ್ನನ್ನಾದರೂ ನೋಡಿ ಕನಿಕರಿಸಬೇಕೆಂದೂ, ತಮ್ಮ ಮನೆಮಕ್ಕಳ ಹೆಸರಿನಲ್ಲಾದರೂ ಮರುಗಬೇಕೆಂದೂ ಸೆರಗೊಡ್ಡಿ ಬೇಡಿದಳು. ಆ ಪಾಡನ್ನು ನೋಡಿ ಮರುಗಿದರೂ ದೈವಕಟ್ಟಳೆಯನ್ನು ಮೀರಲಾಗುವುದಿಲ್ಲವೆಂದು ಹಿರಿಯರು ಹಟಹಿಡಿದರು. ಮತ್ತೆ ಈಡಿಪಸ್ ತಾನು ಕಯ್ಯಾರ ಪಾಪಮಾಡಿದ್ದಕ್ಕಿಂತ ಹೆಚ್ಚಾಗಿ ತಾನೇ

ಪಾಪದ ಕೈಗೆ ಸಿಕ್ಕಿ ತೊಳಲುತ್ತಿರುವುದಾಗಿಯೂ, ಅಥೆನ್ಸಿನ ಕೀರ್ತಿಯ ಮೇಲೆಯೂ ತಾವು ಕೊಟ್ಟ ಅಭಯಪ್ರದಾನದ ಮೇಲೆಯೂ ಕಣ್ಣಿಟ್ಟು ತನಗೆ ಮರೆಗೊಡಬೇಕೆಂದೂ, ಕೊನೆಗೆ ದೊರೆಯಲ್ಲಿ ತನ್ನ ವೃತ್ತಾಂತವನ್ನಾದರೂ ತಿಳಿಸಿ ಅವನು ಹೇಳಿದಂತೆ ನಡೆಯಬಹುದೆಂದೂ ಮೊರೆಯಿಟ್ಟನು. ಹಿರಿಯರು ಎಲ್ಲವನ್ನೂ ದೊರೆಗೆ ಬಿಡುವುದಾಗಿ ಒಪ್ಪಿದರು. ತಾವು ದೊರೆಗೆ ಅರಿಕೆಮಾಡುವುದಾಗಿಯೂ, ಅಷ್ಟರೊಳಗೆ ಈಡಿಪಸ್ ತಿಳಿಯದೇ ಉಗ್ರ ಕನ್ನಿಕೆಯರ ಕೋಪವನ್ನು ಮೆಟ್ಟಿದ್ದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದೂ, ದೇವತೆಗಳಿಗೆ ಹರಕೆಹೊತ್ತು ಕೋಪಿನಾಚೆಯ ಹೊನಲಿನಿಂದ ನೀರುತಂದು ತಣಿಯೆರೆಯಬೇಕೆಂದೂ ಹೇಳಿದರು.

ಅತ್ತ ಥೀಬ್ಸಿನಲ್ಲಿ ಪಾಲಿನೀಸೀಸ್ ಮತ್ತು ಇಟೀಯೊಕ್ಲೀಸ್ ಇಬ್ಬರೂ ತಂದೆಯ ಗದ್ದುಗೆಗೆ ಹಕ್ಕುಹೂಡಿ ಹೋರಾಟಕ್ಕೆ ಮೊದಲುಮಾಡಿದರು. ಕೊನೆಗೆ ಇಬ್ಬರೂ ಸರದಿಯ ಮೇರೆ ಆಳುವುದಾಗಿ ಒಪ್ಪಂದಮಾಡಿಕೊಂಡರು. ಮೊದಲನೆಯ ಸರದಿ ಕಿರಿಯನಾದ ಇಟೀಯೊಕ್ಲೀಸಿಗೆ ಬಂತು. ಪಾಲಿನೀಸೀಸ್ ಅರ್ಗಾಸಿಗೆ ಹೋಗಿ ಅಲ್ಲಿಯ ದೊರೆಯ ಮಗಳ ಕೈಹಿಡಿದನು. ವರ್ಷ ಕಳೆಯುತ್ತಲೇ ರಾಜ್ಯವನ್ನು ತನ್ನ ಸರದಿಗೆ ಬಿಟ್ಟುಕೊಡಬೇಕೆಂದು ಅಣ್ಣ ಕೇಳಿದ್ದಕ್ಕೆ ತಮ್ಮ ಒಪ್ಪಲಿಲ್ಲ. ಯುದ್ಧಕ್ಕೆ ಮೊದಲಾಯಿತು. ಈಡಿಪಸ್ಸಿನ ಮೂಳೆಯನ್ನು ಹುದುಗಿಕೊಂಡ ನಾಡು ನೆಮ್ಮದಿ ಕಂಡು ಏಳಿಗೆ ಹೊಂದುತ್ತದೆಂದೂ ಅವನು ಒಲಿದ ಕಡೆ ಗೆಲವೆಂದೂ ದೇವವಾಣಿ ನುಡಿದಿತ್ತು. ಆದ್ದರಿಂದ, ಈಡಿಪಸ್ಸನ್ನು ತೆಗೆದುಕೊಂಡುಹೋಗಿ ಥೀಬ್ಸಿನ ಬಳಿ, ಆದರೆ ಊರ ಹದ್ದಿನಾಚೆ, ಇಟ್ಟು ಅವನ ಕಳಂಕ ನಾಡಿಗೆ ಅಂಟದೆ ಅವನ ಸಮಾಧಿಯಿಂದ ಬರುವ ಶುಭವನ್ನು ಮಾತ್ರ ಉಳಿಸಿಕೊಳ್ಳಬೇಕೆಂದು ಎಣಿಸಿ ಕ್ರೇಯಾನ್ ಈಡಿಪಸ್ಸನ್ನು ಮತ್ತೆ ಕರೆತರುವುದಕ್ಕೆ ಹೊರಟನು. ಆ ಸುದ್ದಿಯನ್ನೆಲ್ಲ ತಂದೆಗೆ ಮುಂದು ತಿಳಿಸಲು ಇಸ್ಮೀನಿ ಥೀಬ್ಸಿನಿಂದ ಹೊರಟು ಕುದುರೆ ಹತ್ತಿ ಕೊಲೋನಸ್ಸಿಗೆ ಬಂದಳು. ಮಕ್ಕಳ ಪಾಡು ಕೇಳಿ ತಂದೆ ಮರುಗಿದರೂ ಸ್ವಾರ್ಥ ಕಂಡು ಕಲ್ಲೆದೆಯಾದನು. ತನ್ನ ಪಾಪಜೀವನದ ಮುಸುಕು ಕಳಚಿ ಘೋರ ದರ್ಶನವಾದೊಡನೆಯೇ ದಿಗ್ಭ್ರಾಂತನಾಗಿ ತನ್ನನ್ನು ತಾನೇ ಶಪಿಸಿಕೊಂಡು, ಬಹಿಷ್ಕಾರ ಹಾಕಿಕೊಂಡು, ತನ್ನನ್ನು

ಬಿಟ್ಟುಕೊಟ್ಟು ದೇಶಾಂತರಕ್ಕೆ ಕಳಿಸಬೇಕೆಂದು ಎಷ್ಟು ಬೇಡಿದರೂ ತನ್ನ ಕೋರಿಕೆಯನ್ನು ಸಲ್ಲಿಸದೆ, ಕಾಲ ಮೆಲ್ಲನೆ ಕಳೆದು ಮೊದಲಿಸೊಂದು ಉಗ್ರ ಕೊಂಚಕೊಂಚವಾಗಿ ಇಳಿದು ಶಾಂತವಾಗುತ್ತ ಬಂದು, ಕೊನೆಗೆ ಥೀಬ್ಸಿನಲ್ಲೇ ತನ್ನ ಕೊನೆಗಾಲವನ್ನು ಕಳೆಯಬೇಕೆಂದು ತಾನು ಬಯಸಿದ್ದಾಗ ತನ್ನನ್ನು ನಿಷ್ಕರುಣೆಯಿಂದ ಹೊರದೂಡಿದ್ದನ್ನೂ, ಆಗ ತನ್ನ ಗಂಡುಮಕ್ಕಳಲ್ಲಿ ಒಬ್ಬನಾದರೂ ತನಗಾಗಿ ಅವನ ಕಿರುಬೆರಳನ್ನಾದರೂ ಎತ್ತದಿದ್ದದ್ದನ್ನೂ ನೆನೆನೆನೆದು ಕೆರಳುರುಬಿ ಮಕ್ಕಳಿಬ್ಬರನ್ನೂ ಶಪಿಸಿದನು.

ಹಿರಿಯರು ಹೇಳಿದಂತೆ ತಣಿಯೆರೆಯುವುದಕ್ಕಾಗಿ ನೀರು ತರಲು ಇಸ್ಮೀನಿ ಬಳಿಯ ಹೊಳೆಗೆ ಹೋದಳು. ಅಥೆನ್ಸಿನ ದೊರೆ ಥೆಸ್ಯೂಸ್ ಅಷ್ಟುಹೊತ್ತಿಗೆ ಅಲ್ಲಿಗೆ ಬಂದನು. ಈಡಿಪಸ್ಸಿನ ವಿಚಾರವೆಲ್ಲ ಮೊದಲೆ ತಿಳಿದುದಾಗಿಯೂ, ತಾನೂ ಎಳವೆಯಲ್ಲಿ ಹೆರನಾಡಿನಲ್ಲಿ ಬೆಳೆದು ಪಾಡುಪಟ್ಟದ್ದಾಗಿಯೂ ಹೇಳಿ, ಪರದೇಶೀಯರು ಯಾರೇ ಆಗಲಿ ತನ್ನಲ್ಲಿ ವ್ಯರ್ಥಯಾಚನೆ ಮಾಡಲಾರರೆಂದು ಅಭಯವಿತ್ತನು. ಈಡಿಪಸ್ ತನ್ನ ಕಥೆ ಮೊದಲೆ ತಿಳಿದಿರುವುದರಿಂದ ಅದನ್ನು ನೀಳಿಸದೆ, ಸಡಿಲಿ ಕುಸಿದ ತನ್ನ ಮುದಿಯೊಡಲನ್ನು ನಾಡಿನ ಒಳ್ಳಿಗಾಗಿ ದೊರೆಯಲ್ಲಿ ಒಪ್ಪಿಸಲು ಬಂದಿರುವುದಾಗಿಯೂ ಆ ಒಳ್ಳು ಯಾವುದೆಂದು ಮುಂದೆ ತನ್ನ ಸಮಾಧಿಕಾಲದಲ್ಲಿ ತಿಳಿಯುವುದಾಗಿಯೂ ಹೇಳಿ, ತನಗೆ ಕೊನೆಗಾಲದಲ್ಲಿ ಉಳಿಮೆಡೆಯನ್ನೂ ಹೂಳೆಡೆಯನ್ನೂ ಅಟಿಕದಲ್ಲಿ ಕರುಣಿಸಬೇಕೆಂದು ಕೇಳಿಕೊಂಡನು. ದೊರೆ ಅವನ ಕೋರಿಕೆಯನ್ನು ಸಲಿಸಿ ಆಪತ್ಕಾಲದಲ್ಲಿ ನೆನೆದಾಗ ಮತ್ತೆ ಬರುವುದಾಗಿ ಹೇಳಿ ಹೊರಟುಹೋದನು. ದೊರೆ ಮರಳಿದೊಡನೆ, ಕ್ರೇಯಾನ್ ಬಳಿಯರೊಡನೆ ಬಂದು ಈಡಿಪಸ್ಸಿನ ಪಾಡಿಗೆ ಮರುಗಿದವನಂತೆ ತೋರಿ, ಕೊನೆಗಾಲದಲ್ಲಿ ತಾಯಿನಾಡಿಗೆ ಬಂದಿರಬೇಕೆಂದು ಕೇಳಿದನು. ಇಟೀಯೊಕ್ಲೀಸ್ ದೇವವಾಣಿ ನುಡಿದದ್ದನ್ನು ಕೇಳಿ, ಈಡಿಪಸ್ಸನ್ನು ಹೇಗಾದರೂ ಮಾಡಿ, ಕೊನೆಗೆ ಬಲಾತ್ಕಾರದಿಂದಲಾದರೂ ಹಾರಿಸಿಕೊಂಡು, ಕರೆತರಬೇಕೆಂದು ಕ್ರೇಯಾನನ್ನು ಕಳಿಸಿದ್ದನು. ಅವನ ಬೂಟಾಟಿಕೆಗೆ ಕೊಂಚವೂ ಮರುಳಾಗದೆ ಈಡಿಪಸ್ ತಾನು ಬರುವುದಿಲ್ಲವೆಂದು ಹೇಳಿಬಿಟ್ಟನು. ಅಲ್ಲದೆ, ಹೆರನಾಡಿನಲ್ಲಾದರೂ ತಾನು ಕೊಂಚ ನೆಮ್ಮದಿಯಿಂದಿರುವುದನ್ನು ಕಂಡು ಸಹಿಸದೆ ಕರುಬಿ ಸಲ್ಲುಡಿಗಳಲ್ಲಿ ಹೊಲ್ಲೆಣಿಕೆಯನ್ನು

ಮರಸಿ, ತನ್ನನ್ನು ಉಬ್ಬಿಸಿ ಕರೆದುಯ್ಯಲು ಬಂದ ಗುಳ್ಳೆಸರಿ ಎಂದು ಕ್ರೀಯಾನನ್ನು ಚುಚ್ಚಿ ನುಡಿದನು. ಅದಕ್ಕೆ ಉತ್ತರವಾಗಿ ಕ್ರೀಯಾನ್ ಆಗಲೆ ಇಸ್ಮೀನಿ ಸೆರೆಸಿಕ್ಕಿದ ಸುದ್ದಿಯನ್ನು ತಿಳಿಸಿ, ಆಂಟಿಗೊನಿಯನ್ನು ಎತ್ತಿಕೊಂಡು ಹೋಗುವಂತೆ ಆಳುಗಳಿಗೆ ಅಪ್ಪಣೆಮಾಡಿದನು. "ನಿನ್ನ ಊರುಗೋಲುಗಳು ಉರುಳಿದುವು; ನಿನ್ನ ಗೆಲವಿಗೆ ನೀನು ನಲಿ" ಎಂದು ಎದೆಯಿರಿದು ಏಳಿಸಿ ಈಡಿಪಸ್ಸಿನ ಮೇಲೆ ಕೈಯಿಡಹೋದನು. ಈಡಿಪಸ್ಸಿಗೆ ರೇಗಿತು. "ಕೊನೆಗಾಲದಲ್ಲಿ ನನ್ನ ಮಕ್ಕಳನ್ನು ಕಿತ್ತುಕೊಂಡ ನಿನಗೂ ನಿನ್ನ ಕೊನೆಗಾಲದಲ್ಲಿ ಹೀಗೆಯೇ ಆಗಲಿ" ಎಂದು ಶಪಿಸಿದನು. ಹಿರಿಯರಿಗೂ ಕ್ರೀಯಾನಿಗೂ ಹೋರಾಟವಾಗುತ್ತಿರುವಾಗ ಥೆಸ್ಯೂಸ್ ಅಲ್ಲಿಗೆ ಬಂದು, ನಡೆದದ್ದನ್ನೆಲ್ಲ ಕೇಳಿ ತಿಳಿದು ಸೆರೆಬಿಡಿಸಿಕೊಂಡು ಬರುವಂತೆ ಆಳುಗಳನ್ನು ಕಳಿಸಿಕೊಟ್ಟು, ಕ್ರೀಯಾನನ್ನು ಕುರಿತು "ಪರರಾಜ್ಯಕ್ಕೆ ಬಂದು, ಅಲ್ಲಿಯ ದೊರೆಯ ಅಧಿಕಾರವನ್ನು ಲಕ್ಷಿಸದೆ, ಕೊಳ್ಳೆಗಾರನಂತೆ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಹೋಗುವುದು ಗೌರವವಲ್ಲ" ಎಂದು ಏಳಿಸಿದನು. ಹೆಣ್ಣುಮಕ್ಕಳನ್ನು ಒಡನೆಯೆ ತಂದೊಪ್ಪಿಸದಿದ್ದರೆ ಕ್ರೀಯಾನೇ ಸೆರೆಯಾಗುವುದನ್ನೂ ತಿಳಿಸಿದನು. ಕ್ರೀಯಾನ್ ಈಡಿಪಸ್ಸಿನ ಪಾಪಗಳನ್ನೆಲ್ಲ ವಿವರಿಸಿ ತಾನು ಮಾಡಿದ್ದು ಸರಿಯೆಂದು ಸಾಧಿಸಿ, ದೊರೆ ತನ್ನನ್ನು ಏಳಿಸಿದ್ದಕ್ಕೆ ಥೀಬ್ಸಿಗೆ ಮರಳಿದೊಡನೆಯೆ ತಾನೂ ಸೇಡುತೀರಿಸಿಕೊಳ್ಳುವುದಾಗಿ ಹೆದರಿಸಿದನು. ಥೆಸ್ಯೂಸ್ ಹೆದರದೆ, ತನ್ನ ಪ್ರಾಣಹೋದರೂ ಮಕ್ಕಳನ್ನು ತಂದೊಪ್ಪಿಸುವುದಾಗಿ ಈಡಿಪಸ್ಸಿಗೆ ಮಾತುಕೊಟ್ಟು ಹೋಗಿ, ಮರುಗಳಿಗೆಯೇ ಇಸ್ಮೀನಿಯನ್ನೂ ಆಂಟಿಗೊನಿಯನ್ನೂ ಬಿಡಿಸಿಕೊಂಡು ಬಂದನು. ಮುದಿಕುರುಡನು ಮಕ್ಕಳನ್ನು ತಬ್ಬಿಕೊಂಡು ಆ ಗಳಿಗೆಯೆ ಸಾವು ಬಂದರೆ ಆ ಸಾವೂ ಇನಿದು ಎಂದುಕೊಂಡನು. ಮಕ್ಕಳು ತಮ್ಮನ್ನು ಬಿಡಿಸಿಕೊಂಡು ಬಂದ ದಿವ್ಯಪುರುಷನನ್ನು ನೋಡುವುದಕ್ಕಾದರೂ ತಂದೆ ಕಣ್ಣು ಪಡೆಯಬಾರದೆ ಎಂದುಕೊಂಡರು.

ತಾನು ಹಿಂದಿರುಗುತ್ತಿದ್ದಾಗ, ಅರ್ಗಾಸಿನಿಂದ ಯಾರೋ ಬಂದು ಬಳಿಯ ಪಾಸಿಡಾನ್ ದೇವಸ್ಥಾನದಲ್ಲಿ ಶರಣಾಗತನಾಗಿ ಸೇರಿಕೊಂಡಿರುವುದಾಗಿಯೂ, ಅವನು ಈಡಿಪಸ್ಸನ್ನು ನೋಡಬಯಸುವುದಾಗಿಯೂ ತಿಳಿದುಬಂದ ಸಮಾಚಾರವನ್ನು ದೊರೆ ಈಡಿಪಸ್ಸಿಗೆ ಹೇಳಿದನು. ಈಡಿಪಸ್ ಅವನು ಯಾರಿರ

ಬಹುದೆಂದು ಸುಲಭವಾಗಿ ಊಹಿಸಿ, ಅವನನ್ನು ನೋಡಲೊಲ್ಲೆನೆಂದು ಹೇಳಿದನು. ಥೆಸ್ಯೂಸ್ ಬಹುವಾಗಿ ಹೇಳಿದ ಮೇಲೆ ಒಪ್ಪಿದನು. ಪಾಲಿನೀಸೀಸ್ ಬಂದು ತನ್ನ ಪಾಡನ್ನು ಹೇಳಿಕೊಂಡು ಎಷ್ಟು ಬಗೆಯಾಗಿ ಮೊರೆಯಿಟ್ಟರೂ ತಂದೆ ಕರಗಲಿಲ್ಲ. ಅರ್ಗಾಸರ ಪಡೆಯನ್ನೆಲ್ಲ ಕೂಡಿಸಿಕೊಂಡುಬಂದಿರುವುದಾಗಿಯೂ ತಂದೆಯ ಹರಕೆಯನ್ನು ಕೋರಿಬಂದಿರುವುದಾಗಿಯೂ ಹೇಳಲು, ಮಗನ ಆಗಿನ ಸ್ವಾರ್ಥವನ್ನೂ ಹಿಂದಿನ ಕೃತಘ್ನತೆಯನ್ನೂ ಕಂಡು ತಂದೆಯ ಹೊಟ್ಟೆ ಉರಿದುಹೋಯಿತು. ಚಿಂದಿಯುಟ್ಟು, ತಿರಿದುಂಡು, ನೆಲೆಯಿಲ್ಲದೆ ಅಲೆಯುತ್ತಿದ್ದ ಮುದಿಕುರುಡನಲ್ಲಿ ಎಳ್ಳಷ್ಟಾದರೂ ಮರುಕತೋರದೆ, ಕೇವಲ ಸ್ವಾರ್ಥಕ್ಕಾಗಿ ಬಂದ ಮಗನಿಗೆ ಹೇಸಿ ಅಣ್ಣತಮ್ಮಂದಿರಿಬ್ಬರೂ ಒಬ್ಬರ ಕೈಯಿಂದೊಬ್ಬರು ಕೊಲೆ ಬೀಳುವಂತೆ ಶಪಿಸಿದನು. ಆಂಟಿಗೊನಿ ಎಷ್ಟು ಕೇಳಿಕೊಂಡರೂ ತನ್ನ ಅಳಿವು ಖಂಡಿತವಾಗಿದ್ದರೂ ಕೈಕೊಂಡ ಯುದ್ಧವನ್ನು ಬಿಡುವುದಿಲ್ಲವೆಂದು ಹೇಳಿ ಪಾಲಿನೀಸೀಸ್ ಹಿಂದಿರುಗಿದನು. ಹಿಂದಿರುಗುವಾಗ ತಂಗಿಯರನ್ನು ನೋಡಿ, ತಂದೆ ನುಡಿದ ಶಾಪವೇನಾದರೂ ನೆರವೇರಿದ್ದೇ ಆದರೆ ಕೊಲೆ ಬಿದ್ದ ತನ್ನನ್ನು ತೊರೆಯದೆ ಉತ್ತರಕ್ರಿಯೆ ನಡಸಬೇಕೆಂದು ಕೇಳಿಕೊಂಡು ಹೋದನು.

ಒಂದಾನೊಂದು ದಿನ ಇದ್ದಕ್ಕಿದ್ದ ಹಾಗೆ ಗುಡುಗೂ ಸಿಡಿಲೂ ಮಿಂಚೂ ಆದ್ದನ್ನು ಕಂಡು ಈಡಿಪಸ್ ತನ್ನ ಅಳಿಗಾಲ ಹತ್ತಿರವಾದ್ದನ್ನು ತಿಳಿದು ಥೆಸ್ಯೂಸಿಗೆ ಕರೆಕಳುಹುವಂತೆ ಆಂಟಿಗೊನಿಗೆ ಹೇಳಿದನು. ದೊರೆ ಬಂದೊಡನೆ ಈಡಿಪಸ್ ಅವನನ್ನು ಕುರಿತು "ಎಂದೆಂದೂ ಸವೆಯದ ನಿಧಿಯೊಂದನ್ನು ನಿನಗೆ ತೋರಿಸುತ್ತೇನೆ. ಅದು ಅಥೆನ್ಸಿಗೆ ಆಪತ್ಕಾಲದ ಅಕ್ಷಯ ನಿಧಿ. ಅದರ ವಿಚಾರ ಯಾರೊಬ್ಬರಿಗೂ ಹೇಳಬೇಡ. ನನ್ನ ಮಕ್ಕಳಿಗೆ ಕೂಡ ನಾನು ತಿಳಿಸಿಲ್ಲ. ಸಾಯುವಾಗ ನಿನ್ನ ಪಟ್ಟದ ಮಗನೊಬ್ಬನಿಗೆ ಮಾತ್ರ ತಿಳಿಸು. ಅವನೂ ಅದೇ ಪ್ರಕಾರ ಮಾಡಲಿ" ಎಂದು ಹೇಳಿ, ಹೆಣ್ಣುಮಕ್ಕಳೊಡನೆಯೂ ದೊರೆಯೊಡನೆಯೂ ತಾನೇ ದಾರಿ ಕಂಡುಕೊಂಡು ಮುನ್ನಡೆದನು. ಕೊಂಚ ದೂರ ನಡೆದು, ಕಣಿವೆಯೊಂದರ ನಡುವೆ ನಿಂತು, ಬಳಿಯ ತೊರೆಯಿಂದ ನೀರು ತರಲು ಮಕ್ಕಳಿಗೆ ಹೇಳಿದನು. ಅವರು ಅದೇ ಪ್ರಕಾರ ಹೋಗಿ ನೀರು

ತಂದು ತಂದೆಯ ಮೈತೊಳೆದರು. ಒಡನೆಯೆ ಇದ್ದಕ್ಕಿದ್ದ ಹಾಗೆ ಗುಡುಗ ಲಾರಂಭಿಸಿತು. ಮಕ್ಕಳು ಹೆದರಿ ತಂದೆಯ ಕಾಲುಕಟ್ಟಿಕೊಂಡು ಅತ್ತರು. ತಂದೆ ಸಮಾಧಾನಮಾಡುತ್ತಿರಲು, ಒಮ್ಮೆಯೇ 'ಈಡಿಪಸ್ ತಡವೇಕೆ' ಎಂಬ ವಿಕಾರಧ್ವನಿಯೊಂದು ಹಲವು ಸಲ ಕಿವಿಯಿರಿದು ಕೇಳಿಬಂತು. ಒಡನೆಯೆ ಈಡಿಪಸ್ ಇಬ್ಬರು ತಬ್ಬಲಿ ಮಕ್ಕಳನ್ನೂ ಥೆಸ್ಯೂಸಿನ ಮಡಿಲಲ್ಲಿ ಹಾಕಿದನು. ಥೆಸ್ಯೂಸ್ ಒತ್ತಿ ಬರುತ್ತಿದ್ದ ಕಣ್ಣೀರನ್ನು ತಡೆದುಕೊಂಡು ಕೈಮೇಲೆ ಕೈಯಿಟ್ಟು ಅವರನ್ನು ಕಾಪಾಡುವುದಾಗಿ ಮಾತುಕೊಟ್ಟನು. ಮರುಮಾ ತಾಡದೆ ಹಿಂದಿರುಗಬೇಕೆಂದು ಮಕ್ಕಳಿಗೆ ಆಜ್ಞೆಮಾಡಿ ಈಡಿಪಸ್ ದೊರೆ ಯೊಬ್ಬನನ್ನೇ ಕರೆದುಕೊಂಡು ಮುಂದೆಹೋದನು. ಮುಂದೇನಾಯಿತೆಂಬುದು ಯಾರಿಗೂ ತಿಳಿಯದು. ಥೆಸ್ಯೂಸಿಗೆ ಮಾತ್ರ ಗೊತ್ತು. ಸಿಡಿಲೆರಗಲಿಲ್ಲ; ಬಿರುಗಾಳಿ ಏಳಲಿಲ್ಲ; ರೋಗ ರೋದನ ನೋವು—ಒಂದೂ ಇಲ್ಲ; ಈಡಿಪಸ್ ಕಣ್ಮರೆಯಾದನು. ಬಾನಿಂದ ದೂತ ಬಂದು ಕರೆದುಯ್ದಿರಬೇಕು, ಇಲ್ಲವೆ ನೆಲ ಮೆಲ್ಲನೆ ಬಾಯಿ ತೆಗೆದು ಒಳಕೊಂಡಿರಬೇಕು. ಥೆಸ್ಯೂಸ್ ಹಿಂದಿರುಗಿದ ಮೇಲೆ ತಂದೆಯ ಸಮಾಧಿಯನ್ನು ತಮಗೆ ತೋರಬೇಕೆಂದು ಆಂಟಿಗೊನಿ ಬಹುವಾಗಿ ಬೇಡಿದಳು. ಅವನ ಸಮಾಧಿಯನ್ನು ಯಾವ ಮನುಷ್ಯ ಕಣ್ಣಿಗೂ ಬೀಳದಂತಿಟ್ಟಿರಬೇಕೆಂದು ತನಗೆ ಕಟ್ಟಾಜ್ಞೆಯಾಗಿರುವುದಾಗಿಯೂ, ಅದರಂತೆ ತಾನು ಸ್ಯೂಸ್ ದೇವನಿದಿರಿನಲ್ಲಿ ಆಣೆಯಿಟ್ಟಿರುವುದಾಗಿಯೂ ದೊರೆ ತಿಳಿಸಲು ಯತ್ನವಿಲ್ಲದೆ ಮಕ್ಕಳು ಸುಮ್ಮನಾದರು. ತಮ್ಮನ್ನು ಥೀಬ್ಸಿಗೆ ಕಳಿಸಿಕೊಡಬೇಕಾಗಿಯೂ, ಅಲ್ಲಿಗೆ ಅವರು ಹೋಗಿ ಸಾಧ್ಯವಿದ್ದರೆ ಆಗಲಿರುವ ಸೋದರಕಲಹವನ್ನು ತಪ್ಪಿಸುವ ಪ್ರಯತ್ನಮಾಡುವುದಾಗಿಯೂ ಹೇಳಲು ದೊರೆ ಅವರ ಕೋರಿಕೆಯನ್ನು ಸಂತೋಷದಿಂದ ನಡಸಿಕೊಟ್ಟನು.

ಅತ್ತ, ಪಾಲಿನೀಸೀಸ್ ತನ್ನ ಮಾವನಾದ ಅರ್ಗಾಸಿನ ದೊರೆ ಅಡ್ರಾಸ್ಟಸ್ಸಿನ ಸಹಾಯದಿಂದ ಒಂದು ದೊಡ್ಡ ಸೈನ್ಯಗೂಡಿಸಿದನು. ಅರ್ಗಾಸಿನ ತಲೆಯಾಳುಗಳೆಲ್ಲ ಅವನೊಡನೆ ಥೀಬ್ಸಿನ ಮೇಲೆ ದಂಡೆತ್ತಿ ನಡೆಯಲು ಒಪ್ಪಿದರು. ಆದರೆ, ಅವರಲ್ಲೆಲ್ಲ ತಲೆಮೆಯಾಗಿದ್ದ ಆಂಫಿಯರೇವಸ್ ಮಾತ್ರ ಒಪ್ಪಲಿಲ್ಲ. ಪಾಲಿನೀಸೀಸ್ ಥೀಬ್ಸಿನ ಮೇಲೆ ದಂಡೆತ್ತಿಹೋಗುವುದು ಅಧರ್ಮವೂ

ದೈವಸಂಕಲ್ಪಕ್ಕೆ ವಿರುದ್ಧವೂ ಆದ್ದೆಂದೂ, ಅವನೊಡನೆ ನಡೆದವರೆಲ್ಲ ಸತ್ತು ಹಾಳಾಗುವರೆಂದೂ ತನಗೆ ಲಬ್ಧವಾಗಿದ್ದ ದಿವ್ಯದೃಷ್ಟಿಯಿಂದ ಕಂಡು ಹೇಳಿದನು. ಅವನನ್ನು ಬಲೆಗೆ ಕೆಡವುವುದಕ್ಕೆ ಪಾಲಿನೀಸೀಸ್ ಒಂದು ಹೂಟ ಹೂಡಿದನು. ಆಂಫಿಯರೇವಸ್ಸನ್ನು ತನ್ನ ಸೆರವಿಗೆ ಕಳಿಸುವ ಏರ್ಪಾಟು ಮಾಡಿದ್ದೇ ಆದರೆ ಒಂದು ದಿವ್ಯ ಹಾರವನ್ನು ಕೊಡುವುದಾಗಿ ಆಂಫಿಯರೇವಸ್ಸಿನ ಹೆಂಡತಿ ಎರಿಫೈಲಿಗೆ ಆಸೆ ತೋರಿದನು. ಆ ಹಾರ ಕಾಡ್ಮಸ್ ತನ್ನ ಮಡದಿ ಹಾರ್ಮೋನಿಯಳಿಗೆ ಮದುವೆಯಲ್ಲಿ ಮೆಚ್ಚಿತ್ತದ್ದು. ಒಡೆವೆಯಾಸೆಗೆ ಮನ ಸೋತು ಕೃತಘ್ನಳಾದ ಎರಿಫೈಲಿ ಲಂಚಕ್ಕೆ ಕೈಯೊಡ್ಡಿದಳು; ತನ್ನ ಗಂಡನು ಅವಿತುಕೊಂಡಿದ್ದೆಡೆಯನ್ನು ಪಾಲಿನೀಸೀಸಿಗೆ ತೋರಿಕೊಟ್ಟಳು. ಸಿಕ್ಕಿದ ಮೇಲೆ ಬೇರೆ ದಾರಿಯಿಲ್ಲದೆ ಆಂಫಿಯರೇವಸ್ ಹೊರಡುವುದಕ್ಕೆ ಒಪ್ಪಬೇಕಾಗಿ ಬಂತು. ಆದರೂ, ಹೊರಡುವಾಗ ತನ್ನ ಮಗನನ್ನು ಕರೆದು, ತಾನು ಸಾಯುವುದು ನಿಶ್ಚಯವೆಂದೂ ತನ್ನ ಸಾವಿಗಾಗಿ ಎರಿಫೈಲಿಯನ್ನು ಕೊಲ್ಲುವುದು ಮಾತ್ರವಲ್ಲದೆ ಮತ್ತೊಮ್ಮೆ ಥೀಬ್ಸಿನ ಮೇಲೆ ದಂಡೆತ್ತಿಹೋಗಿ ಸೇಡು ತೀರಿಸಬೇಕೆಂದೂ ಆಣೆಯಿಟ್ಟನು.

ಥೀಬ್ಸಿಗೆ ಏಳು ಹೆಬ್ಬಾಗಿಲುಗಳಿದ್ದುವು. ಆರ್ಗಾಸರ ಪಡೆ ಏಳು ದಳಗಳಾಗಿ ಒಡೆದು ಒಂದೊಂದು ದಳವೂ ಒಬ್ಬೊಬ್ಬ ಹೆಸರಾದ ದಳವಾಯಿಯ ಕೈನಡಕೆಯಲ್ಲಿ ಒಂದೊಂದು ಹೆಬ್ಬಾಗಿಲ ಕಡೆ ದಾಳಿಯಿಟ್ಟು ನಡೆಯಿತು. ಅಡ್ರಾಸ್ಟಸ್, ಆಂಫಿಯರೇವಸ್, ಕಾಪನ್ಯೂಸ್, ಹಿಪಾಮಿಡಾನ್, ಪಾರ್ಥಿನೊಪೀಯಸ್, ಟೈಡ್ಯೂಸ್, ಪಾಲಿನೀಸೀಸ್—ಅವರೇ ಆ ಏಳು ಮಂದಿ ವೀರರು. ಥೀಬ್ಸಿನ ವೀರರೂ ಅವರನ್ನು ಎದುರಿಸಿ ಕಾಳಗಕೊಟ್ಟರು. ಆದರೆ, ಸೋತು ಹಿಮ್ಮೆಟ್ಟಿ ಕೋಟೆಯೊಳಗೆ ಸೇರಿಕೊಂಡರು. ಕ್ರೀಯಾನಿನ ಮಗ ಮೆಗರ್ಯೂಸ್ (ಮಿನೀಸ್ಯೂಸ್ ಎಂದೂ ಕರೆಯುವುದುಂಟು) ಯುದ್ಧದೇವತೆಯಾದ ಏರೀಸಿಗೆ ಬಲಿಯಾಗುವುದಾದರೆ ಥೀಬ್ಸಿಗೆ ಗೆಲವುಂಟೆಂದು ಕಣಿಯ ಟೈರೀಸಿಯಸ್ ಹೇಳಿದನು. ಆದನ್ನು ಕೇಳಿ ಮೆಗರ್ಯೂಸ್ ಊರಿನ ಹೆಬ್ಬಾಗಿಲ ಮುಂದೆ ತನ್ನನ್ನು ತಾನೇ ಬಲಿಕೊಟ್ಟುಕೊಂಡು ತನ್ನ ತವರೂರಿಗೆ ದೇವತೆಗಳ ಒಲವನ್ನು ಪಡೆದನು. ಅರ್ಗಾಸರ ಏಳು ಮಂದಿ ದಳವಾಯಿಗಳೂ ಬಲು ಬಲ್ಮೆಯಿಂದ

ಕಾದಿದರೂ ಅವರಿಗೆ ದೇವತೆಗಳು ನೆರವಾಗಲಿಲ್ಲ. ಪಾರ್ಥಿನೊಪೀಯಸ್ ಕೊಲೆಯಾದನು. ಸ್ಯೂಸಿನ ಸಿಡಿಲು (ವಜ್ರಾಯುಧ?) ಕೂಡ ತನ್ನನ್ನು ತಡೆಯುಲಾರದೆಂದು ಕೊಬ್ಬಿ ಕೆಲೆದು ಕೋಟೆಯನ್ನು ಅಡರಹೋಗಿ ಕಾಪನ್ಯೂಸ್ ಸಿಡಿಲೆರಗಿ ಸತ್ತನು. ಅದನ್ನು ಕಂಡು ಅರ್ಗಾಸರು ಭಯಪಟ್ಟು ಹಿಮ್ಮೆಟ್ಟ ತೊಡಗಿದರು. ಆಗ ಇಟೀಯೊಕ್ಲೀಸ್ ಮುಂದೆ ಬಂದು ಪಡೆಗಳ ಹೋರಾಟವನ್ನು ನಿಲ್ಲಿಸಿ, ಕಾಳಗವನ್ನು ತಾನೂ ತನ್ನ ಅಣ್ಣನೂ ದ್ವಂದ್ವಯುದ್ಧದ ಮೂಲಕ ತೀರ್ಮಾನಿಸಬಹುದೆಂದು ಸೂಚಿಸಿದನು. ಪಾಲಿನೀಸೀಸೂ ಅದಕ್ಕೆ ಒಪ್ಪಿ, ದ್ವಂದ್ವಯುದ್ಧ ನಡೆದು ಇಬ್ಬರೂ ಒಬ್ಬರಕೈಯಿಂದ ಒಬ್ಬರು ಬಿದ್ದು, ತಂದೆ ಸುಡಿದ ಶಾಪ ನೆರವೇರಿತು. ತರುವಾಯ ಎರಡು ಕಡೆಯ ಪಡೆಗಳೂ ಮತ್ತೆ ಕಾದಾಡಿ ಟೈಡ್ಯೂಸೂ ಹಿಪಾಮಿಡನ್ನೂ ಮಡಿದರು. ಹಗೆಯ ಈಟಿ ಆಂಫಿಯರೇವಸ್ಸಿನ ಎದೆಗೆ ನಾಟುವುದರಲ್ಲಿದ್ದಾಗ ಸ್ಯೂಸ್ ಅಡ್ಡ ಬಂದು ತಡೆದನು. ನೆಲ ಬಾಯಿಬಿಟ್ಟು ಆ ವೀರನನ್ನೂ ಅವನ ತೇರನ್ನೂ ಒಳಕೊಂಡಿತು. ಅರ್ಗಾಸರ ಪಡೆಯಲ್ಲಿ ಆಳಿದುಳಿದವನು ಅಡ್ರಾಸ್ಟಸ್ ಒಬ್ಬನೇ; ಅದೂ ಪಾಸಿಡಾನ್ ದೇವತೆ ತನಗೆ ಕೊಟ್ಟಿದ್ದ ಅತುಲವೇಗದ ಕುದುರೆಯ ಸಹಾಯದಿಂದ. ಪಡೆಕಟ್ಟಿ ನಡೆದ ದೊರೆ ಅಡ್ರಾಸ್ಟಸ್ ಅರ್ಗಾಸಿಗೆ ತನ್ನೊಡನೆ ಹಿಂದೊಯ್ದುದ್ದು ಎರಡೆ—ತನ್ನ ಕುದುರೆ ಮತ್ತು ಅಳಲಹೊರೆ.

ಅಣ್ಣತಮ್ಮಂದಿರಿಬ್ಬರೂ ಮಡಿದ ಮೇಲೆ ಥೀಬ್ಸಿಗೆ ಕ್ರೀಯಾನೇ ಒಡೆಯನಾದನು. ತವರನಾಡಿಗಾಗಿ ಕಾದು ಮಡಿದ ಇಟೀಯೊಕ್ಲೀಸನ್ನು ಗೌರವಿಸಿ ಉತ್ತರಕ್ರಿಯೆ ನಡಸಬೇಕೆಂದೂ, ನಾಡುಗೇಡಿಯಾದ ಪಾಲಿನೀಸೀಸಿನ ಹೆಣವನ್ನು ಹೂಳದೆ ನಾಯಿನರಿಗಳಿಗೆ ಎಳೆಯಬೇಕೆಂದೂ ಕಟ್ಟಳೆಯಿಟ್ಟನು. ಹಗೆಗಾದರೂ ಉತ್ತರಕ್ರಿಯೆಗಳನ್ನು ತಡೆಯುವುದು ಗ್ರೀಕರಿಗೆ ಧರ್ಮವಿರುದ್ಧವಾಗಿತ್ತು. ಆದ್ದರಿಂದ ಆಂಟಿಗೊನಿ ರಾಜಾಜ್ಞೆಯನ್ನು ಮೀರಿಯಾದರೂ ತನ್ನ ಅಣ್ಣನಿಗೆ ಸಂಸ್ಕಾರ ನಡಸಿ ಧರ್ಮವನ್ನು ಪಾಲಿಸುವುದಾಗಿ ನಿಶ್ಚಯಿಸಿದಳು. ಇಸ್ಮೀನಿ ಎಷ್ಟು ತಡೆದರೂ ಕೇಳದೆ, ಆಂಟಿಗೊನಿ ಒಬ್ಬಳೇ ಹೋಗಿ ಪಾಲಿನೀಸೀಸಿನ ಹೆಣವನ್ನು ಮಣ್ಣು ಮಾಡುತ್ತಿರುವಲ್ಲಿ ಕಾವಲಾಳುಗಳ ಕೈಗೆ ಸಿಕ್ಕಿಬಿದ್ದಳು. ಹೆಣ್ಣೊಬ್ಬಳು ತಾನಿಟ್ಟ ಕಟ್ಟಳೆಯನ್ನು ಮೀರಿ ನಡೆಯುವುದಕ್ಕೆ ಎದೆತಂದದ್ದನ್ನು

ನೋಡಿ ಕ್ರೇಯಾನಿನ ಕೋಪ ಎಲ್ಲೆ ವರಿದು ಅವಳನ್ನು ಉಸಿರಾಡುತ್ತಿದ್ದಂತೆಯೇ ಕಲ್ಲುಗವಿಯೊಳಗೆ ಹೂಳಿಡುವಂತೆ ಆಣೆಯಿಟ್ಟನು. ತನ್ನ ಉಳಿದ ಒಬ್ಬನೇ ಮಗನೂ ಆಂಟಿಗೊನಿಗೆ ಗೊತ್ತಾಗಿದ್ದ ವರನೂ ಆದ ಹೀಮನ್ ಎಷ್ಟು ಕೇಳಿಕೊಂಡರೂ ಬಗೆ ಕದಲದೆ ತನ್ನ ಮಾತನ್ನು ನಡಸಿಯೇ ಬಿಟ್ಟನು. ಕಣಿಯ ಟೈರೀಸಿಯಸ್ಸಿನ ಮಾತನ್ನೂ ಮೊದಲು ಲಕ್ಷಿಸಲಿಲ್ಲ. ಆದರೆ ಕೈಮೀರಿ ಹೋದ ಮೇಲೆ ಬುದ್ಧಿ ಬಂತು. ಕಣಿಯನ ಮುನ್ನುಡಿತಗಳನ್ನು ಕೇಳಿ ಹೆದರಿ ಹೆಣ್ಣನ್ನು ಬಿಡಿಸುವುದಕ್ಕೂ, ಶವಕ್ಕೆ ಸಂಸ್ಕಾರ ಮಾಡುವುದಕ್ಕೂ ಮನಸ್ಸು ಮಾಡಿ ಒಡನೆಯೆ ಹೊರಟನು. ಆದರೆ, ಆ ಹೊತ್ತಿಗಾಗಲೇ ಆಂಟಿಗೊನಿ ನೇಣುಹಾಕಿಕೊಂಡು ಸತ್ತಿದ್ದಳು.[1] ಹೀಮನ್ನೂ ಅವಳ ಬಳಿಯೇ ಆತ್ಮಹತ್ಯೆ ಮಾಡಿಕೊಂಡು ಬಿದ್ದನು. ಅರಮನೆಯಲ್ಲಿ, ಮಗನ ಮಡಿವನ್ನು ಕೇಳಿ ತಾಯಿ ಯುರಿಡಿಸಿ ಎದೆಯಿರಿದುಕೊಂಡು ಪ್ರಾಣಬಿಟ್ಟಳು.

ಥೀಬ್ಸಿನ ಕೋಟೆಯ ಹೊರಗೆ ಇದ್ದ ಪಾಲಿನೀಸೀಸಿನ ಮತ್ತು ಇಟೀಯೊಕ್ಲೀಸಿನ ಸಮಾಧಿಗಳೆರಡಕ್ಕೂ ವೀರಸಮಾಧಿಗಳಿಗೆ ಉಚಿತವಾದ ಪೂಜೆ ಪುರಸ್ಕಾರಗಳು ಹಲವುಕಾಲ ನಡೆದುಬಂದುವು. ಆದರೆ, ಅಣ್ಣತಮ್ಮಂದಿರ ಹಗೆ ಸಾವಿನಲ್ಲೂ ಕೊನೆಗಾಣದೆ ಅವರ ಸಮಾಧಿಯಲ್ಲೂ ನೆಲಸಿ ಬಂದಂತೆ ತೋರಿತು. ಎರಡು ಸಮಾಧಿಗಳ ಬಲಿಗಂಬಗಳಿಂದಲೂ ಎದ್ದ ಹೊಗೆ ಯಾವಾಗಲೂ ಎದಿರುಬದಿರಾಗಿಯೇ ಸುಳಿಯುತ್ತದೆಂದು ಅಲ್ಲಿ ಪೂಜೆಗೊಟ್ಟವರು ಹೇಳಿಕೊಳ್ಳುತ್ತಿದ್ದರು.

ಥೀಬ್ಸಿಗೆ ಇನ್ನೂ ಉಳಿಗಾಲ ಬಂದಿರಲಿಲ್ಲ. ತನ್ನೂರಿಗೆ ಮರಳಿದ ಅಡ್ರಾಸ್ಟಸ್ ಥೀಬ್ಸ್‌ಯುದ್ಧದಲ್ಲಿ ಮಡಿದ ಆರು ಮಂದಿ ವೀರರ ಮಕ್ಕಳನ್ನೆಲ್ಲ ಹುರಿದುಂಬಿಸಿ ಒಟ್ಟುಗೂಡಿಸಿ, ಮತ್ತೆ ಪಡೆಕಟ್ಟಿ ಥೀಬ್ಸಿನ ಮೇಲೆ ದಾಳಿಯಿಟ್ಟನು. ಈ ಸಲ ಸ್ಯೂಸಿನ ಒಲವೂ ಅರ್ಗಾಸರ ಕಡೆಗೆ ತಿರುಗಿತು. ಥೀಬ್ಸಿನ ಪಡೆ ಅವರನ್ನು ಎದಿರಿಸಿ ಮುರಿದು ಸೋತುಹೋಯಿತು. ದೇವತೆಗಳು

1 ಯುರಿಪಿಡೀಸಿನ 'ಆಂಟಿಗೊನಿ' ಎಂಬ ಒಂದು ನಷ್ಟನಾಟಕದ ಪ್ರಕಾರ, ಆಂಟಿಗೊನಿ ಹೀಮನಿನೊಡನೆ ತಪ್ಪಿಸಿಕೊಂಡು ಹೋಗಿ, ಮದುವೆಯಾಗಿ, ಮಗು ಹೆತ್ತು, ಹಲವುಕಾಲ ನೆಮ್ಮದಿಯಾಗಿದ್ದಳು.

ಅರ್ಗಾಸರಿಗೆ ಒಲಿದು ಅವರಿಗೆ ಗೆಲವು ಕೊಟ್ಟರೆಂದೂ, ಥೀಬ್ಸರು ಶರಣಾಗತರಾಗಲೇ ಬೇಕೆಂದೂ ಕಣಿಯ ಟೈರೀಸಿಯಸ್ ಹೇಳಿದನು. ಅವನ ಮಾತಿನ ಪ್ರಕಾರ ಜನರು ಹಗೆಗೆ ನಾಡೊಪ್ಪಿಸಿ, ಅವರ ಮರೆಹೊಕ್ಕು, ಪಾಲಿನೀಸೀಸಿನ ಮಗ ಥೆರ್ಸಾಂಡರಿಗೆ ಪಟ್ಟ ಕಟ್ಟಿದರು. ಅಡ್ರಾಸ್ಟಸ್ ತನ್ನೂರಿಗೆ ಹಿಂದಿರುಗುತ್ತಿದ್ದಾಗ ತನ್ನ ಮಗನ ಮಡಿವಿನ ಸೆನವು ಕೆರಳಿ, ದಾರಿಯಲ್ಲೆ ಸತ್ತು ಹೋದನು.

ಸೊಫೊಕ್ಲೇಸ್

ಸೊಫೊಕ್ಲೇಸ್ ಅಥೆನ್ಸಿನ ಬಳಿಯ ಕೊಲೋನೊಸ್ ಹಳ್ಳಿಯಲ್ಲಿ ಕ್ರಿ.ಪೂ. ೪೯೭-೯೬ ರಲ್ಲಿ ಹುಟ್ಟಿದನು. ಅವನ ತಂದೆ ಸೊಫಿಲ್ಲೊಸ್ ಶ್ರೀಮಂತ ಮನೆತನದವನಲ್ಲದಿದ್ದರೂ ಗಣ್ಯನೂ ಹಣಗಾರನೂ ಆಗಿದ್ದನು. ಸೊಫೊಕ್ಲೇಸ್ ತನ್ನ ಎಳವೆಯನ್ನು ತನ್ನ ತವರೂರಿನಲ್ಲಿಯೇ ಕಳೆದನು. ತೊಟ್ಟಿಲಿನಿಂದ ಬೆಳೆದು ಬಂದ ಅವನ ತವರೂರಿನ ಒಲುಮೆ ಅವನ ಪಕ್ವಕಾಲದ ನಾಟಕಗಳಲ್ಲೊಂದಾದ 'ಒಯ್ದಿಪೌಸ್ ಕೊಲೋನೊಸ್'[1]ಸಿನಲ್ಲಿ ಒಡೆದು ಮೂಡಿದೆ. ಅಂದಿನ ಗ್ರೀಕ್ ಶಿಕ್ಷಣಪದ್ಧತಿಯಂತೆ ಅವನಿಗೆ ಸಂಗೀತ, ನೃತ್ಯ ಮತ್ತು ವ್ಯಾಯಾಮ ಗಳಲ್ಲಿ ವಿಶೇಷ ಶಿಕ್ಷಣ ದೊರೆಯಿತು. ಸಂಗೀತದಲ್ಲಿ ಅವನ ಗುರು ಪ್ರಖ್ಯಾತ ನಾದ ಲಾಂಪ್ರೊಸ್. ಸೊಫೊಕ್ಲೇಸಿನ ಚೆಲುವುಮುಖ ದುಂಡುಮೈ ಇನಿ ಗೊರಲು ಹಗುರಡಿಗಳನ್ನು ನೋಡಿ ಅವನ ೧೬ನೆಯ ವಯಸ್ಸಿನಲ್ಲಿಯೇ, ಗ್ರೀಕರು ಪಾರಸಿಕರನ್ನು ಸಾಲಮಿಸ್ ಯುದ್ಧದಲ್ಲಿ ಗೆದ್ದಾಗ ನಡಸಿದ ಗೆಲ್ಲೊ ಸಗೆಯಲ್ಲಿ ಜಯಗೀತವನ್ನು ಹಾಡಿದ ಮಕ್ಕಳ ಮೇಳಕ್ಕೆ ಅವನನ್ನು ನಾಯಕ ನಾಗಿ ಆಯ್ದರು.

ಸೊಫೊಕ್ಲೇಸ್ ಅಯ್‌ಸ್ಕುಲೊಸ್ಸಿನಿಂದ ರುದ್ರನಾಟಕ ಕಲಿತನೆಂದು ಪ್ರತೀತಿಯಿದ್ದರೂ ಅವರಿಬ್ಬರಿಗಿದ್ದ ಅಷ್ಟುಮಟ್ಟಿನ ಕೆಳೆಯ ಕುರುಹುಗಳೇನೂ ನಮಗೆ ಕಂಡುಬಂದಿಲ್ಲ. ಆದರೆ, ಅಯ್‌ಸ್ಕುಲೊಸ್ ಹಿರಿಯನೂ ಮಹಾ ಕವಿಯೂ ಆಗಿದ್ದು, ತನ್ನ ತರುವಾಯದವರ ಮೇಲೆ ಬೀರಿದ ಪ್ರಭಾವಕ್ಕೆ ಕಿರಿಯ ಸೊಫೊಕ್ಲೇಸೂ ಒಳಗಾದನೆಂಬುದೇನೋ ನಿಜ. ತನ್ನ ೨೮ನೆಯ ವಯಸ್ಸಿನಲ್ಲಿ ಕ್ರಿ.ಪೂ. ೪೬೮ನೆಯ ವರ್ಷದ ದಿಯೊನೂಸಿಯ ಜಾತ್ರೆಯಲ್ಲಿ ಮೊದಲನೆಯ ಸಲ ಕಿರಿಯ ಸೊಫೊಕ್ಲೇಸ್ ಹಿರಿಯ ಅಯ್‌ಸ್ಕುಲೊಸ್ಸಿನೊಡನೆ ಮೇಲಾಡಿಯಾಗಿ ನಿಂತು ಮೊದಲ ಮೆಚ್ಚು ಪಡೆದನು. ಈ ಮೇಲಾಟ ಜನರಲ್ಲೆಲ್ಲಾ ದೊಡ್ಡ ಕೋಲಾಹಲವೆಬ್ಬಿಸಿತೆಂದು ಬಿಡವೇನೂ ಇರಲಾರದ

---

1 ಈ ನಾಟಕವನ್ನು ರಚಿಸಿದಾಗ ಅವನಿಗೆ ಸುಮಾರು ೯೦ ವರ್ಷ.



ಮಹಾಕವಿ ಸೊಫೋಕ್ಲೀಸ್

ಕಥೆಯೊಂದುಂಟು. ಮೇಲಾಟದ ಮೇಲ್ವಿಚಾರಕನಾದ ದಂಡನಾಯಕನು ಜನರ ರಾಗಾವೇಶಗಳನ್ನು ನೋಡಿ ತೀರ್ಪಿಗರನ್ನು ಎಂದಿನಂತೆ ಚೀಟಿಹಾಕಿ ಆಯದೆ ಅಂದಿನ ಮೇಲಾಟದ ತೀರ್ಪನ್ನು ದಂಡನಾಯಕರ ಒಟ್ಟು ಸಭೆಗೆ ಒಪ್ಪಿಸಿದನಂತೆ. ಸೊಫೊಕ್ಲೀಸ್ ಈ ಗೆಲವಿನಿಂದ ಮೊದಲುಗೊಂಡು ಮುಂದೆ ೬೦ ವರ್ಷಗಳಿಗೆ ಮೇಲ್ಪಟ್ಟು ಉದ್ದಕ್ಕೂ ಎಡೆಬಿಡದೆ ಮೊದಲ ಹುರಿಪು ಸಡಿಲದೆ, ಕಾವು ಆರದೆ, ಸತ್ವ ಕುಗ್ಗದೆ, ಪ್ರತಿಭೆ ಮಸುಳದೆ, ಕಾಂತಿ ಕುಂದದೆ, ರುದ್ರನಾಟಕದ ರಚನೆಯಲ್ಲಿ ತೊಡಗಿದ್ದನು. ಅವನಿಗೆ ವಯಸ್ಸಾದಂತೆಲ್ಲ ಅರಿವು ಮರುಳದೆ, ಬುದ್ಧಿ ಕುದುರುತ್ತಾ ಹೋದಂತೆ ಕಾಣುತ್ತದೆ. ಅಯಃಸ್ಕಿಲೊಸ್ಸಿನಂತೆ ಸೊಫೊಕ್ಲೀಸೂ ಸರಾಸರಿ ಪ್ರತಿ ಮರುವರ್ಷವೂ ಮೇಲಾಟಕ್ಕಾಗಿ ರುದ್ರನಾಟಕ ಕಟ್ಟಿದಂತೆ ತೋರುತ್ತದೆ. ಸಾಮಾನ್ಯವಾಗಿ ಅವನು ಮೊದಲ ಮೆಚ್ಚನ್ನೇ ಪಡೆಯುತ್ತಿದ್ದನು.[2] ಯಾವ ಮೇಲಾಟದಲ್ಲಿಯೂ ಅವನಿಗೆ ಎರಡನೆಯ ಮೆಚ್ಚಿಗಿಂತ ಕೆಳಗೆ ಬಂದದ್ದಿಲ್ಲ. ಅವನು ೧೨೪-೧೩೦ ರುದ್ರನಾಟಕಗಳನ್ನು ಬರೆದಂತೆ ಹೇಳುತ್ತಾರೆ. ನೂರಹತ್ತಕ್ಕೆ ಮೇಲ್ಪಟ್ಟ ನಾಟಕಗಳ ಹೆಸರುಗಳು ಸಿಕ್ಕುತ್ತವೆ. ಆದರೆ ಸಮಗ್ರರೂಪದಲ್ಲಿ ಉಳಿದುಬಂದಿರುವುದು ಏಳೇ ನಾಟಕಗಳು.

ಸೊಫೊಕ್ಲೀಸಿನದು ದೊಡ್ಡ ಗಂಟಲಲ್ಲ; ಆದ್ದರಿಂದ ಅವನು ಹಿಂದಿನ ನಾಟಕಕಾರರಂತೆ ತನ್ನ ನಾಟಕಗಳಲ್ಲಿ ತಾನೇ ಪ್ರಧಾನಭಾಗ ವಹಿಸಲು ಅವಕಾಶವಾಗಲಿಲ್ಲ. ಮೊದಮೊದಲು ಕೊಂಚ ಭಾಗ ವಹಿಸುತ್ತಿದ್ದಿರಬಹುದಾದರೂ ತನ್ನ ಕೊರಲು ಕೆಡುತ್ತ ಬರಲು, ಬಲುಬೇಗ ಬಿಟ್ಟುಬಿಟ್ಟನು.

ಸೊಫೊಕ್ಲೀಸ್ ಕ್ರಿ.ಪೂ. ೫ನೆಯ ಶತಮಾನದ ಗ್ರೀಕ್ ಮಹಾ ವ್ಯಕ್ತಿಗಳಲ್ಲೆಲ್ಲ ಮೇಲೆದ್ದು ಕಾಣುತ್ತಾನೆ. ಮನುಷ್ಯನು ಬಯಸಬಹುದಾದ ಬಯಕೆಗಳೆಲ್ಲ ಅವನಲ್ಲಿ ಪೂರೈಸಿದಂತೆ ಕಾಣುತ್ತದೆ. ದೇವದತ್ತ ಪ್ರತಿಭೆ, ಅರೋಗದೃಢಕಾಯ, ದೇಹಸೌಂದರ್ಯ, ಒಳ್ಳೆಯ ಶಿಕ್ಷಣ, ವ್ಯಾಸಂಗ, ವ್ಯವಸಾಯ, ಪೂರ್ಣಾಯುಸ್ಸು, ಮಿತ್ರಸಂಗ, ಅಧಿಕಾರ ಬಲ, ಐಶ್ವರ್ಯ, ಸಂಪತ್ತು, ಕೀರ್ತಿ ಎಲ್ಲವೂ ಅವನ ಪಾಲಿಗಿದ್ದುವು. ಅವನು ತನ್ನ ನಿಡುಬಾಳಿನಲ್ಲಿ ಅಥೆನ್ಸ್

[2] ೧೮ ಮೊದಲ ಮೆಚ್ಚುಗಳು ಬಂದಿರುವ ಗುರುತು ಇದೆ.

ಚಕ್ರಾಧಿಪತ್ಯದ ಏಳಿಗೆ, ಮೇಲ್ಮೆ, ಇಳಿವು ಎಲ್ಲವನ್ನೂ ಕಂಡನು. ಆದರೆ ಪುಣ್ಯವಂತ! ಅದರ ಅಳಿವಿಗೆ ಮೊದಲೇ ತಾನು ಅಳಿದನು. ಅಥೆನ್ಸಿನ ಸ್ವರ್ಣಯುಗವೆಂದು ಕರೆಯುವ ಪೆರಿಕ್ಲೇಸಿಸ ಕಾಲದಲ್ಲಿ ಸೊಫೊಕ್ಲೇಸ್ ತುಂಬು ಹರಯದವನು. ಒಮ್ಮೆ ಕ್ರಿ.ಪೂ. ೪೪೦ ರಲ್ಲಿ ಪೆರಿಕ್ಲೇಸಿಸೊಡನೆ, ಮತ್ತೊಮ್ಮೆ ನಿಕಿಯಾಸಿಸೊಡನೆ ಹೀಗೆ ಎರಡು ಸಲ ಪಡೆವಳನಾಗಿ ಆಯ್ಕೆ ಪಡೆದನು.[3] ಕ್ರಿ.ಪೂ. ೪೩೬ ರಲ್ಲಿ ಪೊಗದಿಯ ಕೋಶಾಧಿಕಾರಿಯಾಗಿಯೂ ಹಲವು ಸಲ ರಾಯಭಾರಿಯಾಗಿಯೂ ಕೆಲಸ ನೋಡಿದನು. ಬಹುಶಃ ತನ್ನ ಮನೆತನದ್ದಾಗಿ ಬಂದ ಅಸ್‌ಕ್ಲೇಪಿಯೊಸ್ ಮತ್ತು ಅಲ್ಕೊನ್ ವೀರರ ಅರ್ಚಕತನವನ್ನೂ ನೋಡಿಕೊಂಡಿದ್ದಂತೆ ತೋರುತ್ತದೆ. ಸೊಫೊಕ್ಲೇಸ್ ಪರಮ ದೈವಭಕ್ತನೆಂದು ಹೆಸರು ಪಡೆದಿದ್ದನು. ಅವನು ಸತ್ತ ತರುವಾಯ ಅಥೆನ್ಸ್ ಜನರು ಅವನಿಗೆ ಗುಡಿಕಟ್ಟಿಸಿ 'ಆತಿಥ್ಯಕಾರಿ ' ಎಂಬ ಹೆಸರಿನಿಂದ ವೀರಪುರುಷನನ್ನಾಗಿ ಆರಾಧಿಸ ತೊಡಗಿದರು. ಅವನಿಗೂ ದೇವತೆಗಳಿಗೂ ಇದ್ದ ಸಾಹಚರ್ಯದ ವಿಷಯವಾಗಿ ಹಲವು ಕಥೆಗಳನ್ನೂ ಹೇಳತೊಡಗಿದರು.

ಸೊಫೊಕ್ಲೇಸಿಗೆ ಅವನ ಹೆಂಡತಿ ನಿಕೊಸ್ತ್ರತಳಲ್ಲಿ ಹುಟ್ಟಿದ ಇಯೊಫೋನ್ ಎಂಬ ಮಗನಿದ್ದನು. ಆ ಮಗನೂ ಒಳ್ಳೆಯ ರುದ್ರನಾಟಕಕಾರನಾಗಿದ್ದನು. ಇಳಿವಯಸ್ಸಿನಲ್ಲಿ ಥೆಯೊರಿಸ್ ಎಂಬವಳ ಸಂಗ ಬೆಳೆದು, ಅವಳಲ್ಲಿ ಅರಿಸ್ತೋನ್ ಎಂಬ ಮಗನಾದನು. ಇನ್ನೂ ಮೂರು ಮಗಂದಿರ ಹೆಸರುಗಳು ಸಿಕ್ಕುತ್ತವೆ. ತನ್ನ ಕುಸಿಮುಪ್ಪಿನಲ್ಲಿ ಸೊಫೊಕ್ಲೇಸ್ ಆರ್ಖಿಪ್ಪೆ ಎಂಬ ಸೂಳೆಯ ಬಲೆಗೆ ಬಿದ್ದು ಆಸ್ತಿಯನ್ನೆಲ್ಲಾ ಅವಳಿಗೆ ಮಾಡಿಬಿಟ್ಟನೆಂಬ ಕಥೆಯೂ ಉಂಟು. ಆದರೆ, ತನ್ನ ಮಕ್ಕಳಿಗೆ ಹಕ್ಕು ತಪ್ಪಿಸಲು ಅಥೆನ್ಸ್ ಪ್ರಜೆಗೆ ಅಧಿಕಾರವಿಲ್ಲದಿದ್ದದ್ದರಿಂದಲೂ ಇನ್ನೂ ಹಲವು ಕಾರಣಗಳಿಂದಲೂ ಈ ಕಥೆ ಬುಡವಿಲ್ಲದ್ದೆಂದು ತ್ಯಾಜ್ಯವಾಗಿದೆ. ಸೊಫೊಕ್ಲೇಸ್ ತನ್ನ ಸೂಳೆಯ ಮಗನನ್ನೇ ಹೆಚ್ಚಾಗಿ ಪ್ರೀತಿಸುತ್ತಿದ್ದದ್ದನ್ನು ಕಂಡು ಇಯೊಫೋನ್ ಹೊಟ್ಟೆಕಿಚ್ಚಿನಿಂದ ತಂದೆಯ ಮೇಲೆ ವ್ಯಾಜ್ಯಹೂಡಿ, ತಂದೆಗೆ ಅರಿವುಮರುಳಾದ್ದರಿಂದ ಅವನ ಆಸ್ತಿಯ ಆಡಳಿತವನ್ನು ತನಗೆ ವಹಿಸಿ ಕೊಡಬೇಕೆಂದು ಕೇಳಿದ್ದಾಗಿಯೂ ಸೊಫೊಕ್ಲೇಸ್ ಆಗತಾನೇ ಬರೆದು ಪೂರೈ

3 ಅಥೆನ್ಸಿನ ಪ್ರಜೆ ಪಡೆಯಬಹುದಾದ ಉಚ್ಚತಮ ಪದವಿ ಅದು.

ಸಿದ್ದ 'ಒಯ್ದಿಪೌಸ್ ಕೊಲೋನೊಸ್' ರುದ್ರನಾಟಕವನ್ನು ಓದಿ ತನ್ನ ನೇರ್ಪನ್ನು ರುಜುವಾತುಮಾಡಿಕೊಟ್ಟು ಬಿಡುಗಡೆ ಪಡೆದದ್ದಾಗಿಯೂ ಒಂದು ಕಥೆಯುಂಟು. ಇದಕ್ಕೂ ಬುಡವಿಲ್ಲವೆಂದು ತಿಳಿದುಬಂದಿದೆ.

ಸೊಫೊಕ್ಲೇಸ್ ಗಂಭೀರಮೂರ್ತಿ, ಶಾಂತಸ್ವಭಾವದವನು, ನಿತ್ಯತೃಪ್ತ, ಸರಸಿ ; ಈರ್ಷ್ಯಾದಿಗಳೊಂದೂ ಅವನಲ್ಲಿರಲಿಲ್ಲ. ಹೊರನಾಡಿನ ದೊರೆಗಳು ಎಷ್ಟು ಕರೆದರೂ ಒಮ್ಮೆಯೂ ಅಥೆನ್ಸ್ ಬಿಟ್ಟುಹೋಗಲಿಲ್ಲ. ಹಿರಿಯ ಅಯ್‌ಸ್ಕಿಲೊಸ್ಸಿಗೆ ತಾನೇ ಮೊದಲನೆಯ ಸ್ಥಾನವನ್ನು ಕೊಡುತ್ತಿದ್ದನು. ಕಿರಿಯ ಯುರಿಪಿದೇಸ್ ಸತ್ತಾಗ ತಾನೂ ದುಃಖಪ್ರದರ್ಶನದಲ್ಲಿ ಭಾಗಿಯಾಗಿದ್ದನು. ಸೊಫೊಕ್ಲೇಸ್ ತೊಂಬತ್ತು ವರ್ಷಗಳಿಗೆ ಮೇಲ್ಪಟ್ಟು ಬಾಳಿ ಕ್ರಿ.ಪೂ. ೪೦೬ ರಲ್ಲಿ ಕಾಲವಾದನು. ಫ್ರುನಿಖೊಸ್ ಹೇಳಿರುವಂತೆ ಸೊಫೊಕ್ಲೇಸ್ ಬಾಳಿನಲ್ಲೆಂತೋ ಸಾವಿನಲ್ಲೂ ಅಂತೆಯೇ ಅದೃಷ್ಟಶಾಲಿ. ದ್ರಾಕ್ಷಿಗಳನ್ನು ಮುಕ್ಕುತ್ತಿರುವಾಗ ಗಂಟಲಲ್ಲಿ ಅಡಸಿಕೊಂಡು ಪ್ರಾಣಬಿಟ್ಟ ; 'ಅಂತಿಗೊನೆ' ನಾಟಕವನ್ನು ಗಟ್ಟಿಯಾಗಿ ಓದುತ್ತಿದ್ದಾಗ ಒಂದು ಬಲು ಉದ್ದವಾದ ವಾಕ್ಯವನ್ನು ಒಂದೇ ಉಸಿರಿನಲ್ಲಿ ಹೇಳಹೋಗಿ ಪ್ರಾಣಬಿಟ್ಟ ; ಮೇಲಾಟದಲ್ಲಿ ತನ್ನ 'ಅಂತಿಗೊನೆ'ಗೆ ಬಂದ ಜಯವನ್ನು ಕಂಡು ಹಿಗ್ಗಿ ವಿಪರೀತ ಹರ್ಷೋದ್ರೇಕಕ್ಕೆ ಸಿಕ್ಕಿ ಪ್ರಾಣಬಿಟ್ಟ—ಇವೇ ಮೊದಲಾದ ಕಥೆಗಳು ಬುಡವಿಲ್ಲದ ಬರಿಯ ಸುಳ್ಳಿನ ಕಂತೆ.

ಸಾಹಿತ್ಯಪ್ರಪಂಚದಲ್ಲಿ ಸೊಫೊಕ್ಲೇಸಿನ ಸ್ಥಾನಮಾನಗಳ ವಿಷಯದಲ್ಲಿ ಅವನ ಕಾಲದವರೂ ಮುಂದಿನವರೂ ಅಂದಿನಿಂದ ಇಂದಿನ ವರೆಗೆ ಒಂದೇ ವಿಧವಾದ ಅಭಿಪ್ರಾಯಪಟ್ಟಿದ್ದಾರೆ. ಅವನ ಕಾಲದವರೇ ಅವನನ್ನು ಅಯ್‌ಸ್ಕಿಲೊಸ್ಸಿಗೆ ಸಮಾನನೆಂದು ಭಾವಿಸಿದ್ದರು ; ಅಯ್‌ಸ್ಕಿಲೊಸ್ಸನ್ನೂ ಮೀರಿಸಿದ್ದನೆಂದೂ ಕೆಲವರು ಅಭಿಪ್ರಾಯಪಟ್ಟಿದ್ದರು. ಇಂದೂ ಅವನ ವಿಷಯದಲ್ಲಿರುವ ಅಭಿಪ್ರಾಯ ಅವೆರಡೆ. ಸೊಫೊಕ್ಲೇಸಿನಲ್ಲಿ ಗ್ರೀಕ್ ರುದ್ರನಾಟಕ ನೆರತೆಗೊಂಡು ತನ್ನ ತುದಿನೆಲೆಯನ್ನು ಮುಟ್ಟಿತು.

ಸೊಫೊಕ್ಲೇಸಿನ ನಾಟಕಗಳು ಅಯ್‌ಸ್ಕಿಲೊಸ್ಸಿನವುಗಳೊಡನೆ ಹೋಲಿಸಿದರೆ ಹೆಚ್ಚು ಕ್ರಿಯಾತ್ಮಕವೂ ವಿಸ್ತಾರವೂ ವೈವಿಧ್ಯವುಳ್ಳವೂ ಆದುವು. ಆದರೂ ಬಹು ಸರಳವಾದುವು. ಆಧುನಿಕ ನಾಟಕಗಳಲ್ಲಿ ಕಂಡುಬರುವ ನಾಟಕದ ಸಮಸ್ಯೆ

ಹೇಗೆ ಬಿಡುತ್ತದೆ, ಕಥೆ ಹೇಗೆ ಪರ್ಯವಸಾನಗೊಳ್ಳುತ್ತದೆ, ಎಂಬ ಆತುರ ಕುತೂಹಲಗಳು ಅವುಗಳಲ್ಲಿಲ್ಲ. ಸೊಫೊಕ್ಲೇಸಿನ ನಾಟಕಗಳು ಹೇಗೆ ನಡೆದು ಯಾವ ಕೊನೆ ಕಾಣುತ್ತವೆ, ಎಂಬುದು ಸಾಮಾನ್ಯವಾಗಿ ಮೊದಲೇ ತಿಳಿದು ಹೋಗುತ್ತದೆ. ಉದ್ದೇಶಪೂರ್ವಕವಾಗಿ ಕವಿ ಯಾವುದನ್ನೂ ಮುಚ್ಚಿಡು ವುದಕ್ಕೆ ಪ್ರಯತ್ನಿಸುವುದಿಲ್ಲ. ಕವಿಯ ಪ್ರಯತ್ನವೆಲ್ಲ ಪಾತ್ರಪೋಷಣೆ, ಕ್ರಿಯಾಫಲ, ಕಥಾತತ್ವ ಇವುಗಳ ಮೇಲೆ ಪ್ರೇಕ್ಷಕರ ಮನಸ್ಸನ್ನು ಸೆಳೆಯುವು ದಕ್ಕೆ. ಇದಕ್ಕಾಗಿ ಅದ್ಭುತ ಘಟನೆಗಳ ಪರಂಪರೆಯನ್ನು ತಂದೊಡ್ಡುವುದಕ್ಕಿಂತ ಹೆಚ್ಚಾಗಿ ಸೊಫೊಕ್ಲೇಸ್ ಮನುಷ್ಯನ ಎದೆಯನ್ನು ಅಲೆಯುವ ಕಷಾಯಗಳ ಹೋರಾಟವನ್ನು ನಿರೂಪಿಸುವುದರಲ್ಲಿ ಆಸಕ್ತನಾಗಿದ್ದಾನೆ. ಸಾಮಾನ್ಯವಾಗಿ ಎಲ್ಲ ಗ್ರೀಕ್ ರುದ್ರನಾಟಕಗಳಲ್ಲಿಯೂ ಪ್ರಧಾನವಾದ್ದು ಪಾತ್ರನಿರೂಪಣ ಮತ್ತು ರಾಗದ್ವೇಷಾದಿ ಕಷಾಯಗಳ ಹೋರಾಟದ ನಿರೂಪಣ. ವಸ್ತು ಸಂವಿಧಾನ ಯಾವಾಗಲೂ ಅದಕ್ಕೆ ಒಳಪಟ್ಟೇ ನಡೆಯುತ್ತದೆ.

ಮೇಳ : ಸೊಫೊಕ್ಲೇಸಿನಲ್ಲಿ ಅಯ್‌ಸ್ಕಲೊಸ್ಸಿಗಿಂತ ಮೇಳಭಾಗ ಕಡಮೆ ಯಷ್ಟೇ ಅಲ್ಲ; ಉದ್ದ ಹೆಚ್ಚಿಲ್ಲವಷ್ಟೇ ಅಲ್ಲ. ಕಥಾಭಾಗಕ್ಕೂ ಮೇಳಭಾಗಕ್ಕೂ ಇರುವುದು ಕೃತಕಸಂಬಂಧವಲ್ಲದಿದ್ದರೂ ಅಷ್ಟೇನೂ ಜೀವಂತ ಸಂಬಂಧವಲ್ಲ. ಮೇಳ ಕಥೆಯೊಡನೆ ಹಾಸುಹೊಕ್ಕಾಗಿ ಸೇರ್‍ದಿರದೆ, ಮೇಳದವರು ನಾಟಕದ ಕ್ರಿಯೆಯಿಂದ ಹೊರಗೆ ನಿಂತು ನಿಸ್ಸಂಗ ಪ್ರೇಕ್ಷಕರಾಗಿ ಎಲ್ಲೋ ಒಮ್ಮೊಮ್ಮೆ ಬುದ್ಧಿವಾದದ ಮಾತಾಡುತ್ತಾರೆ. ಅಥವಾ ಭಾವಪ್ರದರ್ಶನ ಮಾಡುತ್ತಾರೆ. ಸೊಫೊಕ್ಲೇಸಿನ ಮೇಳಗಳಲ್ಲಿ ಎರಡು ಸ್ವರೂಪ ಕಾಣಬರುತ್ತದೆ. (i) ಸಂವಾದ ಗಳಲ್ಲಿ ಭಾಗವಹಿಸುವಾಗ ಮೇಳ ಒಂದು ಪಾತ್ರಸ್ಥಾನವನ್ನು ವಹಿಸುತ್ತದೆ. ಈ ಕಾರ್ಯದಲ್ಲಿ ಮೇಳ ನಾಟಕದ ಮಹಾ ವ್ಯಕ್ತಿಗಳಿಂದ ಭಿನ್ನವಾದ, ಕುಂದುಕೊರತೆಗಳುಳ್ಳ ಸಾಮಾನ್ಯ ಮನುಷ್ಯರ ಪ್ರತಿನಿಧಿಯಿದ್ದಂತೆ. ಸಾಮಾನ್ಯ ಮನುಷ್ಯರ ಸಾಧಾರಣ ಸುಗುಣ ದುರ್ಗುಣಗಳೆರಡೂ ಮೇಳದವರಲ್ಲಿ ಕಾಣ ಬರುವುದು. ದೈವಭಕ್ತಿ ಸತ್ಯಪರಾಯಣತೆಗಳಿದ್ದರೂ ಸ್ಥೈರ್ಯ ಕಡಮೆ, ಒಂದು ಅಚಲನಿಷ್ಠೆಯಿಲ್ಲ. ಧರ್ಮಪ್ರಿಯರಾದರೂ ಲಾಭಕ್ಕೆ ಅಧರ್ಮವೆಸಗಲು ಹಿಂಜರಿಯುವುದಿಲ್ಲ. ಅಧಿಕಾರಕ್ಕೆ ತಗ್ಗಿ ನಡೆಯುವುದೂ ನಾಯಕನಿಗೆ ತಪ್ಪ

ದಿರುವುದೂ ಇವರ ಮುಖ್ಯ ಗುಣ. ಅತಿ ಎಚ್ಚರಿಕೆ ದಿಗಿಲುಗಳಿಂದ ಮನಸ್ಸಿನಲ್ಲಿರುವುದನ್ನು ಹೊರಗೆಡಹುವುದಕ್ಕೆ ಹಿಂಜರಿಯುತ್ತಾರೆ. ಯಾವ ಪಕ್ಷವನ್ನೂ ವಹಿಸದೆ 'ಇಬ್ಬರದೂ ಸರಿ' ಎನ್ನುವುದೇ ಇವರ ಪಕ್ಷ. ಇವರ ಮೂಲಸೂತ್ರ 'ಅತಿ ಸರ್ವತ್ರ ವರ್ಜಯೇತ್.' (ii) ಎರಡನೆಯ ಸ್ವರೂಪ ಪಾತ್ರಗಳೆಲ್ಲವೂ ರಂಗಸ್ಥಳದಿಂದ ಕಣ್ಮರೆಯಾಗಿ ಮೇಳದವರು ತಾವೇ ತಾವಾಗಿರುವಾಗ ಹೊರಪಡುವುದು. ಆಗ ಯಾವ ಭಯಸಂಕೋಚಗಳೂ ಇಲ್ಲದೆ, ಅಂತರಂಗದಲ್ಲಿರುವುದನ್ನು ಬಹಿರಂಗವಾಗಿ ನಿರಾತಂಕವಾಗಿ ಆಡುತ್ತಾರೆ. ಪಾತ್ರಗಳ ಕ್ಷಣಿಕ ವ್ಯಾಪಾರಗಳ ಇಣಿಕುಗಂಡಿಯ ಮೂಲಕ ಒಟ್ಟು ಮಾನವಜೀವನ ಸಮಸ್ಯೆಗಳನ್ನೆಲ್ಲ ಪರಿಕಿಸಿ ವಿಮರ್ಶಿಸುತ್ತಾರೆ. ಆಗ ಕವಿಯ ಅಂತರ್ವಾಣಿಗೆ ವ್ಯಂಜನ ಸಾಧನವಾಗಿ ಪರಿಣಮಿಸಿ, ವಿಶ್ವತತ್ವಗಳನ್ನು ಟೀಕಿಸುತ್ತಾರೆ; ಕಥೆಯ ಮೂಲತತ್ವವನ್ನು ನಿರೂಪಿಸುತ್ತಾರೆ.

ಪಾತ್ರಗಳು : ಸೊಫೊಕ್ಲೇಸಿನಲ್ಲಿ ನಮ್ಮ ಗಮನ ಕೇವಲ ದೇವತೆಗಳ ಮತ್ತು ಧರ್ಮತತ್ವಗಳ ಸಮಸ್ಯೆಗಳನ್ನು ಬಿಟ್ಟು ಮಾನವ ಧರ್ಮಸ್ವಭಾವಗಳ ಕಡೆಗೆ ಹೊರಳಿತೆಂಬುದನ್ನು ಗ್ರೀಕ್ ರುದ್ರನಾಟಕದ ಮೇಲಿನ ಪ್ರಬಂಧದಲ್ಲಿ ಹೇಳಿದೆ. ಆದ್ದರಿಂದ, ನಾಟಕದ ಎಲ್ಲ ಅಂಗಗಳೂ ಸಂವಿಧಾನಗಳೂ ವ್ಯಕ್ತಿಯ ಮನೋಧರ್ಮ ಶೀಲಚಾರಿತ್ರಗಳ ದೃಷ್ಟಿಯಿಂದ ಅಳವಟ್ಟಿವೆ. ಅವನ ನಾಟಕಗಳಲ್ಲಿ ಆಸಕ್ತಿಕೇಂದ್ರವಾದ್ದು ಮನುಷ್ಯಸ್ವಭಾವ ನಿರೂಪಣೆಯಾದರೂ ಅದು ನಮ್ಮ ನಿತ್ಯಜೀವನದ ಮಕ್ಕೀಕಾಮಕ್ಕಿಯಾದ ಪಡಿಯಚ್ಚಲ್ಲ. ಅವನ ನಾಟಕಗಳಲ್ಲಿ ಚಿತ್ರಿತವಾಗಿರುವುದು ಸುಸಂಸ್ಕೃತವೂ ಆದರ್ಶಭೂತವೂ ಆದ ಉದಾತ್ತ ಮಾನವಸ್ವಭಾವ ಶೀಲಗಳು. ಗ್ರೀಕ್ ಕಲೆಗಾರರಂತೆ ಸೊಫೊಕ್ಲೇಸೂ ಮನುಷ್ಯರನ್ನು ಚಿತ್ರಿಸುವುದರಲ್ಲಿ ಇಟ್ಟುಕೊಂಡಿದ್ದ ಗುರಿ "ಮೂಲವನ್ನು ಹೋಲುವಂತೆ, ಆದರೆ ಮತ್ತೂ ಸುಂದರವಾಗಿ ಚಿತ್ರಿಸುವುದು." ಅವನ ಪಾತ್ರಗಳೆಲ್ಲ ಸಾಮಾನ್ಯ ಮನುಷ್ಯನ ಚಿತ್ತವೃತ್ತಿಗಳೂ ಮನೋಭಾವಗಳೂ ರಾಗದ್ವೇಷಗಳೂ ಗುಣದೋಷಗಳೂ ಇರುವ ವ್ಯಕ್ತಿಗಳೇ ಆಗಿದ್ದರೂ ಅವರ ಮೇಲೆಲ್ಲಾ ಯಾವುದೋ ಒಂದು ಉದಾತ್ತ ಪ್ರಭಾವ ಬಿದ್ದು, ಮನುಷ್ಯನ ಅಲ್ಪಗಳೆಲ್ಲಾ ಕಣ್ಮರೆಯಾಗಿ ಅವನ ಮಹತ್ತುಗಳೇ ನಮ್ಮ ಕಣ್ಣ ಮುಂದೆ

ಕಡೆದು ನಿಲ್ಲುತ್ತವೆ. ಅವನ ಪಾತ್ರಗಳಲ್ಲಿ ಕಂಡುಬರುವ ದೋಷಗಳು ನೀಚರ ಅಲ್ಪದೋಷಗಳಲ್ಲ. ಮಹಾಪುರುಷರ ದೌರ್ಬಲ್ಯಗಳು. "ನಾನು ಮನುಷ್ಯರು ಹೇಗಿರಬೇಕೊ ಹಾಗೆ ಚಿತ್ರಿಸುತ್ತೇನೆ; ಯುರಿಪಿದೇಸ್ ಅವರು ಹೇಗಿದ್ದಾರೊ ಹಾಗೆ ಚಿತ್ರಿಸುತ್ತಾನೆ" ಎಂದು ಸೊಫೊಕ್ಲೇಸೇ ಹೇಳುತ್ತಿದ್ದನು. ಮಹಾ ವ್ಯಕ್ತಿಗಳಿಗೆ ಹಿನ್ನೆಲೆಯಾಗಿ ಸಾಮಾನ್ಯ ವ್ಯಕ್ತಿಗಳನ್ನೂ ಚಿತ್ರಿಸಿರುವುದು ಅಲ್ಲೊಂದು ಇಲ್ಲೊಂದು ಉಂಟು. (ಉದಾಹರಣೆ: 'ಅಂತಿಗೊನೆ'ಯಲ್ಲಿ ಇಸ್ಮೇನೆ ಮತ್ತು ಕಾಪಿನಾಳು). ಅಯ್‌ಸ್ಕುಲೊಸ್ಸಿಗಿಂತ ಸೊಫೊಕ್ಲೇಸ್ ಸ್ತ್ರೀಪಾತ್ರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು, ಕೆಲವು ನಾಟಕಗಳಲ್ಲಿ ಅವರಿಗೆ ಪ್ರಧಾನಸ್ಥಾನ ಕೊಟ್ಟಿದ್ದರೂ ಆ ಕಾಲದ ಇತರ ನಾಟಕಕಾರ ರಂತೆಯೇ ಅವನೂ ಸ್ತ್ರೀಪುರುಷ ಪ್ರಣಯದ ಉತ್ಕಟಭಾವನೆಗಳನ್ನು ನಿರೂಪಿಸಿಲ್ಲ. (ಅಂತಿಗೊನೆ ತನಗೆ ಮದುವೆಯಿಲ್ಲವೆಂದು ಅತ್ತರೂ ಹಯ್‌ಮೋನಿ ಗಾಗಿ ಶೋಕಿಸುವುದಿಲ್ಲ).

ಧಾರ್ಮಿಕ ತತ್ವಗಳು : ಅಯ್‌ಸ್ಕುಲೊಸ್ಸಿನ ನಾಟಕಗಳಲ್ಲಿ ನಾಟಕಕಾರ ಅಯ್‌ಸ್ಕುಲೊಸ್ಸಿಗಿಂತ ಧರ್ಮಬೋಧಕ ಅಯ್‌ಸ್ಕುಲೊಸ್ಸಿನ ಪ್ರಭಾವ ಹೆಚ್ಚಾಗಿದೆ. ನಾಟಕದ ಉದ್ದಕ್ಕೂ ಧರ್ಮತತ್ವಗಳೂ ಸೂತ್ರಗಳೂ ಪ್ರತಿಪಾದಿತ ವಾಗಿವೆ. ಹಲವು ಸಲ ಧರ್ಮತತ್ವ ಪ್ರತಿಪಾದನೆಗಾಗಿಯೇ ನಾಟಕದ ಕಥಾ ನಿರೂಪಣವಿದ್ದಂತೆ ತೋರುತ್ತದೆ. ಸೊಫೊಕ್ಲೇಸಿನ ನಾಟಕಗಳಲ್ಲಿ ಪ್ರಧಾನ ವಾದ್ದು ಕಥಾಸಕ್ತಿ, ಪಾತ್ರನಿರೂಪಣೆ, ನಾಟಕೀಯತೆ. ಹಾಗೆಂದ ಮಾತ್ರಕ್ಕೆ ಅವನ ನಾಟಕಗಳಲ್ಲಿ ಧರ್ಮಪ್ರಭಾವವಿಲ್ಲವೆಂದಲ್ಲ. ಆದರೆ ಅದು ಸ್ಪಷ್ಟವಾಗಿ ಅಲ್ಲಲ್ಲಿ ಉಕ್ತವಾಗಿರದೆ, ನಾಟಕದ ಹರಿತಕ್ಕೆ ಅಡ್ಡಿಯಾಗಿ ಬರದೆ, ಒಟ್ಟು ನಾಟಕದ ಮೇಲೆ ಒಂದು ಅದೃಶ್ಯ ರೂಪದಲ್ಲಿ ತನ್ನ ಪ್ರಭಾವವನ್ನು ಬೀರಿದೆ. ಸೊಫೊಕ್ಲೇಸೂ ತನ್ನ ನಾಟಕವಸ್ತುಗಳಾದ ಪುರಾಣಕಥೆಗಳನ್ನು ಮಮತಾಭಿ ಮಾನಗಳಿಂದಲೂ ಒಂದು ಮಾದರಿಯ ಶ್ರದ್ಧಾಭಕ್ತಿಗಳಿಂದಲೂ ಕಂಡರೂ ಅವು ಗಳ ವಿಷಯದಲ್ಲಿ ಅಯ್‌ಸ್ಕುಲೊಸ್ಸಿಗೆ ಇರುವಷ್ಟು ಉತ್ಕಟನಿಷ್ಠೆ, ಅತಿ ಭಯ ಭಕ್ತಿ ಅವನಲ್ಲಿಲ್ಲ. ಸೊಫೊಕ್ಲೇಸಿನ ವಿಶ್ವತತ್ವಗಳಲ್ಲಿ ಪ್ರಮುಖವಾದ್ದೆಂದರೆ— ದೇಶಕಾಲಾತೀತವಾದ ವಿಶ್ವನಿಯಮವೊಂದು ಸಮಸ್ತ ವಿಶ್ವವ್ಯಾಪಾರಗಳನ್ನೂ

ನಿಯಂತ್ರಿಸುತ್ತದೆ; ಆ ವಿಶ್ವನಿಯಮವನ್ನು ಯಾರೂ ಮೀರಲಾರರು; ಅದಕ್ಕೂ ಮನುಷ್ಯಕಟ್ಟಳೆಗೂ ಹೋರಾಟ ಬಂದರೆ ಕೊನೆಗೆ ಗೆದ್ದು ನಿಲ್ಲುವುದು ವಿಶ್ವ ನಿಯಮ. ಈ ವಿಶ್ವನಿಯಮದ ಒಂದು ವ್ಯಕ್ತಸ್ವರೂಪ ಪಾಪಕ್ಕೂ ಅಧರ್ಮಕ್ಕೂ ಆಗುವ ಪ್ರಾಯಶ್ಚಿತ್ತ, ದಂಡ. ಅದು ಬೇಗನೆ ಆಗಬಹುದು, ಅಥವಾ ತಡೆದು ಆಗಬಹುದು. ಹೇಗಾದರೂ ದಂಡ ತೆರುವುದೇನೊ ತಪ್ಪದು; ವಿಧಿ ಕಾಡದೆ ಬಿಡದು. ಅಯ್‌ಸ್ಕಿಲೊಸ್ಸಿನ ಪ್ರಕಾರ ವಿಧಿವ್ಯಾಪಾರಗಳೆಲ್ಲವೂ ಸಕಾರಣವೂ ನ್ಯಾಯವೂ ಆದುವು. ಸೊಫೊಕ್ಲೇಸ್ ಇದನ್ನು ಅಷ್ಟು ಪೂರ್ಣವಾಗಿಯೂ ಸುಲಭವಾಗಿಯೂ ಒಪ್ಪುವಂತೆ ಕಾಣಲಿಲ್ಲ. ಪಾಪಕ್ಕೆ ಪ್ರಾಯಶ್ಚಿತ್ತ ವಾಗುವುದು ತಪ್ಪದಿದ್ದರೂ ಒಂದೊಂದು ಸಲ ನಿರ್ದೋಷಿಗಳೂ ದುಃಖ ವನುಭವಿಸುವುದುಂಟೆಂಬುದನ್ನು ಸೊಫೊಕ್ಲೇಸ್ ಮರೆಯುವುದಿಲ್ಲ. ಮನುಷ್ಯ ಕಟ್ಟಳೆಯನ್ನು ಮೀರಿ ದೈವಕಟ್ಟಳೆಯನ್ನು ನಡೆದು ಅಂತಿಗೊನೆ ಸಾವಿಗೆ ಬರುತ್ತಾಳೆ. ಒಯ್ದಿಪೌಸಿನ ದುಃಖಗಳಿಗೆಲ್ಲ ಅವನೇ ಸಂಪೂರ್ಣ ಕರ್ತನೆಂದು ಹೇಳಲಾಗುವುದಿಲ್ಲ. ಆದಿಮೂಲವನ್ನು ಬೆದಕಿ ಹುಡುಕಿಕೊಂಡು ಹೋದರೆ ಮನೆತನದ ಯಾವುದೋ ದೂರದ ತಲೆಮೊರೆಯಲ್ಲಿ ಪಾಪದ ಬೀಜ ಬಿತ್ತಿದ್ದನ್ನು ಕಾಣಬಹುದು. ಆದರೆ, ಅದೇ ಸಾಕಷ್ಟು ಕಾರಣವೆನ್ನುವುದಕ್ಕಾಗುವುದಿಲ್ಲ. ಈ ವಿಧಿವೈಚಿತ್ರ್ಯದ ಸಮಸ್ಯೆಯನ್ನು ಸುಮ್ಮನೆ ಚಿತ್ರಿಸಿ ಸೂಚಿಸಿಬಿಟ್ಟಿದ್ದಾನೆಯೇ ಹೊರತು ಅದನ್ನು ಸರಿಹೊಂದಿಸಿ ಸಮನ್ವಯಮಾಡುವ ಅಸಾಧ್ಯ ಕೆಲಸಕ್ಕೆ ಸೊಫೊಕ್ಲೇಸ್ ಕೈಯಿಟ್ಟಿಲ್ಲ. ಹೀಗೆಂದ ಮಾತ್ರಕ್ಕೆ ಸೊಫೊಕ್ಲೇಸ್ ಮನುಷ್ಯ ಜೀವನದ ವಿಷಯದಲ್ಲಿ ನಿರಾಶೆಯನ್ನು ತೋರಿಲ್ಲ; ವಿಶ್ವವ್ಯಾಪಾರಗಳೆಲ್ಲ ಅಕ್ರಮವೆಂದು ಕೈಬಿಡುವುದಿಲ್ಲ. ಎಲ್ಲವೂ ವಿಧಿವಿಲಾಸವೆಂದು ಕೈಕಟ್ಟಿ ಕುಳಿತು ಕೊಳ್ಳುವುದು ಅವನ ತತ್ವವಲ್ಲ. ವಿಶ್ವದ ಗೋಚರಾಗೋಚರ ವ್ಯಾಪಾರ ಗಳೆಲ್ಲವನ್ನೂ ಸಮನ್ವಯಮಾಡಿ ಸಮರ್ಥಿಸುವುದೂ ಅರ್ಥಮಾಡುವುದೂ ಕೊಂಚ ಕಷ್ಟವಾದರೂ ಒಟ್ಟಿನಲ್ಲಿ ವಿಶ್ವ ವಿಶ್ವನಿಯಮಗಳಿಂದ ನಡೆಯುತ್ತದೆ ಎಂಬುದನ್ನು ಒಪ್ಪಲೇ ಬೇಕು. ಆಳ ಬಾಳಿನ ಹೊನ್ನಡೆಯೆಂದರೆ ಆ ಕಟ್ಟಳೆ ಗಳನ್ನೊಪ್ಪಿ ಅವುಗಳ ದಾರಿಯಲ್ಲಿ ನಡೆದು ಯಾವುದರಲ್ಲಿಯೂ ಅತಿಯನ್ನು ಬಿಟ್ಟು ಮಿತಿಯನ್ನು ಹಿಡಿಯುವುದು.

ಅಂತಿಗೊನೆ

(ವಿಮರ್ಶೆ)

ಗ್ರೀಕ್ ರುದ್ರನಾಟಕಗಳಲ್ಲೆಲ್ಲಾ 'ಅಂತಿಗೊನೆ' ಬಲು ಸುಂದರವಾದ ದ್ದೆಂದು ಹಿಂದಿನವರಿಂದಲೂ ಇಂದಿನವರಿಂದಲೂ ಒಂದೇ ಸಮನೆ ಮೆಚ್ಚಿಗೆ ಪಡೆದಿದೆ. ಅದರ ಹಿರಿಮೆಯನ್ನು ಎಲ್ಲರೂ ಒಕ್ಕೊರಲಿನಿಂದ ಹೊಗಳಿದ್ದಾರೆ. ಕೊನೆಗೆ, ಸಾಮೊಸ್ ದಾಳಿಯಲ್ಲಿ ಸೊಫೊಕ್ಲೇಸ್ ಪಡೆವಳನಾಗಿ ಆಯ್ಕೆ ಪಡೆದದ್ದು ಕೂಡ ಅವನ 'ಅಂತಿಗೊನೆ'ಗೆ ಬಂದ ವಿಶೇಷ ಜನಮೆಚ್ಚಿಗೆಯಿಂದ ಎಂದು ಬಲು ಹಿಂದಿನಿಂದಲೂ ಬಂದ ಕಥೆ ಒಂದುಂಟು. ಇದರ ಆಧಾರದ ಮೇಲೆಯೂ ಬೇರೆ ಹಲವು ಆಧಾರಗಳ ಮೇಲೆಯೂ 'ಅಂತಿಗೊನೆ' ನಾಟಕ ಸುಮಾರು ಕ್ರಿ.ಪೂ. ೪೪೨-೪೧ ರಲ್ಲಿ ಬರೆದದ್ದೆಂದು ಹೇಳಬಹುದು. ಆಗ ಸೊಫೊಕ್ಲೇಸಿಗೆ ೫೫ ವರ್ಷ ವಯಸ್ಸು. ಈಗ ಉಳಿದುಬಂದಿರುವ ಅವನ ಏಳು ಸಮಗ್ರ ರುದ್ರನಾಟಕಗಳಲ್ಲಿ ಬಹುಶಃ ಇದೇ ಮೊದಲನೆಯದು; ಅವನು ಬರೆದ ನಾಟಕಗಳಲ್ಲಿ ಮೂವತ್ತೆರಡನೆಯದು.

ಅಂತಿಗೊನೆ ನಾಟಕದ ಕಥೆ—ಪೊಲುನೆಯ್‌ಕೇಸಿನ ಹೆಣವನ್ನು ಮಣ್ಣು ಮಾಡಕೂಡದೆಂದು ಕ್ರೆಯೋನ್ ಕಟ್ಟಳೆಯಿಡುವುದು, ಅಂತಿಗೊನೆ ಅದನ್ನು ಮೀರಿ ಮಣ್ಣುಮಾಡಿ ತನ್ನ ಅಣ್ಣನಿಗೂ ಅಡಿನೆಲದವರಿಗೂ ತಾನು ಹೊತ್ತ ಕಡವನ್ನು ತೀರಿಸಿ ಸಾವಿಗೆ ಬರುವುದು—ಹಿಂದಿನ ಕವಿಗಳಲ್ಲಿ ಸಿಕ್ಕುವುದಿಲ್ಲ. ಅಯ್‌ಸ್ಕುಲೊಸ್ ಮಾತ್ರ ತನ್ನ 'ಥೇಬಾಯ ಮೇಲೆ ಏಳ್ವರು' ಎಂಬ ರುದ್ರನಾಟಕದ ಕೊನೆಯಲ್ಲಿ ಅದನ್ನು ಸೂಚಿಸಿದ್ದಾನೆ. ಆದರೆ, ಅಷ್ಟನ್ನೇ ಎತ್ತಿಕೊಂಡು ಒಂದು ಸಮಗ್ರನಾಟಕ ಬರೆದವರು ಹಿಂದೆ ಯಾರೂ ಇಲ್ಲ. ಮುಂದೆ ಯುರಿಪಿದೇಸೂ ಇತರರೂ[1] ಬರೆದಿದ್ದರೂ ಅವರ ನಾಟಕಗಳಲ್ಲಿ ಸೊಫೊಕ್ಲೇಸಿನ ದೃಷ್ಟಿಯಿಲ್ಲ; ಕಥೆಯಲ್ಲಿ ಹಲಕೆಲವು ಮಾರ್ಪಾಟುಗಳು ಆಗಿ

---

1 ಅಟಿಯುಸ್, ಸ್ಟಟಿಯುಸ್ ಮೊದಲಾದ ರೋಮನ್ ಕವಿಗಳೂ ಹಲವು ಯುರೋಪಿಯನ್ ಕವಿಗಳೂ ಇದ್ದಾರೆ.

ಹೋಗಿವೆ. ಹಾಗಾದರೆ, ಸೊಫೊಕ್ಲೇಸಿನ ಅಂತಿಗೊನೆಯ ತನಿಹಿರಿಮೆ ಏನು? ಇಬ್ಬರು ವ್ಯಕ್ತಿಗಳ ಹಿನ್ನೆಲೆಯಲ್ಲಿ ನಿರೂಪಿತವಾಗಿರುವ, ಯಾವ ದೇಶದಲ್ಲಿಯೇ ಆಗಲಿ ಯಾವ ಕಾಲದಲ್ಲಿಯೇ ಆಗಲಿ ನಡೆಯಬಹುದಾದ, ಎರಡು ದೊಡ್ಡ ಧರ್ಮಗಳ ಘರ್ಷಣ, ತತ್ವಗಳ ಹೋರಾಟ—ದೈವಕಟ್ಟಳೆಗೂ ಮನುಷ್ಯ ಕಟ್ಟಳೆಗೂ, ಪ್ರಜೆಗೂ ರಾಷ್ಟ್ರಕ್ಕೂ, ವ್ಯಕ್ತಿಗೂ ಸಮಾಜಕ್ಕೂ, ಒಳನುಡಿಗೂ ಹೊರಕಟ್ಟಿಗೂ ಪರಸ್ಪರ ಹೊಂದಿಕೆಯಿಲ್ಲದಾಗ ನಡೆಯುವ ಘರ್ಷಣ, ಹೋರಾಟ. ಕವಿ ಈ ಸಮಸ್ಯೆಯನ್ನು ತನ್ನ ಅಪ್ರತಿಮ ಕಲಾಕೌಶಲದಿಂದ ಚಿತ್ರಿಸಿಬಿಟ್ಟಿದ್ದಾನೆಯೇ ಹೊರತು, ಅದನ್ನು ಬಿಡಿಸಿ ಕೊನೆಯ ಸಿದ್ಧಾಂತವಾಗಿ ತೀರ್ಮಾನಮಾಡುವ ಅಸಾಧ್ಯ ಕೆಲಸಕ್ಕೆ ಕೈಯಿಟ್ಟಿಲ್ಲ. ರುದ್ರನಾಟಕದ ಒಳಗುಟ್ಟೆಂದರೆ, ಅದರಲ್ಲಿ ಬರುವ ವಿಷಮಪ್ರಶ್ನೆಗಳಿಗೆ ಸರ್ವದೇಶ ಕಾಲ ವರ್ತಮಾನಗಳಿಗೂ ಒಂದೇ ರೀತಿಯಾಗಿ ಅನ್ವಯಿಸುವ ಸೂತ್ರಪ್ರಾಯವಾದ ಉತ್ತರಗಳಿಲ್ಲದಿರುವುದೆ. ಕವಿಯ ಒಲವು ಯಾವ ಕಡೆಗೆ ಒಲೆಯುತ್ತಿದೆ ಎಂಬುದನ್ನು ಎಂಥ ದಡ್ಡನಾದರೂ ಕಾಣಬಹುದಾದರೂ ಕ್ರಿಯೋನಿನ ಪಕ್ಷವನ್ನು ಬಹು ದಕ್ಷತೆಯಿಂದಲೂ ಬಹು ಉದಾರಭಾವದಿಂದಲೂ ಪ್ರತಿಪಾದಿಸಿದ್ದಾನೆ. ನಾಟಕದ ನಾಯಕ ವ್ಯಕ್ತಿಗಳಾದ ಅಂತಿಗೊನೆಯ ಮತ್ತು ಕ್ರಿಯೋನಿನ ಶೀಲಸ್ವಭಾವಗಳ ವಿಷಯದಲ್ಲಿ ಎಲ್ಲ ವಿಮರ್ಶಕರಲ್ಲಿಯೂ ಒಮ್ಮತವಿಲ್ಲ. ಅಂತಿಗೊನೆ ಸಂಪೂರ್ಣ ನಿರ್ದೋಷಿಯಾದ ಧರ್ಮವೀರಳಾಗಿದ್ದು ಪರಮನೀಚನಾದ ಕ್ರಿಯೋನಿನ ಅನ್ಯಾಯಕ್ಕೆ ಬಲಿಬಿದ್ದಳೆಂದು ಎಣಿಸುವವರಿಂದ ಹಿಡಿದು, ಕ್ರಿಯೋನಿನ ಮುರಿತಕ್ಕೆ ಅವನು ಎಷ್ಟು ಕಾರಣನೋ ಅಂತಿಗೊನೆಯ ಸಾವಿಗೂ ಅವಳ ಅತಿ ಸಾಹಸಮದಗಳಿಂದ ಅವಳು ಅಷ್ಟೇ ಕಾರಣಳೆಂದು ಎಣಿಸುವವರೂ ಇದ್ದಾರೆ. ಈ ಅಭಿಪ್ರಾಯ ಭೇದಗಳಿಗೆ ಕಾರಣ ತಿಳಿಯಬೇಕಾದರೆ ನಾಟಕದ ಸಮಸ್ಯೆಯ ಸ್ವರೂಪವನ್ನು ಒಳಹೊಕ್ಕು ನೋಡಬೇಕು.

ಸತ್ತವನಿಗೆ ಸಂಸ್ಕಾರ, ಸ್ವದೇಶ ದ್ರೋಹಿಗೆ ಶಿಕ್ಷೆ—ಇವೆರಡರಲ್ಲಿ ಯಾವೊಂದನ್ನೇ ಆಯುವುದು ಸುಲಭವಲ್ಲ. ಸತ್ತವರಿಗೆ ಶ್ರದ್ಧಾಭಕ್ತಿಗಳಿಂದ ಸಂಸ್ಕಾರ ನಡಸುವುದು ಗ್ರೀಕರಲ್ಲಿ ಎಂದೆಂದೂ ಮೀರಬಾರದ ಬಹು ದೊಡ್ಡ

ಧರ್ಮ. ಆದರೆ, ನಾಡಿನ ಕಟ್ಟಳೆಗಳನ್ನು ನಡೆದು ರಾಜ್ಯದ ಸರ್ವಶ್ರೇಷ್ಠತ್ವವನ್ನು ಎತ್ತಿಹಿಡಿಯುವುದೂ ಅಷ್ಟೇ ದೊಡ್ಡ ಧರ್ಮ. ಮಹಾಪಾತಕರಿಗೆ ಉತ್ತರಕ್ರಿಯೆ ತಡೆದಿರುವುದು ಎಲ್ಲೋ ಒಮ್ಮೊಮ್ಮೆ ನಮ್ಮ ದೃಷ್ಟಿಗೆ ಬಿದ್ದಿರುವುದಾದರೂ ಹೋಮರ್ ಕಾಲಕ್ಕೇ ಗ್ರೀಕರಲ್ಲಿ ಮೂಡಿದ್ದ "ಸತ್ತ ಮೇಲೆ ಹಗೆ ಸಾಧಿಸ ಬಾರದು" ಎಂಬ ಭಾವನೆ ಸೊಫೊಕ್ಲೀಸ್ ಕಾಲಕ್ಕೆ ಬಲವಾಗಿ ಬೇರೂರಿ ನಿಂತು ಬಿಟ್ಟಿತ್ತು. ಆದರೆ, ಹಾಗೆಯೇ ನಾಡೂ ನಾಡಿನ ಕಟ್ಟಳೆಗಳೂ ಎಂದೆಂದೂ ಅವಧ್ಯಗಳೆಂಬ ಭಾವನೆಯೂ ಆ ಕಾಲಕ್ಕೆ ಬಲವಾಗಿತ್ತು. ಥೀಬ್ಸಿನ ಮೇಲೆ ಕೈಮಾಡಿದವನು ಯಾವನೇ ಆಗಲಿ ಅವನು ಪರಮನೀಚ, ಮಹಾಪಾತಕಿ. ಅದರಲ್ಲಿಯೂ ಥೀಬ್ಸ್ ತಾಯ ಬಸಿರಲ್ಲಿ ಬಂದವನು ಯಾವ ಕಾರಣದಿಂದಲೇ ಆಗಲಿ, ಹೆತ್ತತಾಯ ಕರುಳನ್ನೇ ಇರಿಯಬರುವುದು ಮಹಾಪಾತಕ. ಆದ್ದರಿಂದ, ನಾಡುಗೇಡಿಯಾದ ಆ ಮಹಾಪಾತಕಿಗೆ ಸಾವೊಂದೇ ಸಾಕಷ್ಟು ಶಿಕ್ಷೆಯಲ್ಲ. ಸತ್ತಮೇಲೆ ಕೂಡ ಅವನ ಆತ್ಮಕ್ಕೆ ಶಾಂತಿಯಿರದಂತೆ ಅಂಥವನಿಗೆ ಉತ್ತರಕ್ರಿಯೆ ನಿಲ್ಲಿಸುವುದು ತಪ್ಪಲ್ಲ. ಹಾಗಾದರೆ, ಅನಿವಾರ್ಯವಾಗಿ ದೈವ ಕಟ್ಟಳೆಗೂ ಮನುಷ್ಯ ಕಟ್ಟಳೆಗೂ ಹೋರಾಟಬಿದ್ದರೆ ಕೊನೆಯಲ್ಲಿ ಯಾವುದು ನಿಲ್ಲಬೇಕು? ಕವಿ ಇದಕ್ಕೆ ಉತ್ತರವನ್ನು ಕ್ರೆಯೋನಿನ ಬಾಯಲ್ಲಿಯೇ ಕೊನೆಗೆ ಹೇಳಿಸಿ ಬಿಟ್ಟಿದ್ದಾನೆ. ಆದರೆ ಬೇಗನೆ, ಒಮ್ಮೆಯೇ ಆ ಉತ್ತರಕ್ಕೆ ಬರುವುದು ಯಾರಿಗಾದರೂ ಅಷ್ಟು ಸುಲಭವಲ್ಲದೆ ಹೋದದ್ದರಿಂದಲೇ ರುದ್ರಪರಿಸ್ಥಿತಿಗೆ ಇಟ್ಟುಕೊಂಡು ದುರಂತವಾಗಿ ಪರಿಣಮಿಸಿದ್ದು. ಪ್ರತಿಯೊಬ್ಬರೂ ಅವರವರ ಮೂಗಿನ ನೇರಕ್ಕೇ ನಡೆಯುವುದಾದರೆ ನಾಡೆಲ್ಲಿ ಬಂತು? ರಾಜ್ಯಸಂಸ್ಥೆ ಏನಾಗಬೇಕು? ವ್ಯಷ್ಟಿಗಿಂತ ಸಮಷ್ಟಿ ಹೆಚ್ಚು, ವ್ಯಕ್ತಿಗಿಂತ ಸಂಸ್ಥೆ ಹೆಚ್ಚು, ಪ್ರಜೆಗಿಂತ ರಾಜ್ಯ ಹೆಚ್ಚು. ನಿಜ. ಆದರೆ ವ್ಯಕ್ತಿಯ ಅಂತರ್ವಾಣಿಗೆ, ಆತ್ಮಸಾಕ್ಷಿಗೆ ಕೊಂಚವೂ ಎಡೆಯೇ ಇಲ್ಲವೇ? ಸರ್ವಸ್ವವನ್ನೂ ಬಲಿಗೊಟ್ಟು ಆತ್ಮಸಾಕ್ಷಿಯೊಂದನ್ನೇ ಹಿಡಿಯಬೇಕಾಗಿರುವಾಗ, ಆತ್ಮಸಾಕ್ಷಿಗೆ ವ್ಯತಿರಿಕ್ತವಾದ ರಾಜ್ಯಶಾಸನವನ್ನು ಮೀರುವುದು ಅಧರ್ಮವೇ? ಅಲ್ಲದೆ, ನಾಡಿನ ಕಟ್ಟಳೆಗಳನ್ನೇನೋ ಮೀರ ಬಾರದು, ನಿಜ. ಆದರೆ, ಕ್ರೆಯೋನ್ ನಿಜವಾಗಿಯೂ ಎಷ್ಟರ ಮಟ್ಟಿಗೆ ಆ ನಾಡಿನ ಕಟ್ಟಳೆಗಳ ಪ್ರತಿನಿಧಿ! ಸ್ವದೇಶದ್ರೋಹಿಯಾದ ಪೊಲುನೆಯ್‌ಕೇಸಿಗೆ

ಉತ್ತರಕ್ರಿಯೆ ನಡೆಯಕೂಡದೆಂದು ಕಟ್ಟಳೆಯಿಟ್ಟಾಗಲೂ ಅಂತಿಗೊನೆ ಆ ಕಟ್ಟಳೆ ಮೀರಿದಾಗ ಅವಳನ್ನು ಉಸಿರೊಡನೆ ಕಲ್ಲುಗವಿಯಲ್ಲಿ ಬಯ್ತಿಟ್ಟಾಗಲೂ ಕ್ರೆಯೋನ್ ಎಷ್ಟರಮಟ್ಟಿಗೆ ನಾಡಿನ ಸಮ್ಮತಿಗೂ ಕಟ್ಟಳೆಯ ಪಾಲನೆಗೂ ಲಕ್ಷ್ಯಕೊಟ್ಟನು; ಎಷ್ಟರಮಟ್ಟಿಗೆ ಅವನ ವೈಯಕ್ತಿಕದ್ವೇಷ ಸಾಧಿಸಿದನು? ಕ್ರೆಯೋನ್ ಇಟ್ಟ ಕಟ್ಟಳೆಗೂ ಕೊಟ್ಟ ಶಿಕ್ಷೆಗೂ ಎಷ್ಟರಮಟ್ಟಿಗೆ ನಾಡಿನ ಬೆಂಬಲ ವಿತ್ತು? ಈ ಪ್ರಶ್ನೆಗಳಿಗೆ ನಿಷ್ಕೃಷ್ಟವಾದ ಉತ್ತರ ಹೇಳುವುದು ಅಷ್ಟೇನೂ ಸುಲಭವಲ್ಲ. ಹಲವರ ಎಣಿಕೆಯಲ್ಲಿ ಕ್ರೆಯೋನ್ ಧರ್ಮದ ಪ್ರತಿನಿಧಿಯಲ್ಲ, ನ್ಯಾಯಮೂರ್ತಿಯಲ್ಲ; ಅವನಿಗೆ ನಾಡಿನ ಬೆಂಬಲವಿಲ್ಲ. ಆದರೆ, ಹೀಗೆ ಕ್ರೆಯೋನ್ ಸುಮ್ಮನೆ ತನ್ನ ಹಗೆಯನ್ನು ಸಾಧಿಸಿಕೊಂಡನೆಂದೂ ಅದರಲ್ಲಿ ಅವನಿಗೆ ನಾಡಿನ ಬೆಂಬಲ ಎಳ್ಳಷ್ಟೂ ಇರಲಿಲ್ಲವೆಂದೂ ಇಟ್ಟುಕೊಂಡುಬಿಟ್ಟರೆ ನಾಟಕದಲ್ಲಿ ಅಂಥ ಧರ್ಮಸಮಸ್ಯೆಯೇನೂ ಬರದೆ, ಅದು ಉತ್ತಮ ರುದ್ರಕಾವ್ಯ ವಾಗಿ ಸುಂದರ ಕಲಾಕೃತಿಯಾಗುವುದು ಬಿಟ್ಟು, ಶುದ್ಧ ನಿರ್ದೋಷಿಗೂ ಪರಮ ನೀಚನಿಗೂ ನಡೆದ ಹೋರಾಟವನ್ನು ಒಣತತ್ತ್ವದ ಪ್ರತಿಪಾದನೆಯ ದೃಷ್ಟಿಯಿಂದ ಚಿತ್ರಿಸಿದ ನಾಟಕಾಭಾಸವಾಗುತ್ತದೆ. ಆದ್ದರಿಂದ, ಕೊಂಚಮಟ್ಟಿಗಾದರೂ ಕ್ರೆಯೋನೂ ಅಂತಿಗೊನೆಯಂತೆಯೇ ದೊಡ್ಡ ಧರ್ಮವನ್ನೇ ಎತ್ತಿಹಿಡಿದು, ಅದಕ್ಕಾಗಿ ಹೋರಾಡಲು ಪ್ರಯತ್ನಿಸುತ್ತಿದ್ದಾನೆಂದೇ ಇಟ್ಟುಕೊಳ್ಳಬೇಕು. ಆದರೆ, ಅವನಿಗೆ ತಾರತಮ್ಯ ಜ್ಞಾನವಿಲ್ಲ, ಯುಕ್ತಾಯುಕ್ತ ವಿವೇಚನೆಯಿಲ್ಲ, ಅಳವರಿತು ನಡೆಯುವ ಜಾಣ್ಮೆಯಿಲ್ಲ. ಅಲ್ಲದೆ, ಅವನ ಆರಂಭದ ಉದಾತ್ತ ತತ್ತ್ವ ಗಳೂ ಸದಾಶಯಗಳೂ ಬರುಬರುತ್ತ ಕೇವಲ ಆತ್ಮರಕ್ಷಣ ಸಾಧನವಾಗಿಯೂ ಅಹಂಭಾವ ಪೋಷಕವಾಗಿಯೂ ಪರಿಣಮಿಸಿಬಿಟ್ಟು, ನಮ್ಮ ಸಹಾನುಭೂತಿ ಅವನಿಗೆ ದೊರೆಯುವುದು ಕಷ್ಟವಾಗಿಬಿಟ್ಟಿದೆ.

ಅಂತಿಗೊನೆ : ಅಂತಿಗೊನೆ ಯಾವೊಂದು ಕಳಂಕವೂ ಇಲ್ಲದ ಪರಿಶುದ್ಧ ವ್ಯಕ್ತಿ; ನಿಷ್ಕಾರಣವಾಗಿ ದುಃಖಕ್ಕೆ ಬಂದ ನಿರ್ದೋಷಿ. ಅವಳ ಹೊರಗು ಬಿರು ಸಾಗಿ ಕಂಡರೂ ಒಳಗು ಬಲು ಮೆಲುವು. ಅವಳ ಗಂಡು ಕೆಚ್ಚಿನಲ್ಲಿ ಹೆಣ್ಣು ಕರು ಳಿದೆ. ಅವಳ ತಪ್ಪೆಂದರೆ—ಅವಳ ನಿರ್ವ್ಯಾಜ ಪ್ರೇಮ. ಅದು ಎಲ್ಲ ಮಹಾನು ಭಾವರ, ಎಲ್ಲ ಉದಾತ್ತ ವ್ಯಕ್ತಿಗಳ ತಪ್ಪು. ತನಗೆ ಸರಿಯೆಂದು ತೋರಿದ್ದರಲ್ಲಿ

ನಿಶ್ಚಲ ಭಕ್ತಿ, ಅದನ್ನು ಕೊನೆಯ ವರೆಗೂ ಎತ್ತಿ ಹಿಡಿಯುವುದರಲ್ಲಿ ಸಂಪೂರ್ಣ ಶ್ರದ್ಧೆ, ಮನೆತನದ ನಣ್ಪು, ಹುಟ್ಟಿನಿಂದ ಬಂದ ಸೋದರ ಪ್ರೇಮ—ಇವೇ ಅವಳ ಸ್ವಭಾವದ, ಜೀವನದ ಮೂಲಾಧಾರಗಳು. ಆದರೆ, ಕೆಲವರು ಕ್ರೆಯೋನನ್ನು ರಾಜ್ಯಧರ್ಮದ ನಿಸ್ಪೃಹ ಪ್ರತಿನಿಧಿಯನ್ನಾಗಿ ಮಾಡುವ ನಿಷ್ಠೆ ಉತ್ಸಾಹಗಳಲ್ಲಿ ಅವನ ಅಧರ್ಮ ಅನ್ಯಾಯಗಳನ್ನು ಮರೆತುಬಿಡುವಂತೆಯೇ ಕಾರ್ಯಕಾರಣ ಗಳ, ಕರ್ಮಫಲಗಳ ಸಮನ್ವಯಮಾಡುವ ತತ್ವಭ್ರಾಂತಿಯಲ್ಲಿ ಅಂತಿಗೊನೆ ಯಲ್ಲಿ ಏನಾದರೊಂದು ಕರೆ, ತಪ್ಪು, ಹುಳುಕು, ದೌರ್ಬಲ್ಯ ಕಾಣಲು ಪ್ರಯತ್ನಿಸುತ್ತಾರೆ. ಅಂಥ ಕೆಲವರ ಕಣ್ಣಲ್ಲಿ ಅಂತಿಗೊನೆ ಕ್ರೆಯೋನಿನ ವಿಷಯದಲ್ಲಿ ತೋರಿಸುವ ಕಾಠಿನ್ಯ ಧಿಕ್ಕಾರ ತಿರಸ್ಕಾರಗಳೇ ಸಾಕಷ್ಟು ದೊಡ್ಡ ತಪ್ಪಾಗಿ ಬಿಟ್ಟಿವೆ. ಆದರೆ, ಆ ಕಾಠಿನ್ಯ ಧಿಕ್ಕಾರ ತಿರಸ್ಕಾರಗಳು ತಾನು ತನ್ನ ಮನೆತನದ ನಣ್ಪಿಗೆ ಹೊತ್ತ ಕಡವನ್ನು ತೀರಿಸುವಲ್ಲಿ, ತನ್ನ ಒಡಹುಟ್ಟಿದವನಿಗೆ ಸಲ್ಲಿಸಬೇಕಾದ ಒಲವಿನ ಕಾಣಿಕೆಯನ್ನು ಒಪ್ಪಿಸುವಲ್ಲಿ ಒಕ್ಕೈಯಾಗಿ ನಿಂತ ಹೆಣ್ಣೊಬ್ಬಳ ಪ್ರೇಮಾತಿಶಯದ ದೌರ್ಬಲ್ಯಾಭಾಸಗಳು ಮಾತ್ರವೆಂಬುದನ್ನು ಅವರು ಮರೆತುಬಿಡುವಂತೆ ತೋರುತ್ತದೆ. ತವರು ತೀರಿಕೊಂಡ ತಬ್ಬಲಿಗೆ, ಮದುವೆಯೊಲವು ಅರಿಯದೆಯೇ ಬೆಳೆದ ಹೆಣ್ಣಿಗೆ, ಇನಿಯನಿಗೆ ಪಾಲುಗೊಟ್ಟು ಮಿಸಲಳಿಯದ ತನ್ನೊಲುಮೆಯೆಲ್ಲವನ್ನೂ ಅಣ್ಣನಿಗೆ ಮುಡಿಪಿಟ್ಟ ತಂಗಿಗೆ ತನ್ನ ಜೀವನಾಧಾರವಾಗಿದ್ದ ಪ್ರೇಮ ಒಮ್ಮೆಯೇ ನಿರಾಲಂಬವಾದ್ದನ್ನು ಕಂಡು ಸಹಿಸಲಾಗಲಿಲ್ಲ. ಬಲಿಬಿದ್ದ ಅಣ್ಣನ ಹೆಣ ನಾಯಿನರಿಗಳಿಗೆ ಎರೆಯಾಗಿ ಹುಡಿಯೊಳಗೆ ಹೊರಳುತ್ತಿರುವುದನ್ನು ಕಂಡು ತಡೆಯಲಾಗಲಿಲ್ಲ. ಆ ಇರವಿ ನಲ್ಲಿ ತನ್ನೊಳಗು ನುಡಿದಂತೆ ನಡೆದು ಬದುಕು ಜೀರುವುದು ಅಂತಿಗೊನೆಗೆ ದೊಡ್ಡದೆನಿಸಲಿಲ್ಲ. ಅಷ್ಟೇ ಅಲ್ಲ, ಪ್ರಾಣಕೊಟ್ಟು ಮಾನ ಕಾಯುವುದಕ್ಕಿಂತ, ಮಾನಕಾದು ಸಾಯುವುದಕ್ಕಿಂತ ಬೇರೆ ದಾರಿಯೇ ಅವಳಿಗಿರಲಿಲ್ಲ. ಅವಳ ಒಲುಮೆ ಬದುಕಿಗೆ ಅಂಥ ಸಾವೇ ತಕ್ಕ ಮುಗಿವು.

ಜಿಲ್‌ಬರ್ಟ್‌ನಾರ್‌ವುಡ್ಡರ ಪ್ರಕಾರ ನಾಟಕದಲ್ಲಿ ಕ್ರೆಯೋನ್ ಮತ್ತು ಅಂತಿಗೊನೆಯರಿಬ್ಬರ ಮುಂದೆಯೂ ಒಂದೊಂದು ಸಮಸ್ಯೆ ಬಂದು ನಿಲ್ಲುತ್ತದೆ : " ದೇಶದ್ರೋಹಿಗೆ ಶವಸಂಸ್ಕಾರ ತಡೆಯುವುದೇನೋ ಸರಿ. ಆದರೆ, ಅದಕ್ಕೆ

ಅಡ್ಡಿ ಬಂದವರನ್ನು ಕೊಲ್ಲುವುದು ಸರಿಯೆ ?" "ಸತ್ತ ಅಣ್ಣನಿಗೆ ಒಲುಮೆ ಮರುಕಗಳನ್ನು ತೋರಿಸುವುದೇನೋ ಸರಿ. ಆದರೆ, ನಾಡಿನ ಕಟ್ಟಳೆಯನ್ನು ಕಡೆಗಣಿಸಿ ನಡೆಯುವುದು ಸರಿಯೆ ?" ಅಂತಿಗೊನೆ ಕ್ರಿಯೋನ್ ವ್ಯಕ್ತಿಯ ಮತ್ತೊಂದು ರೂಪ. ಅವಳ ಸಹಾನುಭೂತಿ ಪ್ರವೃತ್ತಿಗಳು ಬೇರೆ ಕಡೆ, ಅಷ್ಟೆ. ಕ್ರಿಯೋನಿನ ಕಾಠಿಣ್ಯ ಸಂಕೋಚಗಳೆಲ್ಲವೂ ಅಂತಿಗೊನೆಯಲ್ಲಿವೆ. ಅದರಲ್ಲಿಯೂ ಅವನ ಮೊಂಡುತನವೆಲ್ಲವೂ ಅವಳಲ್ಲಿ ತುಂಬಿದೆ. ಕ್ರಿಯೋನ್ ತನ್ನ ಧ್ಯೇಯ ಸಾಧನೆಗಾಗಿ ಅಂತಿಗೊನೆಯನ್ನು ಬಲಿಗೊಟ್ಟರೆ, ಅಂತಿಗೊನೆ ತನ್ನ ಧ್ಯೇಯ ಸಾಧನೆಗಾಗಿ ಹಯ್‌ಮೋನನ್ನು ಬಲಿಗೊಡುತ್ತಾಳೆ. ಕ್ರಿಯೋನ್ ತನ್ನ ಮಗನ ವಿಷಯದಲ್ಲಿ ಕಠಿನವಾಗಿ ವರ್ತಿಸಿದರೆ, ಅಂತಿಗೊನೆ ತನ್ನ ತಂಗಿಯ ವಿಷಯದಲ್ಲಿ ಕಠಿನವಾಗಿ ವರ್ತಿಸುತ್ತಾಳೆ. ಕೇವಲ ರಾಜ್ಯಶಾಸನಕ್ಕೂ ವ್ಯಕ್ತಿಯ ಆತ್ಮಸಾಕ್ಷಿಗೂ ಮಧ್ಯಮಾರ್ಗವನ್ನು ಹಿಡಿಯಬೇಕೆಂದು ವಾದಿಸುವ ಹಯ್‌ಮೋನ್, ಇಸ್ಮೇನೆ ಮೊದಲಾದವರನ್ನು ಇಬ್ಬರೂ ಅಲ್ಲಗಳೆಯುತ್ತಾರೆ.

ಕೆಲವರ ದೃಷ್ಟಿಯಲ್ಲಿ ಅಂತಿಗೊನೆಯ ಮೊದಲ ಕೆಚ್ಚನ್ನೂ ಕೊನೆಯ ಕಳವಳವನ್ನೂ ಸರಿಹೊಂದಿಸುವುದು ಕಷ್ಟ. "ಲೇಸು ನಾನ್ ಈ ಎಸಕದೊಳ್ ಸಾಯೆ . . . ಇತ್ತಣವರಿಂದೆಯುಮ್ ಮಿಗಿಲಾಗಿ ಕಿಟ್‌ಸೆಲದರನ್ ತಣಿವುದೆನ್ನ ಕರ್ತವ್ಯಮೇಗಳುಮ್. . . ಈ ಕಟ್ಟಳೆಯನೆನಗೆ ಮಾಡಿದೊನ್ ಸ್ಯೂಸ್ ದೇವನಲ್ಲ . . . ಆವೊರ್ವನಾಳ ಅಹಮ್ಮಿಗಾದೊಡಮಂಜೆ ನಾನ್ ಅವಱನ್ (ದೇವತೆಗಳಿಟ್ಟಾ ಕಟ್ಟಳೆಗಳನ್) ಅತಿಚರಿಸಿ ದೇವರ್ಗೆ ತೆಱೆನೆ ದಂಡಮನ್" ಎಂದು ಮೊದಲಾಗಿ ಪೌರುಷಕೊಚ್ಚಿ, ಸಾವು ಬಳಿಸಾರಿದಾಗ ಅಂತಿಗೊನೆ ಕಣ್ಣೀರಿಟ್ಟು "ಬಾಸವರ ಧರ್ಮಮನ್ ನಾನಾವುದನ್ ಮಿಕ್ಕು ನಡೆದೆನ್ ? . . . ದೇವತೆಗಳಾ ಕಣ್ಗೆ ದೊಪ್ಪುವೊಡೆ, ನಮೆದು ಫಲಮುಂಡು, ಕಂಡಱುವೆ ನಾನ್ ಗೆಯ್ದ ತಪ್ಪನ್" ಎಂದು ಮುಂತಾಗಿ ಅಳುಕುವುದು ಅವಳ 'ಗಂಡಿಗೆ'ತಕ್ಕದ್ದಲ್ಲ. ಆದರೆ, ಅವರು ಒಂದನ್ನು ಮರೆತುಬಿಡುವಂತೆ ತೋರುತ್ತದೆ. ಒಂದು ಸರಪಿಳ್ಳೆಯಾದರೂ ತನಗೆ ಮರುಗಿ ಸಹಾನುಭೂತಿ ತೋರದೆ, ತಾನು ಮಾಡಿದ್ದು ಸರಿ ಎನ್ನದೆ, ಎಲ್ಲರೂ ಮೂದಲಿಸಿ ಕೆಣಕಿ ಲೋಕವೇ ತನಗೆ ವಿರುದ್ಧವಾಗಿ ತೋರಿದಾಗ, ಎಂಥ ಕೆಚ್ಚೆದೆಯ ಗಂಡಿಗಾದರೂ

ಒಮ್ಮೊಮ್ಮೆ ಕಳವಳದ ಕಾರ್ಮೋಡ ಕವಿದು ತನ್ನರಿವು ಮಸುಳದಿರದು. ಅಂತಿಗೊನೆ ಆತ್ಮಸಾಧನೆಮಾಡಿದ ಮಹಾತ್ಮಳಲ್ಲ; ಸಲವು ಒಲವುಗಳಿಗೆ ಮನಸೂರೆಗೊಟ್ಟ ಹಸುಮಗು, ಲೋಕಕ್ಕೆ ಬೇಸತ್ತ ಹೆಣ್ಣು. ಅಲ್ಲದೆ, ಕಾರ್ಯಪ್ರಚೋದಕವಾದ ಮೊದಲಿನ ಆವೇಶಭರ ಕಾರ್ಯಸಾಧನೆಯಾದ ಮೇಲೆ ಶಮನಹೊಂದಿ, ಕಾವು ಆರಿ, ತಣ್ಣಗಾದವಳು. ಕೊನೆಗಾದರೂ ಅವಳು ಕೇಳುವುದೇನು? ಸಾವು ಬೇಡವೆಂದಲ್ಲ. ಅವಳ ಅಳುವೆಲ್ಲ ಮಾನವ ಮರುಕಕ್ಕಾಗಿ. "ಅಟ್ಟುಕೆಳೆ ಇಲ್ಲದೆಯೆ ಪೋಪೆನ್ . . . ಅಟುವಿಲ್ಲ, ಕೆಳೆಯಿಲ್ಲ . . . ಕೆಳೆಯಾರುಮೆನಗಾಗಿ ಕಣ್ಣೀರನಿಡರೆ, ಕೆಳೆಯಾರುಮೆನಗಾಗಿ ಗೋಳಾಟಮಿಡರೆ . . . ಆವ ಕೆಳೆಯನ್ ಕರೆವೆನಾನಿಂದು." ಇದೇ ಅವಳ ನೊಂದೆದೆಯನ್ನು ಕೊರೆಯುತ್ತಿದ್ದದ್ದು.

ಕೃತ್ಯ ನಡೆದುಹೋಗಿ ಅಂತಿಗೊನೆಗೆ ಶಿಕ್ಷೆಯಾಗಲಿದ್ದಾಗ ಇಸ್ಮೇನೆ ತಪ್ಪಿನಲ್ಲಿ ಪಾಲೊಪ್ಪಿಕೊಳ್ಳಲು ಬರಲು, ತಂಗಿಯನ್ನು ಹಂಗಿಸಿ ಹೀಯಾಳಿಸಿ, ಅಕ್ಕ ತೋರಿಸಿದ ಕಠಿನವರ್ತನೆ ಸಾಧುವಲ್ಲವೆಂದು ಕೆಲವರ ಅಭಿಪ್ರಾಯ. ಆದರೆ, ಅಂತಿಗೊನೆ ಆಡಿದ ಪ್ರತಿಯೊಂದು ಮಾತೂ ನಿಜವೆಂಬುದನ್ನು ಅವರು ಮರೆತುಬಿಡುತ್ತಾರೆ. ಅಲ್ಲದೆ, ಅವಳ ವರ್ತನೆಗೆ "ನಿನ್ನನಾನ್ ನಕ್ಕೊಡಮ್ ನೋವಿಂದೆ ನಗುವೆನ್" ಎಂಬ ಮಾತಿನ ಹಿಂದಿನ ಅವಳ ಮನೋಭಾವವೇ ಉತ್ತರವಾಗಿದೆ.

ಅಂತಿಗೊನೆ ತನ್ನ ಕೊನೆಯ ಭಾಷಣದಲ್ಲಿ ಆಡಿದುವೆಂದು ಹೇಳುವ, ಪರಿಶಿಷ್ಟವಾಗಿ ಕೊಟ್ಟಿರುವ, ಹದಿನೈದು ಸಾಲುಗಳ ವಿಷಯವಾಗಿ ವಿಪರೀತವಾದ ಚರ್ಚೆ ನಡೆದಿದೆ. ಅದರ ಕೂಲಂಕಷ ವಿಮರ್ಶೆಗೆ ಇಲ್ಲಿ ಎಡೆಯಿಲ್ಲ. ಅಂತಿಗೊನೆಯಂಥ ಧೀರೋದಾತ್ತವ್ಯಕ್ತಿಯ ಬಾಯಲ್ಲಿ ಅಂಥ ಮಾತುಗಳು ತಕ್ಕದ್ದಲ್ಲವೆಂದೂ ಸೊಫೊಕ್ಲೀಸನಂಥ ಮಹಾಕವಿ ಆ ಮಾತುಗಳನ್ನು ಅವಳ ಬಾಯಲ್ಲಿ ಆಡಿಸಿರಲಾರನೆಂದೂ ಹಲವರ ಅಭಿಪ್ರಾಯ. ಅವು ಪ್ರಕ್ಷಿಪ್ತವಲ್ಲವೆಂದು ವಾದಿಸುವವರು ಕೊಡುವ ಸಮಾಧಾನಗಳಲ್ಲಿ ಬಹಳ ಸಮಂಜಸವಾದ್ದು ಜಿಲ್‌ಬರ್ಟ್ ನಾರ್‌ವುಡ್ ಎಂಬ ಪ್ರಖ್ಯಾತ ಗ್ರೀಕ್ ಪಂಡಿತನು ಮಾಡುವ ಸಮರ್ಥನೆ: "ಸಾಹಸ ಕಾರ್ಯವನ್ನು ಸಾಧಿಸಬಲ್ಲ ವ್ಯಕ್ತಿ ತಾನು

ಮಾಡಿದ್ದನ್ನು ಸಕಾರಣವಾಗಿ ಸಮರ್ಥಿಸಲಾರನೆಂಬುದೇನೂ ಹೊಸದಲ್ಲ. ಹೃದಯದ ತರ್ಕಕ್ಕೂ ಮೆದುಳಿನ ತರ್ಕಕ್ಕೂ ಸಂಬಂಧವಿಲ್ಲ. ಅಂತಿಗೊನೆಯಲ್ಲಿ ಬುದ್ಧಿಪ್ರೇರಿತ ಕಾರಣಗಳಿಲ್ಲ; ಅವಳಿಗಿರುವುದು ಸಹಜ ಚಿತ್ತಪ್ರವೃತ್ತಿ ಮಾತ್ರ. ಇಲ್ಲಿ ಅದನ್ನು ಸೊಫೊಕ್ಲೇಸ್ ಚೆನ್ನಾಗಿ ಮನವರಿಕೆಮಾಡಿಕೊಟ್ಟಿದ್ದಾನೆ. ಸಾಮಾನ್ಯರ ಬುದ್ಧಿಗೆ ಇದು ಹಿಡಿಯದೆ, ಈ ಭಾಗವನ್ನು ಪ್ರಕ್ಷಿಪ್ತವೆಂದು ತಳ್ಳಿಬಿಡುತ್ತಾರೆ."

ಕ್ರೆಯೋನ್ : ಅಂತಿಗೊನೆ ಮೀರಿದ್ದು ರಾಜ್ಯಶಾಸನವನ್ನಲ್ಲ, ಜನರ ಕಟ್ಟಳೆಯನ್ನಲ್ಲ; ಕ್ರೆಯೋನ್ ಸ್ವೇಚ್ಛಾಧಿಕಾರದಿಂದ ಮಾಡಿದ ಆಜ್ಞೆಯನ್ನು. ಅವನಿಗೆ ಹೆದಿರಿಕೊಂಡು ಪ್ರಜೆಗಳು ತಮ್ಮ ಅಸಮಾಧಾನವನ್ನು ಹೊರಗೆ ತೋರಿಸಲಿಲ್ಲವೇ ಹೊರತು, ಬಹಿರಂಗವಾಗಿ ಪ್ರತಿಭಟಿಸಲಿಲ್ಲವೇ ಹೊರತು, ಆಜ್ಞೆಯನ್ನು ಮನಃಪೂರ್ವಕವಾಗಿ ಎಲ್ಲರೂ ಒಪ್ಪಿಕೊಳ್ಳಲಿಲ್ಲ. "ಸೋಲ್ಬರೀಪರಿ ಇವರುಮ್; ಆದೊಡಮ್ ನಿನಗೆ ನಾಲಗೆ ಮುದುರಿಕೊಳ್ವರ್" ಎಂಬ ಅಂತಿಗೊನೆಯ ಸುಡಿ ಸೊಂದ ಹೆಣ್ಣಿನ ನಚ್ಚುನುಡಿಯಲ್ಲ. "ಆನ್ ಕೇಳ್ವೆನ್ ಮಱೆಯೊಳಾಪೆಣ್ಗೆ ಊರೇ ಮಱುಗಿ ಗೋಳ್ಕರೆವುದನ್" ಎಂಬ ಹಯ್‌ಮೋನಿನ ಮಾತು ಹೆಣ್ಣೊಲವಿಗೆ ಮನಸೋತ ಮಗನ ಮರುಳುಮಾತಲ್ಲ. ಇವೆಲ್ಲವೂ ನಿಜ. ಆದರೂ ಕ್ರೆಯೋನ್ ಸ್ವಸಮರ್ಥನೆಗಾಗಿ ಮಾಡುವ ದೀರ್ಘ ವಾದದಲ್ಲಿ ಹುಳುಕಿಲ್ಲವೆಂಬುದನ್ನೂ ಅವನು ಕೊಡುವ ಕಾರಣಗಳೆಲ್ಲವೂ ಕೇವಲ ತಾತ್ವಿಕ ದೃಷ್ಟಿಯಿಂದ ಸಮಂಜಸವಾಗಿವೆಯೆಂಬುದನ್ನೂ ಒಪ್ಪಿಕೊಳ್ಳಲೇ ಬೇಕು. ತವರು ಹಕ್ಕಿಲ್ಲದೆ ಪಟ್ಟಕ್ಕೆ ಬಂದ ನಿರಂಕುಶಾಧಿಕಾರಿಯ ಅಳುಕು, ಅಪನಂಬಿಕೆ, ಮೊಂಡುತನ, ಜಬ್ಬು—ಎಲ್ಲವೂ ಕ್ರೆಯೋನಿನಲ್ಲಿವೆ, ನಿಜ. ಆದರೆ, ಅವನ ಪೌರಶಿಷ್ಟಿಪಾಲನೆ, ರಾಜ್ಯವ್ಯವಸ್ಥಾನಿಷ್ಠೆ ಎಲ್ಲವೂ ಒಳಗಿನ ಹಗೆ ಹಟಗಳನ್ನು ಮರಸಲು ಹಾಕಿಕೊಂಡ ಸೋಗೇ ಹೊರತು ಅವನಲ್ಲಿ ಸತ್ಯಸಂಧತೆಯಾಗಲಿ, ಆತ್ಮಸಾಕ್ಷಿತ್ವವಾಗಲಿ ಇಲ್ಲವೆಂದು ಹೇಳುವುದಕ್ಕೆ ನಮಗೆ ಆಧಾರವೇನೂ ಇಲ್ಲ. ಅವನ ತಪ್ಪೆಂದರೆ, ಮತ್ತೆಲ್ಲದಕ್ಕೂ ಕುರುಡನಾಗಿ ಯಾವುದೋ ಒಂದೇ ಒಂದು ತತ್ವವನ್ನು ಬಲುಪಟ್ಟಾಗಿ ಹಿಡಿದುಬಿಟ್ಟು ಅದನ್ನು ವಿಪರೀತ ಪ್ರಮಾಣಕ್ಕೆ ತೆಗೆದುಕೊಂಡು ಹೋಗಿ ದುರಂತವನ್ನು ತಂದುಕೊಂಡದ್ದು.

ಇದನ್ನೆಲ್ಲಾ ನೋಡಿದರೆ, ತನ್ನ ರಾಜ್ಯವ್ಯವಸ್ಥಾಭಿಮಾನದ ಹುಚ್ಚು ನಿರಂಕುಶಾಧಿಕಾರದ ಕ್ರೌರ್ಯಕ್ಕೆ ತಿರುಗಿಕೊಂಡು, ತನ್ನ ಮೊಂಡುತನದಿಂದ ನಾಡಿಗೇ ಕೇಡಡಸಿ, ತನ್ನ ಹಟಕ್ಕೆ ಮಡದಿ ಮಕ್ಕಳನ್ನು ಬಲಿಗೊಟ್ಟು, ಕೊನೆಗೆ ಒಬ್ಬೊಂಟಿಗನಾಗಿ ಅಳಲ ಹೊರೆಯನ್ನು ಹೊರಲು ನಿಂತ ಮುದುಕನನ್ನು ಕಂಡು ಮರುಗದಿರುವುದು ಕಷ್ಟ.

ಯಾರನ್ನೂ ಲಕ್ಷಿಸದೆ, ಯಾವುದಕ್ಕೂ ಹೆದರದೆ, ಕೊಂಚವೂ ಮಣಿಯದೆ, ನಿಮಿರಿನಿಂತ ಕೆಚ್ಚಿನ ಗಂಡು ಕಣಿಯನ ಕೊನೆ ನುಡಿಗಳನ್ನು ಕೇಳಿ ನೆಲೆತಪ್ಪಿ, ದಿಗಿಲುಬಿದ್ದು, ಹೆಣ ಹೂಳುವುದಕ್ಕೆ, ಹೆಣ್ಣು ಬಿಡಿಸುವುದಕ್ಕೆ ಏಕೆ ನಿಟ್ಟೋಟ ಓಡಿದನು? "ತಾಳದುದನ್ ಆಡುವಯ್, ಬಗೆದಪರ್ ದೇವತೆಗಳ್ ಈ ಪೆಣಮನೆಂದು" ಎಂದು ಗಳಪಿದವನು ಏಕೆ "ಕಳವಳಂ ಬೆತ್ತಿನ್: ತಾನಾಮೇಗು ಮೊದಲಿಂದೆ ನಿಱುಸಿದಾ ಕಟ್ಟಳೆಗಳನ್ ಸಲಿಸಿ ನೆಗೞುತ್ತೆ ಬಾಳ್ ಮುಡಿಪಿ ಪೋಗೆ" ಎಂದು ಒಪ್ಪಿಕೊಳ್ಳುತ್ತಾನೆ? "ಅಕ್ಕಕ್ಕೆ! ಮಾಡುಗೆ! ಪೋ, ನೆಸೆಗೆ ಆಳಳವು ಮಾಱಿದೆಲ್ಲಮುಮನ್" ಎಂದು ಮಗನನ್ನು ಕಡೆಗಣಿಸಿ ಅಟ್ಟಿದವನು ಏಕೆ "ಬಾ, ಕಂದ! ಮೊಱೆಯಿಟ್ಟು ಬೇಡುವೆನ್ ಬಾರಾ!" ಎಂದು ಅಂಗಲಾಚುತ್ತಾನೆ? ಉತ್ತರಕ್ಕೆ ಬಹು ದೂರ ಹೋಗಬೇಕಾಗಿಲ್ಲ. ಕಣಿಯನು ನುಡಿದ ಕೇಡುಗಳು ಎಂಥ ಕೆಚ್ಚೆದೆಯ ಧೀರನನ್ನಾದರೂ ತಲ್ಲಣಗೊಳಿಸುವಂಥವು. ಅಂಥದರಲ್ಲಿ ಹಟ ಮೊಂಡುತನಗಳು ಹೊರಹೊದಿಕೆಯಾದ ಬಡಕೆಚ್ಚಿನ ಮುದುಕ ಮಡದಿಮಕ್ಕಳ ಕೇಡಿನ ನುಡಿಗಳನ್ನು ಕಿವಿಯಾರ ಕೇಳಿ ಕುಸಿಯುವುದು ಹೆಚ್ಚಲ್ಲ. ಅಲ್ಲದೆ, ಅತಿ ಔದ್ಧತ್ಯ ಅತಿ ನಮ್ರತೆಗಳು ದುರ್ಬಲಹೃದಯದ ಎರಡು ಮುಖಗಳು; ಸಂದರ್ಭಾನುಸಾರ ಒಂದಲ್ಲ ಒಂದು ಕಾಣಿಸಿಕೊಳ್ಳುತ್ತದೆ.

ಕ್ರಿಯೋನ್ ಅರಮನೆಯಿಂದ ಹೊರಟು ಮೊದಲು ನೇರವಾಗಿ ಗವಿಗೆ ಹೋಗಿ ಸೆರೆಯಿಟ್ಟ ಹೆಣ್ಣನ್ನು ಬಿಡಿಸದೆ, ದಾರಿಯಲ್ಲಿ ತಡೆದು ಹೆಣ ಹೂಳುವುದಕ್ಕೆ ಏಕೆ ನಿಂತುಕೊಂಡನು? ವಿಷಮಾವಸ್ಥೆಯಲ್ಲಿ, ಬದುಕಿರುವವರನ್ನು ಮೊದಲು ವಿಚಾರಿಸಿ ತರುವಾಯ ಸತ್ತವರಿಗೆ ಸಂಸ್ಕಾರ ನಡಸಬೇಕಾಗಿತ್ತಲ್ಲವೇ? ಈ ಪ್ರಶ್ನೆಯನ್ನು ಹಲವು ವಿಮರ್ಶಕರು ಕೇಳಿದ್ದಾರೆ. ಅವರಲ್ಲಿ

ಕೆಲವರ ಪ್ರಕಾರ ಈ ಕ್ರಮಪಲ್ಲಟ ಕಲಾದೃಷ್ಟಿಯಿಂದ ಒಂದು ದೋಷ; ಮತ್ತೆ ಕೆಲವರ ಪ್ರಕಾರ ಬೇಕೆಂದೇ ಸೊಫೊಕ್ಲೀಸ್ ಈ ವ್ಯತ್ಯಯ ಮಾಡಿದ್ದಾನೆ. ಸರ್ ರಿಚರ್ಡ್ ಜೆಬ್ ಎಂಬ ಪ್ರಖ್ಯಾತ ಗ್ರೀಕ್ ಪಂಡಿತನ ಪ್ರಕಾರ, ಅಂತಿಗೊನೆ ಹಯ್‌ಮೋನರು ಸತ್ತುಹೋದರೆಂದು ತಿಳಿಸಿಬಿಟ್ಟು ತರುವಾಯ ಶವಸಂಸ್ಕಾರ ವನ್ನು ವಿವರಿಸತೊಡಗಿದರೆ ಪ್ರೇಕ್ಷರಿಗೆ ಆಸಕ್ತಿ ಕುಗ್ಗಿ, ಸ್ವಾರಸ್ಯ ಕೆಟ್ಟುಹೋಗಿ, ದೂತನ ಉಜ್ವಲಕಥನ ಕಳೆಕಟ್ಟುವುದಿಲ್ಲವೆಂದು ತಿಳಿದು ಕವಿ ಹೀಗೆ ಮಾಡಿ ದ್ದಾನೆ. ಇವೆಲ್ಲ ಸಮಸ್ಯೆ ಇಲ್ಲದ ಕಡೆ ವಿಪರೀತ ದೃಷ್ಟಿಯಿಂದ ಕೃತಕಸಮಸ್ಯೆ ಹುಟ್ಟಿಸಿಕೊಂಡು ಜಾಣತನದಿಂದ ವಾದ ಪ್ರತಿವಾದಗಳನ್ನು ಮಾಡಿ ಅದನ್ನು ಬಗೆಹರಿಸಲೆಳಸುವ ಅತಿವಿಮರ್ಶೆಯೇ ಹೊರತು ಮತ್ತೆ ಬೇರೆಯಲ್ಲ. ಸಂವಿಧಾನ ದಲ್ಲಿ ಯಾವ ಶೈಥಿಲ್ಯವಾಗಲಿ, ದೋಷವಾಗಲಿ ಇಲ್ಲವೆಂದೂ ಈಗಿರುವ ಕ್ರಮವೇ ಸರಿಯಾದ್ದೆಂದೂ ವಾದಿಸುವವರಲ್ಲಿ ಜಿಲ್‌ಬರ್ಟ್ ನಾರ್‌ವುಡ್ ಪಂಡಿತನನ್ನು ಉದಾಹರಿಸಬಹುದು. ಅವನ ಪ್ರಕಾರ "ಅಂತಿಗೊನೆಯ ಪಾತ್ರಕ್ಕೆ ಇಲ್ಲದ ಪ್ರಾಧಾನ್ಯ ಕೊಟ್ಟುಕೊಂಡು ನಾಟಕದ ಯಥಾರ್ಥಭಾವ ವನ್ನು ಗ್ರಹಿಸದಿರುವುದರಿಂದಲೇ ಈ ಸಮಸ್ಯೆ ತಲೆಹಾಕುತ್ತದೆ. ಪೊಲುನೆಯ್ ಕೇಸಿನ ಹೆಣಕ್ಕೆ ಸಂಸ್ಕಾರ ಮಾಡದ್ದರಿಂದ ದೇವತೆಗಳಿಗೆ ಉಂಟಾಗಿರುವ ಕೋಪದಿಂದ ಒದಗುವ ಅನರ್ಥಗಳನ್ನು ಕಣಿಯಸು ಕ್ರೆಯೋನಿಗೆ ಎಚ್ಚರಿಕೆ ಕೊಟ್ಟಿದ್ದಾನೆ. ಒಟ್ಟು ಪ್ರಜೆಗಳು, ಕೊನೆಗೆ ತನ್ನ ಮನೆಯ ಹಲವರು, ಒಂದು ಹೆಣ್ಣಿಗಿಂತ ಹೆಚ್ಚು." ಅಲ್ಲದೆ ಮೊದಲಿನಿಂದಲೂ ಕ್ರೆಯೋನ್ ಅಂತಿಗೊನೆಯ ವಿಷಯದಲ್ಲಿ ಅಷ್ಟು ಪ್ರೇಮವಾಗಲಿ, ಮರುಕವಾಗಲಿ ತೋರಿಸಿಲ್ಲ. ಕಣಿಯಸ ಕೇಡುನುಡಿಗಳನ್ನು ಕೇಳಿ ದಿಗಿಲುಗೊಂಡು, ಕಂಗೆಟ್ಟು "ನಾನೆ ಅವಳನಾ ಸೆಱೆಯೊಳಿಟ್ಟೆನ್; ಮೇಣ್ ನಾನೆ ಬಿಡಿಪೆನ್?" ಎಂದು ಹೇಳಿರುವುದನ್ನು ಬಿಟ್ಟುಬಿಟ್ಟರೆ ಮುಂದೆಲ್ಲಿಯೂ ಕ್ರೆಯೋನಿನ ಬಾಯಲ್ಲಿ ಅಂತಿಗೊನೆಯ ಪ್ರಸ್ತಾಪವೇ ಇಲ್ಲ. ಗವಿಯಲ್ಲಿ ತನ್ನ ಮಗನ ಪಾಡನ್ನು ಕಂಡು "ಬಾ, ಕಂದ! ಮೊಱೆಯಿಟ್ಟು ಬೇಡುವೆನ್ ಬಾರಾ!" ಎಂದು ಗೋಳಿಟ್ಟನೇ ಹೊರತು, ಅಂತಿಗೊನೆಗಾಗಿ ಒಂದು ಬಟ್ಟಾದರೂ ಕಣ್ಣೀರಿಲ್ಲ. ಅವಳು ಅವನ ಕಣ್ಣಿಗೇ ಬೀಳಲಿಲ್ಲವೋ ಏನೊ! ಕೊನೆಗೆ ತಾನು ಕೊಂದವರನ್ನೆಲ್ಲಾ ನೆನೆದು

"ಓ ಕಂದ! ಕೊಂದೆನಾನ್ ಅಱಿಯದೆಯೆ ನಿನ್ನನ್; ನಿನ್ನುಮೋ ಇನಿಯಳೇ! ಕೊಂದೆನಾನ್ ನಿನ್ನನ್" ಎಂದು ತನ್ನ ಮಗ ಮಡದಿಯರನ್ನು ಹೇಳುತ್ತಾನೆಯೇ ಹೊರತು, ಅಂತಿಗೊನೆಯ ಹೆಸರಿಲ್ಲ. ಅಷ್ಟೇಕೆ! ಮಗನ ಹೆಣವನ್ನು ಮನೆಗೆ ಹೊತ್ತುಕೊಂಡು ಬಂದನಲ್ಲ; ಅಂತಿಗೊನೆಯ ಹೆಣವನ್ನು ಏನು ಮಾಡಿದನು? ಒಂದು ಮಾತಿನಲ್ಲಿ ಹೇಳುವುದಾದರೆ—ಅಂತಿಗೊನೆಗೆ ಪ್ರೇಕ್ಷಕರ ದೃಷ್ಟಿಯಲ್ಲಿ ಎಷ್ಟು ಪ್ರಾಮುಖ್ಯತೆಯಿದೆಯೋ ಅಷ್ಟು ಪ್ರಾಮುಖ್ಯತೆ ಕ್ರೆಯೋನಿನ ದೃಷ್ಟಿಯಲ್ಲಿಲ್ಲ. ಅವಳು ನಡುವೆ ಬಂದು ಹೋಗಿಬಿಡುತ್ತಾಳೆ. ಅವನು ಮಾತ್ರ ಮೊದಲಿನಿಂದ ಕೊನೆಯ ವರೆಗೂ ಇರುತ್ತಾನೆ. ಇದನ್ನೆಲ್ಲಾ ನೋಡಿದರೆ, ಇದು ಅಂತಿಗೊನೆಯ ದುರಂತವೋ ಕ್ರೆಯೋನಿನ ದುರಂತವೋ, ಇಲ್ಲ ಇಬ್ಬರದೂವೋ ಹೇಳುವುದು ಕಷ್ಟ.

ಕೊನೆಯಲ್ಲಿ ಇಸ್ಮೇನೆ ಮತ್ತು ಹಯ್‌ಮೋನರನ್ನು ಕುರಿತು ಒಂದೆರಡು ಮಾತಾಡಬಹುದು. ಇಸ್ಮೇನೆ ಶುದ್ಧ ಹೇಡಿ, ಪುಕ್ಕಲಿ ಎಂದು ನಮಗೆ ತೋರಬಹುದು. ಆದರೆ, ಹಾಗೆ ಎಣಿಸುವುದು ಅನ್ಯಾಯ. ಅವಳು ಅರಮನೆಯಲ್ಲಿ ಬೆಳೆದ ಹಸುಮಗು, ಅಷ್ಟೆ. ಗಂಡುಕೆಚ್ಚಿನ ಅಕ್ಕನ ಹೋಲಿಕೆಯಿಂದ ಇಸ್ಮೇನೆಯ ಸ್ತ್ರೀಸಹಜವಾದ ಭೀರುತೆ ದೊಡ್ಡ ಅವಗುಣವಾಗಿ ಕಾಣುತ್ತದೆ. ಇಸ್ಮೇನೆಯ ನೀತಿ ಬಹು ಸುಲಭವಾದ್ದು—"ನಾಮ್ ಪೆಣ್ಗಳ್ . . . ಆಣ್ಗಳೊಳ್ ಪೋರಲ್ಕೆ ಪುಟ್ಟಿದವರಲ್ಲ . . . ಎಮ್ಮ ನಾಳ್ವವನ್ ಬಲ್ಲಿದನ್ . . . ಮಣಿವೆನಧಿಕಾರಕ್ಕೆ . . . ಮಿತಿಮಿಾಱಿ ನೆಗಳ್ವುದೇ ಜಾಣ್ಮೆ ತಾನಲ್ಲಮ್." "ನಾನ್ ಅವಱೊಳ್ ಅಶ್ರದ್ಧೆಯಿನ್ ನೆಗಱೆನ್. ಆದೊಡಮ್ ಪ್ರಭುಗೆ ಇದಿರ್ವಿಟ್ಟು ನಡೆಯಲಾಱ್ಪನ್ ಪಡೆದು ನಾನ್ ಬಂದೆನಿಲ್ಲ" ಎಂದು ಇಸ್ಮೇನೆ ಹೇಳಿದ್ದು ಅಕ್ಷರಶಃ ನಿಜ. ಅಂತಿಗೊನೆ ಹೇಳುವಂತೆ "ಇದುವೆಲ್ಲ ಬಱಿಯ ನೆಪಮ್" ಅಲ್ಲ. ಆದರೆ, ಕೊನೆಯಲ್ಲಿ ಅಕ್ಕನಿಗೆ ಒದಗಿದ ಕೇಡನ್ನು ಕಂಡು ತಡೆಯಲಾರದೆ ಪ್ರೇಮ ಕೆರಳಿ, ಆಳ ಕಲಕಿ, ಮನ ಚುಚ್ಚಿ ನೋಯುತ್ತಾಳೆ. ಸಾವಿಗೆ ಹೆದರುವ ಹೆಣ್ಣಲ್ಲವೆಂಬುದನ್ನು ತೋರಿಸಿಕೊಡುತ್ತಾಳೆ. ಅಂತಿಗೊನೆಯ ವೀರಪಾತ್ರಕ್ಕೆ ಇಸ್ಮೇನೆಯ ಕೋಮಲಪಾತ್ರ ಹಿನ್ನೆಲೆಯಾಗಿ ಕಳೆ ಕೊಡುತ್ತದೆ.

ಹಯ್‌ಮೋನ್ ಬುದ್ಧಿವಂತ; ಲೋಕವ್ಯವಹಾರ ತಿಳಿದವನು. ಉದ್ದಕ್ಕೂ

ತನ್ನ ವಾದದಲ್ಲಿ ತಂದೆಯ ಕೀರ್ತಿಗಾಗಿ ಹೊಡೆದಾಡುತ್ತಿರುವಂತೆ ಮಾತನಾಡುತ್ತಾನೆಯೇ ಹೊರತು ಅವನು ಅಂತಿಗೊನೆಯಲ್ಲಿಟ್ಟಿರುವ ಪ್ರೇಮವನ್ನು ಕುರಿತು ಒಮ್ಮೆಯಾದರೂ ಬಾಯಿಬಿಡುವುದಿಲ್ಲ. ಅಲ್ಲದೆ, ಹಯ್‌ಮೋನ್ ಮಾತಾಳಿಯಲ್ಲ, ಕೆಲಸಿಗ. ಇಸ್ಮೇನೆಯೂ ಹಯ್‌ಮೋನೂ ಸ್ವಲ್ಪ ಹೆಚ್ಚು ಕಡಮೆ ಒಂದು ತೂಕವೆನ್ನಬಹುದು. ಅಂತಿಗೊನೆಗೆ ಇಸ್ಮೇನೆ ಹೇಗೋ ಹಾಗೆ ಕ್ರೆಯೋನಿಗೆ ಹಯ್‌ಮೋನ್ ಹಿನ್ನೆಲೆ. ಇಬ್ಬರೂ ಮಿತವಾದಿಗಳು, ಅಳವರಿತು ಹದವರಿತು ನಡೆಯುವವರು. ಆದರೇನು? ಅಂತಿಗೊನೆ ಕ್ರೆಯೋನರಂಥ ಭೀಷಣ ಸಾಹಸ ವ್ಯಕ್ತಿಗಳ ರೌದ್ರಾವೇಶದ ಸುಳಿಯಲ್ಲಿ ಇಸ್ಮೇನೆ ಹಯ್‌ಮೋನರಂಥ ಸುಂದರ ಸರಳ ವ್ಯಕ್ತಿಗಳು ತರಗೆಲೆಯಿದ್ದಂತೆ.

ಅಂತಿಗೊನೆ

ಪಾತ್ರಂಗಳ್ :

ಅಂತಿಗೊನೆ

ಇಸ್‌ಮೇನೆ

ಕ್ರೆಯೋನ್

ಕಾಪಿನಾಳ್

ಹಯ್‌ಮೋನ್

ತೆಯ್‌ರೆಸಿಯಸ್

ದೂತನ್

ಯೂರುದಿಕೆ

ದೂತನ್ (ಎರಡನೆಯನ್)

ಥೇಬಾಯ ಪಿರಿಯರ ಮೇಳವ್

ಅಂತಿಗೊನೆ

[ಅರಮನೆಯ ಮುಂಬಾಗಿಲ ಮುಂದೆ—ಅಂತಿಗೊನೆ, ಇಸ್ಮೇನೆ]

ಅಂತಿಗೊನೆ

ಓ ಎನ್ನ ಇಸ್ಮೇನೆ! ಒಚ್ಚೆರೆಯ ನೆತ್ತರನ್ ಪಾಲ್‌ಗೊಂಡ ತಂಗೆ!
ಅಱಿಯೆಯಾ ಸ್ಯೂಸ್‌ದೇವನೆಂತೊಯ್ದಿ ಪೌಸಿನಾ ಪಾಪಮನ್ ಬಿಡದೆ,
ಮೊಗೆಮೊಗೆದು ನೆಱಪಿದಪನಿನ್ನು ಮುೞಿದಿರ್ಪ ನಮ್ಮಿರ್ವರಾ ಬಾೞೊಳ್ ?
ಉಣ್ಣದುದನೊಂದುಮನ್ ಕಾಣೆನಾನ್, ಎನ್ನೞಲ್, ನಿನ್ನೞಲ್ : ನೋವೊ
ಮೇಣ್ ಕೇಡೊ,
ಧಿಕ್ಕಾರಮೋ, ಇಲ್ಲ, ಅಪಮಾನಮೋ, ಬಂದಱೊಳಮೞಕೆಯಿಲ್ಲ.
ಈಗಳಿದನೇನೆಂಬೆ? ಪಡೆಯೊಡೆಯನ್, ಎಮ್ಮಾಳ್ದನ್, ಊರ್ಗೆಲ್ಲಮಿಾಗಳ್,
ಸಾಱಿರ್ಪನೆಂಬರೇ ಶಾಸನಮನ್ ? ಬಲ್ಲೆಯೋ ? ಇಲ್ಲ, ಪಗೆಕೇಡು
ಕೆಳೆಯರನ್ ತಾಸಮರ್ದ ಪಾಡು ನಿನ್ನಱಿವಿಂಗೆ ಬಾರದೆಯೆ ಪೋಯ್ತೊ ?

ಇಸ್ಮೇನೆ

ಇಲ್ಲಮ್, ಅಂತಿಗೊನೆ. ಒರ್ವನ ಕಯ್ಯಿನೊರ್ವನ್, ಒರ್‌ಪಗಲೊಳಿರ್-
ಕೊಲೆಯಿನ್,
ಬಿದ್ದ ನಮ್ಮೊಡವುಟ್ಟಿದಣ್ಣಂದಿರಿರ್ವರನ್ ನಿನ್ನೆ ನಾಮಿರ್ವರ್
ನೀಗಿಕೊಂಡಂದಿನಿಂದಿನ್ನೆವರಮ್, ಎಮ್ಮ ಕೆಳೆಯರ ಸುದ್ದಿ ಏನುಮ್
ಮುಟ್ಟಿರ್ಪುದಿಲ್ಲೆನ್ನನ್ ; ಇನಿಯದೋ ನೋವಿನದೊ ಏನೊಂದುಮಿಲ್ಲ.
ಅರ್ಗೊಸರ ಪಡೆ ಇರುಳ್ ಕಾಲೆತ್ತಿದಿತ್ತಣಾ ವಾರ್ತೆಯೊಂದಱಿಯೆನ್.

ಅಂತಿಗೊನೆ

ನೆಱೆಬಲ್ಲೆನಾನದನ್. ಮಱೆಗೆ ಕರೆದುಯ್ದೆನದಱಿಂದಮೇ ನಿನ್ನನ್
ಮನೆಯ ಮುಂಬಾಗಿಲಿನ್ ಪೊಱಗಣ್ಗೆ, ನೀನೊರ್ವಳೇ ಕೇಳಲೆಂದು.

ಇಸ್ಮೇನೆ

ಏನದು ? ದಿಟಮಾವುದೋ ಗಹನಮಲೆಯುತಿರ್ಕುಮ್ ನಿನ್ನ ಬಗೆಯನ್.

ಅಂತಿಗೊನೆ

ಇನ್ನೇನ್ ? ಮಡಿದ ನಮ್ಮಣ್ಣಂದಿರಿರ್ವರದು : ಉತ್ತರ ಕ್ರಿಯೆಗೆ
ತಕ್ಕನೆಂದೊರ್ವನನ್ ಗೌರವಿಸಿದನ್ ಕ್ರೆಯೋನ್ ; ತಗನೆಂದು ಕಳೆದನ್
ಮತ್ತೊರ್ವನನ್. ನೇರ್ಮೆಯನ್ ನೆನೆದು, ನಿಱಿಯುಮನ್, ಅಱಿಮುಮನ್
ಪಿಡಿದ
ಎತೆಯೊಕ್ಲೇಸ್ ಅಣ್ಣನನ್ ಮಣ್‌ಮಾಡಿ ಕಿಱ್‌ನೆಲದೆ ಕಟಿದರೊಳ್ ಪುಗಿಸಿ
ಮನ್ನಿಸಿದನೆಂಬರ್. ಕೊಲೆಮಡಿದ ಪಾಪಿ ಪೊಲುನೆಯ್‌ಕೆಸಿನ ಪೆಣಮನ್
ಮಣ್‌ಮಾಡದಿರ್ಕ್ಕಾರುಮ್, ಅೞದಿರ್ಕೆ. ಅೞದೆ, ಪೂೞದೆ, ಬಯಸಿ ಪಾರ್ದು
ನಲಿದೆಱಪ ಪರ್ದಿಂಗೆ ಸವಿಯೆರೆಯ ನಿಧಿಯಾಗೆ ಬಿಸುಟಿರ್ಕೆ ಬಯಲೊಳ್,
ಎಂದಿಂತು ರಾಜಾಜ್ಞೆ ಪಟ್ಟಣಕೆ—ನಿನಗೆ ಮತ್ತೆನಗೆ—ದಿಟಮದಱೊಳುಮ್
ನನಗೆ,
ನಮ್ಮೊಳ್ಳಿದನ್ ಕ್ರೆಯೋನ್ ವಿಧಿಸಿರ್ಪ ಕಟ್ಟಾಣೆ. ಇನಿತಱೊಳೆ ಬರ್ಪನ್
ಇದನಱಿಯದರ್ಗೆ ತಾನ್ ಸಾಱಲ್ಕೆ. ಬಱಿಯಾಟಮೆಂದಿದನ್ ಬಗೆಯನ್.
ಇವಱೊಳೇನೊಂದುಮನ್ ಮಿಕ್ಕರನ್ ಬಿಡದೆ ನಡುಕೇರಿಯೊಳ್ ನಿಲಿಸಿ,
ಕಲ್ಲಿಟ್ಟು ಕೊಲ್ಲಿಪನ್. ಇಂತಿರ್ಕುಮೆಮ್ಮಿರವು. ಇನ್ ತೋಱ್ಪೆ ನಿನ್ನ
ಪೆರ್‌ಮನೆಯ ಪುಟ್ಟನ್ ; ಇಲ್ಲ ಪೆರ್‌ಕುಡಿಗೊಗೆದ ನಿನ್ನ ಕೀೞ್‌ತನಮನ್.

ಇಸ್ಮೇನೆ

ಓ ಅಕ್ಕ, ನಮ್ಮ ಪಾಡಿಂತಾಗೆ, ಎಂತು
ನೆರವಪ್ಪೆನೋ ನಿನಗೆ ಮಾಡೆ ಮೇಣ್ ಮುಱಿಯೆ ?

ಅಂತಿಗೊನೆ

ಒಡನೆಸಗಿ ನೀನ್ ದುಡಿಯಲಾಱ್ಪೆಯೋ ? ಆರಯ್.

ಇಸ್ಮೇನೆ

ಏನ್ ಸಾಹಸಮ್ ? ಮನದೊಳೇನ್ ಬಗೆಯುತಿರ್ಪಯ್ ?

ಅಂತಿಗೊನೆ

ಪೆಣಮೆತ್ತಲೆನಗೆ ಕಯ್ನೀಡಿ ನೆರವಪ್ಪಯ್ ?

ಇಸ್ಮೇನೆ

ಕಟ್ಟಾಣೆ ಮೀಱಿ, ಅವನನ್ ಪೂೞಬಗೆವಯ್ ?

ಅಂತಿಗೊನೆ

ನನ್ನ, ನಿನಗಿನ್ ಬೇಡವಾದೊಡಮ್, ನಿನ್ನ
ಒಡವುಟ್ಟಿದಣ್ಣನನ್ ! ತೊಱಿದೊಳೆಂದೆಣಿಸೆನ್.

ಇಸ್ಮೇನೆ

ಓ ಕೆಚ್ಚೆ ! ಆ ಕ್ರೆಯೋನ್ ಪ್ರತಿಷೇಧಿಸಿರ್ದೊಡಮ್ ?

ಅಂತಿಗೊನೆ

ಎನ್ನ ನೆನ್ನವರಿಂದೆ ತಡೆದಿಡಲ್ಕಾರವನ್ ?

ಇಸ್ಮೇನೆ

ಓ ಅಕ್ಕ ! ನೆನೆಯ ನಮ್ಮಯ್ಯನನ್ : ತಾನವನ್ ಪಟಿಯ ಪೆಸರಾಗಿ,
ಎಲ್ಲರಿನ್ ಪೇಸಿದವನಾಗಿ, ತಾನ್ ಗೆಯ್ದ ಪಾಪಂಗಳನ್ ತಾನೆ
ಅಱಿಸಿಕೊಂಡಿರ್ಕಣ್ಗಳುಮನಿಱಿದುಕೊಂಡು ತನ್ನಯೆ ಕಯ್ಯಿನಟಿದನ್.
ನೆನೆಯ ಮತ್ತವನ ತಾಯ್-ಪೆಂಡತಿಯನ್ !—ಇರ್ಮೊಱೆಯ ಪೆಸರನ್ !—
ಪುರಿನೇಣಿಸುಸಿರ್ದಿರಿಚಿ ಪೊಲೆಗೆಯ್ದು ಬಾೞನೀಡಾಡಿದಳ್. ಕೊನೆಯೊಳ್,
ನೆನೆಯೆಮ್ಮ ದುರ್ವಿಧಿಯ ಅಣ್ಣಂದಿರಿರ್ವರನ್ ! ಸಮಸಾವುಸೆತ್ತರ್,
ನಣ್ಪುಸೆತ್ತರಸುಗಿದ್ದು ಒರ್ಬೊರ್ವರಾ ಕಯ್ಯಿನೊರ್ಪಗಲ್ ಕೊಲೆಯಿನ್.
ಈಗಳುಟಿದಿರ್ಪರಾವಿರ್ವರೇ ನೋಡ ! ಕಡೆಗಣ್ಚಿ ಕಟ್ಟಳೆಯನ್,

ಅಂತಿಗೊನೆ

ಆಳ್ದನಧಿಕಾರಮನ್ ಮೇಣಾಜ್ಞೆಯನ್ ಮಿಕ್ಕೊಡೆಂತಪ್ಪ ಘೋರ
ದುರ್ಮರಣದಿಂದಟಿದಪೆವು ಬಗೆಯ. ಮತ್ತಿಲ್ಲಿ ಮಱೆಯಲಾಗದಿದನ್,
ನಾಮ್ ಪೆಣ್ಗಳೆಂಬುದನ್ ; ಆಣ್ಗಳೊಳ್ ಪೋರಲ್ಕೆ ಪುಟ್ಟಿದವರಲ್ಲ.
ಮತ್ತೆಮ್ಮ ನಾಳ್ಪವನ್ ಬಲ್ಲಿದನ್. ಕೇಳಲ್ಕೆ ವೇಟ್ಕುಮಿಂತಪ್ಪ
ಕಟ್ಟಾಣೆಗಳುಮನಾಮ್, ಮತ್ತಮವಱಿಂದೆಯುಮ್ ಘೋರಮಾದುವುಮನ್.
ನಾನಿಲ್ಲಿ ಶಕ್ತಿಗಗಪಟ್ಟವಳ್ : ಕಿಟ್ಸೆಲದರನ್ ಕ್ಷಮೆಯನೆರೆದು,
ಮಣಿವೆನಧಿಕಾರಕ್ಕೆ : ಮಿತಿಮೀಱಿ ನೆಗಟ್ವುದೇ ಜಾಣ್ಮೆತಾನಲ್ಲಮ್.

ಅಂತಿಗೊನೆ

ಇನ್ ಪೇೞೆನಾನ್, ಒತ್ತೆನ್, ನೆರವಾಗುವುದು ನಿನಗೆ ಮನಮೊರ್ಮೆ ಯಿರ್ದುಮ್,
ನನ್ನೊಡನೆ ನೀನ್‌ಕೂಡಿ ಎಸಗುವುದು ಹಿತಮಿಲ್ಲಮಿನ್ನೆನಗೆ. ನಿನ್ನ
ಮನಮಿರ್ಪಮಾೞ್ಕೆಯೊಳೆ ಇರ್ದುಕೊಳ್. ನಾನೆ ಮಣ್‌ಮಾಡಿದಪೆನವನನ್.
ಲೇಸು ನಾನೀ ಎಸಕದೊಳ್ ಸಾಯೆ, ಸುಪವಿತ್ರಪಾಪಮನ್ ಕೊಂಡು,
ನಾನೊಲ್ದ ತಂಗೆ ಕೆಡೆದೊಲ್ದಣ್ಣನೊಲ್ಮೆಯಾ ತೆಕ್ಕೆಯೊಳ್ ಪಟ್ಟು.
ಇತ್ತಣವರಿಂದೆಯುಮ್ ಮಿಗಿಲಾಗಿ ಕಿಟ್ಸೆಲದರನ್ ತಣಿಪುದೆನ್ನ
ಕರ್ತವ್ಯಮೇಗಳುಮ್. ನನ್ನ ಶಾಶ್ವತದ ನೆಲೆ ತಾನಲ್ಲಿ. ನಿನಗೆ
ಮನಮಂತು ತೋಱೆ, ದೇವತೆಗಳೊಲ್ದಿಟ್ಟ ಕಟ್ಟಳೆಗಳನ್ ಕಡೆಗಣ್ಚಿ ನೆಗಟಯ್.

ಇಸ್ಮೇನೆ

ನಾನವಱೊಳಶ್ರದ್ಧೆಯಿನ್ ನೆಗೞೆನ್. ಆದೊಡಮ್ ಪ್ರಭುಗೆ
ಇದಿರ್ಪ್ಪಿಟ್ಟು ನಡೆಯಲಾಟ್ಪಿನ್ ಪಡೆದು ನಾನ್ ಬಂದೆನಿಲ್ಲ.

ಅಂತಿಗೊನೆ

ಇದುವೆಲ್ಲ ಬಱಿಯ ನೆಪಮ್. ಇನ್ನಿದೋ ನಾನ್ ಪೋಪೆನೊರ್ಪಳೇ.
ನಾನೆನ್ನ ಕಟ್ಟೊಲ್ಮೆಯಣ್ಣಂಗೆ ಮಣ್‌ಕುಪ್ಪೆಯಿಕ್ಕುವೆನ್.

ಇಸ್ಮೇನೆ

ಅಯ್ಯೋ ನೊಂದೆರ್ದೆಯವಳೆ! ನಿನ್ನ ಗತಿಗೆಂತು ನಾನ್ ಅಳ್ಕುವೆನ್!

ಅಂತಿಗೊನೆ

ಸನ್ನ ಗತಿಗಳ್ಕದಿರ್. ನಿನ್ನದನ್ ನೀನ್ ಸೇರ್ಪುಮಾಡಿಕೊಳ್.

ಇಸ್ಮೇನೆ

ಆದೊಡೀ ಎಣಿಕೆಯನ್ ಮುನ್ನುಸಿರ್ದು, ಆರ್ಗಮಿನ್ ಅಱಿಪದಾದೊಡಮಿರು.
ನೀನಿದನ್ ಗುಟ್ಟಾಗಿ ಮುಚ್ಚಿಡು. ಪೇೞ್ ನಾನುಮಿನ್ನಂತೆ ಗೆಯ್ವೆನ್.

ಅಂತಿಗೊನೆ

ಆಗದಾಗದು. ತೆಱೆದುಪೇೞ ನೀನ್. ಉಸಿರದೇ ಮೌನಮಿರ್ದಂದು,
ಈಗಳಿನ್ ಪಿರಿದಾಗಿ ದ್ವೇಷಿಪೆನ್. ಪೊೞಲ್ಗೆಲ್ಲ ಸಾಱಿಪೇೞ್ ಪೋಗು.

ಇಸ್ಮೇನೆ

ಮೆಯ್ಸೆಡಪಿ ನೆತ್ತರ್ಕುಳಿರ್ಪ ಕಟ್ಟೆಸಕಕ್ಕೆ ನೀನ್ ಬೆಂಕೆಯೆರ್ದೆಯಯ್.

ಅಂತಿಗೊನೆ

ನಾನ್ ಬಲ್ಲೆನ್, ಆರನಾನ್ ನೆಱೆತಣಿಪವೇೞ್ಕುಮೋ, ತಣಿಪಿದಪೆನವರನ್.

ಇಸ್ಮೇನೆ

ನಿನ್ನಿಂದಮಾಱ್ಪೊಡೆ! ಆಱದುದನೆಸಗಲ್ಕೆ ನೀನ್ ಪಾರುತಿರ್ಪೆ.

ಅಂತಿಗೊನೆ

ಅಂತಕ್ಕೆ. ಎನ್ನೊಳಾ ಆೞ್ಪುಡುಗಿದಂದು ನಾನ್ ಸಯ್ತುಪೆನ್.

ಇಸ್ಮೇನೆ

ಕಯ್ಗೆ ಬಾರದ ಬೇಂಟೆಗಿಂದು ಕಯ್ತುಡುಕುವುದೆ ತರಮಲ್ಲ.

ಅಂತಿಗೊನೆ

ಇಂತಪ್ಪ ನುಡಿ ನುಡಿದು ನೀನೆನ್ನ ದ್ವೇಷಕ್ಕೆ ಪಕ್ಕಪ್ಪೆ ನೋಡ!
ಮತ್ತಲ್ಲಿ ಸತ್ತುಕೆಡೆದಿರ್ಪಣ್ಣ ನಿನ್ನನ್ ಸೇರ್ಕೆಯಿನ್ ದ್ವೇಷಿಯುಪ್ಪೆ.

ನಲ್ಲದು. ನನ್ನ ಮನ್, ನನ್ನೆಗ್ಗತನಮುಮನ್ ಬಿಟ್ಟು ಕಳೆಯೀಗಳ್—
ತುತ್ತಾಗಲಡಸುವಾ ಕೇಡಿಂಗೆ, ಮತ್ತಣಿಲ್ ತಾಮ್ ಪಡೆದ ಸೋವನ್.
ಪಿರಿಯ ಸಾವಿಲ್ಲದುದಱಿಂದೆಯುಮ್ ಪೆಱತೊಂದು ಕೇಡಿಲ್ಲಮೆನಗೆ.

ಇಸ್ಮೇನೆ

ಬಗೆಬಂದ ತೆಱನೆಸಗು. ನಿನತು ತಿಳಿಗೇಡಿತನಮಾದೊಡಮ್,
ನಂಬು ನಿನ್ನೊಲ್ದರ್ಗೆ ದಿಟಮಾಗಿ ನೀನೊಲ್ದಳೆಂಬುದನ್. [ಪೋಪರ್.

ಮೇಳಮ್

ಬಲಮುರಿ ೧

ಓವೋ ಪೊಂಬಗಲ್ಗಣ್ಣೇ! ಓ ನೇಸಱ ಕೆಂಗದಿರೇ!
ಏಳುಪಡ್ವಾಯ್ ಥೇಬ್ಸಾಯೆಂದುಮ್ ಮೂಡದ ಓ ಮುನ್ಗದಿರೇ!
ದಿರ್ಕೇದೇವಿಯ ಪೊನಲೊಳ್ ಮಾಱುಪೊಳೆಯುತೆ ಪಾಯ್ದಯೆಲಾ!
ಕೊನೆಯೊಳ್ ಕರುಣದೆ ನಿನ್ನಯ ದರ್ಶನಮೆಮಗಾದುದೆಲಾ!
ಅರ್ಗೊಸಿನ್ ಬಂದೊನನ್, ತಲೆಯಿಂದೆ ಕಾಲ್ವರಮ್ ಮೆಯ್ಜೋಡ ತೊಟ್ಟನನ್,
ಕಯ್ಯ ಬೆಳ್ಪರಿಗೆಯನ್ ಪಿಡಿದು ಮೇಲ್ವಾಯ್ದನನ್, ಬೆನ್ನಿತ್ತು ಪೋದನನ್,
ದೂಡುತ್ತುಮಟ್ಟಿದಯ್ ಕಡಿವಾಣಮೊತ್ತಿ ನಿಟ್ಟೋಟದಿನ್ ಪರಿಯೆ,
ದೂಡುತ್ತುಮಟ್ಟಿದಯ್ ಮೆಯ್ದೆಗೆದು ಮುನ್ನಿನುಮ್ ವೇಗದಿನ್ ಪರಿಯೆ.

ಅನುಗೀತ ೧

ಮುಂದಿಟ್ಟು ಪಗೆಕಾಯ್ದು ಪೊಲುನೆಯ್‌ಕೇಸ್ ಕಲಹಮನ್,
ಆರ್ಭಟಿಸಿ ಮುಳಿದಾರ್ದು ನಾಡಮೇಲ್ ಸುರ್ಗಿದನ್.
ಪರ್ದು ನೆಲಕೆಱಗುವಂತೆಱಗಿದನ್,
ಅಹ! ನಮ್ಮ ನಾಡಮೇಲೆಱಗಿದನ್.

ಮುಡಿಯಿಂದಮಡಿವರಮ್ ಮೆಯ್‌ಜೋಡನಿಟ್ಟು,
ಸುರಿಮೆಂಜ ಬೆಳ್ಪಿಡಿದ ಕೆಲರಕ್ಕೆಯಿಟ್ಟು,
ಕಯ್ದುವನ್ ನೆಱೆತೊಟ್ಟು, ಕುದುರೆನವಿರ್ ಮುಡಿಯಿಟ್ಟು,
ಪಗೆಕಾಱುತೆಱಗಿದನ್, ನಾಡಮೇಲೆಱಗಿದನ್.

ಎಡಮುರಿ ೧

ನೆತ್ತರ್ ತವಕಿಪ್ಪ ಕೂರ್ವೊನೆ ಸಬಳಗಳನ್ ತೊನೆದನವನ್,
ಪಾಯುತುಮೆಮ್ಮ ನೆಗಳ ಮೇಲ್ ಎತ್ತಲುಮಿನ್ ಕವಿದನವನ್.
ಊರ್ ಬಳಸುತೆ ನುಂಗಿಬಿಡಲ್ ಬಾಯ್ದೆಱೆಯುತೆ ನಿಂದನವನ್
ಏೞುಮ್ ಪೇರೂರ್ವಾಯೊಳ್ ಬಾಯ್ದೆಱೆಯುತೆ ನಿಂದನವನ್.
ಪಿಮ್ಮೆಟ್ಟಿಪೋದನ್, ನಮ್ಮ ನೆತ್ತರನವನ ಬಾಯ್ ಪೀರ್ವ ಮುನ್ನಮ್,
ಸುತ್ತಣಾ ಗೋಪುರಂಗಳನಗ್ನಿದೇವನಾಹುತಿಗೊಳ್ವ ಮುನ್ನಮ್.
ಬೆನ್ನಗಡೆ ಘಣಘಣಿಸೆ ಯುದ್ಧದೇವನ ಮಹಾರ್ಭಟಮೋಡಿಪೋದನ್,
ಮೊಟ್ಟಗದಾ ಪಾವು-ಪಗೆಯೊಳ್ ಪೆಣಗಲಾಱದೆಯೆ ಮೆಯ್‌ದೆಗೆದು ಪೋದನ್.

ಅನುಗೀತ ೨

ಸ್ಯೂಸ್ ದೇವನೇಗಳುಮ್ ಕಡುಮಿಗಿಲ್ ದ್ವೇಷಿಪನ್
ನಿಡುನಾಲಗೆಯೆ ಗಱಪಿದಾ ಸೊರ್ಕ್ಕುನುಡಿಗಳನ್.
ತೊಟ್ಟ ಪೊನ್‌ಡಿಬ್‌ನಾದಮಿಡಿದು,
ಮೇಲ್‌ವಾಯ್ಯು ಪೊಸಲಿಟ್ಟು ಪರಿದು,
ಉಬ್ಬುತೆರೆಮಸಗಿ ಕಯ್ದುವನ್ ನೆರನೆಮ್ಮಿ ಮಲೆದನ್,
ಗುಱಿಗೊಂಡು ದುರ್ಗಮನ್ ತಾನೇಱಲಿರ್ದನ್,
ಕೆಲೆದಾರ್ದು ಗೆಲ್ಲಮನ್ ಕಯ್‌ತುಡುಕಲಿರ್ದನ್—
ನೋಡಿ, ಸ್ಯೂಸಿಟ್ಟನ್; ಸಿಡಿಲುರಿಯಿನಿಟ್ಟನ್.

ಬಲಮುರಿ ೨

ಉರಿಕೊಳ್ಳಿಯನ್ ಪಿಡಿದು ನೆಲಕುರುಳ್ದು ಕೆಡೆದನ್,
ಪುಟಮಿಡುವ ಬಿಱುನೆಲನೊಳೆಡೆದಾಡಿ ಕೆಡೆದನ್.

ಇದುವೆತಾನ್ ಬಂದವನ್, ಕಳ್ಸೆತ್ತಿಗೇಱಿದೊನ್,
ಪಗೆಸುಯ್ಯು ದ್ವೇಷಮನ್ ಕಾಱುತ್ತುಮುಱುಬಿದೊನ್,
ಕೆರೆಮಸಗಿದ್ರುಸ್ಮತ್ತನ್, ಇದೊ ಬಿದ್ದು ಕೆಡೆದನ್.
ಇತ್ತಲ್, ಇಂತವನೇಣಿಕೆ ಮುಱಿದು ಬಱಿದಾಯ್ತು.
ಅತ್ತ, ರಣದೇವನುತ್ಸಾಹಮರಿದಾಯ್ತು.
ಆ ಚಂಡ ರಣದೇವನೆಮಗೆ ನೆರವಾಗಿ,
ಉಱಿದವರನೊಕ್ಕಿಟ್ಟನುದ್ದಂಡನಾಗಿ.

ಅನುಗೀತ ೩

ಏೞುಮ್ ಬಾಗಿಲೊಳೇೞ್ ದೞವಾಯ್ಗಳ್
ಏೞ್ ದೞವಾಯ್ಗಳನಿದಿರಿಸಿ ನಿಂದರ್.
ಪೋರನ್ ತಿರಿಪಿದ ಸ್ಯೂಸಿಗೆ ಬಿಟ್ಟರ್,
ಕಂಚಿನ ಜೋಡನ್ ಕಾಣ್ಕೆಯೆ ಬಿಟ್ಟರ್.
ಮತ್ತೀ ಸೋಲೊಳ್ ತಾಮ್ ಪೊಱಗಾದರ್
ಇರ್ವರ್, ಕಡುಪಗೆದಾ ಹತಭಾಗ್ಯರ್.
ಒರ್ತಾಯ್ತಂದೆಗೆ ಪುಟ್ಟಿದ ಮಕ್ಕಳ್,
ತಮ್ಮೊಳೆ ತಾಮ್ ಪಗೆದಿಱಿದರ್ ಮಕ್ಕಳ್.
ಇರ್ಕೊಲೆ ಸಮಬಲ ಸಬಳಮನಿಱಿದರ್,
ಸಾವೊಳ್ ಮಕ್ಕಳ್ ಸಮಪಾಲುಂಡರ್.

ಎಡಮುರಿ ೨

ಈಗಳಿದೊ-ಕೀರ್ತಿವೆಣ್ ಜಯಲಕ್ಷ್ಮಿ ಬಂದಳ್,
ಪಲತೇರ ಥೇಬಾಯ್ಗೆ ಮಱಸಲಿದು ಬಂದಳ್.
ಇನ್ನಿದುವೆತಾನ್ ಕಾದ ಪೋರ್ಗಳನ್ ಮಱೆವೊಮ್,
ನೆಮ್ಮದಿಯೆ ನಾಮ್ ನಲಿದು ಪೋರ್ಗಳನ್ ಮಱೆವೊಮ್.
ದೇವರಾ ಕೋಯಿಲ್ಗಳೆಲ್ಲಮನ್ ಪುಗುವೊಮ್,
ಸುತ್ತುತ್ತುಮಿರುಳೆಲ್ಲಮಾಮ್ ಪಾಡಿ ಕುಣಿವೊಮ್.

ಕುಣಿತಕ್ಕೆ ನಾಯಕನ್ ತಾಸಕ್ಕೆ ಬಾಖೊಸ್,
ಥೇಬ್ಸಾಯ ನೆಲಮಿದನ್ ನಡುಗಿಪಾ ಬಾಖೊಸ್,
ನೆಲಮಿದನ್ ಕುಣಿತದಿನ್ ನಡುಗಿಪಾ ಬಾಖೊಸ್.

ಓವೋ !
ನಾಡನಾಳ್ವನ್ ಕ್ರೆಯೋನ್ ! ಮೆನೊಯ್‌ಕೆಯೂಸ್ ಮಗನ್ ! ಇದೋ ಬಂದನ್,
ದೇವರ್ಕಳೊಸೆದ ಪೊಸ ಭಾಗ್ಯದಿಂದರಸನ್, ಇದೊ ಬಂದನ್.
ಏನುಮುತ್ತಾವುದೆಣಿಕೆಯುನ್ ಮನದೊಳಗೆ ತಿರಿಪುತ್ತೆ ಬರ್ಪನ್ ?
ಬಟಿಯಟ್ಟಿ ಎಲ್ಲರ್ಗವೊರ್‌ಕರೆಯೆ ಕಟಿಪಿರ್ಪನೇಕೆ ?
ಪಿರಿಯರಾ ಮಿಗಿಲ ಮಂತಣಮಿದನ್ ನೆರಪಿರ್ಪನೇಕೆ ?

[ಕ್ರೆಯೋನ್]

ಕ್ರೆಯೋನ್

ಪಿರಿಯರೇ ! ಎಂಬೊಟಿಲ ಪಡಗೆಸೆದು ಕಟ್ಟಲೆವ ಕಡಲೊಳ್,
ದೇವತೆಗಳಿನ್ ಮತ್ತೆ ನೇರ್‌ಗೆಯ್ದು ನೆಮ್ಮದಿಯೆ ಬಂದತ್ತು.
ಎಲ್ಲರಿನ್ ಬೇಱಾಯ್ದು ಬಟಿಯಟ್ಟಿ ನೆರಪಿದೆನ್ ನಿಮ್ಮನ್.
ಲಾಯಿಬಸ್ ಪ್ರಭುಪೀಠದಧಿಕಾರಕೇಗಳುಮ್ ಭಕ್ತಿಯಿನ್
ನೀಮ್ ನಡೆದುಕೊಂಡುದನ್ ಬಲ್ಲೆನ್. ಎಂಬೊಟಿಲನೊಯ್ದಿಪೌಸ್
ನೇರ್‌ಗೆಯ್ದು ನೆಮ್ಮದಿಯಿನಾಳಂದುಮ್, ಅಟಿದಂದುಮ್, ಎಡೆವಿಡದೆ
ನೀಮವರ ಮಕ್ಕಳನ್ ಬಗೆಪೊರಳದೊಂದೆ ಪತ್ತುಗೆಯಿಂದೆ
ಸೇವೆಗೆಯ್ದಿರ್ಪುದುಮ್ ಬಲ್ಲೆನ್. ಕೊಲೆಪೊಯ್ದು ತಾವಿಗಳ್
ಓರೊರ್ವರಾ ಮಕ್ಕಳ್, ಒರ್‌ಕುಡಿಯ್ಯ ನೆತ್ತರಿನ್ ಕಱೆಗೊಂಡು,
ಎಣೆಸಾವು ಸತ್ತಟಿದರೊರ್‌ಪಗಲೆ. ಕಟಿದರ್ಗೆ ಕುಡಿಯಿಂದೆ
ನಾನ್ ಕಿಟ್ಟ ಸಂಟಪ್ಪೆನ್, ಅದಱಿಂದಮರಮನೆಯನೇಱಿ
ತಳೆವೆನಾನ್ ಸರ್ವಾಧಿಕಾರಮನ್. ಅಧಿಕಾರಮಿತ್ತಾಳ್ಗೆ
ಕಟ್ಟಳೆಯ ಮಾಡ್ಕೆಯೊಳುಮಾಳ್ಕೆಯೊಳುಮೊರೆಯಿಟ್ಟು, ಪಟಗಿದೋನ್

ಎಂಬುದನ್ ನಾಮ್ ಕಾಣ್ಬ ಮುನ್ನಮೇ, ಆಳ್ವನ ಮನಮನ್,
ಬುದ್ಧಿಯುಮನ್, ಆತ್ಮಮುಮನಡಿಮುಟ್ಟ ಅಱಿಯಲ್ಕೆ ತಾನರಿದು.
ತಾನ್ ಪೊೞಲ ಸರ್ವಾಧಿಕಾರಮನ್ ಕಯ್‌ಕೊಂಡು ನಡಪ್ಪುವೊನ್
ಮೇಲ್‌ಗುಱಿಯ ಮಂತಣಮನೇಗಳುಮ್ ನೆಮ್ಮದೆಯೆ ಪೊರಳ್ದು,
ನಾಲಗೆಯನಂಜಿ ನೆಱೆಯಿಟ್ಟೊಡೆ, ಕೀೞರೊಳ್ ಕಡುಕೀೞನ್
ಎಂದೆಣಿಪೆನವನನ್. ಪಡೆಯಂದಿನೆಣಿಸಿರ್ಪ್ಪೆನಂತೆಯೇ.
ತವರನಾಡಿಂದೆಯುಮ್ ಕೆಳೆಯೆ ಪಿರಿದೆಣಿಪ್ಪೊನನ್ ಲೆಕ್ಕದೊಳ್ ತಾರೆನ್.
ನಾನ್ ಇದೋ, ಎಂದೆಂದುಮೆಲ್ಲಮನ್ ನೋೞ್ಪ ಜ್ಯೂಸ್ ದೇವನೇ
ಸಾಕ್ಷಿಯಿರೆ, ಪೊೞಲರನ್ ನೆಮ್ಮದಿಯದುೞಿದು ಕೇಡಟ್ಟಿಬರೆ,
ನೋೞ್ಡಿ ಬಾಯ್‌ಮುಚ್ಚಿರೆನ್. ನಾಡಪಗೆಯನ್ ನನಗೆ ಕೆಳೆಯಾಗಿ
ಕೊಳ್ಳೆನಾನೆಂದಿಂಗಮ್, ನೆನೆದಿದನ್ : ನೆಮ್ಮದಿಯಿನೆಮ್ಮೆಲ್ಲ-
ರನ್ ಪೊತ್ತು ಪೊರೆವ ಪಡಗೆಮ್ಮ ನಾಡದನುೞಿಸಿ ನೇರ್‌ನಡಸಿ
ಕೆಳೆಯರನ್ ಕೊಳವೇೞ್ಕುಮೆಂಬುದನ್. ಇಂತಪ್ಪ ಕಟ್ಟಳೆಗ-
ಳಿಂದಮಾನ್ ಎಂಬೊೞಲ ಪೆರ್ಮೆಯನ್ ಕಾವೆನೆಂದಿರ್ದ್ಪೆನ್.
ಅದುಪತ್ತಿ ನಾನೀಗಳ್ ಒಯ್ದಿಪೌಸಿನ ಮಕ್ಕಳನ್ ಕುಱಿತು,
ಪೊೞಲ್ಗೆಲ್ಲ ಶಾಸನಮ್ ಸಾಱಿರ್ಪೆನ್—ಆ ಎತೆಯೊಕ್ಲೇಸನನ್,
ನಾಡಿಂಗೆ ಪೋರ್ದು, ಎಲ್ಲದಱೊಳುಮ್ ಕಲಿಯೆನಿಸಿ ಮಡಿದ ಆ
ವೀರನನ್ ಮಣ್‌ಮಾಡಿ ತಾಮ್ ಪೂೞ್ಗೆ. ಮತ್ತಿರದೆ, ಪೊಂದಿದಾ
ಪೆರ್ಮೆಯಾಳ್ಗಳ್ಗುಱುವ ಸಕಲಸಂಸ್ಕಾರಮುಮ್ ತಾನ್ ನಡೆಗೆ.
ಅವನ ಕೂಡೊಗೆದನನ್, ಪೊಲುನೆಯ್‌ಕೇಸೆಂಬೊನನ್, ತಂದೆಯರ
ನಾಡುಮನ್, ತನ್ನ ಕುಲದೇವರುಮನ್, ಒರ್ಮೆಯೇ ಕಿರ್ಚಿಟ್ಟು
ಸುಟ್ಟು ತೂೞಲ್‌ಬಗೆದು ಮರಲ್ದ ದೇಶಭ್ರಷ್ಟನನ್, ತವರ
ನೆತ್ತರನ್ ತವೆ ಪೀರಬಂದನನ್, ಅೞಿದುೞಿದೊರನ್ ತೊೞ್ತು-
ವೆಸಕೆಱೆಯ ಬಂದನನ್, ಕುಱಿತಿದೋ ಪೊೞಲ್ಗೆಲ್ಲಮೆನ್ನಾಜ್ಞೆ :
ಪೂೞದಿರ್ಕ್ಕಾರುಮ್, ಅೞದಿರ್ಕೆ. ಪೂೞದೆಯೆ ದೇಹಮನ್
ನಾಯ್ಗಳ್ಗೆ ಪರ್ದುಗಳ್ಗೆರೆಯಾಗಿ, ನೋಟಕ್ಕೆ ಬಲ್‌ಘೋರ-

ಮಾಗಿ, ಸಾಙ್ಗೆಯುಂ ತಾಮ್ ಬಿಸುಡುಗೆ. ಇಂತಪ್ಪುದೆನ್ನ ಬಗೆ.
ಎಂದೆಂದುಮೆನ್ ಕಯ್ಯಿನಡಿಗುಲಿಗಳಡಿವಡಿಯರನ್ ಬಿಟ್ಟು
ಎಂದುಮನ್ನಣೆಯನಡೆಯರ್. ಆದೊಡೆ, ನಾಡಿಂಗೆ ಸಲ್ಬಗೆದೊನ್
ನನ್ನಿಂದೆ ಮನ್ನಣೆಯ್ಗುನಡೆದಪನ್ ಸಾವೊಳುಮ್, ಬಾಡೊಳುಮ್.

ಮೇಳಮ್

ನಿನ್ನಿಷ್ಟಮಿಂತಿರ್ಕುಮ್, ಓ ಕ್ರೆಯೋನ್ ಮೆನೊಯ್ಕೆಯ್ಯೂಸ್ ಮಗನೆ!
ನಿನ್ನಿಂಬೊಟಲ್ಗೆ ಪೊಲ್ಲದನ್ ಬಗೆದನೊಳ್, ನಲ್ಲದನ್ ಬಗೆದನೊಳ್.
ಮನಮೊಲ್ದು ಕಟ್ಟಳೆಯನಿಡೆ ಪೊಟಲ ಸರ್ವಾಧಿಕಾರಮುಮ್
ನಿನಗುಂಟು, ಸತ್ತರನ್, ಬರ್ದುಕಿರ್ಪ ನಮ್ಮೆಲ್ಲರನ್ ಕುಱಿತು.

ಕ್ರೆಯೋನ್

ಅಂತಿರಲ್ ಪೇೞ್ದುದನೆ ಸಲಿಸಿ ನೀಮ್ ನೆಗಟಿಮ್.

ಮೇಳಮ್

ಈ ಪೊಱೆಯನೆಮ್ಮಿಂ ನೆಳಮುಯ್ವನೊಳ್ ಪೊಱಿಸಯ್.

ಕ್ರೆಯೋನ್

ಇರ್ಪರ್, ಆಗಳೆ, ಕಾಪಿನಾಳ್ಗಳಾ ಪೆಣಕೆ.

ಮೇಳಮ್

ಅಂತಪ್ಪೊಡಿನ್ ಪೆಱತನೇನ್ ವಿಧಿಸಲಿರ್ಪಯ್?

ಕ್ರೆಯೋನ್

ಕಟ್ಟುಮುಱಿವರ್ಗೆ ನೀಮೊಳಗಾಗದಿರ್ಕೆ.

ಮೇಳಮ್

ಸಾವನೊಲ್ವನಿತು ತಾನೆಗ್ಗನಿರನಾರುಮ್.

Greeks are fatalist.

ಕ್ರೆಯೋನ್

ನಿಜಮ್, ಇದುವೆತಾನ್ ದಂಡಮ್. ಆದೊಡಮ್ ಪಲವುಸೂಟ್
ಪೊನ್ನಳಿಪು ನಚ್ಚೂಡಿ ಕಿಡಿಸಿರ್ಪುಮಾಳ್ಗಳನ್.

[ಕಾಪಿನಾಳ್]

ಕಾಪಿನಾಳ್

ಎನ್ನೊಡೆಯ! ಚಳಕದಿಂದಡಿಯಿಟ್ಟು ವೇಗದಿನ್ ನಡೆದುಱಿನ್
ಉಸಿರ್ಗಳೆದು ಬಂದೆನೆನೆನ್. ಬರ್ಪವಟಿಯೊಳ್ ಮನದ ಚಿಂತೆಯಿನ್
ಪಲರ್ಸ್ಥೆ ಪಿನ್ದಿರುಗಿದಪೆನೆಂದು ಪಿನ್ಮುನ್ ಅಲೆದು, ಪಲತಗೆಗಳ್
ಆದುವಯ್. ನನ್ನೊಳಗು ಪಲಪಲವು ಕಳವಳಮನುಸಿರುತ್ತೆ,
ತಾನ್ ಕೂಗಿದತ್ತೆನಗೆ—ಅಯ್ಯೋ! ಮುನ್ಗಾಣದಾ ಮಡೆಯ!
ದಂಡಮನ್ ತೆಱುವಲ್ಲಿಗೇಕೆ ಮುನ್ಬರಿವೆ? ಓ ನಿರ್ಭಾಗ್ಯ!
ಮೇಣ್ ತಳ್ವಿ ನಿಲ್ವೆಯೇನ್? ಇದನಿಂದು ಪೆಱನೊರ್ವನಿನ್ ತಿಳಿಯೆ
ಆ ಕ್ರೆಯೋನ್, ಎಂತು ನೀನ್ ಪಿನ್ಸೋಲ್ಯದ್ದೆಯೆ ಪೋಪೆ? ಈ ಪರಿಯೆ
ತೊೞಲುತ್ತುಮವಸರದೊಳಾನ್. ತಳ್ವೆ ಬಿಡುವಾಗಿ ಪರಿದೆನ್.
ಅದಱಿಂದೆ ಕುಱುದಾರಿ ನಿಡಿದಾಯ್ತು. ಕಡೆಗೆ ನಾನ್ ಇಲ್ಲಿಗೆ,
ತಮ್ಮಡಿಗೆ, ಎಯ್ತರಲ್ ವೇಟ್ಕಮೆಂಬುದೆ ಮೇಲಕಯ್ಯಾಯ್ತು.
ಎಂತುಮಾನ್ ಅಱಿಪುವೆನ್, ಮೇಣ್ ಪೇೞ್ವುದಿನಿತಿಲ್ಲದಿರ್ದೊಡಮ್.
ನಾನೀಗಳ್ ಈಯೊಂದು ಪೇರಾಸೆಯನ್ ಸಚ್ಚಿ ಬಂದಪೆನ್:
ಎನ್ನ ವಿಧಿಯಿಂದೆಯುಮ್ ಪೆಱತೊಂದು ಪಾಡುಮನ್ ನಾನ್ ಪಡೆನ್.

ಕ್ರೆಯೋನ್

ಏನದು? ಏಕೆ ನೀನ್ ಇಂತು ಮನಗುಂದಿದಪೆ?

ಕಾಪಿನಾಳ್

ತಮ್ಮಡಿಯೊಳಱಿಪಲ್ಕೆ ಬಯಸುವೆನ್ ಮೊದಲೆನ್ನದೊಂದನ್:
ಗೆಯ್ಮೆ ಗೆಯ್ದೆನುಮಿಲ್ಲ, ಗೆಯ್ದೊನನ್ ನೋಡಿದೆನುಮಿಲ್ಲ.
ಈಗಳಾನ್ ಕೇಡಿಂಗೆ ಬರ್ಪುದದು ಮೇಣ್ ತರಮುಮಲ್ಲ.

I fear I am right but I hope I am wrong

ಕ್ರೆಯೋನ್

ನಲ್‌ಗುಱಿಯನಿಡುವೆ ನೀನ್! ನಿನ್ನನ್ ಸೆಗಡ್ಕೆಯಿನ್ ಪೊಱಗಿಟ್ಟು
ಸುತ್ತುಗಾಪಿಡುವಯ್. ದಿಟಮೊರೆವೆ ಬಲ್‌ಬೆಱಗಸೊಂದನ್.

ಕಾಪಿನಾಳ್

ಅಂಜಿಕೆಯ ಸುದ್ದಿಗಳ್ ತಾಮ್ ಪಿರಿದುಮಳ್ಕಿ ಪಿನ್‌ದೆಗೆವಂತೆ ಮಾಟ್ಪುಮ್.

ಕ್ರೆಯೋನ್

ಆದೊಡಿನ್ ಒರೆವುದನೆ ಒರೆದು, ಇರದಡಿಯೆತ್ತಿ ತೊಲಗಿದಪೆಯೋ ನೀನ್ ?

ಕಾಪಿನಾಳ್

ಸರಿ, ಇದೋ ಪೇಳ್ದಪೆನ್. ಪೆಣಮಾರೊ ಇದುತಾನೆ, ಮಣ್‌ಮಾಡಿ ಪೋದರ್ ;
ಬೞಮಣ್ಣನೆಱಚಿ, ತಾಮ್ ಶ್ರದ್ಧೆಯಿನ್ ತಕ್ಕಂತೆ ತಣಿಯೆಱೆದುಮಿರ್ಪರ್.

ಕ್ರೆಯೋನ್

ಅದೇನ್ ಪೇಳ್ದೆ ? ಆರ್ ಇದಱ್ಕೆರ್ದೆತಂದ ಗಂಡು ?

ಕಾಪಿನಾಳ್

ಅಱಿಯೆನಾನ್. ಅಲ್ಲಿ ಗುದ್ದಲಿಪೊಯ್ಲೊ, ಅಗುೞು ಕಿೞ್ತಾತ್ತ ಮಣ್ಣೊ, ಏನೊಂ
ಒಂದಾನುಮಿಲ್ಲ. ತಾನ್ ಬೆಟ್ಟಿತಾಗಿರ್ದತ್ತು ಬೞಿಸಲನ್.
ಬಿರಿಕಿಲ್ಲ, ತೇರ್‌ಗಾಲಿ ಎಡೆಯಿಲ್ಲ. ಗೆಯ್ದನಾರೋ ಸುೞಿವು
ತಾನ್ ಬಿಡದೆ ಪೋದನ್. ಮೊದಲಪಗಲ್‌ಗಾಪಿನವನೆಮಗಿದನ್
ತಾನ್ ತೋಱೆ, ಎಲ್ಲರ್ಗ ಮಿರದೆ ಬಲ್‌ಬಿಗುರ ಬೆಱಗಾದತ್ತು.
ಪೆಣಮ್, ಅಲ್ಲಿ ಕಣ್ಗೆ ಮಱೆಯಾದತ್ತು ; ನಿಸಿದಿಯೊಳಗಲ್ಲ ;
ತೆಳ್ಪನೆಯ ಮಣ್‌ಮೇಲೆ ನಸುಮುಸುಕಿ—ಶಾಪಮುನ್, ಪೊಲೆಯಂಟನ್
ಇರದೆ ತಾನ್ ಕರ್ಚಿಕೊಳ್ವನ ಕಯ್ಯಿಸೆಂಬಂತೆ. ಎರೆಮಿಗದ
ಮೇಣ್ ನಾಯ ಸುೞಿವಕ್ಕೆ, ಅವೞ ಪಲ್ ಕುಱಿಪಕ್ಕೆ, ಒಂದುಮ್

ಕಾಣದೆಯೆ ಪೋಯ್ತು. ಬೞಿಕ, ಜಱುಮಾಱಾಡಿತೆಮ್ಮೊಳ್ಪೊ-
ಸೇಕೆಟ್ಟ ಮಾತುಗಳ್, ತಪ್ಪಿಟ್ಟು ಕಾಪಿನಾಳ್ ಕಾಪಿನಾಳನ್.
ಕೊನೆಗೆ, ಬಂದಿರ್ದುದಿನ್ ಇರದೆ ಪೊಡೆದಾಟಕಮ್. ತಡೆವನುಮ್
ಪೊರೆಯಿರ್ದನಿಲ್ಲ. ಒರೊರ್ವನುಮ್ ತಪ್ಪಿಗನೆ ಆದನ್ ;
ಮತ್ತೊರ್ವನಾ ಮೇಲೆಯುಮ್ ತಪ್ಪು ತಾನ್ ಪೊಱದೆ ಪೋಯ್ತು;
ಕಂಡುದಿಲ್ಲೆಂದು ತಪ್ಪಿಸಿಕೊಂಡನ್. ತಾಮ್ ಗೆಯ್ದುದಿಲ್ಲೆಂದುಮ್,
ಈ ಮಾಟಮನ್ ಬಗೆಯಿನೆಣಿಸಿದನ್ಗಪ್ಪೊಡಮ್, ಮೇಣ್ ಕಯ್ಯಿನ್
ಎಸಗಿದನ್ಗಪ್ಪೊಡಮ್ ತಾಮಾರುಮೊಳಗಾದುದಿಲ್ಲೆಂದುಮ್,
ಎಲ್ಲ ದೇವರ ಮೇಲೆ ಆಣೆಯಿಡಲುಮ್, ಕಯ್ಯೊಳಗೆ ಕಾಯ್ದ
ಕರ್ಬೊನ್ನನಿರದೆತ್ತಿ ಪಿಡಿಯಲುಮ್, ಬೆಂಕೆಯೊಳ್ ಪಾಯಲುಮ್
ನಾಮ್ ಸಿದ್ಧರಾಗಿರ್ದೊಮೆಲ್ಲರುಮ್. ಕಡೆಯೊಳ್, ಅಱಸುವುದೆಲ್ಲ
ಬೞಿದಾಗೆ ತಾನ್ ನುಡಿದನೊರ್ವನ್ ; ನುಡಿದು ನಮ್ಮೆಲ್ಲರನ್
ಭಯದಿಂದೆ ತಲೆ ನೆಲಕೆ ಜೋಲ್ವಂತೆ ಗೆಯ್ದನ್. ನುಡಿತಕ್ಕೆ
ಮಱುನುಡಿವುದೞ್ಕಮಿನ್ ತೋಱದೆಯೆ ಪೋಯ್ತೆಮಗೆ; ನುಡಿದಂತೆ
ನಾಮ್ ಗೆಯ್ದ ಮೇಣ್ ಪದುಳಮೆಂತಿರ್ಪೆವೆಂಬುದುಮ್ ತೋಱದೆಯೆ
ಪೋಯ್ತೆಮಗೆ. ಪೇೞ್ವನವನ್— ಈ ನಡೆದ ಗೆಯ್ಮೆಯನ್ ತಮ್ಮಡಿಗೆ
ಅಱಿಪಲೇ ವೇೞ್ಕುಮ್ ; ಇದನೆಂದುಮಾಮ್ ಬಯ್ತಿಡಲ್ಕಾಗದೆಂದು.
ಕಡೆಗೆ ತಾನಿದುವೆ ತಱಿಸಲವಾಯ್ತು. ಮೇಣ್ ಸುದ್ದಿ ಕೊಂಡುಯ್ವ-
ನಾಯ್ಕೆಯೊಳ್, ಅದೃಷ್ಟಮದು ನಿರ್ಭಾಗ್ಯನೆನ್ನನೀಯೊಂದು ಸಲ್-
ಸಾಲೆ ಗುಱುಮಾಡಿತ್ತು. ಇದೊ ಕೆಲದೊಳಿರ್ದಪೆನ್; ಮನಮಿಲ್ಲ
ಮೇಣೆನಗೆ, ಮೆಚ್ಚಲ್ಲ ತಮ್ಮಡಿಗೆ; ನಲ್ಲಱಿವೆನಾನ್ ಇದನ್ :
ಪೊಲ್ಲಸುದ್ದಿಗಳನೊರೆತರ್ಪೊನನ್ ಒಲ್ವನೊರ್ವನುಮಿಲ್ಲ.

ಮೇಳಮ್

ಎನ್ನೊಡೆಯ! ಮುನ್ನಿನುಮ್ ನನ್ನ ಮನಮಿರದುಸಿರುತಿರ್ದಪುದು :
ಗೆಯ್ಮೆಯಿದು ದೈವಿಕಮೆ ತಾನ್ ಇರದೆ ಎಂಬ ಕಳವಳಮನ್.

under the yoke of servility

ಕ್ರೆಯೋನ್

ನಿಲ್ ಸಾಲ್ಗುಮ್ ; ನಿಲ್ ! ಇಂತು ಗಟಿಪಿ ನೀನ್ ಎನ್ನ ಸೆಱೆ ಕೆರಳಿಸುವ
ಮುನ್ನಮ್,
ಮುದಿಯನುಮ್, ಮಡೆಯನುಮ್ ನೀನ್ ಎಂಬುದೊರ್ಮೆಯೇ ಪೊಱಗಿಡದ
ಮುನ್ನಮ್.
ತಾಳ್ದುದನಾಡುವಯ್, ಬಗೆದಪರ್ ದೇವತೆಗಳೀ ಪೆಣಮನೆಂದು.
ನಲ್‌ಗೆಯ್ದೊನಿವನೆಂದ್ದೊ ಇಂತು ಪೆರ್‌ಗೌರವಂದೋಱಿ ತಾಮವನ
ಮೆಯ್‌ಮಱಿಸಿ ಕಾದುದು ! ತಮ್ಮ ಸಾಲ್‌ಗಂಬದಾ ಕೋಯಿಲ್ಗಳನ್, ಮೇಣ್
ಮುಡಿಪುಗಳನುರಿಪಿಡಲ್ ಬಂದನನ್, ತಮ್ಮ ನಾಡುರಿಪಿಡಲ್ ಬಂದನನ್,
ಕಟ್ಟಳೆಯನುಱುಬಿ ಗಾಳಿಗೆ ತೂಱಬಂದನನ್ ! ಇಲ್ಲ, ಕಂಡಪೆಯೋ
ದೇವತೆಗಳೇನ್ ಕೇಡಿಗಳನೆ ಗೌರವಿಪುದನ್ ? ಎಂದಿಂಗಮಿಲ್ಲ.
ಮುನ್ನಿನುಮ್ ಪೊೞಲೊಳಿರ್ದರ್ ಕೆಲರ್, ನನ್ನಿಟ್ಟ ಶಾಸನಂಗೇಳ್ದು
ತಾಳದೊರ್, ನನಗುಱುಬಿ ಬುಸುಗುಟ್ಟು ತೊಳಗೊಳಗೆ ತಲೆಯನಾಡಿಸುತೆ ;
ಎನ್ನೊಳಟ್ಕಱುತ್ತು ತಣಿದವರಂತೆ ನೇರ್ಮೆಯಿನ್ ನೊಗದಡಿಯೆ ಕೊರಲನ್
ಸರಿಯಿಡದೆ ಇರ್ದವರ್. ಅವರೆ ನಾನ್ ನೆಱೆಬಲ್ಲೆನಿವರನ್, ಇದನೆಸಗೆ,
ಲಂಚಮಿತ್ತೆಪೆದುಯ್ದರ್. ಇಲ್ಲ, ಜನರೊಳ್ ಪೊನ್ನವೋಲ್ ಪೊಲ್ಲದೇನುಮ್
ತಲೆದೋಱುತಿಲ್ಲ. ಪೊೞಲ್ಗಳನಿದುವೆ ಪಾೞಿಡುಗುಮ್, ಇದುವೆ ಮಾನ್ಸವರನ್
ಮನೆಗಳಿನ್ ಪೊಱದೂಡಿ ತೊಲಗಿಕ್ಕುಮ್. ನೇರ್‌ಮನರನಿದುವೆ ನೆಱೆಕಲಿಸಿ,
ಮತಿಗೆಡಿಸಿ, ನಾಣ್‌ಗೆಟ್ಟ ಗೆಯ್ಮೆಗೆಯೆ ಮನದಂದು ನಿಲ್ವಂತೆ ಮಾೞ್ಕುಮ್.
[illegible]ಮಿತ್ತಿರದೆ, ಉಳ್ಳನಿತು ಚಂಡಾಲ ಕರ್ಮಂಗಳನ್ ಗೆಯ್ಯಲ್, ಎಲ್ಲ ನಿರ್ದೈವ
ಕೃತ್ಯಂಗಳನ್ ಕಂಡಿರಲ್ ಜನಕೆ ತಾನ್ ತೋಱಿ ಕೊಟ್ಟಿರ್ಕುಮಿದುವೆ. ಅಲರ
ನಲ್ಲದು. ಪಣಂಗೊಂಡು ಮತ್ತಿದನ್ ಗೆಯ್ದೊರ್, ಎಂದಾದೊಡಮ್ ದಂಡಮ್
ತಾಮ್ ತೆಱುವುದಱ್ಕೆಯೇ ಗೆಯ್ದರ್. ಸ್ಯೂಸ್‌ದೇವನನ್ನಿಂದಮಿನ್ನುಮ್
ತಾನ್ ಪೂಜೆಗೊಂಡನಪ್ಪೊಡೆ, ಇದನ್ ನೆಱೆಯಱಿಯ ನೀನ್, ಆಣೆಯಿಟ್ಟು
ನಿನಗೆ ನಾನ್ ಪೇಳ್ದಪೆನ್ : ಮಣ್‌ಮಾಡಿದೊನನಱಿಸಿ ಪಿಡಿತಂದು ನನ್ನ
ಕಣ್‌ಮುಂದೆ ನೀಮ್ ತೋಱದೊಡೆ ನಿಮಗೆ ನಾಲದಿನ್ನಾ ನರಕಮೊಂದೆ.

I have ever seen a bad element like money

didacticism in poetry.

ಮುನ್ನಮೇ, ಮದಿಸ್ಶಿ ನೀಮ್ ನಡಸಿದತ್ಯಾಚಾರಮಿದನೆಲ್ಲ ಜನಕೆ,
ಬರ್ದುಕಿರ್ದ್ದು ನೇಣ್‌ಗೋಣರಾಗಿ, ನೀಮ್ ತೋೞ್ಪಿರ್. ಲಾಭಮಾ
ವೆಡೆಯೊಳ್
ಪೆಱವೇೞ್ಕುಮೆಂಬುದನ್ ಕಂಡಱಿತು, ಇನ್ ಮುಂದೆ ನೀಮ್ ಕಳ್ಪಿರಂತೆ.
ಅಲ್ಲದೆಲ್ಲೆಡೆಯೊಳುಮ್ ಲಾಭಮನ್ ಪಡೆಯಲಱಿಪಲ್ಕೆ ತರಮಲ್ಲ-
ಮೆಂಬುದನ್ ಮೇಣ್ ಕಲ್ಪಿರಂತೆ. ನೀನ್ ಕಂಡಪಯ್ ! ಪಿರಿಯಪಾಲ್
ಆಳ್ವಳ್
ಕೀೞ್‌ವಟಿಯು ಕೊೞ್ಗೆಯಿನ್ ತಾಮೆಂದುಮುಟಿಯರ್, ಪಿರಿದಟಿವರೆಂದು.

ಕಾಪಿನಾಳ್

ನುಡಿಯಲಿತ್ತಪೆಯೊ ? ಮೇಣಿಂತೆ ಪೋದಪೆಸೊ ಪಿನ್‌ದಿರುಗಿ ?

ಕ್ರೆಯೋನ್

ಅಱಿಯೆಯಾ ಈ ನಿನ್ನ ನುಡಿತಮುಮ್ ನನಗೆ ನೋವೆಂದು ?

ಕಾಪಿನಾಳ್

ಇಱಿತಮದು ಕಿವಿಯೊಳೋ ? ಇಲ್ಲ ಅದು, ಮನದೊಳೋ ?

ಕ್ರೆಯೋನ್

ಏಕೆನ್ನ ನೋವೆಡೆಯನಱಿಸಿ ಕುಱಿಪಿಡಬಗೆವೆ ?

ಕಾಪಿನಾಳ್

ಗೆಯ್ದವನ್ ನೋಯಿಪನ್ ನಿನ್ನ ಮನಮನ್, ನಾನೊ ಕಿವಿಯನ್.

ಕ್ರೆಯೋನ್

ಓವೊ ನೀನ್ ಪುಟ್ಟುಗಬಪಿಗನೆ ಎಂಬುದು ತೆಱೆದು ತೋಱ್ಕುಮ್.

ಕಾಪಿನಾಳ್

ಎಂತಿರ್ದ್ದೆ, ಅಲ್ಲವಿಷಾ ಗೆಯ್ಮೆಯನ್ ಗೆಯ್ದೊನ್.

ಕ್ರಿಯೋನ್

ಅನಿತಲ್ಲ, ಪೊಸ್ಗೆ ಮೇಣ್ ಆತ್ಮಮನ್ ತೆತ್ತೊಡೀನ್.

ಕಾಪಿನಾಳ್

ಅಯ್ಯೋ! ಒಣರ್ಪ್ಪನ್ ತಪ್ಪನೊಣರ್ಪುದಿದು ಶೋಕಮ್.

ಕ್ರಿಯೋನ್

'ಒಣರ್ಪಸ್' 'ಒಣರ್ಪ್ಪನ್' ಪಿಡಿದು ನುಡಿಯಾಟವಿರ್ಕೆ.
ಗೆಯ್ಮೆಯನ್ ಗೆಯ್ದೊರನ್ ತೋಱದೊಡೆ, ಕೇಡನ್
ಅಟಿಲಾಭಮೆಸಗಿದಪುದೆಂಬುದನ್ ನುಡಿವೆ. [ಪೋಪನ್.

ಕಾಪಿನಾಳ್

ತಾನವನ್ ಸಿಲ್ಕುಗೆ! ಎಲ್ಲದಱಿಸೊಳ್ಳಿತದು.
ಆದೊಡವನ್, ಇನ್, ಪಿಡಿಯಪಡುಗೆ ಮೇಣ್ ಪಡದಿರ್ಕೆ,
ಅದನದೃಷ್ಟಮ್ ನಿರ್ಣಯಿಕುಮ್. ಇಲ್ಲಿ ಬಾರೆನಾನ್.
ನಚ್ಚುವಿಟ್ಟರ್ದ ನಾನ್ ಎಣಿಕೆಗಮ್ ಬಯಕೆಗಮ್
ಮೀಱ, ಇದೊ ಬರ್ದುಕಿದೆನ್ ದೇವರ್ಗೆ ಋಣಿಯಾಗಿ. [ಪೋಪನ್.

ಮೇಳವ್

ಬಲಮುರಿ ೧

ಪಲವೊಳವದ್ಭುತಮ್, ಆದೊಡಮದ್ಭುತಮ್
ಇನ್ನಿರದೊಂದುಮ್ ಮಾನವನಿನ್.
ಬೆಳ್ನೊರೆಯೆಸೆಯುವ ಪೇರಲೆಯೊಳ್ ಪಾಯ್ದು,
ತೆಂಕಣ ಬಿಱುಗಾಳಿಗಳೊಳ್ ತುಯ್ದು,
ನೆರೆಗಡಲನ್ ತಾನ್ ದಾಂಟಿದಪನ್.
ದೇವರ್ಕಳ ಪಿರಿಯವಳನ್,
ತಾಯ್ ನೆಲಮನ್, ತೆಯ್ವನವನ್
ತೇಯದಳನ್, ಬಳಲದಳನ್.

ವರ್ಷಂಗಳ್ ಮರಳುತಿರೆ,
ಸೇಗಿಲ್ಗಳ್ ಸುತ್ತಿಬರೆ,
ಕುದುರೆಗಳಿನ್ ತೆಯ್ವನವನ್,
ಮಣ್ಮಗುಳ್ಚುತೆ ತೆಯ್ವನವನ್.

ಎಡಮುರಿ ೧

ಬೀಸುತೆ ಪುರಿನೇಣ್ ಪೆಣೆದಾ ಬಲೆಯನ್,
ಪಿಡಿವನ್ ತಿಳಿ ಬಾನ್ ಪಱವೆಗಳನ್,
ಪಿಡಿವನ್ ಬಯಲಾ ಕೂರುಸಿರಿಗಳನ್,
ಮೇಣ್ ಕಡಲಾೞದ ನೀರುಸಿರಿಗಳನ್;
ತಾನ್ ಸೆಱೆಯಾಳ್ವನ್, ನೆಱೆಜಾಣನ್.
ಆಳ್ವನವನ್ ಕಾನ್‌ಮಿಗಮನ್,
ಪಱುಮಲೆಯಲೆವಾ ಮಿಗಮನ್.
ಜಾಣನ್, ಯುಕ್ತಿಯಿನಾಳ್ವನ್.
ಸೊಗವೊತ್ತುತೆ ಮುಱಿವನವನ್
ಪೊದೆನವಿರಾ ಕುದುರೆಯದನ್,
ಕೊರಲೊತ್ತುತೆ ಮುಱಿವನವನ್
ಬಱಲದ ಮಲೆಗೂಳಿಯುಮನ್.

ಬಲಮುರಿ ೧

ಜಾಣನವನ್ ನುಡಿಯುಮನ್,
ವಾಯುವೇಗಮನಮುಮನ್,
ಪೊಱಲನಣಿವ ಭಾವಮನ್,
ಕಲ್ತುಕೊಂಡನಾಳವನ್.
ಬಾನಡಿ ಬಯಲಾ ನೆಲೆಯೊಳ್
ಸುರಿಮಂಜಾ ಕೂರಂಬಿನ್,

ಬಿಱುಮಱೆಯಾ ಕೂರಂಬಿನ್,
ಪಾರಾಗಲ್ ಕಲ್ತಿರ್ಪನ್.
ಅನಿತುಮ್ ಬಟ್ಟೆ ಬಲ್ಲೊನವನ್,
ಜಾಣನ್, ಬರ್ಪೊಂದಱ್ಕುಮ್
ಬಟ್ಟೆಯಿಲ್ಲದೆ ಪೋಗಸವನ್.
ಮೃತ್ಯು ಒರ್ಪನಿಂದಮವನ್
ಪಾರಾಗಲ್ ನೆರವಿಲ್ಲನ್.
ಆದೊಡೆಯುಮ್, ಮೊಟ್ಟುದುವನ್
ಕುತ್ತಗಳನ್ ಮರ್ದೆಸಗಿ
ಪಾರಾಗಲ್ ಕಂಡಿರ್ಪನ್.

ಎಡಮುರಿ ೬

ಊಹೆಮಿಕ್ಕ ಯುಕ್ತಿಯಿನ್
ನುಣ್ಣನಪ್ಪ ಜಾಣ್ಮೆಯಿನ್
ಕೆಡಕಿಗೊರ್ಮೆ ನಡೆದಪನ್
ನಲ್ಮೆಗೊರ್ಮೆ ನಡೆದಪನ್.
ನಾಡಿನ ಕಟ್ಟಳೆಗಳುಮನ್,
ನಡೆವೆನೆಂದು ದೇವರಿದಿರ್
ತಾನ್ ಪೂಣ್ದ ಧರ್ಮಮುಮನ್
ತನ್ನಯ ಬಾಟೊಳ್ ಪೆಣೆದು,
ನಡೆವೊಡೆ ತಾನ್ ಪೊರ್ದುಗೆಯಿನ್
ಅಡರ್ಪುದು ನಾಡೆತ್ತರಮನ್.
ಮೇಣ್, ಅತಿಸಾಹಸಕ್ಕೊಲ್ದು
ಪಾಪಕೊಕ್ಕಲಪ್ಪೊನವನ್
ನಾಡಿಲ್ಲದೆ ಪೋಪನವನ್.
ಗೆಯ್ಮೆಯಿವನ್ ಗೆಯ್ವೊನವನ್—

ನಾಮಿರ್ವರ್ ಪುದುವಾಡೆಮ್,
ನಾಮಿರ್ವರ್ ಪುದುಕೞಿಯೆಮ್.

[ಕಾಪಿನಾಳ್ ಅಂತಿಗೊನೆಯನ್ ಪಿಡಿತರುತೆ]

ಮೇಳಮ್

ಏನೀ ದೈವವಿಚಿತ್ರಮ್? ಇರ್‌ಬಗೆಯಿನ್ ಬೆಱಗಾದೆನ್.
ಕಂಡಱಿತುಮ್ ಪೆಣ್ಣಿವಳಂತಂತಿಗೊನೇ ಅಲ್ಲೆಂಬೆನ್?
ಅಯ್ಯೋ ದುರ್‌ವಿಧಿ ಪೆಣ್ಣೇ! ದುರ್‌ವಿಧಿ ತಂದೆಯ ಮಗಳೆ!
ಒಯ್ದಿಪೌಸಿನಾ ಮಗಳೇ! ಏನಿದೆಲ್ಲಮ್, ಓ ಮಗಳೆ!
ಅರಸನ ಕಟ್ಟಳೆಯನ್ ನೀನ್ ಮೀಱುತೆ ಸೆಱೆಸಿಲ್ಕಿದೆಯೇನ್?
ಮತಿಗೆಟ್ಟಾ ಗೆಯ್ಮೆಯೊಳೇ ನಿನ್ನನ್ ಪಿಡಿತಂದಪರೇನ್?

ಕಾಪಿನಾಳ್

ಇವಳಿದೋ ಈ ಗೆಯ್ಮೆಗೆಯ್ದವಳ್; ಪಿಡಿದೆವಾಮ್
ಮಣ್‌ಮಾಡುತಿರ್ದಳನೆ. ಮತ್ತೆಲ್ಲಿ ತಾನ್ ಕ್ರೆಯೋನ್?

ಮೇಳಮ್

ಇದೊ, ತಕ್ಕ ಪೊೞ್ತಿನೊಳೆ ಪಿನ್‌ದಿರುಗಿ ಮನೆಯಿಂದೆ ಬಂದಪನ್.

ಕ್ರೆಯೋನ್

ಏನದು? ನಾನ್ ತಕ್ಕ ಪೊೞ್ತಿನೊಳೆ ಬಂದುದೇನ್? ಏನಾಯ್ತು?

ಕಾಪಿನಾಳ್

ಎನ್ನೊಡೆಯ! ಆಳಾಣೆಯಿಟ್ಟು ತಾನೇನೊಂದುಮ್ಮನ್ ಪೂಣ-
ಬಾರದು. ಪಿನ್ನೆಣಿಕೆ ಮುನ್‌ಬಗೆಯನೊತ್ತಿ ಪುಸಿಮಾಳ್ಪುದು.
ಆಗಳೇ ನೀನುಸಿರ್ದ ದಂಡಭಯದಿನ್ ನಡುಗಿ ನೆಱೆಯಂಜಿ,
ಮತ್ತೆ ನಾನಿತ್ತಣ್ಗೆ ಬರ್ಪುದೇ ಇಲ್ಲೆಂದು ಪೂಣ್ದೆನೇ.

ಆದ್ದೊಡೀಗಳ್ ಸಚ್ಚಿ ಪಾರದಾ ಬಯಕೆಗಮ್ ಪಿರಿದಾಗಿ
ಮಿಕ್ಕ ಸಲಿವಿಂಗೆ ತಾನೆಣೆಯಪ್ಪ ಪೆರ್‌ಸಲಿವು ಪೆಱತಿಲ್ಲ.
ಆದಱಿಂದಮೇ ಮತ್ತೆ ನಾನ್ ಬರ್ಪುದಿಲ್ಲೆಂದೆ ಪೂಣ್ದಿರ್ದುಮ್
ಇಲ್ಲಿಗೆಯ್‌ತಂದೆನಾನ್ ಈ ಪೆಣ್ಣ ಪಿಡಿತಂದು. ಪ್ರೇತಸಂ-
ಸ್ಕಾರದೊಳೆ ತಾನ್ ಸಿಲ್ಕಿಬಿಡ್ದಳಿವಳ್. ಈ ತಡವೆ ಮೇಣಾಯ್ಕೆ
ತಾನಿಲ್ಲ. ಈಯೊಂದು ಸಲ್ಲಪಾಲೆನಗೆ ತಾನ್ ಬಂದತ್ತು;
ಮತ್ತೆ, ಪೆಱನೊರ್ವಂಗಮಲ್ಲ. ನೀನ್ ಈಗಳಿನ್ನೊಡೆಯ!
ಕೊಂಡು ಪೆಣ್ಣಿವಳನ್, ಬಗೆಬಂದಮಾಡ್ಕೆಯೊಳೆ ಕೇಳ್ದು,
ತಪ್ಪಿಂಗೆ ತೀರ್ಪುಕೊಡು. ಆದೊಡಿನ್ನೀ ಕೇಡ ತೊಡರ್ದಿಂದೆ
ನಾನ್‌ಪಱಿದು ಬಿಡುಗಡೆಯನಾನಲ್ಕೆ ಪಕ್ಕುಂಟು ನನಗೆ.

ಕ್ರೆಯೋನ್

ಈ ನೆಱೆಯನೆಂತು, ಮತ್ತೆತ್ತಣಿನ್ ನೀನ್ ಪಿಡಿದು ತಂದಯ್?

ಕಾಪಿನಾಳ್

ಇವಳಾತನನ್ ಪೂಱುತಿರ್ಪಳ್; ಇದೊ, ಎಲ್ಲಮುಮ್ ತಿಳಿದಯ್.

ಕ್ರೆಯೋನ್

ಅಱಿವೆಯೋ ನೀನ್ ಪೇೞುತಿರ್ಪುದನ್, ಪೇೞ್ವುದುಮ್ ನೇರ್ಪೋ?

ಕಾಪಿನಾಳ್

ಕಂಡೆನಾನಿವಳನ್, ನೀನ್ ಇಟ್ಟಕಟ್ಟಳೆಯ ಪೆಣಮನ್
ಮಣ್‌ಮಾಡುತಿರ್ಪಳನ್. ಸ್ಪಷ್ಟಮೋ ಇದು, ತೆಱೆದು ಪೇೞ್ದೆನೊ?

ಕ್ರೆಯೋನ್

ನಿನ್ನ ಕಣ್ಗೆಂತು ಬಿಟ್ದಳ್? ಗೆಯ್ಮೆಯೊಳೆ ಸಿಲ್ಕಿ, ಅಗಪಟ್ಟಳೆಂತು?

ಕಾಪಿನಾಳ್

ಇದು ನಡೆದುದಿಂತು—ಬೆದಱು ಆ ನಿನ್ನ ಬೆದಱುಕೆಗಳಿನ್,
ದಿಗಿಲ್‌ಗೊಂಡು ನಾಮಲ್ಲಿಗೆಯ್ ತಂದು, ಪೆಣಮದನ್ ಮುಱಿಸಿರ್ದ
ಮಣ್ಣೆಲ್ಲಮನ್ ಬಟಿದು ಬಿಸುಟು, ಕೊಳೆತೊಸರುತಿರ್ದಾ ಮೆಯ್ಯನ್
ಎಲ್ಲ ಬತ್ತಲೆಗೆಯ್ದು, ನಮಗದಱ ಕೊಳೆಗಂಪು ಬಡಿವುದನ್
ತಪ್ಪಿಸಿಕೊಳಲ್ ಗಾಳಿ ತೀಡುವಾ ನೇರದೊಳ್, ದೂರದೊಳೆ,
ಮೇಡ ಕೋಡಿನ ಮೇಲೆ, ಕುಳ್ಳಿರ್ದೆಮ್ ; ಎಚ್ಚಱಿರ್ದಾಳನಾಳ್
ಬಿಱುನುಡಿಗಳಿಂದೆ ತಿವಿದೆಚ್ಚಿಸುತೆ, ಕಟ್ಟೆಸಕಮನಸಡ್ಡೆ
ಮಾಳ್ಪವನ್ ತಾನ್ ಎಚ್ಚಱಿರ್ಕೆಂದು ಜಡಿಯುತ್ತುಮಿರ್ದನ್.
ಇಂತಿರ್ದುದಿದು ತೊಳಪ ನೇಸಱಾ ಬಟ್ಟಮದು ನಡುಬಾನನ್
ಅಡರ್ದು ನಿಲ್ವನ್ನೆವರಮ್, ಉರಿಬಿಸಿಲ್ ನೆತ್ತಿ ಕಾಯ್ವನ್ನೆವರಮ್.
ಬಟಿಕೊರ್ಮೆಯೇ ಬಿಡದೆ ಬಿಱುಗಾಳಿ ಭೋರ್ಗರೆದು —ಬಾನ್ ಕೊರಗಿ—
ನೆಲನಿಂದೆ ದೂಳ್‌ಮುಗಿಲನೆಬ್ಬಿಸುತೆ, ಅಡವಿಮರದೆಲೆದುಱುಗಲ್
ಎಲ್ಲಮನ್ ಪಡಲಿಟ್ಟು, ಬಯಲೆಲ್ಲಮನ್ ತುಂಬಿದತ್ತು.
ಬಾನೆಲ್ಲ ಗಿಡಿದದಱಿನಡಸಿತ್ತು. ಕಣ್‌ಮುಚ್ಚಿ ತಾಳ್ದುಕೊಂ
ಡಿರ್ದೊಮಾಮ್ ದೇವರ್ಕಳಿಂದೆಱಗಿದೀ ಉಪದ್ರವಮನ್.
ನಿಡುಪೊಳ್ತು ಕಳಿದು, ಇದು ಸಯ್ತುಡಗಿದಾಗಳ್, ಈ ಕನ್ನೆ
ಕಾಣಿಸಿದಳ್. ಒಡನೆ ಕೂರ್ ನೋವಿಂದೆ ಚೀಱಿದಳ್,
ಮರ್ದೆಯೊಡೆದ ಪೆಱವೆ ತಾನ್ ಚೀಱ್ವಂತೆ ; ಬಱಿಯಗೂಡೊಳಗೆ
ಮಱಿಕವರ್ದ ಪಕ್ಕಿಯನ್ ಕಂಡೊಡನೆ ಚೀಱ್ವಂತೆ ಚೀಱಿದಳ್.
ಬತ್ತಲೆಯ ಪೆಣಮದನ್ ಪೆಣ್ ಕಂಡು ಬಲ್‌ಕೀಱು ಇಟ್ಟಳ್.
ಮತ್ತದನ್ ಗೆಯ್ದವರ ಮೇಲಿರದೆ ಶಾಪಮನೆ ಕಱೆದಳ್.
ನೇರಮೇ ಕಯ್ಯೊಳಗೆ ತಂದಳೊಣಮಣ್ಣನ್ ;
ನಲ್‌ಸಮೆದ ಚೆಂಬೊನ್ನ ಕೊಡಮೆತ್ತಿ ಮೂಱುತಣಿಯೆಱೆದು
ಮುಡಿಗೆಯ್ದಳಾ ಪೆಣಕೆ. ನೋಡಿದೊರೆ ನುಗ್ಗಿದೆಮ್ ; ಬೆಱಗಾಗ-
ದಾ ಬೇಂಟೆ ಮುತ್ತಿದೆಮ್. ಮುನ್ನ, ಮತ್ತಾಗಳಿನ ಗೆಯ್ಮೆಯನ್

ಪೊಱಿಸಿದೆಮ್. ಒಂದುಮನ್ ತಾನ್ ಇಲ್ಲಮೆನ್ನದೆಯೆ ನಿಂದಳ್;
ನನಗಾದುದೊರ್ಮೆಯೇ ಬಿಡದೆ ಸಲಿವುಮ್, ನೋವುಮಾಗಳ್.
ಕೇಡಿಂದೆ ನಾನ್ ಬಿಡುತೆಯಾಂತುದೋ ಪೆರ್ಸಲಿವು; ಆದೊಡೆ,
ಕೆಳೆಯರನ್ ಕೇಡಿಂಗೆ ತಂದುದೋ ಕೊರಗು. ಇಂತಿರ್ದುಮ್,
ಎನ್ನುಟಿವನಾನ್ ನೋಡೆ ಕಿಱಿಯವೇ ಎಲ್ಲಮುಮ್.

ಕ್ರೆಯೋನ್

ನೀನೆಲಗೆ! ತಲೆ ನೆಲಕೆ ಜೋಲ್ದಳೇ! ಪೇಟ ನೀನ್—
ಉಂಟೆಂಬೆಯೋ ಇದನ್? ಗೆಯ್ದುದಿಲ್ಲೆಂಬೆಯೋ?

ಅಂತಿಗೊನೆ

ಗೆಯ್ದುದುಂಟೆಂಬೆನ್; ಇಲ್ಲೆಂದು ಪೇಟೆನ್.

ಕ್ರೆಯೋನ್

[ಕಾಪಿನಾಳ್ಗೆ] ನಿನ್ನಬಗೆ ಬಂದೆಡೆಗೆ ನೀನ್ ಪೋಗಬರ್ಕುಮ್.
ಪೊಱಿಸಿರ್ದ ಪೆರ್ತಪ್ಪಿನಿನ್ ಬಿಡುತೆಯಾಂತೆ. [ಪೋಪನ್.
[ಅಂತಿಗೊನೆಗೆ] ಇನ್ ಪೇಟು, ನಿಡಿದಿರದೆ ಕುಱಿದಱೊಳೆ ಪೇಟು
ನೀನೆನಗೆ! ಇದನೆಸಗಲಾಗದೆಂದೆಮ್ಮಿಂದೆ
ಸಾಱಿರ್ದ ಶಾಸನಮನಱಿತಿರ್ದೆಯೋ ನೀನ್?

ಅಂತಿಗೊನೆ

ಅಱಿತಿರ್ದೆನ್, ಅಱಿಯದೆಂತಿರ್ಪೆನ್?—ಸಾಱಿದುದನೂರ್ಗೆಲ್ಲ.

ಕ್ರೆಯೋನ್

ಮತ್ತೆ, ನೀನ್ ಕಟ್ಟಳೆಯನೇ ಮಿಕ್ಕು ನಡೆಯಲೆರ್ದೆತಂದಯ್?

ಅಂತಿಗೊನೆ

ಅಪ್ಪುದು. ಈ ಕಟ್ಟಳೆಯನೆನಗೆ ಮಾಡಿದೋನ್ ಸ್ಯೂಸ್‌ದೇವನಲ್ಲ ; ದೇವತೆಗಳೊಡನೆ, ಅಡಿಲೋಕದೊಳ್ ಪುದುವಾಳ್ವ ಧರ್ಮ ದೇವತೆಯುಮ್ ಇಂತಪ್ಪ ಕಟ್ಟಳೆಗಳನ್ ಮಾನವರ್ಗೆ ಮಾಡಿದಳಿಲ್ಲ. ಅಂತುಮಲ್ಲದೆಯೆ, ಬರೆಯದಾ, ಕದಲದಾ, ತಪ್ಪದಾ, ದೇವತೆಗಳಿಟ್ಟಾ ಕಟ್ಟಳೆಗಳನ್ ಮರ್ತ್ಯನಪ್ಪೊರ್ವನೊತ್ತರಿಸಿ ಮೀಱ್ವನಿತು ನಿನ್ನ ಈ ಶಾಸನಮ್ ಶಕ್ತಮೆಂದೆಣಿಸಿದೆನುಮಿಲ್ಲ. ಏಕೆಂದೊಡವಱ ಬಾಳ್ವೆ ಇಂದಿನದಲ್ಲ, ನಿನ್ನೆಯದುಮಲ್ಲ, ಎಂದೆಂದಿನದು ; ಅವಱ ಮೊದಲ ಕಾಣ್ಕೆಯದೆಂದೊ ತಾನಱಿಯನಾವನುಮ್. ಆವೊರ್ವನಾಳ ಅಹಮ್ಮಿಗಾದೊಡಮಂಜಿ ನಾನ್ ಅವಱನತಿಚರಿಸಿ ದೇವರ್ಗೆ ತೆಱುವೆ ದಂಡಮನ್. ನಾನ್ ಸಾಯವೇಳ್ಕುಮೆಂಬುದನಱಿತೆಯಿರ್ದೆನ್— ಮತ್ತಱಿಯದೆಂತು ಪೋಪೆನ್—ನಿನ್ನ ಈ ಶಾಸನಮ್ ಸಾಱದಿರ್ದೊಡಮ್. ಇಂದೆನ್ನ ಪೊೞ್ತಿಂಗೆ ಮುನ್ನಮೇ ನಾನ್ ಪೊಂದುವೊಡೆ, ಲಾಭಮೆಂದೇ ನಾನೆಣಿಸಿದಪೆನದನ್. ಏಕೆಂದೊಡೆನ್ನವೋಲ್ ಎತ್ತಲುಮ್ ಕೇಡು ಕವಿದಡಸಿ ಬಾಳ್ವೋರ್, ಆರ್ ತಾನೆ ಸಾವಿನೊಳ್ ಲಾಭಮನ್ ಪಡೆಯರ್ ? ಇಂತಾಗೆ, ನನಗೊದಗಿದೀ ಪಳಿಸುಣ್ಬುದಿದು ಎಳ್ಳನಿತೆ ನೋವು. ಇಂತಿರದೆ, ಎನ್ ತಾಯ ಬಸಿಱಿಂದೆ ಬಂದವನ್ ಸತ್ತಿರ್ದು, ಪೆಣಮನ್ ಹೂಱ ಪೂಱದೆಯೆ ನಾನ್ ತಾಳ್ದುಕೊಂಡಿರ್ದೆನಾದೊಡೆ, ನೋವೆನದಱಿಂದೆ ; ಇದಱಿಂದೆ ನೋಯೆನ್. ಇನ್ ಎಗ್ಗಳೆಂದು ನಾನ್ ತೋಱಿದೊಡೆ ನಿನಗೆ, ನಾನಗ್ಗಳೆಂದು ತಪ್ಪಿಡುವೊನೇ ತಾನೆಗ್ಗನಂಜೆನ್.

ಮೇಳಮ್

ಪನಿಯೊರಟು ತಂದೆಗೊಗೆದಾ ಮಗಳ ಪನಿಯೊರಟಿನೊಗೆತಮ್
ತೋಱುಗುಮ್. ಪೆಣ್ಣವಳ್ ಕೇಡಿಂದೆ ಪಿಂಜರಿಯಲಱಿಯಳ್.

ಕ್ರೆಯೋನ್

ಆದೊಡಮ್, ಅಱಿಯಿದ್ದನ್—ಅತ್ತಿಸೆಡೆತು ಮಣಿಯದಾ ಎರ್ದೆಗಳ್ ಪಲರ್ಮೆ
ತಾಮಿಳಿದಱೊಳೆ ಕುಸಿದು ಜೋಲ್ದುವಮ್. ಪಲರ್ಮೆ ನೀನ್ ನೋಳ್ಪೆ, ಬಲ್‌ಗಟ್ಟಿ
ಉರ್ಕು ತಾನ್ ಬೆಂಕೆಯೊಳ್ ಕಡುಕಾಯ್ದು ಪೆಡಸಾಗಿ, ಇಳಿದಱೊಳೆ ಮುಱಿದು
ಪುಡಿಯಕ್ಕುಮ್. ತುಂಟೊರಟು ಕುದುರೆಗಳ್ ಕಿಱಿಯ ಕಡಿವಾಣದಿನ್
ಮುಱಿದು
ಪೞಗುವುದನಱಿವೆನಾನ್. ನೆರೆಯರ್ಗೆ ತೊೞ್ತುವೊರ್ ಕೊರ್ಬಿ ನಡೆಯಲ್ಕೆ
ಸರಿಯಲ್ತು. ಮುನ್ನಮೇ, ನಿಱಿಸಿರ್ದ ಕಟ್ಟಳೆಗಳನ್ ಮಿಕ್ಕು ನೆಗೞ್ದು,
ಸೊರ್ಕಿನೊಳ್ ನುಱಿತಿರಳ್; ಅದನೆಸಗಿ ಸಾಲದಿರೆ, ಎರಡನೆಯ ಸೊರ್ಕು,
ಗೆಯ್ದು ಗೆಯ್ಮೆಗೆ ಪಿಗ್ಗಿ, ಬಾಯ್‌ಕೊರ್ಚಿ ನಲಿವಳ್. ನಾನಲ್ತು ಗಂಡು.
ಇವಳ್ ಗಂಡು, ದಂಡಮನಿವಳ್ ತೆಱದೆ, ಗೆಲ್ದಿವಳದಾಗೆ.
ಇವಳೆನ್ನ ಕೂಡೊಗೆದಳಾ ಮಗಳೆ ಅಕ್ಕೆ, ಮತ್ತೆಮ್ಮ ಮನೆಯೊಳಗೆ
ಜ್ಯೂಸ್‌ದೇವನೊಕ್ಕಲರೊಳೆಲ್ಲರಿನ್ ಪೊರೆನೆತ್ತರಳೆ ಅಕ್ಕೆ, ಇವಳುಮ್
ಮತ್ತಿವಳ ಕೂಡೊಗೆದಳುಮ್ ಘೋರ ದಂಡಮನ್ ತಾಮ್ ತೆಱದೆ ಪೋಗರ್.
ಇನ್, ಅವಳ ಮೇಲೆಯುಮ್ ಪೊಱಿಸಿದಪೆನ್, ಈ ಪೂಣ್ಕೆಯಾ ಸಂಚಿನೊಳಗೆ
ಸರಿಪಾಲ ತಪ್ಪನ್. ಕರೆತನ್ನಿಮವಳನ್; ಇದುವೆತಾನ್ ಒಳಗೆ
ನೋಡಿದೆನ್, ತಾನೆ ತಾನಲ್ಲಳನ್, ಪುರ್ಚುಕೆರಳ್ದುಱುಬುವಾ ಪೆಣ್ಣನ್.
ಇರುಳೊಳಗೆ ನಿಱಿದಪ್ಪಿ ಸಂಚುಗೆಯ್ವರ ಮನಮ್ ಮಾಟಕ್ಕೆ ಮೊದಲೆ
ಪಲರ್ಮೆ ತಾನ್ ಕಳ್ಳತಪ್ಪಿನ್ ಚುರ್ಚಿ ಕೊಱೆಗುಮ್. ಎಂತುಮಾನ್ ತಾಳೆನ್
ಅಟಿಗೆಯ್ಮೆಯೊಳೆ ಪಿಡಿಯುವಟ್ಟದನೆ ಗುಣಮೆಣಿಸಿ ತೋಱಲೆಳಸುವರನ್.

ಅಂತಿಗೊನೆ

ಎನ್ನ ಕೊಲ್ವುದಱಿನುಮ್ ಮಿಗಿಲನೇನಾನುಮನ್ ಬಗೆವಯ್ ?

ಕ್ರೆಯೋನ್

ಇಲ್ಲಮಿನ್ ಏನುಮನ್; ಅದನ್ ಕೊಂಡು, ಎಲ್ಲಮನ್ ಕೊಂಡೆನ್.

ಅಂತಿಗೊನೆ

ಮತ್ತೇಕೆ ತಡವಮಾಳ್ಪೆ ? ನೀನಾಡುವಾ ಮಾತೊಳೇನೊಂದುಮ್
ಇನ್ನೆನಗೆ ಸಲಿವಲ್ಲ — ಮೇಣ್ ಎಂದುಮವು ಸಲಿಸದಿರ್ಕೆ.
ಅಂತೆಯೇ ನಾನಾಡುವಾ ನುಡಿಗಳುಮ್ ನಿನಗೆ ಸಲಿವಲ್ಲ-
ಮೆಂಬುದುಮ್ ಸಹಜಮೇ. ಇನ್, ಕೀರ್ತಿಯೋ ! ನನ್ನ
ಒಡವುಟ್ಟಿದಣ್ಣಂಗೆ ಪೂಣ್ಕೆಯನ್ ಸಲಿಸುವುದಱಿಂದೆಯುಮ್
ಪೆಱತೆತ್ತಣಿಂದೆ ನಾನ್ ನಲ್ಪೆಸರ್ ಪೆತ್ತಪೆನ್ ? ಇವರೆಲ್ಲರ್
ಮೆಚ್ಚಿ ನುಡಿದಪರಿದನ್, ಭಯಮಿಂದು ನಾಲಗೆಯನೊತ್ತಿ ಸೆಱೆ
ಗೆಯ್ಯದೊಡೆ. ಒಳವೆನಿತೊ ಭಾಗ್ಯಂಗಳೆಱೆತನಕ್ಕೆ ; ತನ್ನ ಬಗೆ-
ಬಂದಂತೆ ನುಡಿಯಲುಮ್, ನಡೆಯಲುಮ್, ಶಕ್ತಿಯುಂಟು.

ಕ್ರೆಯೋನ್

ಥೇಬಾಯರನಿಬರೊಳ್ ನೀನೊರ್ವಳೇ ಇಂತು ನೋಳ್ಪಳ್.

ಅಂತಿಗೊನೆ

ನೋಳ್ಪರೀ ಪರಿ ಇವರುಮ್ ; ಆದೊಡಮ್ ನಿನಗೆ ನಾಲಗೆ ಮುದಿರಿ
ಕೊಳ್ವರ್.

ಕ್ರೆಯೋನ್

ನಾಣ್ಚೆ ನೀನ್ ಇವರೆಲ್ಲರಿನ್ ಬೇಱೆ ಬಗೆಯಲ್ ?

ಅಂತಿಗೊನೆ

ಒರ್ಬಸಿಱಿನೊಗೆದೋನನ್ ಸೇವಿಪುದು ನಾಣಿಲ್ಮೆಯಲ್ಲಮ್.

ಕ್ರೆಯೋನ್

ಮಾಱಾಂತು ಮಡಿದನುಮ್ ನಿನಗೆ ಒರ್ನೆತ್ತರನೆ ಅಲ್ಲಮೊ ?

ಅಂತಿಗೊನೆ

ಅಪ್ಪುದೊರ್‌ನೆತ್ತರನೆ. ಒರ್‌ತಂದೆ ಒರ್‌ತಾಯೆ ಪಡೆದೋನ್.

ಕ್ರೆಯೋನ್

ಆದೊಡಮ್, ಇವನ್ಗೆ ಪುಣ್ಯಮೆನಿಸಿಪ್ಪ ಶ್ರಾದ್ಧಮನವನ್ಗೇಕೆ
ಮಾಳ್ಪಯ್ ?

ಅಂತಿಗೊನೆ

ಸಲ್ವನುಡಿಯಲ್ಲಿದು. ಸತ್ತೋನಿದನೊಪ್ಪನ್.

ಕ್ರೆಯೋನ್

ನಿಜಮ್, ಈತನನ್ ಪಾಪಿಯೊಡನೆ ಸಮಗೌರವಿಪೆಯಾದೊಡೆ.

ಅಂತಿಗೊನೆ

ಆವನೋ ತೊೞ್ತಲ್ತು ಮಡಿದವನ್ ; ಒರ್‌ಬಸಿಱ್ ಬಂದವನ್.

ಕ್ರೆಯೋನ್

ನಾಡ ಪಾೞಿಡುತವನ್ ; ನಾಡ್ಕೆ ನೆರಮಾಗಿ ಮಾಱಾಂತಿವನ್.

ಅಂತಿಗೊನೆ

ಆದೊಡೆಯುಮಡಿಲೋಕಮೀವಿಧಿಗಳನ್ ಪಾರ್ದು ಬೇಡುಗುಮ್.

ಕ್ರೆಯೋನ್

ಸರಿಯಲ್ಲ ಕೆಟ್ಟನೊಡನೊಳ್ಳಿದನ್ ಸರಿಪಾಲನುಣ್ಬುದು.

ಅಂತಿಗೊನೆ

ಕಂಡರಾರ್ ? ಅಡಿನೆಲನೊಳಾವುದು ಪವಿತ್ರಮೋ ಎಂಬುದನ್ ?

ಕ್ರೆಯೋನ್

ಪಗೆಯವನ್ ಕೆಳೆಯಾಗನೆಂದುಮ್ ; ಸತ್ತಂದುಮಾಗನ್.

ಅಂತಿಗೊನೆ

ಪ್ರೀತಿಪೆಡೆ ಕೂಡೆಸಗೆ ಪುಟ್ಟಿದೆನ್ ; ದ್ವೇಷಿಪೆಡೆಯಲ್ಲಮ್.

ಕ್ರೆಯೋನ್

ಸರಿ ಪೋಗು, ಅಡಿನೆಲಕೆ. ಪ್ರೀತಿಸು, ಪ್ರೀತಿಪುದೆ ಆಗೆ
ನೀನಲ್ಲಿ. ನಾನ್ ಬರ್ದುಂಕಿರ್ಪಂದು ಪೆಣ್ಣೆಂದುಮಾಳಳ್.

[ಇಸ್ಮೇನೆಯನ್ ಉಯ್‌ತರ್ಪರ್]

ಮೇಳಮ್

ಇದೊ ಇಸ್ಮೇನೇ! ಅರಮನೆ ಬಾಗಿಲ ಪೊಱಗೆಯೆ ಬಂದಳ್ ;
ಒಲ್ಮೆಯ ತಂಗೆಯ ಮಱುಕದ ಕಣ್‌ಬನಿ ಸುರಿಸುತೆ ಬಂದಳ್.
ಪುರ್ಬಿನ ಮೋಡಮ್ ನೆತ್ತರ ಕೆಂಚನ್ ಸೂಸುವ ಮೊಗಮನ್
ಕೆಡಿಸುತೆ ಕವಿಗುಮ್, ಕಟ್ಮುತೆ ಪನಿಯಿನ್ ಚೆಲ್ವಿನ ಕದಪನ್.

ಕ್ರೆಯೋನ್

ನೀನೆಲಗೆ! ಸಂಜೆಡಿದ ಪಾವಂತೆ ಮೋಸದಿನಡಂಗಿರ್ದು ಮನೆಯೊಳ್,
ಗುಟ್ಟಿನೊಳೆ ನೆತ್ತರನ್ ಪೀರ್ದಳೇ! ಅಱಿಯದೆಯೆ ಪೋದೆನಾನ್ ನಿಮ್ಮನ್ ;
ದ್ರೋಹಿಗಳನಿರ್ವರನ್, ಪ್ರಭುಪೀಠಮನ್ ಪೊಣರಲೆಳ್ದ ಘಾತಕರನ್
ನಾನ್ ಸಾಕಿ ಕಯ್ಯಾರ ಕೊರ್ಜಿಸಿದೆನೆಂಬುದನ್. ಪೇೞೆಸಗೆ ಬಾರಾ!
ನೀನುಮೀ ಪೂಟ್ಕೆಯೊಳ್ ಪಾಲ್‌ಗಾಱಳೆಂದೊಪ್ಪಿಕೊಳ್ವೆಯೋ ಈಗಳ್ ;
ಅಲ್ಲದೊಡೆ, ಸುಮ್ಮನೆಯೆ, ಕಂಡಱಿತುದಿಲ್ಲೆಂದು ಆಣೆಯಿಡ ಪೋಪೆಯೋ?

ಇಸ್ಮೇನೆ

ಗೆಯ್ದೆನೀ ಗೆಯ್ಮೆಯನ್—ಇವಳೊಪ್ಪಿಕೊಳ್ವೊಡೆ ;
ಪಾಲ್‌ಗೊಳ್ವೆನಿವಳೊಡನೆ, ಪೊತ್ತು ಈ ತಪ್ಪನ್.

ಅಂತಿಗೊನೆ

ಆಗದಿದು. ಈ ಪಾಲನೀಯಲೊಲ್ಲದು ನಿನಗೆ ಧರ್ಮಮ್.
ನೀನುಮೊಪ್ಪಿದೆಯಿಲ್ಲ; ಪಾಲಿತ್ತೆನಿಲ್ಲ ಮುನ್ ನಾನುಮ್.

ಇಸ್ಮೇನೆ

ಆದೊಡಮ್, ನಿನಗಡಸಿದೀ ಎಡರೊಳ್, ಅೞಿಪಾಡೊಳ್, ಆನುಮ್
ನಿನ್ನ ಜತೆಯೊಳ್ ಕೇಡ ಕಡಲೊಳಗೆ ಪಾಯಲ್ಕೆ ನಾಣ್ಚೆನ್.

ಅಂತಿಗೊನೆ

ಗೆಯ್ದರಾರೆಂದು ಕೆೞಲೋಕಮುಮ್, ಕೞಿದರುಮ್ ಬಲ್ಲರ್.
ಮಾತಿನೊಳ್ ಕೆಳೆಯಪ್ಪ ಕೆಳೆಯಳನ್ ನಾನೊಲ್ವಳಲ್ಲಳ್.

ಇಸ್ಮೇನೆ

ಬೇಡ, ಬೇಡೆಲೆ ಅಕ್ಕ! ತಳ್ಳದಿರು ನೀನೀಗಳೆನ್ನನ್.
ನಿನ್ನೊಡನೆ ಸಾಯಲುಮ್, ಸತ್ತನನ್ ಸೇವಿಸಲುಮ್, ಎಡೆಗೊಡು.

ಅಂತಿಗೊನೆ

ನನ್ನೊಡನೆ ನೀನ್ ಸಾಯವೇಡ. ನೀನ್ ಕಯ್ಯಿಡದ ಕೆಲಸಮ್
ನಿನತೆಂದು ಕೊಳವೇಡ; ಈಗಳಾನ್ ಸಾವುದೇ ಸಾಲ್ಗುಮ್.

ಇಸ್ಮೇನೆ

ನಿನ್ನನಾನ್ ನೀಗಿಕೊಳೆ, ಪಿನ್ ಏನೊ ಸಲಿವೆನ್ನ ಬಾೞೊಳ್?

ಅಂತಿಗೊನೆ

ಬೆಸಗೊಳ್ ಕ್ರೆಯೋನನನ್: ನಿನ್ನ ಚಿಂತೆಗಳವನ್ಗೆಯೆ ತಾನ್!

ಇಸ್ಮೇನೆ

ನಿನಗೆ ಪಡಪಿಲ್ಲದೆಯೆ, ಒಱದೆನ್ನನೇಕಿಂತು ನೋಯಿಸಪಯ್?

ಅಂತಿಗೊನೆ

ಅಯ್ಯೋ ! ನಿನ್ನ ನಾನ್ ಸಕ್ಕೊಡಮ್, ಸೋವಿಂದೆ ಸಗುವೆನ್.

ಇಸ್ಮೇನೆ

ಈಗಳುಮ್ ಪೇೞೆನಗೆ, ನಾನೆಂತು ನಿನಗೆ ನೆರವಪ್ಪೆನ್ ?

ಅಂತಿಗೊನೆ

ನಿನ್ನ ತಲೆ ಕಾದುಕೊಳ್ ; ನೀನ್ ಜಿಡಿಸಿಕೊಳ್ವೊಡಾನ್ ಕಱುಬೆನ್.

ಇಸ್ಮೇನೆ

ನಿರ್ಭಾಗ್ಯೆ ನಾನ್ ? ನಿನ್ನ ದುರ್ವಿಧಿಯೊಳ್ ಎನಗೆ ಪಾಲ್ ಇಲ್ಲಮೇ ಅಕ್ಕ ?

ಅಂತಿಗೊನೆ

ಆಯ್ದೆ ನೀನ್ ಬರ್ದುಕನ್ ; ನಾನ್ ಸಾವನ್.

ಇಸ್ಮೇನೆ

ಮೊದಲ್ಗೆ ಮುನ್ನಱಿಕೆಯನ್ ಪೇೞ್ವನಿತು ಪೇೞ್ದೆನೇ ಅಕ್ಕ ?

ಅಂತಿಗೊನೆ

ಇಲ್ಲಿಯೋರ್ ಮೆಚ್ಚಿದರ್ ನಿನ್ನಱಿವನ್ ; ಅಲ್ಲಿಯೋರ್ ಎನತನ್.

ಇಸ್ಮೇನೆ

ಆದೊಡಿರ್ವರ್ಗೆಯುಮ್ ತಪ್ಪು ಸರಿಸಟ್ಟಿರ್ಕುಮಾಗಳ್.

ಅಂತಿಗೊನೆ

ಬೆದಱದಿರು ; ನೀನ್ ಇಲ್ಲಿ ಬರ್ದುಕಿರ್ಪೆ. ಈ ಎನ್ನ ಜೀವಮ್
ಸತ್ತುತ್ತು ಪಡೆಯುಂದೆ, ಸತ್ತರ್ಗೆ ಸೇವೆಯನ್ ಸಲಿಸಲ್.

ಕ್ರೆಯೋನ್

ಈ ಎರಡ್ ಮಕ್ಕಳುಮ್, ನಾನೆಣಿಪೆನ್, ಅಱಿವುಮರುಳಾದರ್ ;
ಒರ್ವಳೋ ಇದುವೆ ತಾನ್, ಮತ್ತೊರ್ವಳೋ ಪುಟ್ಟಿದಂದೆ.

ಇಸ್ಮೇನೆ

ಓ ದೊರೆಯೆ! ಕೇಡಡಸೆ ಪುಟ್ಟಱಿವುಮುೞಿಯುದೆಯೆ ನೆಲೆತಪ್ಪಿ ಪೋಕುಮ್.

ಕ್ರೆಯೋನ್

ನಿನ್ನಱಿವು ಪಾೞಿತಯ್, ಕೇಡಿಯನ್ ಕೆಳೆಗೊಂಡು ಕೇಡನಾಯ್ದಂದೆ.

ಇಸ್ಮೇನೆ

ನಾನಿವಳನುೞಿದಡೇನೊರ್ವಳೆಯೆ ಬಾಳ್ವೆನ್ ?

ಕ್ರೆಯೋನ್

ಇವಳ ಪೆಸರೆತ್ತದಿರ್ ; ಇನ್ನಿಲ್ಲಳಿವಳ್, ಇಲ್ಲಳ್.

ಇಸ್ಮೇನೆ

ನೀನ್ ಪೆತ್ತ ಮಗನೊಲ್ದ ಮದವಳನ್ ಕೊಲ್ವೆಯೇನ್ ?

ಕ್ರೆಯೋನ್

ಪೆಱವಿರ್ಕುಮವನ್ಗೆ ಕ್ಷೇತ್ರಂಗಳ್.

ಇಸ್ಮೇನೆ

ಅವನ್ಗಿವಳ್ಗೆ ಬೆಸೆದ ಪತ್ತುಗೆಗೆ ತೋಡಿಲ್ಲಮ್.

ಕ್ರೆಯೋನ್

ನಾನೆಂದುಮ್, ಅೞಿಪೆಂದಿರನ್ ಸಸ್ನ ಮಕ್ಕಳ್ಗೆ ತಾಳೆನ್.

ಅಂತಿಗೊನೆ

ಕಟ್ಟಿನಿಯ ಹಯ್‌ಮೋನ್! ದ್ರೋಹಮನ್ ಮಾಳ್ಪನೇ ನಿನಗೆ ನಿಮ್ಮಯ್ಯನ್!

ಕ್ರೆಯೋನ್

ಸಾಲ್ಗುಮ್. ನೀನುಮ್, ಈ ನಿನ್ನ ಮದುವೆಯುಮ್, ಸಾಲ್ಗುಮ್.

ಮೇಳಮ್

ಆದೊಡೇನ್ ಕಿತ್ತುಕೊಳ್ವಯ್ ನಿನ್ನ ಮಗನಿಂದೆ ಪೆಣ್ಣನ್?

ಕ್ರೆಯೋನ್

ಹಯ್‌ದೇಸ್ ಈ ಮದುವೆಯೊಸಗೆಯನ್ ನಿಲ್ಲಿಪೋನ್ ಈಗಳ್.

ಮೇಳಮ್

ಇನ್ನಿವಳ್ ಸಾವುದೇ ತೀರ್ಪಿಟ್ಟತೆಂದೆನಗೆ ತೋಱ್ಕುಮ್.

ಕ್ರೆಯೋನ್

ಅದೆ ತೀರ್ಪು. ಈ ನನ್ನ ತಱಿಸಲವೆ ನಿನತುಮೆಂದೆಣಿಪೆನ್.
[ಬಱಿಯರ್ಗೆ] ಕೂಡದಿನ್ ತಡಮೆನಿತುಮ್, ಏ ತೊತ್ತಿರ್! ಇವರ್ಗಳನ್
ನೀಮೊಡನೆ,
ಕೊಂಡುಯ್ಯಿಮೊಳಗೆ. ತಾಮ್ ಪೆಣ್ಗಳಾಗಿರವೇಱ್ಕುಮಿನ್‌ಮುಂದೆ;
ಸ್ವೇಚ್ಛೆಯಿನ್ ಮೇಣಲೆಯದಿರ್ಕೆ. ಅದೆಂತಪ್ಪ ಕೆರ್ಚೆರ್ದೆಯುಮ್
ಇರದೆ ತಾನ್ ಪಾಱಿಪೋಕುಮ್ ಸಾವು ಬಾಟಟ್ಟಿ ಬರ್ಪುದನೆ ಕಂಡು.
[ಕೊಂಡುಯ್ವರ್.

ಮೇಳಮ್

ಬಲಮುರಿ ೧

ಧನ್ಯನ್! ಬಾ಴ೊಳ್ ಕೇಡು ಸವಿಯದನ್.
ಬಾಸವರೊರ್ಮೆ ಕಾಡಲ್ ಮನೆಯನ್,

What are we in the hands of God.

ತಪ್ಪದೆ ಕಾಡುಗುಮದಱಾ ಕಾಟಮ್
ಒರ್ಮೆಯೆ ಪರ್ಬುತೆ ಮನೆತನಮೆಲ್ಲಮ್.
ಬಿಡದೆಯೆ ತಿನ್ನುತೆ ತಲೆಮೊಱೆಯೆಲ್ಲಮ್.
ಥ್ರೇಕ್ ಕಡಲ ಬಿಱುಗಾಳಿಯಿನ್ ಕೆರಳ್ದು ತೆರೆಗಳ್
ಪೊರಳ್ದುರುಳ್ದು ಕಡಲ ಕರ್ಪರಪ ಪಾಯ್ಪುಗಳ್,
ಮೊರೆಮೊರೆದು ಮೊಗೆದೆತ್ತಿ, ಉರುಳಿಕ್ಕುಮಾಟದಿನ್ ಕಡಲ ಕರ್ಮಣಲನ್,
ಘೋರ್ಗರೆದು ಬಿಱುಗಾಳಿ ಬಡಿದಾರ್ಪ ಕರೆಬಂಡೆ ಮಱುಮೊರೆಯೆ ಮೊರೆಯನ್.

ಎಡಮುರಿ ೧

ಈ ಲಾಬ್ದಕುಸಿನ ಮನೆಯೊಳ್ ನೋೞ್ಪೆನ್
ಕೇಡಿನ ಮೇಲ್ ಕೇಡಣೆಗುಮ್ ಪಱೆಯಿನ್,
ತಲೆಮೊಱೆ ಬಿಡಿಸದೆ ಮಱುತಲೆಮೊಱೆಯನ್.
ಆವುದೊ ದೇವತೆ ಉರುಳಿಸಿ ಬಡಿಗುಮ್,
ಬಿಡುಗಡೆಯಿಲ್ಲದೆ ಒರ್ಮೆಯೆ ಬಡಿಗುಮ್.
ಈಗಳುಮೆ ಬೆಳಕೊಂದು ಬೆಳಗಿದುದು ಕುಡಿಯನ್,
ಒಯ್ದಿಪೌಸನ ಮನೆಯ ಕೊನೆವೇರ ಕುಡಿಯನ್.
ಅಡಿನೆಲನ ದೇವರ್ಗೆ ಕಡಮಪ್ಪ ಕೋಲೆಮಣ್ಣೆ ಪಱಿದುದಾ ಬೆಳಕನ್,
ನುಡಿದ ನುಡಿಯೆಗ್ಗತನಮಂತೆ ಮನದಲೆತಮುಮ್ ಪಱಿದುದಾ ಬೆಳಕನ್.

ಬಲಮುರಿ ೨

ಆವಾಳ ಸಾಹಸಮ್ ತಡೆವುದಯ್ ಸ್ಯೂಸ್‌ದೇವ! ನಿನತೊಂದು ಬಲಮನ್?
ವಿಶ್ವಮನೆ ಸೆಱೆಪಿಡಿದು ಕೆಡಪುವಾ ನಿದ್ರೆಯುಮ್ ಪೊಟ್ಗಿಸದ ಬಲಮನ್?
ದೇವರ್ಕಳಶ್ರಾಂತ ಚಾಂದ್ರಮಾಸಂಗಳುಮ್ ಮೊಟ್ಗಿಸದ ಬಲಮನ್?
ಪೊಟ್ಟು ಮುಪ್ಪೇಱಿಸದೆ, ಮಿಱುಪೊಳೆವ ಬೆಳ್ವೆಳಗೊಲುಂಪಸಿನೊಳಾಳ್ವಯ್!
ಈಗಳುಮ್, ಮುನ್, ಅಂತೆ ಮುಂದೆಯುಮ್ ಸಲ್ಗುಮಿಾ ಕಟ್ಟಳೆಯೆ
ನೋಡಯ್!
ಮರ್ತ್ಯನಾ ಬಾಳೊಳಗೆ ಕಡುಮಿಗಿಲದಾವುದುಮ್ ಪಾಟಿಪದೆ ಪುಗದಯ್!

ಎಡಮುರಿ

ಆಳ್ಗಳೊಳ್ ಪಿರಿದಲೆವ ಪೇರಾಸೆಗಳ್ ಪಲರ್ಗೆ ತಂದಪುವು ಹಿತಮನ್;
ಒಡ್ಡಿದಪುವಿನ್ ಪಲರ್ಗೆ ಲಘುಮನದ ಪೇರಳಿಪ ಮೋಸದಾ ಬಲೆಯುನ್.
ಆಳ್ ಅಱಿಯಬಾರದದಸುರಿಜಿಂಕೆಯೊಳ್ ಸುಡುವ ಮುನ್ನಮೇ ಕಾಲನ್,
ನಲ್ಲಱಿವಿನಿನ್ ನುಡಿದು ಬೆಳಗಿದನದಾವನೋ ಈ ಸಂದನುಡಿಯನ್—
ಕೇಡೊಳ್ಳಿತಾಗಿ ತೋಱ್ಪುದು ದೈವಮೆಡೆದುಯ್ಯೆ ಮರುಳ್ಪಡಿಸಿ ಮನಮನ್;
ಇಂತಪ್ಪನತ್ಯಲ್ಪಕಾಲಮೇ ಬಟ್ದಪನ್, ಉಣ್ಬದೆಯೆ ಕೇಡನ್.

ಮೇಳಮ್

ಇಲ್ಲೀಗಳ್ ಬಂದನಿದೋ ಹಯ್‌ಮೋನ್,
ನಿನ್ನಯ ಮಕ್ಕಳೊಳೆಲ್ಲಮ್ ಕೊನೆಯೋನ್;
ಮಱುಗುತೆ ತನ್ನಂತಿಗೊನೆಯ ವಿಧಿಗೆ,
ತನ್ನಯ ಮೆಚ್ಚಿನ ಮದುವಳ ವಿಧಿಗೆ;
ನೆಱೆ ನೋಯುತ್ತವಳಾ ಕೇಡಿಂಗೆ,
ತನ್ನಿನ್ ಕವರ್ದಾ ಮದುವಾಸಿಂಗೆ.

[ಹಯ್‌ಮೋನ್]

ಕ್ರೆಯೋನ್

ಇನಿತಱೊಳೆ ಕಂಡಪೆಮ್, ಮುನಾಪಾರ್ದು ನುಡಿವರಿನ್ ಮೇಲಾಗಿ.
ಓ ಮಗುವೆ! ಮದವಳಾ ವಿಧಿಯನ್, ಕದಲ್ಲ ಬಾರದೆ ನಿಂದ
ನನ್ನ ತೀರ್ಪನ್ ಕೇಳ್ದು, ತಂದೆಯೊಳ್ ಕೆರಳ್ದುಱಿಬಿ ಬಂದೆಯೋ?
ಅಲ್ಲದೊಡೆ, ನಾಮೇನನೆಸಗಿಯುಮ್ ನಿನಗೆ ನಾಮೊಲ್ದರೆಯೊ?

ಹಯ್‌ಮೋನ್

ಅಯ್ಯ! ನಾನ್ ನಿನ್ನವನ್. ನಿನ್ನ ನಲ್ಲಱಿವಿಂದೆ ನಡಪಿದಪೆ
ನೀನೆನ್ನನ್. ಎಂತು ನೀನ್ ತಿರ್ದಿದಪೆ ಆ ಬಟೆಯೆ ನಡೆದಪೆನ್.
ಇಂತಾಗೆ, ನಿನ್ನ ನಲ್‌ವಟಿತೋಱ್ಕೆಯಿಂದಮೆನಗಾವೊಂದು
ಮದುವೆಯುಮ್ ಮಿಗಿಲಪ್ಪ ಪಡಪೆಂದು ನಾನ್ ಬಗೆಯೆನೆಂದುಮ್.

ಕ್ರೆಯೋನ್

ಇದುವೆ ತಾನ್, ಓ ಮಗನೆ! ನಿನ್ನೆರ್ದೆಯೊಳೆಂದಿಂಗಮ್ ನಾಂಟಿರಲ್
ವೇಳ್ಕುಮ್—
ಎಲ್ಲದಱೊಳುಮ್ ನಿನ್ನ ತಂದೆಯರ ಮನವನೇ ಪಿಡಿದೊಪ್ಪಿ ನಿಲ್ಲಲ್.
ಇದಱ್ಕೆತಾನ್ ಮಾನವರ್ ಪ್ರಾರ್ಥಿಪರ್, ಭಕ್ತಿಯಿನ್ ನಡೆವ ಮಕ್ಕಳ್ಗಳ್
ತಮ್ಮ ಮನೆಯೊಳ್ ಬಳೆದು ಬರ್ಕೆಂದು: ತಂದೆಯರ ಪಗೆಗೆ ಪಗೆ ತೀರ್ಚಲ್,
ಮೇಣ್ ತಂದೆಯರ ಕೆಳೆಗೆ ತಂದೆಯರ್ ಮಾಳ್ಪವೊಲೆ, ಗೌರವಂದೋಱಲ್.
ಆದೊಡಟಿಮಕ್ಕಳನ್ ಪೆತ್ತವನ್ ತಾನ್ ಪೆತ್ತುದೇನೆಂದು ಪೇಳ್ವೊಮ್?
ಪೆತ್ತನಲ್ಲಮೆ ತನಗೆ ನೋವನ್? ತನ್ನ ಪಗೆಗಳ್ಗೆ ಬಲ್ನಗೆಯನ್?
ನಿನ್ನಱಿವನ್, ಓ ಮಗನೆ! ಭೋಗಲಾಲಸೆಯಿಂದೆ, ಪೆಣ್ಣೊಲ್ಮೆಗಾಗಿ,
ನೀನ್ ಬಿಸುಟು ಕಳೆಯದಿರ್. ಪೊಲ್ಲವೆಣ್ ಮನೆಯೊಳೊರ್ಪಾಸಿನೊಳ್
ಕೂಡೆ, ೬೧೦
ನೀನೊಲ್ದ ತೋಳ್ತಕ್ಕೆಯದು ಪಟಿಸಿ ತಣ್ಣಗಾಗುವುದಲ್ತೆ ಬೇಗಮ್.
ಕೆಟ್ಟಕೆಳೆಯಿಂದೆಯುಮ್ ಪಿರಿದಿಱಿದು ನೋಯಿಪುದು ಪೆಱತಾವುದುಂಟಯ್?
ಇನ್, ಪಗೆಯನುಗುಟ್ಟು ಕಳೆವಂತೆ ಮಗಳವಳನಡಿಲೋಕಕ್ಕೆ ಕಟಿಪಯಾ—
ಗಂಡನನ್, ಕಯ್ವಿಡಿಗೆ ಅಲ್ಲವಳ್. ಈ ಪೊಟಲೊಳೆಲ್ಲಮ್, ಒರ್ವಳನೆ
ಪಿಡಿದೆನಾನವಳನ್, ಬಟ್ಟಬಯಲೊಳೆ ನನಗೆ ಇದಿರೆದ್ದ ಮಗಳನ್.
ಸುಳ್ಳಿಗನ್ ನಾನೀಗಳಾಗೆನೀ ಪೊಟಲರ್ಗ್ಗೆ. ನಾನ್ ಕೊಲ್ವೆನವಳನ್.
ರಕ್ತಬಾಂಧವ್ಯಾಧಿದೇವತೆಗೆ, ಸ್ಯೂಸ್‌ದೇವತೆಗೆ, ಇಡುಗೆ ಮೊಱೆಯನ್.
ಈಗಳಾನೊರ್ಕುಡಿಯು ಮನೆಯರನೆ ಬಳಸೆ ನಿಱಿಗೆಟ್ಟ ನಡೆವಟಿಯೊಳ್ಗೆ,
ಪೊಱಗೆಯುಮ್ ದಿಟಮದನೆ ಪಡೆದಪೆನ್. ತನ್ನ ಮನೆವಾಳ್ತೆಯೊಳ್ ತಕ್ಕಾಳ್
ಅಪ್ಪವನ್ ತಪ್ಪದೆಯೆ ರಾಜ್ಯದೊಳುಮಂತೆ ನೇರ್ನಡತೆಯಾಳಪ್ಪನ್.
ಅಂತಿರದೆ, ಕಟ್ಟಳೆಗಳನ್ ಮಿಱಿ ಅನಱಿ ಮೇಲ್ ಕಯ್ವಾತರ್ಪನಕ್ಕೆ,
ಆಳ್ವರ್ಗೆ ವಿಧಿಸಲೆಣಿಪನೆ ಅಕ್ಕೆ, ತಾನ್ ಪೊಗಟ್ ಪಡೆಯನವನನ್ನಿನ್.
ಪೊಟಲಾಳ್ವರನಿರಿಪುದಧಿಕಾರದೊಳ್, ಕೇಳಲ್ಕೆವೇಳ್ಕುಮಾಮವನನ್,

ಕಿಱಿದಱೊಳ್ ಪಿರಿದಱೊಳ್, ಧರ್ಮದೊಳಧರ್ಮದೊಳ್, ಕೇಳಲ್ಕೆ ವೇೞ್ಕುಮ್.
ಅಂತಪ್ಪವನ್, ನಿಜಮ್, ನಲ್ಲಾಳ್ಗೊನಪ್ಪಂತೆ ನಲ್ಪ ಜೆಯುಮಪ್ಪನ್ ;
ಅಂತೆಯೇ, ಕಣೆಗಱೆವ ಜಿಱುಪೋರೊಳಿರಿಸಿದೆಡೆ ಕದಲದೆಯೆ ನಿಂದು,
ಕೆರ್ಚೆರ್ದೆಯ ನಚ್ಚಿನಾಳಾಗಿ ನೆರಪಾದಪನ್; ಪೇೞ್ವೆನಾನೀಗಳ್ :
ಅನಾಯಕತೆಯಿಂದೆಯುಮ್ ಪೆರ್ಗೇಡು ಪೆಱತೊಂದುಮಿಲ್ಲ ; ಪಾೞಿಡುಗುಮ್
ತಾನಿದುವೆ ಪೊೞಲ್ಗಳನ್, ಮುಱಿಗುಮಿದು ಮನೆಗಳನ್, ಕೂಡು-
ಪಾಳೆಯಮನ್
ಒಡೆದು ಚೆದಱಿಕ್ಕುಮಿದು. ನೇರ್ನಿಱಿಗೆ ದೞದೊಳಗೆ ಕಟ್ಟಳೆಯೆ
ಪಲರನ್
ಕಾಪಿಟ್ಟು ಬರ್ದುಕಿಪುದು. ನಾವಿನಾಗಳದಱಿಂದೆ ನೆರವಾಗವೇೞ್ಕುಮ್
ಕಟ್ಟಳೆಗೆ. ಪೆಣ್ಣಾಳ್ಗೆ ಸೋಲ್ವುದಲ್ಲೆಂದಿಂಗಮ್. ಬೀೞ್ವುದೇ ವೇಗು
ಗಂಡಾಳ ಕಯ್ಯಿಂದೆ,—ನಾಮ್ ಬೀೞಲೇ ವೇೞ್ಕುಮೆಂದಿರ್ದೊಡಿಂದು.
ಪೆಣ್ಣಾಳ್ಗೆ ಕಡೆಯಾಗಿ ಸೋಲ್ತರಿವರ್, ಎಂದೆಂದು ಕರೆಯರೇ ನಮ್ಮನ್.

ಮೇಳಮ್

ಕವರದೊಡೆ ಮುಪ್ಪು ನಮ್ಮಱಿವನ್,
ಅರಯ್ದು ನುಡಿದೆ ನೀನ್ ನುಡಿಯನ್.

ಹಯ್ಮೋನ್

ಅಯ್ಯಾ ! ದೇವರ್ಕಳೊಸೆದಿತ್ತು ನಟ್ಟಪರ್ ಮಾನವರೊಳಱಿವನ್ ;
ಎಮ್ಮನಿತುಮೊಡಮೆಯೊಳ್ ಮಿಗಿಲ ಪೇರೊಡಮೆಯದು. ನಾನಲ್ಲ ಪೇೞ್ವೆನ್
ನೇರಾ ನುಡಿಯೆ ನೀನೆಂದು—ನನ್ನಳವುಮಲ್ತು, ಮೇಣ್ ಬಗೆದಪೆನುಮಿಲ್ಲ.
ಆದೊಡೆಯುಮಿರಬರ್ಪುದುೞಿದರ್ಗೆ ಮೊಳ್ಪಱಿವು. ಊರ್ ನಿನ್ನ ಕುಱಿತು
ಏನೇನನಾಡುಗುಮ್, ಮಾಡುಗುಮ್, ನಿನ್ನ ಪೆಸರ್ಗೇನ್ ಕಱೆಯನಿಡುಗುಮ್,
ಅದೆಲ್ಲಮನ್ ನಿನ್ನ ನಲವಾಗಿ ಕೇಳ್ದಱಿವ ಪಾಲ್ ನಿನ್ನ ಮಗನೆನತು.
ನಿನ್ನೊಂದು ಪುರ್ಬಜರ್ಪಿಂಗೆ ಜನಮಂಜಿ, ನೀನ್ ಕಿವಿಯಾರ ಕೇಳ್ದು

ತಣಿಯದಂತಪ್ಪ ನುಡಿಗಳನಾಡಲಣ್ಮರ್. ಆದೊಡಾನ್ ಕೇಳ್ವೆನ್,
ಮಱೆಯೊಳಾ ಪೆಣ್ಗೆ ಊರೇ ಮಱುಗಿ ಗೋಳ್‌ಗರೆವುದನ್.
ಜನಮದುಸಿರ್ಗುಮ್—
ಅಂತಪ್ಪ ಸಲ್‌ಗೆಯ್ಮೆಗಿಂತಪ್ಪ ಅಟಿಸಾವನೊಂದಲವಳೆಂದುಮ್
ತಕ್ಕಳಲ್ಲಳ್ : ತನ್ನ ತಾಯ್‌ಬಸಿಱಿನ್ನೊಗೆದವನ್ ಕೊಲೆಗಡಿದು ಬೀಱೆ,
ಪೂೞದೆಯೆ ಮೆಯ್ಯನ್, ಎರೆನಾಯ್ಗಳ್ಗೆ ಪರ್ದುಗಳ್ಗೆ ಬಿಟ್ಟಳಲ್ಲಳ್.
ಪೊನ್ನಪೆಸರಣೆಯಲ್ಕೆ ತಕ್ಕಳಲ್ಲಮೆ ಅವಳ್ ?—ಜನಮಿಂತು ಕೇಳ್ಗುಮ್.
ಮಱೆಯೊಳೇ ಪರಪಿಡುವ ಕರ್‌ನುಡಿಯದಿಂತಿರ್ಕುಮ್. ಎನಗೀಗಳ್,
ಅಯ್ಯಾ !
ಪೇೞ್ವೆನಾನ್, ನಿನ್ನ ಹಿತದಿಂದೆಯುಮ್ ಬೆಲೆಯೊಡಮೆ ಪೆಱತಾವುದಿಲ್ಲಮ್.
ಏೞ್ಗೆ ಕುಡಿ ಮಡ್ಗಲಿಡ್ಗುವ ತಂದೆಯರ ನಲ್ಲಪೆಸರಿಂದೆಯುಮ್ ಪೆಱತೇನ್
ಇರ್ದಪುದು ಪೆರ್ದೊಡೆವು, ಪೆರ್‌ಸಲಿವು, ಮಕ್ಕಳ್ಗೆ? ಮೇಣ್ ತಂದೆಯರ್ಗೆ
ತಮ್ಮಕ್ಕಳಾ ಪೆಸರಿನ್ ? ಒಂದೆ ಬಗೆಯನ್ ತಾಳದಿರ್ ಛಲಂ ಬಿಡಿದು ;
ನಿನ್ನೊಂದು ನುಡಿತಮೇ ನೇರ್‌ನುಡಿತಮದು, ಪೆಱಸದಲ್ಲಮೆನವೇಡ.
ಜ್ಞಾನಿತಾನೊರ್ವನೇ, ನುಡಿತದೊಳ್ ಮೇಣಱಿತದೊಳ್ ಸಾಟಿಯಿಲ್ಲ
ತನಗಾರುಮೆಂದೆಣಿಪೊನೆರ್ದೆ ಬಿರ್ಚಿ ತೆಱೆದಿಡಲ್ ಬಱಿಬಱಿದೆ ಕಾಣ್ಗುಮ್.
ಆಳವನ್ ಜ್ಞಾನಿಯಾಗಿರ್ದೊಡಮ್, ತಾನ್ ಕಲ್ವುದದು ನಾಣ್ಮೆಯಲ್ಲಮ್.
ಮಿತಿಮಿಕ್ಕು ನೆಡೆಯದೆಯೆ, ಎಡೆಯ್ಗುಱಿತು ತಟ್ಗಿ ಪೋಪ್ಪುದು ನಾಣ್ಮೆಯಲ್ಲಮ್.
ನೋೞ್ಪೆ ನೀನ್, ನೆರೆಪೊನಲ್ಲ ನೆಳೆತಕ್ಕೆ ತಲೆವಾಗಿ ಬಳ್ಕುವ ಮರಂಗಳ್
ಒಂದು ನೆಳೆಗೊಂಬುಮನ್ ತಾಮ್ ಕಟಿಲಗುಡದುಳಿಸಿಕೊಳ್ವುದನ್ ;
ನೋೞ್ಪೆಯ್,
ಬೇರೊಡನೆ ತಾಮುರುಳ್ಗೆ ಕೆಡೆವುದನ್ ಬಲ್‌ಸೆಡೆತು ನಿಲ್ವಾ ಮರಂಗಳ್.
ಪಟಮನಿನಿತಾದೊಡಮ್ ಸಡಿಲವಿಡದೇಗಳುಮ್ ಬಿಗಿಸೆಳೆದು ಪಾಯ್ವ
ನಾವಿಕನ್ ಸಾಗಿಪನ್ ಪಯಣಮನ್, ಕಪ್ಪಲನ್ ತಲೆಕೆಟಗುಮಾಡಿ.
ನಿನ್ನ ಮುಳಿಸನ್, ತಂದೆ! ಪೋಗೊಟ್ಟು ಮಾೞ್ಪುಡಯ್. ಪೇೞ್ವುಱುವ ಕಿಱಿಯನ್
ನನಗೆ ಸಲ್ವೊಡೆ, ಪೇೞ್ವೆನಾನಿದನ್ : ಮಾನವನ್ ಸರ್ವಜ್ಞನಾಗಿ

ಪುಟ್ಟುವುದು ಸರ್ವೋತ್ತಮಮ್ ; ತಾನ್ ಅದಿಲ್ಲಮೆನೆ—ತ್ರೊಲೆ ಅಂತು ತೊನೆಯದಿರ್ಪುದೇ ಪಿರಿದುಮೆಡೆ—ನಲ್‌ನುಡಿವರಿಂದೆ ತಾನ್ ಕಲ್ವುದುಮ್ ಮೇಲಯ್.

ಮೇಳಮ್

ದೊರೆಯೆ! ನೀನ್ ಕಲಿಯಲ್ಕೆ ತಕ್ಕುದಯ್, ಮಗನಿವನ್ ಪದನಱಿತು ನುಡಿಯೆ. ನೀನುಮ್, ಓ ಮಗನೆ! ನಿನ್ನಯ್ಯನಿನ್. ಇರ್ವರುಮ್ ನಲ್‌ನುಡಿದಿರೀಗಳ್.

ಕ್ರೆಯೋನ್

ಕಲ್ತುಕೊಳವೇಟ್ಕುಮೋ ವೃದ್ಧರೆಮ್ಮನ್ನರ್, ಎಳೆಯನಿವನನ್ನನಿನ್ ?

ಹಯ್‌ಮೋನ್

ಬೇಡ ಅಱನಲ್ಲದೊಡೆ. ಎಳೆಯನೆನೆ, ವಯಮಿರ್ಕೆ, ನೀನ್ ನೋಡು ಗುಣಮನ್.

ಕ್ರೆಯೋನ್

ಗುಣವೊ ಇದು ? ನಿಱಿಯನುಱಿದಿರೆಟ್ದರನ್ ಗೌರವಿಪುದು ?

ಹಯ್‌ಮೋನ್

ಕೇಳ್ದಪೆನುಮಿಲ್ಲಮಾನ್ ಅಱಿಗೆಯ್ಮೆಯರ್ಗೆ ಗೌರವಮನ್.

ಕ್ರೆಯೋನ್

ಇಂತಪ್ಪ ಕುತ್ತದಿಂದಂಟಿದವಳಲ್ಲಮೇ ಆ ಪೆಣ್ ?

ಹಯ್‌ಮೋನ್

ಥೇಬಾಯ ಜನಮೆಲ್ಲಮೊಕ್ಕೊರಲ್ ಪೇಟ್ಗುಮಲ್ಲೆಂದು.

ಕ್ರೆಯೋನ್

ಪೊಬಲೊ ! ನಾಮೆಂತಾಳವೇಟ್ಕುಮೆಂಬುದನೆಮಗೆ ಪೇಟ್ವುದು ?

ಹಯ್‌ಮೋನ್

ನೋಡಿದೆಯ ! ದಿಟಮೆಳೆಯನಂತೆ ನುಡಿದಿರ್ಪೆ ನೀನೀಗಳ್.

ಕ್ರೆಯೋನ್

ಎನ್ನಱಿವನುೞಿದು ಪೆಱರಿಂದಾಳವೇಱ್ಕುಮೋ ನಾಡನ್ ?

ಹಯ್‌ಮೋನ್

ಓರಾಳ್ಗೆ ಸೇರ್ದಾ ಪೊೞಲ್ ಪೊೞಲೆ ತಾನೆಂದುಮಲ್ತು.

ಕ್ರೆಯೋನ್

ಆಳ್ದನ್ಗೆ ತಾನ್ ಸೇರ್ದುದದು ಪೊೞಲ್,— ಇಂತೆನ್ಗುಮಲ್ಲಮೆ ?

ಹಯ್‌ಮೋನ್

ನೀನ್ ಇಂದು ಮಣಲ್‌ಗಾಡ ನಲ್ಲರಸನಾಗಲ್ಕೆ ತಕ್ಕನ್.

ಕ್ರೆಯೋನ್

ಮಗನಿವನ್ ಪೆಣ್ಣ ಕಡೆ ಪೋರಾಡಿದಪನೆಂದು ತೋಱ್ಕುಮ್.

ಹಯ್‌ಮೋನ್

ನಿಜಮ್, ನೀನ್ ಪೆಣ್ಣಾಗೆ; ಎನ್ನಿನಿತುಮಾರಯ್ಕೆ ನಿನಗೆ.

ಕ್ರೆಯೋನ್

ಛೀ ನೀಚ ! ತಂದೆಗೆಯೆ ಮಾಱಾಂತು ವಾದಿಸಲ್ ನಿಲ್ವಯ್ !

ಹಯ್‌ಮೋನ್

ಅಱನುೞಿದು ನೀನಿಂದು ತಪ್ಪುವೞಿ ಪೋಪುದನ್ ಕಾಣ್ಬೆನ್.

ಕ್ರೆಯೋನ್

ಅದು ತಪ್ಪುವೞಿಯೊ, ನನ್ನಧಿಕಾರಮನ್ ಗೌರವಿಪುದು ?

ಹಯ್‌ಮೋನ್

ಗೌರವಿಸೆ ನೀನದಸ್, ದೇವಮರ್ಯಾದೆಯನ್ ತುಳಿದು.

ಕ್ರೆಯೋನ್

ಅಯ್ಯೋ ದುರಾತ್ಮಾ ! ಪೆಣ್‌ಸೆಱಗಿಸೊಳ್ ಪೋಪ ಕೀೞ !

ಹಯ್‌ಮೋನ್

ನಾಣ್‌ಗೆಟ್ಟ ಕೀೞ್‌ಗೆಯ್ಮೆಗೆಂದುಮಾನ್ ಸೋಲ್ವುದನ್ ನೋಡಯ್.

ಕ್ರೆಯೋನ್

ಆದೊಡಮ್, ನಿನ್ನ ನಿತು ನುಡಿತಮನವಳ್ಗಾಗಿ ನುಡಿದಯ್.

ಹಯ್‌ಮೋನ್

ನಿನಗಾಗಿ, ನನಗಾಗಿ ; ಕೆೞನೆಲದ ದೇವರ್ಗಮಾಗಿ.

ಕ್ರೆಯೋನ್

ಮದುವೆನಿಲಲಾಱೆ ನೀನೆಂದುಮಾ ಪೆಣ್ಣುಸಿರೊಡನೆ.

ಹಯ್‌ಮೋನ್

ಸಾವಳವಳ್, ಇನ್ ದಿಟಮ್ ; ಸತ್ತು ಪೆಱನೊರ್ವನನ್ ಸಾಯಿಪಳ್.

ಕ್ರೆಯೋನ್

ಓ ನಿನ್ನ ಧಾರ್ಷ್ಟ್ಯಮೇ ! ಮೇಲ್‌ವಿೞ್ದು ಬೆದಱಿಸಲುಮೆಟ್ಟಿದಯ್ ?

ಹಯ್‌ಮೋನ್

ಅದೆಂತಪ್ಪ ಬೆದಱಿಕೆಯೊ ; ಬಱಿದೆ ತಱಿಸಂದರೊಳ್ ವಾದಮ್ ?

ಕ್ರೆಯೋನ್

ಇದಱ್ಕೆ ನೀನ್ ಕೊರಗಿದಪೆ, ಮತಿಗೆಟ್ಟು ಕಲಿಸಲ್ಕೆ ಬಂದು.

ಹಯ್‌ಮೋನ್

ನೀನೆನ್ನ ತಂದೆಯಿರದೊಡೆ ನಿನ್ನನಿಂದು ತಿಳಿಗೇಡಿ ಎನುತಿರ್ದೆನ್.

ಕ್ರೆಯೋನ್

ಓವೊ ಪೆಣ್ಣಡಿತೊತ್ತೆ ! ಗಱಪದಿರ್ ಸನ್ನೊಡನೆ ಈ ಮರುಳ್‌ನುಡಿಯನ್.

ಹಯ್‌ಮೋನ್

ಬಯಸುವಯ್ ನುಡಿಯಲ್ಕೆ ; ಮೇಣ್, ನುಡಿದು ಮಱುನುಡಿಯ-
ಸೊಲ್ಲಯ್ !

ಕ್ರೆಯೋನ್

ದಿಟಮೊ ಇದು ? ಆ ದೇವಗಿರಿ ಒಲುಂಪಸಿನಾಣೆ ನಂಬುನೀನ್.
ಎನ್ನನೀ ಪರಿ ಬಯ್ದು, ಪಱಿಯಿಟ್ಟು ಕೆಣಕುತ್ತೆ, ನಲಿಯೆ ನೀನ್.
ಎಡೆತನ್ನಿಮಾ ಪೀಡೆಯನ್ ; ಇಲ್ಲೆ, ಈಗಳೆಯೆ, ಇವನ ಕಣ್-
ಮುಂದೆಯೇ, ತನ್ನ ಮದವಣಿಗನಾ ಕೆಲದೊಳೇ ತಾನ್ ಸಾಯ್ಗೆ.

ಹಯ್‌ಮೋನ್

ಎನ್ನಿದಿರೊಳಾಗದಯ್ ; ನೀನ್ ಸೆನೆಯಲುಂ ಬೇಡ ಇಂತಿದನ್ ;
ಆಗದಿದು. ಸನ್ನ ಕೆಲದೊಳ್ ಸಾಯಳಿಂದಿಂಗಮಾ ಪೆಣ್.
ಮತ್ತೆಂದುಮೆನ್ನ ಮೊಗಮನ್ ನೋಡವೀ ನಿನ್ನ ಕಣ್ಗಳ್.
ತಾಳ್ದ ಈ ಕೆಳೆಯರೊಳ್ ಕೆರಳ್ ನಿನ್ನ ಕೆರಳನ್. [ಪೋಪನ್.

ಮೇಳಮ್

ನಿನ್ನ ಮಗನ್, ಓ ದೊರೆಯೆ ! ರೋಷಪರವಶನಾಗಿ ತಟ್ಟನೆಯೆ ಪೋದನ್.
ಅಂತಪ್ಪ ಎಳಮನಮ್ ನೋವಿಱಿದು ನರಲೆ, ಅದು ಮಸೆದುಗ್ರ-
ಮಕ್ಕುಮ್.

ಕ್ರೆಯೋನ್

ಅಕ್ಕಕ್ಕೆ ! ಮಾಡುಗೆ ; ಪೋ, ನೆಸಗೆ ಆಳನವು ಮಿಱಿದೆಲ್ಲಮುಮನ್.
ಅವರ ದುರ್‌ವಿಧಿಯಿಂದಮಾ ಎರಡ್‌ಪೆಣ್ಗಳನ್ ಬಿಡಿಸನವನೆಂದುಮ್.

ಮೇಳಮ್

ಅಂತಾದೊಡಾ ಇರ್ವರುಮನ್, ಇಂದು ಕೊಲ್ವೆಯಾ ?

ಕ್ರೆಯೋನ್

ಮೆಯ್‌ಮುಟ್ಟದಳನಲ್ಲ; ನಲ್‌ನುಡಿದೆ ನೀನ್, ದಿಟಮ್.

ಮೇಳಮ್

ಮತ್ತವಳನಾವ ವಿಧಿಯಿಂದೆ ಕೊಲಬಗೆದಪಯ್ ?

ಕ್ರೆಯೋನ್

ಆಳ್‌ಪಜ್ಜೆ ಸುಟಿಯದೆಡೆ ಕೊಂಡುಯ್ದು, ಕಲ್‌ಗವಿಯೊಳವಳನ್
ಬಯ್ತಿಡುವೆನುಸಿರೊಡನೆ ಬೇಟ್ಪನಿತೆ ಉಣಿಸಿಟ್ಟು—
ಪೊಲ್ಗೆಲ್ಲ ಕೊಲೆಯುಂಟು ಪರ್ವದವೊಲ್. ಅಲ್ಲಿ ತಾನ್
ಕಿಟ್‌ನೆಲನ ದೇವನನ್, ತನ್ನ ಆ ಒರ್ವನೆಯೆ ದೇವನನ್
ಬೇಡುತ್ತೆ, ಸಾಯದೆಯೆ ಇರಲಪ್ಪಳ್ ; ಅಲ್ಲದೊಡೆ,
ಆಗಳಾದೊಡಮಱಿವಳ್ : ಅಡಿನೆಲದವರ ಸೇವೆ
ತಾನ್ ಬಱಿದೆ ನೋವೆಂದು, ಕಯ್‌ಮಿಾಱಿದಂದು. [ಪೋಪನ್.

ಮೇಳಮ್

ಓವೋ ಪೋರೊಳ್ ಮೊಟ್ಗದ ಏರೋಸ್ !
ಆಳೊಡಮೆಯ ಪಾಟಿಡುವಾ ಏರೋಸ್ !
ಎಳವೆಣ್ಣಾ ನುಣ್‌ಗದಪಿನ ಪಾಸೊಳ್
ಜಾಗರಮಾಡುವೆ ಪವಡಿಸಿ ಇರುಳೊಳ್.
ಅಲೆಪಯ್ ಕಡಲನ್, ಕಾನ್‌ಮಲೆವೀಡನ್.
ಆವನೆ ಅಕ್ಕೆ ಬಿಡುಗಡೆ ಕಾಣನ್ ;
ಅಮರನ್, ಮೇಣ್ ದಿನಬಾಳ್ವೆಯ ಮರ್ತ್ಯನ್,
ನಿನ್ನಯ ಕಯ್ಯಿನ್ ಬಿಡುಗಡೆ ಕಾಣನ್.

ಉನ್ಮತ್ತನವನ್
ನೀನಮರ್ದನವನ್.

ಎಡಮುರಿ

ಅಱಿವಟಿಯರ ಸಲ್ಮನಮನ್ ಸೆಳೆವಯ್!
ತಪ್ಪಿಂಗೆಳೆವಯ್, ಕೇಡಿಂಗೆಳೆವಯ್!
ಒರ್ನೆತ್ತರ ಕಲಹಮಿದನ್, ಪೋರನ್,
ಕಲಕುತೆ ನೀನ್ ಪೊತ್ತಿಸಿದಯ್ ಕಿರ್ಚನ್.
ಗೆಲ್ಲಮ್! ಒಸಗೆಯ ಮದವಳ ಸೋಲಮ್,
ನಸೆಯುಣ್ಣಿಪ ಕಣ್ಪೊಳಪಾ ಸೋಲಮ್.
ಮದವಳ ಮೋಹಮ್ ಆಳ್ವುದು ಬಗೆಯೊಳ್
ಗುರುತರಧರ್ಮದ ಸಮುಗದ್ದುಗೆಯೊಳ್.
ನಲಿವಳದಮ್ಯಳ್
ಅಫ್ರೊದಿತೆಯವಳ್.

ಮೇಳಮ್

ಮೀಱಿದೆನಾನುಮ್ ಕಟ್ಟಳೆ ಮಿತಿಯನ್,
ತಡೆಯಲ್ಕಾಱೆನ್ ಕಣ್ಣೀರ್ ಪೊನಲನ್,
ನೋಡುತೆ ಮಗಳಿವಳಂತಿಗೊನೇಯನ್,—
ಮಸಣದ ಮದುಮನೆ ಪುಗುವಾ ಮಗಳನ್.

ಮಱುಗೀತೆ

ಬಲಮುರಿ ೧

ಅಂತಿಗೊನೆ

ನೋಡಿಮೋ ತಾಯ್ನಾಡ ಪೊಲಲರೇ ನನ್ನನ್:
ನನ್ನ ಕೊನೆದಾರಿಯನ್ ಪಿಡಿದು ನಾನ್ ಪೋಪೆನ್,

ನೇಸಱಾ ಬೆಳಕನಾನ್ ಕೊನೆನೋಟ ನೋೞ್ಪೆನ್.
ಎಲ್ಲರನ್ ನಿದ್ರೆಯಿನ್ ಕೆಡಪುವಾ ದೇವನ್,
ಅಡಿನೆಲನ ದೇವನ್, ಎನ್ನನ್ ಕೊಂಡು ಸಾಗಿಪನ್,
ಉಸಿರೊಡನೆ ಅಖೆರೋನ ಕರೆಗೆ ತಾನ್ ಸಾಗಿಪನ್.
ಮದುವೆಯೊಸಗೆಯ ಮೊದಲಪಾಡಿಲ್ಲಮೆನಗೆ,
ಮದುವೆಯೊಸಗೆಯ ಮುಡಿಯಪಾಡಿಲ್ಲಮೆನಗೆ.
ಅಡಿನೆಲನ ಅಖೆರೋನನ್ನಾನ್ ಮದುವೆನಿಂದಪೆನ್.

ಅನುಗೀತೆ ೧

ಮೇಳಮ್

ಪೆಸರಡೆದು, ಪೊಗಟಡದು, ಪೋಪೆ ನೀನಿಂದು,
ಅಡಿನೆಲನ ಕಟಿದರಾ ಅಡಿಯಾಟಕಿಂದು,
ಬಡಿದೆಱಗಿ ನರಲಿಸದೆ ತೆಯ್ದಟಿಪ ಕುತ್ತಮ್,
ಕೊಲೆಬಾಳ ದಂಡಮನ್ ತೆಱದೆ ನೀನೆತ್ತಮ್.
ನೀನೆ ನಿನಗೊಡೆಯಳಯ್, ನೀನೆ ಇದ ಬಗೆದಯ್.
ಜೀವಂತಳಾಗಿಯೇ ಅಡಿನೆಲಕೆ ಪೋಪಯ್,
ಮರ್ತ್ಯರೊಳ್ ನೀನೊರ್ವಳೇ ಇಂತು ಪೋಪಯ್.

ಎಡಮುರಿ ೧

ಅಂತಿಗೊನೆ

ಕೇಳ್ದೆನಾನ್ ಫ್ರುಗಿಯನಾಡಿನ ಕೆಳೆಯು ಪಾಡನ್,
ತಾಂತಲೊಸಿನಾ ಮಗಳ ಬಲ್ಮಱುಗುಪಾಡನ್,
ಸಿಪುಲಮಲೆಯಾ ಕೋಡಮೇಲ್ ಪಟ್ಟಪಾಡನ್ :
ಬಿಗಿಬಳ್ಳಿವೋಲ್ ಬಂಡೆ ತಾನದುಮಿ ಬೆಳೆದುದನ್,
ಕರಗಿ ಬಸಿವಾ ಮೆಯ್ಯಮೇಲ್ ಮಂಜ ಸುರಿತಮನ್.
ಒರ್ಸಮನೆ ಬಿಡದೆ ಕಱೆವಾ ಮಳೆಯ ಕಱೆತಮನ್ ;

ಅಟ್ಟಿಕಣ್ ಪುರ್ಬಿಂದಮೊಟ್ಟುವಾ ಪೊಸಲನ್,
ನೆತ್ತಿಯಿನ್ ಬಸಿಯುತೆರ್ದೆ ಕಟ್ಟುವಾ ಪೊಸಲನ್.
ಮಲಗಿಪುದು ಬಿಡದೀಗಳದೆ ವಿಧಿಯೆ ನನ್ನನ್.

ಅನುಗೀತೆ ೨

ಮೇಳಮ್

ಮತ್ತವಳ್ ದೇವಳಯ್, ಮೇಣ್ ದೇವಜಾತಳ್ ;
ಆದೊಡಾಮ್ ಮರ್ತ್ಯರಯ್, ಮೇಣ್ ಮರ್ತ್ಯಜಾತರ್.
ಕಟಿದಳ್ಗೆ ತಾನಿಂದು ಮಿಗೆಪೆರ್ಮೆ ಪೆಸರಯ್—
ಪಡೆದಳೆನೆ ತಾನವಳ್ ದೇವಸಮ ಗತಿಯುನ್,
ಬಾಡೊಳುಮ್, ಸಾವೊಳುಮ್ ದೇವಸಮ ಗತಿಯನ್.

ಬಲಮುರಿ ೨

ಅಂತಿಗೊನೆ

ಅಯ್ಯೊ ಅಣಕಿಪರೀಗಳೆನ್ನನ್ !
ಬೇಡ್ವೆನಾನ್ ಸೆಱಗೊಡ್ಡಿ ನಿಮ್ಮನ್.
ತವರ ದೇವರ್ಕಳಾ ಪೆಸರೊಳ್
ಬೇಡ್ವೆನಾನ್ ಸೆಱಗೊಡ್ಡಿ ನಿಮ್ಮನ್ :
ಸಾಗಿಪೋಪನ್ನೆಗಮ್ ತಡೆಯಿರೆ?
ಬೆಳಕಿನೊಳೆ ಇರ್ಪಂದೆ ನುಡಿವಿರೆ?
ಓ ನಾಡೆ! ಓ ನಾಡ ಧನಿಕರೆ!
ನನ್ನಿದಿರೆ ಕೆಣಕುತ್ತೆ ನುಡಿವಿರೆ?
ಕರೆವೆನಾನ್ ದಿರ್ಕೆಯಾ ಪೊಸಲೆ!
ಪಲತೇರ ಥೇಬಾಯ ಬಯಲೆ!
ನೀಮಾದೊಡಮ್ ಬನ್ನಿ ಮೆಸಗೆ,
ನೀಮ್ ಸಾಕ್ಷಿಯಿರಬನ್ನಿ ಮೆಸಗೆ.

ನೋಡಿಮಿನ್ ನಾನೆಂತು ಪೋಪೆನ್,
ಅಟ್ಟಕೆಳೆ ಇಲ್ಲದೆಯೆ ಪೋಪೆನ್.
ಎಂತಪ್ಪ ಕಟ್ಟಳೆಗಳಿಂದಮಾ ಸೆಱೆಮನೆಗೆ ಪೋಪೆನ್!
ಎಂತಪ್ಪ ಪೊಸವಗೆಯ ಕೆಡೆಯೆಡೆಯ ಕಲ್ಲಱೆಗೆ ಪೋಪೆನ್!
ಓ ಪಾಪೀ!
ನೆಲೆಯಿಲ್ಲಮೆನಗೆ ಮೇಲ್ ನೆಲನೊಳ್,
ನೆಲೆಯಿಲ್ಲಮೆನಗೆ ಕಿೞ್ ನೆಲನೊಳ್.
ಪರದೇಶಿ ನಾನಿಂದು ಬಟ್ಟರೊಳ್,
ಪರದೇಶಿ ನಾನಿಂದು ಸತ್ತರೊಳ್.

ಬಲಮುರಿ ೩

ಮೇಳಮ್

ಆಳ್ಕೆರ್ಚ ಸಾಹಸದ ತುತ್ತತುದಿ ಮುಟ್ಟಿ,
ಮೇಲ್ವಿಡ್ಡ ಧರ್ಮಗದ್ದುಗೆಯ ತುಟಿದೊತ್ತಿ,
ನೀನೀಗಳೋ ಮಗಳೆ! ತೊಟಲುತ್ತೆ ತೆಱುವಯ್,
ತಂದೆಯಾ ಪಾಪಕ್ಕೆ ದಂಡಮನ್ ತೆಱುವಯ್.

ಎಡಮುರಿ ೩

ಅಂತಿಗೊನೆ

ಮಿಡಿದೆ ನೀನೆನ್ನ ನೋವೆಡೆಯನ್,
ಕೂರ್ನೋವಿನಾ ಮರ್ಮದೆಡೆಯನ್.
ಮೇಲೆಮೇಲ್ ಮಱುಕೊಳಿಪ ಮಱುಕಮ್
ಎಮ್ಮಯ್ಯನಟಿಗತ್ತಿಗೆ ಮಱುಕಮ್;
ಮಱುಕಮಿನ್ನೆಮ್ಮೆಲ್ಲರಟಿಗತ್ತಿಗೆ,
ನಲ್ ಪೆಸರ ಲಾಬ್ದಕಿಸರಟಿಗತಿಗೆ,
ಓ ಮಾತೃತಲ್ಪಘೋರಂಗಳೆ!

ಓ ಮಾತೃತಲ್ಪಪಾಪಂಗಳೆ!
ಓ ಎನ್ನ ದುರ್‌ವಿಧಿಯ ತಾಯೆ!
ಓ ಎನ್ನ ದುರ್‌ವಿಧಿಯ ತಂದೆ!
ಓ ಪಾಪಿತಾಯ್ ಪಟ್ಟ ಪಡ್ಕೆ!
ಮಗನೊಡನೆ ತಾಯ್ ಪಟ್ಟ ಪಡ್ಕೆ!
ಪಾಪಿ ನಾನ್ ಅವರಿಂದಮೊಗೆದೆನ್!
ತಾಯ್‌ಮಗನ ಪಾಸಿಂದಮೊಗೆದೆನ್!
ಮದುವೆ ಎನಗಿಲ್ಲದೆಯೆ, ಪಾಪಿಷ್ಠೆ ನಾನಿಂದು ಪೋಪೆನ್;
ಎನ್ನವರ ಕೆಟುಮನೆಗೆ ಪರದೇಶಿವೋಲಿಂದು ಪೋಪೆನ್.
ಓ ಪಾಪೀ!
ಹತಭಾಗ್ಯ ಓ ಎನ್ನ ಅಣ್ಣಾ!
ಅಟಿಪಾಲ ಮದುವೆಯಾ ಅಣ್ಣಾ!
ಮದುವೆಯಿನ್ ಸಾವಿಂಗೆ ಬಂದಯ್,
ಸಾಯುತ್ತುಮೆನ್ನುಮನ್ ಕೊಂದಯ್.

ಎಡಮುರಿ ೩

ಮೇಳಮ್

ಸದ್ಭಕ್ತಿಸೇವೆಯುಮ್ ಸೇವ್ಯಮೇ ನಿಜಮಯ್,
ಆದೊಡಧಿಕಾರಮನ್ ತಳೆದವನ್, ಪಾರಯ್!
ಅಧಿಕಾರ ಭಂಗಮನ್ ಸಹಿಸಲಾಟಿಸವನ್.
ಸ್ವಚ್ಛಂದವೃತ್ತಿಯೇ ಕೆಡಪಿತ್ತು ನಿನ್ನನ್.

ಕೊನೆವಾಡು

ಅಂತಿಗೊನೆ

ಅಟುವಿಲ್ಲ, ಕೆಳೆಯಿಲ್ಲ, ಮದುವೆ ಪಾಡಿಲ್ಲ, ಕೊಂಡುಯ್ವರ್,
ಹತಭಾಗ್ಯಳೆನಗಾಗಿ ಕಾದಿರ್ಪ ಕೊನೆಪಯಣಕುಯ್ವರ್.

ಇಲ್ಲಮೆನಸಗಾ ಪುಣ್ಯಮಿನ್, ಪಾಪಿ! ನೋಡೆನ್ನಾನ್ ಬೆಳಕನ್,
ದಿನಮಣಿಯ ದಿವ್ಯಸ್ವರೂಪಮನ್, ಬಾನಸುರಿಯ ಕಣ್ಣನ್.
ಕೆಳೆಯಾರುಮೆನಸಗಾಗಿ ಕಣ್ಣೀರನಿಡರೆ!
ಕೆಳೆಯಾರುಮೆನಸಗಾಗಿ ಗೋಳಾಟಮಿಡರೆ!

[ಕ್ರೆಯೋನ್]

ಕ್ರೆಯೋನ್

ಅಱಿಯಿರೇ ನೀಮಿದನ್! ಪಾಡುಮನ್, ಗೋಳುಮನ್
ಪಾಡಿ ಕರೆವುದಱಿಂದೆ ಲಾಭಮಿರ್ದೊಡೆ, ಸಾವ ಮುನ್
ಆವನುಮ್ ತಾನ್ ನಿಲಿಸನೆಂಬುದನ್: ಕೊಂಡುಯ್ಯಿ-
ಮಿವಳನ್ ತಳ್ವದೆಯೆ. ಮುನ್ನಮಾನ್ ಪೇೞ್ದವೊಲೆ,
ಬಯ್ತಿಡಿಮ್ ಕಲ್ಲಱೆಯೊಳ್, ಒರ್ವಳನೆ ತನಿಯಾಗಿ.
ಮೇಣಾಯ್ಗೆ ಸಾಯಲ್ಕೆ, ಮೇಣಾಯ್ಗೆ ಬರ್ದುಕಲ್ಕೆ,
ಕಲ್ಲಱೆಯ ಮನೆಯೊಳ್. ನಾಮೇನೊ ನಿರ್ದೋಷರ್
ಈ ಕನ್ನೆಯನ್ ಕುಱಿತು. ಎಂತುಮಿನ್, ಇದು ನಿಜಮ್—
ನೆಲೆಯಿಲ್ಲಮೆಂದುಮೀ ಪೆಣ್ಗೆ ಮೇಲ್ ಬೆಳಕಿನೊಳ್.

ಅಂತಿಗೊನೆ

ಕಲ್ಲಱೆಯೆ! ಮದುಮನೆಯೆ! ನೆಲಗವಿಯ ಶಾಶ್ವತದ ಸೆಱೆಮನೆಯೆ!
ಬರ್ಪೆನಾನ್, ಇದೊ, ನಿನ್ನ ಬೀಡಿಂಗೆ, ಕಾಣಲ್ಕೆ ನನ್ನರನ್,
ಪೆರ್ಸೆಫೊನೆ ಕಟಿದರಾ ಕೂಟಕ್ಕೆ ಕೊಂಡರನ್ ಪಲರನ್.
ಹತಭಾಗ್ಯೆ, ಕೊನೆಯಳೆಮ್ಮೆಲ್ಲರೊಳ್, ಪಾಪಿಯೆಮ್ಮೆಲ್ಲರೊಳ್,
ನೆಱೆಗೊಂಡು ತಾನ್ ಮುಗಿವ ಮುನ್ನಮೇ ಬಾೞ್ ಕೊಯ್ದು ಬರ್ಪೆನ್.
ಆದೊಡೆಯುಮಾಗಳಾನ್ ಈಯೊಂದು ನಚ್ಚಿನೊಳೆ ಬಂದಪೆನ್—
ಎನ್ನ ಬರವೀಗಳೆನ್ನಯ್ಯಂಗೆ ಪ್ರಿಯಮೆಂದು; ನಿನಗಮೋ
ಎನ್ನ ತಾಯ್! ಪ್ರಿಯಮೆಂದು; ಪ್ರಿಯಮೆಂದು ನಿನಗಮೋ ಅಣ್ಣಾ!

ನೀಮಂದು ಕಟಿದಂದು ನನ್ನ ಕಯ್ಯಾರವೇ ನಿಮ್ಮ ನಾನ್
ತೊಳೆದೆನೇ, ಮತ್ತೊಪ್ಪಮಿಟ್ಟೆನೇ! ನಿಮ್ಮ ಕಲ್ಲಱೆಯ ಬಟಿ
ನಾನೆ ತಣಿಯೆಱೆದೆನೆ! ಈಗಳ್, ಓ ಎನ್ನ ಪೊಲುನೆಯ್‌ಕೇಸ್!
ನಾನ್ ನಿನ್ನ ಮೆಯ್‌ಕಾದು ಮಣ್‌ಮಾಡಿ ಪಡೆದೆನೇ ಪಡಪಿದನ್!*
ಬಾನವರ ಧರ್ಮಮನ್ ನಾನಾವುದನ್ ಮಿಕ್ಕುನಡೆದೆನ್?
ಪಾಪಿ! ನಾನ್ ಇನ್ನೇಕೆ ದೇವರನ್ ಮೊಱೆಪಾರವೇಟ್ಕುಮ್?
ಆವ ಕೆಳೆಯನ್ ಕರೆವೆನಾನಿಂದು? ಸಲ್‌ಸೇವೆಯನ್ ಗೆಯ್ದು, ಪಡೆದೆನ್
ಪಾತಕಿಯ ಪೆಸರನ್. ದೇವತೆಗಳಾ ಕಣ್ಗೆ ದೊಪ್ಪುವೊಡೆ, ಸವೆದು,
ಫಲಮುಂಡು, ಕಂಡಱುವೆನಾನ್ ಗೆಯ್ದ ತಪ್ಪನ್. ತಪ್ಪಿವರದಾಗೆ,
ಬಯಸೆನಿವರ್ಗನ್ಯಾಯದಿಂದಮೆಸಗಿತ್ತ ಕೇಡಿಂದೆ ಪೆರ್‌ಗೇಡನ್.

ಮೇಳಮ್

ಮುಮ್ಮನದ ಬಿಱುಗಾಳಿ ಪೆಣ್ಣನ್
ಮೊದಲುಱುಬುಕಾಯ್ಪಿಂದಮಲೆಗುಮ್.

ಕ್ರೆಯೋನ್

ಇದಱ್ಕೆಂದು ಪೆಣ್ಣ ಕಾಪಿನವರ್,
ತಡೆದವರ್, ತಾಮ್ ಕೊರಗಿದಪ್ಪರ್.

ಅಂತಿಗೊನೆ

ಅಕಟ! ಈ ಸುಡಿಯೆ!
ನನಗೆ ಸಾವಿಡಿಯೆ!

ಕ್ರೆಯೋನ್

ನಿನಗೆ ನಾನ್ ಸಚ್ಚಿತ್ತು ಸಂತೈಸೆನಿಂದು,
ತಱಿಸಂದ ತೀರ್ಪಿಂತು ಮುಡಿಗೊಳ್ಗದೆಂದು.

* ಪರಿಶಿಷ್ಟ ನೋಡಿ.

ಅಂತಿಗೊನೆ
ಥೇಬಾಯ ಭೂಮಿಯೇ ! ಓ ತವರ ಪೊೞಲೆ !
ಕುಲಮೊಸೆದ ಕುಡಿಪಱೆಯರೋ ದೇವತೆಗಳೆ !
ಇನ್ನಿದೋ ಕೊಂಡುಯ್ವರೆನ್ನನ್,
ತಳ್ವದೆಯೆ ಕೊಂಡುಯ್ವರೆನ್ನನ್.
ಥೇಬಾಯ ಒಡೆಯರೇ ! ನೀಮ್ ನೋಡಿಮೆನ್ನನ್,
ಅರಕುಡಿಯ ಕೊನೆಯಳನ್, ಅರಮಗಳನೆನ್ನನ್.
ಆವೊಂದು ಪಾಡನ್, ಆರ ಕಯ್ಯಿಂದಮ್,
ಪಟ್ಟಪೆನ್ ನೋಡಿಮ್ ;
ಬಾನವರ ಧರ್ಮಮನ್ ಕೊಂಡೆಸಗಿ ನಾನಿಂತು,
ಪಟ್ಟಪೆನ್ ನೋಡಿಮ್. [ಕೊಂಡುಯ್ವರ್.

ಮೇಳಮ್

ಬಲಮುರಿ ೧

ಮುನ್ನಿದನೇ ತಾನ್ ತಾಳ್ದಳ್ ದನಯೇಪೆಣ್ ಎಳಮೆಯ್ಯಳ್.
ಬಾನ್‌ವೆಳಗನ್ ಕಂಚಱೆಗೆ ಮಾಱಾಡ್ದಿ ತಾನ್ ಸಮೆದಳ್ ;
ಕಲ್ಲಱೆಯನ್ ಪೋಲ್ವಱೆಯೊಳ್ ಬಯ್ತ್ತಡಗಿ ಸೆಱೆಯಿರ್ದಳ್.
ಓ ಮಗಳೇ ! ಪೆಣ್ಣವಳುಮ್ ಪೆರ್‌ಕುಡಿಯಾ ಪುಟ್ಟಿನಳಯ್,
ಬಸಿಱೊಳ್ ಸ್ಯೂಸ್‌ದೇವನ ಪೊನ್‌ಮಱೆಕಿಡಿಯನ್ ತಳೆದನಳಯ್.
ವಿಧಿಬಲಮದು ತಾನ್ ಕ್ರೂರಮ್ ; ತಡೆಯಲ್ಕಾಗದು ವಿಧಿಯನ್ ;
ಪಣಮೋ, ಕಳನ್ನೋ, ಮದಿಲೋ ! ತಡೆಯಲ್ಕಾಗದು ವಿಧಿಯನ್,
ಕಡಲನ್ ಕೊರ್ಚುವ ಪಡಗೋ ! ತಡೆಯಲ್ಕಾಗದು ವಿಧಿಯನ್.

ಎಡಮುರಿ ೧

ಸುಡಿದಣಕಮನುನ್ಮತ್ತನ್, ನೊಗದಡಿಯೊಳ್ ಕೆರ್ಚಟಿದನ್ ;
ದ್ರ್ಯಯಸಮಗನ್, ಮುನ್‌ಸಿಡುಕನ್, ಏದೋನರ್‌ಕಳನಾಳ್ದನ್,
ದಿಯೊನೂಸೊಸ್ ದೇವತೆಯಿನ್ ಕಲ್‌ಗವಿಯೊಳ್ ಸೆಱೆವಿಟ್ಟನ್.

ಅಂತಡಗಿರೆ, ಕೆರಳುಱುಬಿಸ ಪೊಂಕವಮ್ ಸೋರ್ದ ಟಿದಱುತನ್,
ಅಣಕದ ಕೂರ್‌ನಾಲಗೆಯಿನ್ ಮುನ್‌ಕೆಣಕಿದ ದೇವತೆಯನ್.
ದಿಯೊನೂಸೊಸ್ ಮೆಯ್‌ಗೊಂಡಾ ಪೆಣ್ಗಳನಾಱುಸಪೋದನ್,
ತಾಂಡವವಾಡುವ ಪೆಣ್ಗಳ ಕೊಳ್ಳಿಯನಾಱುಸಪೋದನ್.
ಕೊಱಲನ್ ಸವಿವಾ ಮೌಸಾದೇವಿಯರನ್ ಕೆರಳಿಸಿದನ್.

ಬಲಮುರಿ ೨

ಕರ್‌ಬಂಡೆದೀವಿಗಳ ಸಾರೆಯೊಳ್,
ಇರ್‌ಕಡಲ ಕರ್‌ಪರಪ ಸಾರೆಯೊಳ್,
ಬೆಳಗುವುದು ಬೊಸ್‌ಪೊರೊಸ್ ಕರೆನೆಲಮ್
ಥ್ರೇಕಿನಾ ಸಾಲ್ಮ್ರದೇಸೊಸ್ ನೆಲಮ್.
ನೆರೆನೆಲನ್, ಅರೇಸ್‌ದೇವನಲ್ಲಿ ತಾನ್ ಕಂಡನ್,
ಫೀನೆಯುಸ್ ಮಕ್ಕಳಿರ್ವರ ಕಣ್ಣ ಕುರುಡನ್ :
ಉಗ್ರಳವನಾ ಪೆಂಡಿರೆಸಗಿದಾ ಗಾಯಮನ್,
ಮಕ್ಕಳಾ ಕಣ್ಗಳನ್ ಕುರುಡಿಸಿದ ಗಾಯಮನ್ ;
ಮುಯ್‌ಕಾಟ್ವ ಕಣ್ಗಳನ್ ಕೊಲೆಗಯ್ಯಿನಿಱುದುದನ್,
ಸೆಯ್ಗೆಕೋಲ್ ಸುರಿಗೆಯಿನ್ ಕಣ್‌ಮಣಿಯನಿಱುದುದನ್.

ಎಡಮುರಿ ೨

ನಮೆನಮೆದು ಕರಗುತ್ತೆ ಕೊರಗಿದರ್,
ತಮಗಡಸಿದಟಿಗತಿಗೆ ಕೊರಗಿದರ್ ;
ಗೋಳಿಟ್ಟರಿರ್ವರಾ ಮಕ್ಕಳ್,
ಅಟಿಮದುವೆ ತಾಯ್ಗೊಗೆದ ಮಕ್ಕಳ್.
ಪೆಣ್ಣವಳ್ ಎರೆಕ್ಥೆಯೂಸ್ ಪಟೆಯ ಕುಡಿಗೊಗೆದಳ್ ;
ದೂರದಾ ಗುಹೆಗಳೊಳ್ ಬಲಗೂಡಿ ಬಳೆದಳ್,
ತಂದೆಯಾ ಬಿಱುಗಾಳಿಯೊಡನಾಡಿ ಬಳೆದಳ್,
ಸೆಗೆಕುದುರೆವೋಲ್ ಮಲೆಯ ನೆತ್ತಿಮೇಲ್ ಬಳೆದಳ್.

ಓ ಮಗಳೆ! ಬೊರೆಯುಸಿನ—ದೇವತೆಯ—ಮಗಳುಮನ್
ಪಡೆನರೆಯ ವಿಧಿಬಡಿದು ಸರಲಿಸಿತ್ತವಳುಮನ್.

[ತೆಯ್‌ರೆಸಿಯಸ್, ಪಯ್ಯನೊರ್ವನನ್ ಮುನ್‌ಕೊಂಡು]

ತೆಯ್‌ರೆಸಿಯಸ್

ಥೇಬಾಯ ಒಡೆಯರೇ! ಬರ್ಪೆವಾಮ್ ತೋಣೆನಡೆಯರ್,
ಇರ್ವರುಮ್ ನೋಡುತ್ತುಮೊರ್ವನಾ ಕಣ್ಗಳಿನ್.
ಕುರುಡರ್ಗೆ ಬೞಿಕಾಣ್ಕೆ ಮುನ್ನಡೆವನಿಂದಲ್ತೆ?

ಕ್ರೆಯೋನ್

ಓ ಕೆೞವ, ತೆಯ್‌ರೆಸಿಯ! ಸುದ್ದಿಯೇನೀಗಳ್?

ತೆಯ್‌ರೆಸಿಯಸ್

ಅಱಿಪುವೆನ್, ಕಿವಿಗುಡಯ್ ಮುನ್‌ಪಾರ್ವನೆನಗೆ.

ಕ್ರೆಯೋನ್

ಮುನ್ನೆಂದುಮಾನ್ ನಿನ್ನ ನುಡಿ ತೆಗೆದೆನಿಲ್ಲಮ್.

ತೆಯ್‌ರೆಸಿಯಸ್

ಅಂತೆ ನೇರ್‌ನಡಪಿದಯ್ ನೀನ್ ಪೊೞಲಪಡಗನ್.

ಕ್ರೆಯೋನ್

ಉಂಡಿರ್ಪನಾನ್, ಸಾಕ್ಷಿನುಡಿದಪೆನ್, ನೀನೊಸೆದ ಲಾಭಮನ್.

ತೆಯ್‌ರೆಸಿಯಸ್

ಬಗೆಯ! ನೀನ್ ನಿಂದಿರ್ಪೆ ಮತ್ತೊರ್ಮೆ ವಿಧಿಯ ಕೂರಲಗಮೇಲ್.

ಕ್ರೆಯೋನ್

ಏನದು! ನವಿರೆಬ್ಬಿ ನಡುಗಿದಪೆನೇ ನಿನ್ನ ಬಾಯ್ಗೆ!

ತೆಯ್‌ರೆಸಿಯಸ್

ಅಱಿತಪಯ್ ನೀನ್ ಕೇಳೆ ನನ್ನ ಕಲೆ ಕಂಡ ಮುನ್‌ಕುಱಿಪನ್.
ಶಕುನಪಕ್ಷಿಗಳೆಲ್ಲ ಬಂದೆಱಗಿ ನೆರೆವೆಡೆಯು, ಕಣಿಕಾಣ್ಬ,
ನನ್ನ ಪಡೆಪೀಠದೊಳ್ ಕುಳ್ತಿರಲ್ ಕೇಳ್ದೆನಾನ್ ಪಕ್ಕಿಗಳ್
ಕೆರಳ್ದುಱಿಬಿ ಪುರ್ಚಿಂದೆ ಚೀಱಿಡುವ ಬರ್ಬರದ ಮಱೆನುಡಿಯನ್.
ಅಱಿದೆನಾನ್ ಓರೊಂದನುಗುರ್ಗಳಿನ್ ಕೊಲೆಪರಚಿ ಕೀಱ್ವುದನ್.
ಎಱಂಕೆಗಳ ಱಪಱಪದ ಕುಱುಪು ತಾನ್ ಸ್ಪಷ್ಟಮಾಗಿರ್ದತ್ತು.
ದಿಗಿಲಿಂದಮೊಡನೆೞ್ದು ನಲ್‌ಜೆಂಕೆಯುರಿವ ಬೇಳ್‌ಕಟ್ಟೆಯೊಳ್
ಪರಿಕಿಸಲ್ ಬೇಳ್ವೆಯಿನ್, ಕೊಟ್ಟ ಬಲಿಯಿಂದ್ದೆ ಬೆಳಗಿದನಿಲ್ಲ
ತಾನ್ ಅಗ್ನಿದೇವನ್. ತೊಡೆಯುಡಗಿನಿಂದೆ ನೆಣಮೊಸರುತ್ತೆ,
ಕೆಱಸುರಿದು, ಕೆಂಡದಿನ್ ಪೊಗೆಯಿಟ್ಟು ಚಟಚಟಿಸಿ ಮಸುಳ್ದತ್ತು;
ಪಿತ್ತರಸಮೊಡಲಿಂದಮೊರ್‌ಸಮನೆ ಬಾನಡರ್ದು ಚಿಮ್ಮಿತ್ತು;
ರಸಮೊಸರ್ದು ಬಸಿವ ತೊಡೆ ನೆಣಪೊದಕೆಯನ್ ಕಱಲ್ಚಿ ಕೆಡೆದತ್ತು.
ಅಱಿದೆನದನೀ ಪಯ್ಯನಿನ್, ಬೇಳ್ವೆ ಬಲಿಕುಱಿಪ ಕೊಡದುದನ್.
ಬಱಿತೋಱ್ಪನಿವನೆನಗೆ, ಪೆಱರ್ಗೆ ನಾನ್. ಈಗಳೆಮ್ಮ ಪೊಱಲ್
ನಿನ್ನೊಂದು ತಱಿಸಲವಿನೀ ಕುತ್ತಮೆಱಗಿ ತಾನ್ ನರಳ್ದತ್ತು.
ಪೊಱಲ ಬೇಳ್‌ಕಟ್ಟೆಗಳ್, ಮನೆಯ ಬೇಳ್‌ಕಟ್ಟೆಗಳ್, ಎಲ್ಲಮುಮ್
ಪೊಲೆಗಲಸಿಯಿರ್ದತ್ತು, ಕೊಲೆವಿಟ್ಟ ದುರ್‌ವಿಧಿಯ ಒಯ್ದಿಪೌಸ್
ಮಗನ ಪೆಣದಿನ್ ಪರ್ದುಗಳ್ ನಾಯ್ಗಳುಮ್ ಪಿಕ್ಕಿದೆರೆಯಿನ್.
ದೇವತೆಗಳದಱಿಂದಮಿನ್ ಕೊಳ್ಳರೆಮ್ಮಿತ್ತ ಬೇಳ್ವೆಯನ್;
ಕೊಳ್ಳರಿನ್ ಮಂತ್ರಮನ್, ತೊಡೆಯುಡಗ ಬಲಿಯ ಬೇಳುರಿಯನ್.
ಸ್ಪಷ್ಟಮೊರ್‌ಪಕ್ಕಿಯುಮ್ ಕೀಱುಟ್ಟು ನಲ್‌ಕುಱಿಪನೀಯದದು,
ಕೊಲೆವಿಟ್ಟು ಮಾನವನ ನೆಣನಿಡಿದ ನೆತ್ತರನ್ ತಾನ್‌ಸವಿದು.
ಮತ್ತಿದನ್ ಬಗೆಯು ನೀನ್, ಓ ಮಗನೆ! ಆಳ್ಗಳೆಲ್ಲರ್ ತಪ್ಪಿ
ಪೋದಪರ್. ಆದೊಡಮ್, ತಪ್ಪಿದನ್ ತಪ್ಪೊಳೆ ಛಲಂಬಿಡಿದು
ನಟ್ಟಿರದೆ, ಮರ್ದಸಗಿ ತಾನ್ ಬಿಟ್ಟ ಕೇಡಿಂದೆ ನೇರ್‌ಪಡೆ,

ಆಗನಂತಪ್ಪವನ್ ದುರ್ಬುದ್ಧಿಯುಮ್, ದುರ್ವಿಪಾಕನುಮ್.
ಛಲಮೆ ತಾನೆಗ್ಗತನಮೆನಿಪುದಯ್. ಸತ್ತ್ರನ್ಗೆ ತಡೆಯದಿರ್ ;
ಇಱಿಯದಿರ್ ಬಿಟ್ಟನನ್. ಆದೆಂತಪ್ಪ ಶೌರ್ಯಮೋ ಸತ್ತ್ರನನ್
ಮಗುಳ್ದಿಱಿದು ಸಾಯಿಪುದು. ನಿಸ್ನೊಳ್ಳಿತನ್ ಕುಱಿತೆ ಸುಡಿದಪೆನ್ ;
ನಲ್ನುಡಿವನಿನ್ ಕಲ್ವುದಿನಿದು, ತಾನ್ ಸುಡಿಯಲ್ಕೆ ಲಾಭಮನ್.

ಕ್ರೆಯೋನ್

ಓ ಕೆಟವ! ನೀಮೆಲ್ಲರೆನ್ನ ಮೇಲೆಚ್ಚಪಿರ್ ಕಣೆಗಳನ್,
ಬಿಲ್ಗಾಱರಿಸುವಂತೆ ಗುಱಿಯನ್. ಮೇಣೀಗಳೆನ್ನ ಮೇಲ್
ಸಾಧಿಪಿರ್ ಕಣಿಯುಮನ್. ಕಣಿಪೇೞ್ವ ಜಾತಿಯದು, ಪಡೆಯಿಂದೆ,
ಮಾಱೂಟದೊಡ್ಡಮೆಯನ್ ಮಾಡಿ ಮಾಱಾಡಿರ್ಕುಮೆನ್ನನ್.
ಪೋಗಿಮಿನ್, ಲಾಭಕ್ಕೆ ಮಾಱಾಡಿಮ್—ಅಂತು ಮನಮಿರ್ದೊಡೆ—
ಸಾರ್ದಿಸಿನ ಬೆಳ್ಳಿಯನ್, ಇಂಡಿಯದ ಪೊನ್ನುಮನ್. ಎಂತುಮಿನ್,
ಕುೞಿಯೊಳಗೆ ನೀಮ್ ಪೂೞಿರವನನ್. ಇಲ್ಲ, ಸ್ಯೂಸ್‌ದೇವನಾ
ಪರ್ದುಗಳ್ ಪೆಣದೆರೆಯನುಯ್ದೊಡಮ್ ತಮ್ಮ ದೊರೆಗದ್ದುಗೆಗೆ ;
ಆ ಪೊಲೆಯ ಭಯಕಮಾನ್ ಪೂೞಗೊಡೆನ್. ಅಱಿವೆನಾನ್ ದೇವರ್ಗೆ
ಪೊಲೆಗಲಸಲಾಱನಾಳಾವನುಮ್. ಓ ಮುದಿಯ ತೆಯ್‌ರೆಸಿಯ!
ಬಿದ್ದಪರ್ ಬಲ್ಲ ನೆಱೆಜಾಣರುಮ್ ನಾಣ್‌ಗೆಟ್ಟ ಬೀೞ್ಕೆಯನ್,
ಲಾಭದಳಿಪಿನ್ ನಾಣ್ಮೆಸುಡಿಗಳನ್ ನಲ್ಲದೆಸೆ ಸುಡಿದು.

ತೆಯ್‌ರೆಸಿಯಸ್

ಅಯ್ಯೋ!
ಅಱಿವನೇ ಆಳವನ್? ಅರಯ್ವನೇ ಅವನ್ . . . ?

ಕ್ರೆಯೋನ್

ಏನದು? ಅದೆಂತಪ್ಪ ನಾಣ್‌ನುಡಿಯನೊರೆದಪಯ್?

ತೆಯ್‌ರೆಸಿಯಸ್

ಎನಿತೊಂದು ಮಿಗಿಲೊಡಮೆ ನಲ್ಲಱಿವು ತಾನೆಂದು.

ಕ್ರೆಯೋನ್

ಅಱಿವಿಲ್ಮೆ ಎನಿತೊಂದು ಬಲ್‌ಕೇಡೊ ಅನಿತೊಂದು.

ತೆಯ್‌ರೆಸಿಯಸ್

ನೆಱೆದಿರ್ಪುಮೆಂತುಮಾ ಕುತ್ತಮೇ ನಿನ್ನೊಳಗೆ.

ಕ್ರೆಯೋನ್

ಕಣಿಯನ್ಗೆ ಮಱುನುಡಿಯಲೊಲ್ಲೆನಾನ್ ಪೊಲ್ಲದನ್.

ತೆಯ್‌ರೆಸಿಯಸ್

ಅಂತೆ ಮಱುನುಡಿವೆ ನೀನೆನ್ನ ಕಣಿ ಸುಳ್ಳೆಂದು.

ಕ್ರೆಯೋನ್

ಕಣಿಯರಾ ಜಾತಿಯದು ಪೊನ್ನೊಲ್ದ ಜಾತಿ ತಾನ್.

ತೆಯ್‌ರೆಸಿಯಸ್

ತುರಸರಾ ಜಾತಿಯದು ಒಲ್ದುದಟಿ ಲಾಭಮನ್.

ಕ್ರೆಯೋನ್

ಅಱಿವೆಯೋ ನಿನ್ನೆಱೆಯನನ್ ನುಡಿವೆ ನೀನೆಂದು ?

ತೆಯ್‌ರೆಸಿಯಸ್

ಅಱಿವೆನಾನ್ ; ನನ್ನಿಂದೆ ನೀನ್ ಕಾದ್ದೆ ಪೊಬಲಿದನ್.

ಕ್ರೆಯೋನ್

ನೀನ್ ನಲ್ಲ ಕಣಿಯನೇ, ಮತ್ತೊಲ್ವೆ ಪೊಲ್ಲದನ್.

ತೆಯ್‌ರೆಸಿಯಸ್

ಕೆರಳಿಪೆಯ್ ಸನ್ನೆರ್ದೆಯ ಗೂಢಮನ್ ನುಡಿವಂತು.

ಕ್ರೆಯೋನ್

ನುಡಿಯ ನೀನ್ ! ಆದೊಡೆ, ಲಾಭಕ್ಕೆ ನುಡಿಯದಿರ್.

ತೆಯ್‌ರೆಸಿಯಸ್

ಅಂತೆ ನಾನ್ ನುಡಿಯೆನೆಂದೆಣ್ಣುವೆನ್, ನಿನ್ನದನ್.

ಕ್ರೆಯೋನ್

ಅಱಿಯ ನೀನ್, ಮಾಱಾಡೆ ನನ್ನಱಿವನೆಂಬುದನ್.

ತೆಯ್‌ರೆಸಿಯಸ್

ಅಂತಾದೊಡಱಿಯ, ನಲ್ಲಱಿಯ ನೀನ್ : ಒರ್‌ಸಮನೆ
ಮುಂಬರಿವ ನೇಸಱಿನ ತೇರ್‌ಗಾಲಿ ಪಲವುರುಳ-
ನಿನ್‌ಮುಂದೆ ನೀನ್‌ನೋಡೆ, ನಿನ್ನೊಡಲ ಕರುಳಿಂದ-
ಮೊಗೆತಂದನೊರ್ವನನ್ ಬಲಿಕೊಡದೆ ಪೆಣಕೆ ಪೆಣಮ್.
ಅಡಿನೆಲಕೆ ಬಿಸುಟಿರ್ಪೆ ಮತ್ತೆ ಮೇಲ್‌ನೆಲರನ್ ;
ಅನ್ಯಾಯದಿನ್ ಬಯ್ತೆ ಕಲ್ಲಱೆಯೊಳುಸಿರಿಯನ್.
ಅಡಿನೆಲನ ದೇವರ್ಗೆ ಪುದುವಪ್ಪ ಪೆಣಮನ್
ಮೇಲಿಟ್ಟೆ—ಸಂಸ್ಕಾರಮಿಲ್ಲದಪವಿತ್ರಮನ್.
ಪುದುವಿಲ್ಲಮಿದಱೊಳಿನ್ ನಿನಗೆ, ಮೇಣ್ ಬಾನರ್ಗೆ.
ಇನ್ನಿದಱೊಳ್, ಅಪಕಾರಮನ್ ಮಾಳ್ಪೆ ನೀನವರ್ಗೆ.
ಅಡಿನೆಲನ ಮೇಣ್ ಬಾನವರ ಕ್ರೂರಕನ್ನಿಕೆಯರ್,
ಏಗಳುಮ್ ಬಿಡದೆ ಬೆನ್ನಟ್ಟಿ ಪಿನ್‌ಕಾಡುವಾ
ಮಾರಕರ್, ಮತ್ಸರದ ಕನ್ನಿಕೆಯರ್, ಇನ್ ನಿನಗೆ
ಪೊಂಚುತಿರ್ಪರ್, ಮತ್ತೆ ನೀನ್ ಗೆಯ್ದ ಕೇಡಿನೊಳೆ

ನಿನ್ನ ಮನಸ್ ಪಿಡಿದಿಕ್ಕಲೆಂದು. ನೀನಾರಯ್ದು
ನೋಡಿದನ್ ಮತ್ತೆ ನಾನ್ ಪೊನ್‌ಕೊಂಡು ನುಡಿವೊಡೆ.
ನಿಡುಪೊೞ್ತು ತೇಯುದದು ತೋಱದೆಯೆ ಆಣ್ಗಳಾ,
ಪೆಣ್ಗಳಾ ಗೋಳಾಟಮಿನ್ ನಿನ್ನ ಮನೆಯೊಳಗೆ.
ಕೆರಳಿಪುದು ಕಡುವೈರಮನಿತುಮಾ ಪೊೞಲ್ಗಳನ್—
ನಾಯ್ಗಳೋ, ನರಿಗಳೋ, ಮೇಣೆಲ್ಲ ಗಱುವೆತ್ತ
ಪಱವೆಯೋ ಮೆಯ್‌ಪಿಕ್ಕಿ ಸಂಸ್ಕಾರಮೆಸಗಿ ತಾಮ್
ಕೊಂಡುಯ್ದು ಪೊಲೆನಾತದಿಂದೆ ನಱು ಕಱುಗೊಂಡ
ಬೇಳ್‌ಕಟ್ಟೆಯಾ ಪೊೞಲ್ಗಳನ್—ಮಲೆದು ಕೆರಳಿಪುದು
ಕಡುವೈರಮಿನ್ನಿರದೆ. ಇಂತಪ್ಪ ಕಣೆಗಳನ್—
ನೀನೆನ್ನ ಕೆರಳಿಸಲ್—ನಾಂಟಿದೆನ್ ನಿನ್ನೆರ್ದೆಗೆ,
ಬಿಲ್‌ಗಾಱನಂತೆವೋಲ್ ಗುಱಿಕೆಡದ ಕಣೆಗಳನ್,
ಕೂರಿೞಿತದಿಂದೆ ಮಱೆಗಾಣದಾ ಕಣೆಗಳನ್.
ಓ ಪಯ್ಯ! ಕಯ್‌ವಿಡಿದು ನಡಸೆನ್ನನ್, ಇನ್ ಮನೆಗೆ.
ಇಲ್ಲಿವನ್ ತನ್ನ ಕೆರಳುಱುಬನ್, ಇನ್, ತೋಱುಗೆ
ಎಳೆಯರೊಳ್. ಮೇಣಱುಗೆ ನಾಲಗೆಯನದುಮಿಡಲ್,
ತನ್ನೆರ್ದೆಯೊಳೀಗಳಿನ್ ಮೇಲಱಿವನಾರಯಲ್. [ಪೋಪನ್.

ಮೇಳಮ್

ಓ ದೊರೆಯೆ! ಪೋದನಾಳ್, ಮುನ್‌ನುಡಿದು ಕೇಡನ್.
ತಲೆನವಿರ ಕರ್ಪು ಬಿಳ್ಪಿಟ್ಟಂದಿನಱಿವೆನ್
ನುಡಿಯದುದನವನೆಂದುಮೆಂಬೊಲ್ಗೆ ಸುಳ್ಳನ್.

ಕ್ರೆಯೋನ್

ಅಱಿತಿರ್ಪೆನಾನುಮ್. ಕಲಂಕಿತ್ತು ಬಗೆಬೆದಱಿ.
ಘೋರಮಾಗಳ್ ಮಣಿಯೆ; ಮಣಿಯದೇ ಮಾಱ್‌ನಿಂದು
ಕೇಡಿಂದಮೆನ್ ಕೆರ್ಚನಿಡಿವುದುಮ್ ಘೋರಮ್.

ಮೇಳಮ್

ಕೊಳ್ವುದಯ್ ನಲ್ಲಱಿವನ್, ಓ ಮೆನೊಯ್‌ಕೆಯೂಸ್ ಮಗನೇ!

ಕ್ರೆಯೋನ್

ಏನ್ ಮಾಡವೇೞ್ಕುಮೀಗಳ್, ಪೇೞ, ಕೇಳ್ವೆನಾನ್.

ಮೇಳಮ್

ಪೋ ಬಿಡಿಸು, ಗವಿಯೊಳಗೆ ಬಯ್ತಿಟ್ಟ ಪೆಣ್ಣನ್.
ತಳ್ವದೆಯೆ, ಕೆಡೆದರ್ಗೆ ನಿಱಿಸು ಕಲ್ಲಱೆಯನ್.

ಕ್ರೆಯೋನ್

ಇದುವೊ ನೀನ್ ಪೇೞ್ವುದು? ನಾನ್ ಬಾಗವೇೞ್ಕುಮೊ?

ಮೇಳಮ್

ಅಪ್ಪುದೋ ದೊರೆಯೆ! ಮೇಣ್ ತಳ್ವದೆಯೆ. ಬಾನವರ
ಕೇಡು ದುರ್ಮತಿಗಳನ್ ಬೇಗನೆಯೆ ಬಡಿಗುಮ್.

ಕ್ರೆಯೋನ್

ಓ ಕಷ್ಟಮ್! ಕದಲಿಪೆನ್ ಮನದ ತಱಿಸಲವನ್;
ಮಾೞ್ಪೆನಾನ್. ವಿಧಿಯೊಡನೆ ಪೋರಾಟಮಿಲ್ಲ.

ಮೇಳಮ್

ಈ ಪೊೞ್ತು ಪೋ ಎಸಗು. ಒಪ್ಪಿಸದಿರುೞಿದರ್ಗೆ.

ಕ್ರೆಯೋನ್

ಇದೊ ಪೋಪೆನಿರ್ದಂತೆ. ಪೋಗಿಮ್, ಪೋಗಿಮ್, ಓ ತೊೞ್ತಿರ್!
ಇರ್ದವರ್, ಇಲ್ಲದವರ್, ಎಲ್ಲರುಮ್; ಕಯ್ಯೊಳಗೆ ಕೊಡಲಿಯನ್
ತುಡುಕಿ ನೀಮ್ ತಳ್ವದೆಯೆ ಸಾರಿಮಾ ನೇರಿದಿರ ತಿಟ್ಟನ್.

ಎಯ್ತರ್ಪೆನಾನುಮ್ ; ನನ್ನ ಬಗೆ ಈ ಪರಿಯೆ ತಿರುಗಿತ್ತು.
ನಾನೆ ಅವಳನ್ ಸೆಱೆಯೊಳಿಟ್ಟೆನ್ ; ಮೇಣ್ ನಾನೆ ಬಿಡಿಪೆನ್.
ಕಳವಳಂಬೆತ್ತೆನ್ : ತಾನ್ ಮೇಗು ಮೊದಲಿಂದೆ ನಿಱಿಸಿದಾ
ಕಟ್ಟಳೆಗಳನ್ ಸಲಿಸಿ ನೆಗೞುತ್ತೆ ಬಾೞ್ಮುಡಿಪಿ ಪೋಗೆ. [ಪೋಪನ್.

ಮೇಳವ್

ಬಲಮುರಿ ೧

ಪಲಪೆಸರೊಡೆಯಾ ! ಬಾಖೊಸ್ ಬಾರಯ್ !
ಕಾದ್ಮೊಸ್‌ಮಗಳಾ ಸಲವೇ ಬಾರಯ್ !
ಮೊೞಗುವ ಸ್ಯೂಸಿನ ಮಗನೇ ಬಾರಯ್ !
ನಲ್ಪೆಸರಿಟಲಿಯ ಕಾವನೆ ಬಾರಯ್ !
ಎಲ್ಲೆಡೆಯಿಂದಮ್ ಭಕ್ತರ್ ಬರ್ಪಾ
ಎಲ್ಯೂಸಿಸಿನಾ ಕಣಿವೆಯ ಬಸಿಱೊಳ್,
ದೇಮೇತೇರಳ ಕಣಿವೆಯ ಬಸಿಱೊಳ್,
ಆಳ್ವನೆ ಬಾರಯ್, ದೇವಾ ಬಾರಯ್ !
ಬಾಖೊಸ್ ಭಕ್ತರ ತಾಯ್ಪೊೞಲಪ್ಪಾ,
ಇಸ್ಮೇನೊಸ್ ನೀರ್ ಪೊನಲದು ಪರಿವಾ,
ಬಿೞುಗಣ್ ದ್ರಾಕೋನ್ ಪಲ್ಲನ್ ತಳಿದಾ
ಥೇಬಾಯ್ ನೆಲನಾ ಒಡೆಯನೆ ಬಾರಯ್ !

ಎಡಮುರಿ ೧

ಕಾಣ್ಬಯ್ ! ಇರ್ಮುಡಿಕೋಡಿನ ಬೀಡಿನ್,
ಪೊಗೆಯುರಿ ಪಂಜದು ಮಿಂಚುವ ಬೀಡಿನ್,
ಕೋರುಕ ಭಕ್ತರ್ ನೆರೆವಾ ಬೀಡಿನ್,
ಕಾಸ್ತಲಿಯಾ ಪೊೞೆ ಪರಿವಾ ಬೀಡಿನ್.
ಬರ್ಪಯ್ ನೂಸಾ ಮಲೆಗಳ ಸಾಲಿನ್,
ಐವಿಬಳ್ಳಿಯ ತಟ್ಟಿದ ಸಾಲಿನ್ ;

ಲತೆಗಳ ಪಸುರದು ನಲಿವಾ ಕರೆಯಿನ್,
ದ್ರಾಕ್ಷಾಲತೆಗಳ್ ನಲಿವಾ ಕರೆಯಿನ್.
ನಡೆವಯ್ ನೋಡುತೆ ಥೇಬಾಯ್ ಬಟಿಯೊಳ್
ನಲಿಯಲ್ ಪೇರುಲಿ ಭಕ್ತರ ಬಾಯೊಳ್,
ಅಕ್ಷಯನಾಮಮ್ ಭಕ್ತರ ಬಾಯೊಳ್,
ದಿವ್ಯಾಘೋಷಮ್ ಭಕ್ತರ ಬಾಯೊಳ್.

ಬಲಮುರಿ ೨

ಮನ್ನಣೆಮಾಟ್ಪಯ್ ಥೇಬಾಯ್ ಪೊಟಲನ್,
ಅನಿತುಮ್ ಪೊಟಲೊಳ್ ಥೇಬಾಯ್ ಪೊಟಲನ್;
ಸಿಡಿಲೆಱಗಿದವಳ್ ನಿನ್ನಯ ತಾಯುಮ್
ಅನಿತುಮ್ ಪೊಟಲೊಳ್ ಥೇಬಾಯ್ ಪೊಟಲನ್.
ಮಾರಕ ರೋಗಮ್ ಬಡಿದಿರೆ ಪೊಟಲನ್,
ಪರ್ನಾಸೊಸಿನಾ ಮಲೆಯಾ ಮೇಲಿನ್,
ಸುಯ್ವಾ ಕಡಲಾ ಕಾಲ್ವಾಯ್ ಮೇಲಿನ್,
ತಣ್ಪನ್ ತರ್ಪಾ ಪೇರಡಿ ಬಾರಯ್!
ನೋವನ್ ನೀಗುವ ಪೇರಡಿ ಬಾರಯ್!
ದೇವನೆ ಬಾರಯ್, ಬಾಖೊಸ್ ಬಾರಯ್!

ಎಡಮುರಿ ೨

ಬಾರಾ, ಓ ಬಾನ್ ಮಿನ್ಗಳ ಮೇಟೀ!
ಬಾರಾ, ಉರಿಯುಸಿರ್ ಮೀನ್ಗಳ ಮೇಟೀ!
ಬಾರಾ, ನಲ್ಲಿರುಳುಲಿಗಳ್ಗೊಡೆಯಾ!
ಬಾರಾ, ನಲ್ಲಿರುಳೊಸಗೆಗೆ ಒಡೆಯಾ!
ನಿನ್ನಾ ಪರಿವಾರದ ದೇವಿಯರನ್,
ನೀನ್ ಮೆಯ್ ಪೊಕ್ಕಾಲುವ ದೇವಿಯರನ್,
ಇರುಳೆಲ್ಲಮ್ ಕುಣಿವಾ ದೇವಿಯರನ್,

A mere existence is not living.

ಗೆಡೆಗೊಂಡಾಪುತೆ ದೇವನೆ ಬಾರಯ್ !
ಸ್ಯೂಸಿಂಗೊಗೆದಾ ಮಗನೇ ಬಾರಯ್ !
ಭಾಗ್ಯವಿಧಾಯಕ ಬಾಖೊಸ್ ಬಾರಯ್ !

[ದೂತನ್]

ದೂತನ್

ಕಾದ್ಮೊಸಿನ, ಮತ್ತಂಫಿಯೋನಿನಾ ಮನೆಯು ನೆರೆಯುವರೇ !
ಆಳ ಬಾೞ್ ಆವುದುಮ್ ನೆಲೆಯೆಂದು ಪೊಗೞನಾನೆಂದುಮ್,
ಪೞಿಯೆನಾನ್ ಎಂದುಮ್. ಅದೃಷ್ಟಮಿಂದೆತ್ತುವುದದೃಷ್ಟಮಿಂ
ದುರುಳಿಪುದು ಸೌಭಾಗ್ಯಶಾಲಿಯುನ್, ದೌರ್ಭಾಗ್ಯಶಾಲಿಯನ್.
ಆವನುಮ್ ಮುನ್‌ಪೇೞನಾಳ್ಗಳ್ಗೆ ಮುನಾ ನಿಱುಪಿದುವನಱಿಪಿ.
ಆ ಕ್ರೆಯೋನ್ ಧನ್ಯನೆಂದೆಣಿಸಿರ್ದೆನಿಂದು, ಸಂಬೊೞಲನ್,
ಕಾದ್ಮೊಸಿನ ನೆಲನನ್, ಮಾಱ್‌ಮಲೆದ ಪಗೆಯರಿನ್ ಕಾದು.
ನಾಡಿನಾ ಸರ್ವಾಧಿಕಾರಮನ್ ತಳೆದು ತಾನಾಳ್ದನ್ ;
ಮನೆಯೊಳಗೆ ಸಲ್‌ಕುಡಿಯ ಮಕ್ಕಳಾ ಬಳವಿಯನ್ ಕಂಡನ್.
ಪಾಱುಟ್ಟಸವನೀಗಳೆಲ್ಲಮನ್. ಆಳ್ ನಲಿವು ತೊಱೆದಿರಲ್,
ನಾನೆಣಿಸೆಸಂತಪ್ಪನನ್ ಬಟ್ಟನೆಂದು ; ಎಣಿಪೆನಾನ್
ಉಸಿರಿಡುವ ಪೆಣಮೆಂದು. ಮನೆತುಂಬ ಸಿರಿಯಡಕು, ಮೆಱೆ ಅರಸು-
ಮೆಱೆತಮನ್ ; ನಲಿವಿಲ್ಲಮೆನೆ ಬಗೆಯೆನಾಪಿಯಾ ನೆೞಲ್ಗಮ್.

ಮೇಳಮ್

ಮತ್ತದೇನ್ ಪೊಸತೞಲ್ ದೊರೆಮನೆಗೆ ತಂದಯ್ ?

ದೂತನ್

ಆೞಿದರವರ್, ಉೞಿದರಾ ತಲೆಗೆ ಕೊಲೆಕಟ್ಟಿ.

ಮೇಳಮ್

ಕೊಂದೊನಾರ್, ಕೆಡೆದೊನಾರ್ ? ಪೇೞ ನೀನೆಮಗೆ.

ದೂತನ್

ಅಱಿದನೋ ಹಯ್‌ಮೋನ್ ; ಪೆಱಕಯ್ಯಿನಲ್ಲ.

ಮೇಳಮ್

ತಂದೆಯರ ಕಯ್ಯಿನ್ ? ಮೇಣ್ ತನ್ನ ಕಯ್ಯಿನ್ ?

ದೂತನ್

ತನ್‌ಕಯ್ಯಿನ್. ಪೆಣ್‌ಗೊಲೆಯ ತಂದೆಯೊಳ್ ಮುಳಿಸಿನ್.

ಮೇಳಮ್

ಓ ಕಣಿಯ ! ದಿಟಮಾಯ್ತೆ ನಿನ್ನ ಮುನ್ನೊರೆತಮ್ !

ದೂತನ್

ಪಾಡಿರ್ಕ್ಕುಮಿಂತು. ನೀನುಱಿದುವನ್ ನೆನೆಯ.

ಮೇಳಮ್

ನೋಡ್ಪೆನಿದೊ, ಯೂರುದಿಕೆ ಹತಭಾಗ್ಯೆ ಬಂದಳ್,
ಕ್ರೆಯೋನಿನಾ ಮಡದಿ ತಾನಿತ್ತಣ್ಗೆ ಬಂದಳ್.
ಮನೆಯಿಂದಮಿವಳೀಗಳ್ ನಿರ್ನೆರಮ್ ಬಂದಳೋ ?
ಮೇಣ್ ಮಗನ ಸುದ್ದಿಯನ್ ತಾನ್ ಕೇಳ್ದು ಬಂದಳೋ ?

[ಯೂರುದಿಕೆ]

ಯೂರುದಿಕೆ

ಓ ನಮ್ಮ ಪೊೞಲರೇ ! ಕಿವಿಗೇಳ್ದೆನಾನ್ ನಿಮ್ಮ
ನುಡಿಗಳನ್, ನಡೆತಂದು ಮುಂಬಾಗಿಲನ್ ಸಾರೆ,
ದೇವಿಪಲ್ಲಸಳ ಪ್ರಾರ್ಥನೆಗೆಂದು ಪೊಱಪಟ್ಟು.
ಬೞಿಸಂದು, ಕದತೆಱೆಯಲಗುೞಿಯನ್ ತೆಗೆಯುತಿರೆ,
ಎಮ್ಮನೆಯ ಕೇಡನುಡಿ ಬಡಿದತ್ತು ಕಿವಿಯನ್.

ಬೆದಱಿ ಬೆನ್ನೊಱಗಿದೆನ್ ತೊಟ್ಟಿರನ್ ; ಮೇಣ್ ಪ್ರಜ್ಞೆ
ತಪ್ಪಿದೆನ್. ಮಗುಳ್ದೊರ್ಮೆ ಪೇೞಿಮಿನ್ ಸುದ್ದಿಯನ್ ;
ಕೇಳ್ದಪೆನ್, ಕಂಡಱಿಯದವಳಲ್ಲ ಕೇಡನ್.

ದೂತನ್

ಎನ್ನಚ್ಚಿನೊಡತಿ ! ನಾನ್ ಕಂಡುದನ್ ಪೇೞ್ವೆನ್.
ದಿಟಮೆಲ್ಲಮೊರೆವೆನ್ ; ಒರ್ಮಾತುಮನ್ ನುಂಗೆನ್.
ನಯನುಡಿಗಳಿಂದೇಕೆ ಸಂತೈಸವೇೞ್ಕುಮಾನ್,
ಇನಿತಱೊಳೆ ಸುಳ್ನುಡಿತದೊಳ್ ಪಿಡಿಯಪಡಲೆಂದು ?
ದಿಟಮೆ ತಾನ್ ಏಗಳುಮ್ ನೇರಮ್ : ಬೞಿತೋಱಿ
ನಡೆದೆನಾನ್, ಬಯಲ ನೆತ್ತಿಗೆ ನಿನ್ನ ಪತಿಯೊಡನೆ.
ನಾಯ್ ಪಿಕ್ಕಿ ಎಡೆದಿರ್ದ ಪೊಲುನೆಯ್ಕೇಸ್ ಒಡಲ್, ಅಲ್ಲಿ,
ಮಱುಕಮನ್ ಕಾಣದೆಯೆ ಬಱಿದೆ ಕೆಡೆದಿರ್ದತ್ತು.
ಕೂಡುವೞಿ ದೇವಿಯನ್, ಪ್ಲೌತೋನ ದೇವನನ್,
ಅರುಳೊಸೆದು, ಕೋಪಮನ್ ತಡೆದುಕೊಳೆ ಬೇಡಿದೊಮ್.
ಪಾವನಸ್ನಾನದಿನ್ ಮೆಯ್ತೊಳೆದು, ಪೊಸತಿಱಿದ
ತಳಿರಿಂದೆ ಮೆಯ್ಯುೞಿಕೆಯನ್ ಬೂದಿಮಾಡಿದೊಮ್.
ನೇರುದ್ದ ಮೊಡ್ಡಿದೊಮ್ ತಾಯ್ಮಣ್ಣ ಕುಪ್ಪೆಯನ್.
ಪಿನ್ನಡೆದೊಮಾಪೆಣ್ಣ ಪಾಸಱೆಯ ಮದುಮನೆಗೆ,
ಅಡಿನೆಲನ ಮೃತ್ಯುವಿನ ಕಲ್ಲಱೆಯ ಮದುಮನೆಗೆ.
ಕೇಳ್ದನ್, ಆ ಅಪವಿತ್ರಮದುಮನೆಯ ಗವಿಯಿಂದೆ,
ದೂರದೊಳೆ, ಕೂರೞಲ ಬಲ್ಲುಲಿಯನೊರ್ವನ್.
ಪರಿತಂದನಱಿಪಲೆನ್ಮೊಱೆಯಸ್ಗೆ, ಕ್ರೆಯೋಸ್ಗೆ.
ಬೞಿಸಾರ್ಪ ದೊರೆಯನಮರ್ದತ್ತಲುಮ್ ಮುಸುಱಿತ್ತು
ಕೂರೞಲ ಮರ್ಬುದನಿ. ಕೂರೞ್ಕೆಯಟ್ಟಿನ್,
ಚೀಱಿಟ್ಟು ಕೂಗಿದನ್—ಅಯ್ಯೋ ! ಪಾಪಿನಾನ್ !

ದಿಟಮಾಯ್ತೆ ಕಳವಳಮ್ ? ಕಂಡೆನೇ ಮುನ್‌ಬರವನ್ ?
ನಡೆವೆನೇ ಎನ್ನಡೆದ ದಾರಿಯೆಲ್ಲದಱಿನ್
ಬಲ್‌ದುಗುಡ ದಾರಿಯನ್ ? ಕೊಸರಿಪುದು ಕಿವಿಯನ್
ಕಂದನ ಕೊರಲ್ ! ಪೋಗಿಮ್, ಆಳ್ಗಳೇ ತಳ್ವದೆಯೆ.
ಕಲ್ಲಱೆಯ ಬಟಿಸಾರ್ದು, ಕಲ್‌ಕಿತ್ತ ಕಂಡಿಯೊಳ್
ನೇರ್‌ನುಸುಳ್ದು, ಗವಿಯ ಕಿಱುವಾಯ್‌ಪೊಕ್ಕು, ನೀಮ್ ನೋಡಿಮ್—
ಆನ್ ಕೇಳ್ದುದೀಗಳ್ ಹಯ್‌ಮೋನ್ ಕೊರಲೊ ? ಮೇಣಿಲ್ಲ
ದೇವತೆಗಳಿಂದಮಾನ್ ಮೋಸವೋದೆನೊ ಎಂದು.
ಎರ್ದೆವಿರಿದ ದೊರೆಯಿಟ್ಟ ಬೆಸನಂತೆ ನಾಮ್ ಪೋಗಿ
ನೋಡಿದೊಮ್. ಕಲ್ಲಱೆಯ ಮೂಲೆಯೊಳ್ ಕಂಡೊಮಾ
ಕನ್ನೆಯನ್, ನೇಲ್ದ ನೇಣ್‌ಗೋಣಳನ್, ನವಿರ್‌ನೂಲ
ಪುರಿಕುಣಿಕೆಯಿನ್ ಬಿಗಿದಳನ್. ಕಂಡೊಮವನನ್,
ಪೆಣ್ಣ ನಡುವನ್ ತಬ್ಬಿ ಜೋಲ್ದೊಱಲುತಿರ್ದನನ್ ;
ತನ್ನ ಮದುವಾಸು ಸರಿದಡಿನೆಲದೊಳಟಿದುದನ್,
ಅಯ್ಯನಾ ಗೆಯ್ಮೆಯನ್, ತನ್ನದೊಂದಟಿಪ್ಪಾಲಿ-
ನೊಲ್ಮೆಯನ್, ನೆನೆನೆನೆದು ಗೋಳ್‌ಕರೆಯುತಿರ್ದನನ್.
ತಂದೆ ಮಗನನ್ ಕಂಡು ಚೀಱಿಟ್ಟು ಕೂರಟ್ತನ್.
ಒಳಪೊಕ್ಕು ಕೂಗಿದನ್ ಕಂದನನ್, ಗೋಳಿಟ್ಟು :
“ಓ ಪಾಪಿ ! ಏನ್ ಗೆಯ್ಮೆಗೆಯ್ದೆ ? ಏನ್ ಬಗೆದೆ ನೀನ್ ?
ಆವ ದುರ್‌ಘಟನೆಯೊಳ್ ಸಿಲ್ಕಿ ಮತಿಪಾಟಿಟ್ಟೆ ?
ಬಾ, ಕಂದ ! ಮೊಱೆಯಿಟ್ಟು ಬೇಡುವೆನ್ ಬಾರಾ !”
ಮಗನ್, ಇರದೆ ಕೆರಳ್ದ ಬಿಱುಗಣ್ ತಿರಿಪಿ ನೆಱೆ ನೋಡಿ,
ಮೊಗದ ಮೇಲುಗುಟ್ದು, ಮಱುನುಡಿಯದೇನೊಂದುಮನ್,
ನೇರ್ ಸೆಳೆದನಿರ್‌ಪಿಡಿಯ ಖಡ್ಗಮನ್ ; ಪೊಱಚಿಮ್ಮಿ,
ತಂದೆ ತಲೆಕಾದೋಡೆ, ಗುಱಿತಪ್ಪಿದನ್ ಮಗನ್.
ಆಗಳಾ ಮಂದಭಾಗ್ಯನ್ ತನಗೆ ತಾನ್ ಮುಳಿದು,

ನಿಂದವೊಲೆ ಬಾಳೊಱಗಿ ನಡುಬರಿಯೊಳಿಱಿದನ್.
ಇನ್ನುಮಿರೆ ಮೆಯ್ಯಱಿವು ತೆಗೆದಪ್ಪಿಕೊಂಡನ್
ಕನ್ನೆಯನ್, ಕಾಯ್ಪುಟಿದ ತನ್‌ತೋಳ ತಪ್ಕೆಯೊಳ್.
ನಿಡುಸುಯ್ದು ಚಿಮ್ಮಿದನ್ ಬಿಱುಬಸಿದು ಪೊಸಲಿಟ್ಟ
ನೆತ್ತರನ್, ಕನ್ನೆಯಾ ಕೆಂಪಟಿದ ಕೆನ್ನೆಯೊಳ್.
ಕೆಡೆದನ್ ಪೆಣಮ್ ಪೆಣಮನಪ್ಪಿ. ಹತಭಾಗ್ಯನ್ !
ನೆಱಪಿದನ್ ಮದುವೆಯನ್ ಮೃತ್ಯುವಿನ ಮನೆಯೊಳಗೆ.
ಆಳ್‌ಕುಡಿಗೆ ತೋಱಿದನ್,—ಆಳ್ ಕುತ್ತಮನಿತಱೊಳ್
ಅಱಿವಿಲ್ಮೆ ತಾನೆನಿತು ಪೆರ್‌ಗುತ್ತಮೆಂಬುದನ್. [ಯೂರುದಿಕೆ ಪೋಪಳ್.

ಮೇಳಮ್

ಈಗಳೇನೊಣರ್ದಪಯ್ ? ಅರಸಿ ತಾನ್ ಪಿಂದಿರುಗಿ ಪೋದಳ್ ;
ನಲ್ಲದೋ ಪೊಲ್ಲದೋ ಏನುಮನ್ ನುಡಿಯದೆಯೆ ಪೋದಳ್.

ದೂತನ್

ಬೆಱಗಾದೆನಾನುಮ್. ಆದೊಡಮ್ ನಚ್ಚಿದಪೆನೀಗಳ್,
ತನ್‌ಮಗನ ಪಟ್ಟಪಾಡನ್ ಕೇಳ್ದು, ತಾನ್‌ಪೊಱಲರಿದಿರೊಳೇ
ಅೞ್ವುದದು ತಗದೆಂದು ಮನೆಯೊಳಗೆ ಕೆಳದಿಯರ ಮುಂದೆ,
ಮನೆಯುಱಲನುಱಲಿಕ್ಕಿ ಗೋಳಾಟಮಿಡಿಸಿದಪಳೆಂದು.
ಅಱಿವಿನೊಳ್ ನುಱಿಯದಳ್ ತಾನಲ್ಲ ಬಟಿತಪ್ಪಿ ಪೋಗಲ್.

ಮೇಳಮ್

ಅಱಿಯೆನಾನ್ ; ಆದೊಡಮ್, ತೋಱಿದಪುದಿನ್ನೆನಗೆ—ಮಿತಿಗೆಟ್ಟ
ಮೌನಮುಮ್ ಬಱಿಯ ಬಲ್ಲೞ್ಕೆವೊಲೆ ಕಳವಳಮೆ ತಾನೆಂದು.

ದೂತನ್

ಅಂತಾದೊಡೊಳಪೊಕ್ಕು ನೋಡ್ಪೆವಾಮ್—ಬಲ್ಲಲೆವ
ಬಗೆಯೊಳಗೆ ತಾನ್ ಅದುಮಿ ಮಱಸಿಟ್ಟ ಪೊಲ್ಲೆಣಿಕೆ

ಏನಾನುಮಿರ್ಕುಮೇ ಎಂಬುದನ್. ಸಲ್‌ಸುಡಿವೆ
ನೀನ್, ದಿಟಮ್ : ಮಿತಿಗೆಟ್ಟ ಮೌನಮುಮ್ ಕಳವಳಮೆ. [ಪೋಪನ್.

ಮೇಳಮ್

ಇಲ್ಲಿದೋ ಬಂದಪನ್, ದೊರೆಯೆ ತಾನ್ ಬಂದಪನ್ ;
ಕಯ್ಯೊಳಗೆ ತಾನ್ ತಿಳಿಯ ಕುಱುಪದನ್ ತಂದಪನ್.
ನುಡಿಯಲ್ಕೆ ಸಲ್ವೊಡಿನ್ ನಾನಿದನ್ ನುಡಿದಪೆನ್ :
ತಾನೆಂದುಮಲ್ಲಮಿದು ಪೆಱಕಯ್ಯ ಪಾತಕಮ್,
ತನತೆ ತಪ್ಪಿಂದಮೇ ನಡೆದುದೀ ಪಾತಕಮ್.

[ಕ್ರೆಯೋನ್ ಮಗನ ಪೆಣದೊಡನೆ]

ಮಱುಗೀತೆ

ಬಲಮುರಿ ೧

ಕ್ರೆಯೋನ್

ಅಯ್ಯೋ ! ತಾಮಸಮನದಾ ಪಾಪಮ್ !
ಮೊಟ್ಗಿದ ಪಾಪಮ್ ! ಮಾರಕ ಪಾಪಮ್ !
ನೋಡಿಮ್ ! ಕೊಂದವನನ್, ಕೆಡೆದವನನ್ ;
ನೋಡಿಮ್ ! ಒರ್‌ಕುಡಿಮಕ್ಕಳಿರೆಮ್ಮನ್.
ಅಯ್ಯೋ ! ಅಯ್ಯೋ ! ಎನ್ನಯ ಪಾಪಮ್ !
ಹತಭಾಗ್ಯನ ಪೊಲ್ಲಱಿವಿನ ಪಾಪಮ್ !
ಪೊಸ ಎಸಟ್ ಮಗನೇ ಮಡಿದಯ್ ಮಗನೆ !
ಪೊಸವಗೆ ಮಡಿವನ್ ಮಡಿದಯ್ ಮಗನೆ !
ನಿನ್ನಯ ತಪ್ಪಿನ್ ಮಡಿಯೆಯ್ ಮಗನೆ !
ನನ್ನಯೆ ತಪ್ಪಿನ್ ಮಡಿದಯ್ ಮಗನೆ !

ಮೇಳಮ್

ಅಯ್ಯಯ್ಯೊ! ಕಯ್ಮೀಱು ಪೋದಪಿನ್ ನೇರಮನ್ ಕಾಣ್ಬಂತೆ
ತೋಱ್ಪಿಯ್!

ಬಲಮುರಿ ೨

ಕ್ರೆಯೋನ್

ಅಯ್ಯಯ್ಯೊ! ಕಲ್ತೆನ್, ಪಾಪಿ ನಾನ್ ಕಲ್ತೆನ್.
ತಾನೀಗಳಾವುದೋ ದೈವಮಿರದೆಱೆದು,
ಬಡಿದೆಱಗಿ, ತಲೆಯ ಮೇಲ್ ಬಲ್‌ಭಾರಮೆಡೆದು,
ನೂಂಕಿದತ್ತೆನ್ನನ್, ಘೋರವಟೆಗೆನ್ನನ್.
ದೈವಮದು ನೆಲಕುರುಳ್ಚಿ ಕೆಡಪಿತ್ತು ಸಲಿವನ್,
ಅಯ್ಯಯ್ಯೊ! ಕಾಲ್‌ಕೆಟಗೆ ತುಟಿದತ್ತು ಸಲಿವನ್.
ಅಯ್ಯೊ! ಅಯ್ಯೊ!
ಆಳ್‌ಬಾೞ ದುಡಿತವ್! ಕಷ್ಟಮೇ ದುಡಿತಮ್!

[ಎರಡನೆಯ ದೂತನ್]

ದೂತನ್

ಎನ್ನೊಡೆಯ! ಇಲ್ಲಿ ಪಡೆದಿರ್ಪೆ; ಪಡೆದಿರ್ಪೆ ಒಳಗೆ.
ಈಗಳೇ ಪೊತ್ತಿರ್ಪೆ ಕಯ್ಯೊಳಗೆ ನೀನ್ ಕೇಡ ಪೊಱೆಯನ್;
ಮತ್ತಿನಿತಱೊಳೆ ನೋೞ್ಪೆ ಮನೆಯೊಳುಮ್ ನೀನ್ ಕೇಡಪೊಱೆಯನ್.

ಕ್ರೆಯೋನ್

ಮಗುಳ್ದಿನ್ನುಮಾವುದಯ್ ಕೇಡಮೇಲ್ ಕೇಡು?

ದೂತನ್

ನಿನ್ನರಸಿ ಮಡಿದಳ್, ಪೆಣನಿದೞ ನಲ್ಲತಾಯ್,
ಹತಭಾಗ್ಯೆ! ಪೊಸತೀಗಳೆಱಗಿದಾ ಬಡಿತದಿನ್.

ಎಡಮುರಿ ೧

ಕ್ರೆಯೋನ್

ಅನಿತುಮ್ ಕೊಳ್ವಾ ಓ ಅಡಿನೆಲಮೆ!
ಎನಿತುಮ್ ತಣಿಯದ ಓ ಅಡಿನೆಲಮೆ!
ಏಕಿಂತೆನ್ನನ್ ಕಾಡುತೆ ಕೊಲ್ವಯ್?
ನೀನೋ ಮಗನೇ! ಮತ್ತೇನೊರೆವಯ್?
ಪೊಲ್ಲದನೊರೆಯಲ್ ತಂದಾ ಮಗನೆ,
ಮತ್ತೇನೂಡಿಪೆ ನೋವನ್ ಮಗನೆ?
ಸತ್ತಿರ್ದವನನ್ ಮಗುಳ್ಬುಮ್ ಕೊಂದಯ್;
ನೀನೇನೊರೆವಯ್? ಪೊಸತೇನ್ ತಂದಯ್?
ಅಯ್ಯಯ್ಯೋ! ನನ್ನಿನಿಯಳ ಬಲಿಯನ್!
ಕಂದನ ಬಲಿಮೇಲ್ ಇನಿಯಳ ಬಲಿಯನ್!

ಮೇಳಮ್

ನೋಡ! ತೆಱೆದಿರ್ಕುಮ್; ಮನೆಯೊಳಗೆ ಮಱಸಿರ್ಪುದಿಲ್ಲ.

[ಬಾಗಿಲ್ ತೆಱೆದು ಯೂರುದಿಕೆಯ ಪೆಣಮ್ ಕಾಣ್ಬುಮ್]

ಎಡಮುರಿ ೨

ಕ್ರೆಯೋನ್

ನೋೞ್ಪೆನಾನ್ ಕೇಡನ್, ಎರಡನೆಯ ಕೇಡನ್!
ಇನ್ನುಮೇನ್, ಇನ್ನುಮೇನ್, ಇರ್ಕುಮೋ ಎನಗೆ?
ಇನ್ನಾವ ಪಾಡು ಕಾದಿರ್ಕುಮೋ ಎನಗೆ?
ಪಾಪಿ ನಾನ್ ಪೊತ್ತೆನ್, ಕಯ್ಯೊಳೇ ಪೊತ್ತೆನ್;
ಇದುವೆ ತಾನ್ ಪೊತ್ತೆನೇ ಕಂದನಾ ಪೆಣಮನ್!
ಇದಿರೊಳೇ ನೋೞ್ಪೆನೇ ಮತ್ತೊಂದು ಪೆಣಮನ್!

ಅಯ್ಯೋ ! ಅಯ್ಯೋ !
ಹತಭಾಗ್ಯ ತಾಯೇ ! ಅಯ್ಯೋ ಮಗನೆ !

ದೂತನ್

ಅವಳದೋ ಬೇಳ್ಕಟ್ಟೆಯಾ ಬೞಿಯೊಳೆರ್ದೆಯಿಱಿದು ಮೊನೆಯ
ಕತ್ತಿಯಿನ್, ಮುಚ್ಚಿದಳ್ ಕತ್ತಲಿಪ ಕಣ್ಗಳನ್. ಅೞಿದ
ಮೆಗರೆಯೂಸ್ ನಲ್ಪೆಸರ ಸಾವಿಂಗೆ ತಾನತ್ತಳ್ ; ಅತ್ತಳ್
ಇಲ್ಲಿ ಕೆಡೆದಿರ್ಪನ್ಗೆ. ಕೊನೆಯುಸಿರೊಳ್, ಅವಳಿರದೆ ಕಱೆದಳ್
ಬಲ್ಕೇಡ ಶಾಪಮನ್ ಮಕ್ಕಳನ್ ಕೊಂದನ್ಗೆ ನಿನಗೆ.

ಬಲಮುರಿ ೩

ಕ್ರೆಯೋನ್

ಅಯ್ಯಯ್ಯೋ ! ನಡುಗಿದಪೆನೀಗಳ್,
ತಲ್ಲಣಿಸಿ ನಡುಗಿದಪೆನೀಗಳ್.
ಇರ್ಬಾಯ ಬಾಳಿಂದಮೆರ್ದೆಯನ್
ಇಱಿಯರೇ, ಆರುಮೆನ್ನೆರ್ದೆಯನ್ !
ಓ ಪಾಪಿ ! ಮುೞುಗಿದೆನ್ ಮಡುವೊಳ್,
ಘೋರಮಯ ದುಃಖದಾ ಮಡುವೊಳ್.

ದೂತನ್

ಈಗಳಿನ ಮೇಣ್ ಮುನ್ನಿನಾ ಕೊಲೆಯ ತಪ್ಪನ್
ಕಟ್ಟಿದಳ್ ಮಡಿದವಳ್ ತಾನ್ ನಿನ್ನ ತಲೆಗೆ.

ಕ್ರೆಯೋನ್

ಎಂತಪ್ಪ ಕೊಲೆಯಿಂದಮುೞಿದಳ್ ?

ದೂತನ್

ತನ್‌ಕಯ್ಯೆ ಎರ್ದೆಯನಿಱಿದತ್ತು,
ತನ್‌ಮಗನ ಗೋೞ ಪಾಡಱಿದು.

ಬಲಮುರಿ ೪

ಕ್ರೆಯೋನ್

ಪಾಪಮಿದು ಪೊರ್ದದಿನ್ ಮಾನವರೊಳಾರುಮನ್,
ನನ್ನ ತಲೆಯನ್ ತಪ್ಪಿ ಮಾನವರೊಳಾರುಮನ್.
ನಾನೆತಾನ್, ಓ ಪಾಪಿ! ನಾನೆತಾನ್ ಕೊಂದವನ್;
ಸತ್ಯಮನ್ ನುಡಿದಪೆನ್, ನಾನೆತಾನ್ ಕೊಂದವನ್.
ಕೊಂಡುಯ್ಯಿಮೆನ್ನನಿನ್ ತಳ್ವದೆಯೆ ತೊಟ್ತಿರೇ!
ಉಯ್ಯಿಮಿನ್, ಉಯ್ಯಿಮಿನ್, ತಳ್ವದೆಯೆ ತೊಟ್ತಿರೇ!
ಕೊಂಡುಯ್ಯಿಮಾಗಳೇ ಇಲ್ಲನಪ್ಪೆನ್ನನ್,
ಇಲ್ಲನಪ್ಪೆನ್ನನ್.

ಮೇಳಮ್

ಹಿತಮನಿನ್ನಾರಯ್ದೆ, ಹಿತಮಿರಲ್ ಕೇಡಿನೊಳ್;
ಬೞಿಯೊಳಡಸಿರೆ ಕೇಡು, ಬಲ್‌ಕುಱಿದೆ ಬಲ್‌ಮೇಗು.

ಎಡಮುರಿ ೪

ಕ್ರೆಯೋನ್

ಓ ಬರ್ಕೆ! ಬರ್ಕೆಯಿನ್ನೆನಗೆ!
ಬರ್ಕೆಯಾ ನಲ್ಲಪಾಲೆನಗೆ!
ತರ್ಕೆಯಿನ್ ಕೊನೆದಿನಮನೆನಗೆ!
ಅನಿತಱಿನ್ ನಲ್‌ಪಾಲದೆನಗೆ!
ಓ ನೋಡದಿರ್ಕೆ! ನಾನ್ ಪಗಲನ್,
ಪಾಪಿ ನಾನ್ ನಾಳೆಯಾ ಪಗಲನ್.

ಮೇಳಮ್

ಇವೆಲ್ಲಮುಮ್ ಮುಂತಣವು. ಕರ್ತ್ತವ್ಯಮೆಮಗೀಗಳಿಂದಿನದು, ಇಲ್ಲಿ ;
ಮುಂತಣದು ಮತ್ತಿರ್ಕ್ಕುಮಿನ್ನಾರ ಕಯ್ಯೊಳಿರವೇೞ್ಕುಮೋ ಅಲ್ಲಿ.

ಕ್ರಿಯೋನ್

ಎನ್ನೆಲ್ಲ ಬಯಕೆಗಳುಮಾವೊಂದು ಪ್ರಾರ್ತ್ಥನೆಯೊಳಿರ್ಕ್ಕುಮ್.

ಮೇಳಮ್

ಪ್ರಾರ್ತ್ಥನೆಯದೇವುದೋ ! ನಿಱುಸಿ ವಿಧಿಯಿಟ್ಟ
ಕೇಡಿಂದೆ ಬಿಡುಗಡೆಯೆ ಇಲ್ಲ ಮರ್ತ್ಯನ್ಗೆ.

ಎಡಮುರಿ ೪

ಕ್ರಿಯೋನ್

ಕೊಂಡುಯ್ಯಿಮೋವೊ ! ಮುನ್ಗಾಣದಾ ಮಡೆಯನನ್,
ಕೊಂಡುಯ್ಯಿಮಯ್ಯಯ್ಯೊ ! ಪಾಪಿಯನ್, ಮಡೆಯನನ್.
ಓ ಕಂದ ! ಕೊಂದೆನಾನ್ ಅಱಿಯದೆಯೆ ನಿನ್ನನ್ ;
ನಿನ್ನುಮೋ ಇನಿಯಳೇ ! ಕೊಂದೆನಾನ್ ನಿನ್ನನ್.
ಎತ್ತಲಿನ್ ನೋಡುವೆನ್ ? ಎತ್ತಲಿನ್ ತಿರುಗುವೆನ್ ?
ಕಯ್ಯೊಳಿರ್ದ್ದೆಲ್ಲಮುಮ್ ತಲೆಕೆಳಕು ಬಿೞ್ದುದಿನ್.
ತಾಳಲಾಱದ ವಿಧಿಯ ಬಡಿತಮದು ಬಡಿಗುಮ್,
ತಲೆಗೆ ತಾನ್ ಬಡಿಗುಮ್.

ಮೇಳಮ್

ಸಲ್ಲಱಿವು ತಾನನಿತು ಮೇಲ್ಮೆಗಮ್ ಮೊದಲಯ್ ;
ದೇವರ್ಗೆ ಸಲ್ವುದಱೊಳ್ಶ್ರದ್ಧೆ ತಗದಯ್.
ಸೊರ್ಕಿದರ ಸೊರ್ಕ್ಕನುಡಿ ತೆತ್ತಪುದು ದಂಡಮನ್,
ಪೆರ್ಬಡಿತದಿನ್ ಮುಱಿದು ತೆತ್ತಪುದು ದಂಡಮನ್ ;
ಕಲಿಸುವುದು ಬುದ್ಧಿಯನ್, ಮುಪ್ಪಿನೊಳ್ ಬುದ್ಧಿಯನ್.

ಪರಿಶಿಷ್ಟ*

ಆದೊಡಮ್ ನಿನಗೆ ನಾನ್ ಗೌರವಂದೋಱಿದುದೆ ಸರಿಯೆಂಬ-
ರಱಿತವರ್. ಮಕ್ಕಳನ್ ಪೆತ್ತ ತಾಯಾಗಿರ್ದೆನಾದೊಡಮ್,
ನನ್ನಿನಿಯನೇ ಸತ್ತು ಪುಡಿಯೊಳಗೆ ತಾನ್ ಪೊರಳುತಿರ್ದೊಡಮ್,
ಪೊಱಲ್ ಮೀಱಿ ಕಟ್ಟೆಸಕಮಿದನೆಂದುಮಾನ್ ಪೊತ್ತುಕೊಳ್ಳೆನ್.
ನ್ಯಾಯಮೇನ್ ?—ಪತಿ ಸಾಯೆ, ಪೆಱನೊರ್ವನನ್ ಪಡೆಯಲಕ್ಕುಮ್ ;
ಮಗು ಸಾಯೆ, ಮಕ್ಕಳನ್ ಪೆಱನೊರ್ವನಿನ್ ಪಡೆಯಲಕ್ಕುಮ್ ;
ಎನಗಿಂದು, ತಂದೆ ತಾಯ್ ಇರ್ವರುಮ್ ಕಿೞ್ನೆಲದೊಳಡಗಿರಲ್,
ಮೂಡಿದಪನಿಲ್ಲಮಿನ್ನೆಂದಿಂಗಮ್ ಪೆಱನೊರ್ವನಣ್ಣನ್.
ಇಂತಪ್ಪ ನ್ಯಾಯದಿನ್ ನಿನಗೀಗಳೆಲ್ಲರಿನ್ ಮುನ್ಮೊದಲ್
ಗೌರವಂಗೊಟ್ಟೆನಾನ್. ಓ ಅಣ್ಣ ! ತಪ್ಪವಱಿಪಿಡಿದ
ಸಾಹಸದ ಪಾತಕಿಯೆ ನಾನೆಂದು ಬಗೆದನೇ ಆ ಕ್ರೆಯೋನ್.
ಮದುವಾಸು ನನಗಿಲ್ಲ, ಮದುವೆಯಾ ಪಾಡಿಲ್ಲಮೆನಗೆ ;
ಸವಿಯದೆಯೆ ಮದುವೆಯಾ ಭಾಗ್ಯಮನ್, ಮಕ್ಕಳಾ ಬಳಸಿಯುಮನ್,
ಪಾಪಿ ನಾನ್ ಪೋಪೆನೇ ಕಟಿದರಾ ನೆಲದಡಿಯ ಗವಿಗೆ,
ಪೋಪೆನೇ ಉಸಿರೊಡನೆ ನೆಲಗವಿಗೆ, ಕೆಳೆಯಾರುಮಿರದೆ.

* ಈ ಹದಿನೈದು ಸಾಲುಗಳನ್ನೂ ಹಲವು ಗ್ರೀಕ್ ಪಂಡಿತರು ಪ್ರಕ್ಷಿಪ್ತವೆಂದು ಎಣಿಸುವುದರಿಂದ ಇವನ್ನು ನಾಟಕದಲ್ಲಿಯೇ ಕೊಡದೆ ಇಲ್ಲಿ ಪರಿಶಿಷ್ಟವಾಗಿ ಕೊಟ್ಟಿದೆ.

ಟಿಪ್ಪಣಿ

[ಥೀ. ಈ. ಕಥೆ=ನಾಟಕಕ್ಕೆ ಮೊದಲು ಕೊಟ್ಟಿರುವ ಥೀಬ್ಸ್ ಮತ್ತು ಈಡಿಪಸ್ ಕಥೆ. ಸಾ.=ನಾಟಕದ ಸಾಲಿನ ಸಂಖ್ಯೆ. ಮುಂ.=ಮತ್ತು ಮುಂದಿನವು. ಇಂ. ಉ =(ಸಾಧ್ಯವಾದಮಟ್ಟಿಗೆ ಗ್ರೀಕ್ ಉಚ್ಚಾರಣೆಯಲ್ಲಿ ಕೊಟ್ಟಿರುವ ಅಂಕಿತನಾಮಗಳ) ಇಂಗ್ಲಿಷ್ ರೂಪದ ಉಚ್ಚಾರಣೆ]

ಸಾ. ೧ ಅಂತಿಗೊನೆ: (ಇಂ.ಉ. ಆಂಟಿಗೊನಿ). ಇಸ್ಮೇನೆ: (ಇಂ.ಉ. ಇಸ್ಮೀನಿ)

ಸಾ. ೨ ಮುಂ. ಸ್ಯೂಸ್ ದೇವನ್ (ಸರಿಯಾದ ಗ್ರೀಕ್ ಉಚ್ಚಾರಣೆ ಡ್ಸ್ಯೂಸ್): ಗ್ರೀಕರ ಪ್ರಧಾನ ದೇವತೆ; ಒಲುಂಪೊಸ್‌ಮಲೆ (ಇಂ.ಉ. ಒಲಿಂಪಸ್) ಇವನ ವಾಸಲು ಕ್ಷೇತ್ರ; ಈ ದೇವತೆಯ ಎರಡು ಸ್ವರೂಪಗಳು ಕಾಣಬರುತ್ತವೆ: (i) ಪುರಾಣಗಳಿಂದ ತಿಳಿದುಬರುವುದು—ಶುದ್ಧ ಕಾಮುಕ, ಸ್ವೇಚ್ಛಾಚಾರಿ, ಅಷ್ಟೇನೂ ಉದಾತ್ತವ್ಯಕ್ತಿ ಅಲ್ಲ, ದೈವೀಶಕ್ತಿಯಿದ್ದಂತೆ ತೋರಿದರೂ ಮನುಷ್ಯದೌರ್ಬಲ್ಯಗಳಿಂದ ದೂರನಲ್ಲ; (ii) ತಾತ್ವಿಕರ ಕಲ್ಪನೆಯಿಂದ ತಿಳಿದುಬರುವುದು—ಪರಮ ದೇವತೆ, ಪರಮಾತ್ಮ, ಲೋಕಪಿತೃ, ಧರ್ಮಸ್ವರೂಪ. ಇವನು ಆಕಾಶ ದೇವತೆ; ಗಾಳಿ ಮಳೆಗಳನ್ನು ಕೊಡುವವನು ಇವನೆ; ಸಿಡಿಲು ಇವನ ಆಯುಧ (ಇಂದ್ರನಿಗೆ ವಜ್ರಾಯುಧವಿದ್ದಂತೆ)

ಒಯಿದಿಪೌಸಿನಾ ಪಾಪಮನ್: ಒಯಿದಿಪೌಸ್ (ಇಂ. ಉ. ಈಡಿಪಸ್) ಅರಿಯದೆಯೆ ತನ್ನ ತಂದೆಯನ್ನು ಕೊಂದು ತಾಯನ್ನೇ ಮದುವೆಯಾಗಿ ಮಕ್ಕಳು ಪಡೆದನು (ಥೀ. ಈ. ಕಥೆ ನೋಡಿ)

ಸಾ. ೬ ಒಯಿದಿಪೌಸಿನ ಇಬ್ಬರು ಮಗಂದಿರೂ ತೀರಿಕೊಂಡದ್ದರಿಂದ ಅವರ ಮಾವ ಕ್ರೆಯೋನ್ (ಇಂ. ಉ. ಕ್ರೀಯಾನ್) ಅಧಿಕಾರ ತಾಳಿದ್ದನು.

ಸಾ. ೧೩ ಪೊಲುನೆಯ್‌ಕೇಸಿನ (ಇಂ. ಉ. ಪಾಲಿನೀಸೀಸ್) ಪರವಾಗಿ ಬಂದಿದ್ದ ಅರ್ಗೊಸಿನ (ಇಂ. ಉ. ಅರ್ಗಾಸ್) ಸೈನ್ಯ, ಪೊಲುನೆಯ್‌ಕೇಸೂ ಇತರ ವೀರರೂ ಮಡಿಯುತ್ತಲೆ ಹಿಮ್ಮೆಟ್ಟಿ ಓಡತೊಡಗಿತು.

ಸಾ. ೧೭ ಮುಂ. ಹಗೆಗೆ ಕೂಡ ಉತ್ತರಕ್ರಿಯೆಗಳನ್ನು ತಡೆಯುವುದು ಗ್ರೀಕ್ ಧರ್ಮಕ್ಕೆ ವಿರುದ್ಧ. ಉತ್ತರಕ್ರಿಯೆಗಳಾಗದ ಪ್ರೇತಗಳಿಗೆ ಅಧೋಲೋಕದಲ್ಲಿ ನೆಮ್ಮದಿಯಿಲ್ಲ; ಅವು ಅಲ್ಲಿಯ ವ್ಯವಹಾರಗಳಿಗೆ ಅಯೋಗ್ಯವಾಗುತ್ತವೆ.

ಸಾ. ೪೩ (ಥೀ. ಈ. ಕಥೆ ನೋಡಿ)

ಸಾ. ೨೦ ಎತೆಯೊಕ್ಲೇಸ್ : (ಇಂ. ಉ. ಇಟೀಯೊಕ್ಲೀಸ್)

ಸಾ. ೮೭ ದಿರ್ಕೇನದಿ (ಇಂ. ಉ. ಡರ್ಸಿ) ಥೇಬಾಯ (ಇಂ. ಉ. ಥೀಬ್ಸಿನ) ಪಶ್ಚಿಮಕ್ಕೆ ಹರಿಯುತ್ತದೆ; ಊರಿಗೆ ಬಹು ಪವಿತ್ರವಾದದ್ದು.

ಸಾ. ೮೯ ಮುಂ. (ಥೀ. ಈ. ಕಥೆ ನೋಡಿ)

ಸಾ. ೯೫ ಅರ್ಗೋಸರ ಲಾಂಛನ ಹದ್ದು (ಅಥವಾ ಗಿಡುಗ)

ಸಾ. ೧೦೮ ಥೇಬಾಯರು ದ್ರಾಕೋನ್ (ಇಂ. ಉ. ಡ್ರೇಗನ್) ಹಾವಿನ ಹಲ್ಲುಗಳು ನೆಲದಲ್ಲಿ ಬಿತ್ತಿ ಹುಟ್ಟಿದವರ ವಂಶದವರಾದ್ದರಿಂದ 'ಪಾವು-ಪಗೆ ಎಂದು ಹೇಳಿದೆ (ಥೀ. ಈ. ಕಥೆ ನೋಡಿ). ಅರ್ಗೋಸರ ಲಾಂಛನ ಹದ್ದು; ಹಾವಿಗೂ ಹದ್ದಿಗೂ ಹಗೆ.

ಸಾ. ೧೧೭ ಕಪನ್ಯೂಸ್ ಎಂಬ ಅರ್ಗೋಸರ ವೀರನೊಬ್ಬನು ಕೋಟೆ ಹತ್ತುವುದರಲ್ಲಿದ್ದಾಗ ಸಿಡಿಲೆರಗಿ ಸತ್ತನು (ಥೀ. ಈ. ಕಥೆ ನೋಡಿ)

ಸಾ. ೧೨೭ ಮುಂ. (ಥೀ. ಈ. ಕಥೆ ನೋಡಿ)

ಸಾ. ೧೪೨ ಬಾಖೊಸ್ (ಇಂ. ಉ. ಬಾಕಸ್): ಇವನ ಹಲವು ಹೆಸರುಗಳಲ್ಲಿ ಬಹು ಪ್ರಸಿದ್ಧವಾದ ಮತ್ತೊಂದು ದಿಯೊನೂಸೊಸ್ (ಇಂ. ಉ. ಡಯೊನೈಸಸ್): ಸಸ್ಯಾಧಿದೇವತೆಯಾದರೂ ಮುಖ್ಯವಾಗಿ ಮದ್ಯದೇವತೆ; ಸ್ಯೂಸಿಗೆ ಕಾದ್ಮೊಸಿನ (ಇಂ. ಉ. ಕಾಡ್ಮಸ್) ಹಿರಿಯಮಗಳಾದ ಸೆಮೆಲೆಯಲ್ಲಿ (ಇಂ. ಉ. ಸೆಮಿಲಿ) ಹುಟ್ಟಿದವನು (ಥೀ. ಈ. ಕಥೆ ನೋಡಿ)

ಸಾ. ೧೫೪ ಮುಂ. ಥೇಬಾಯ್ಗೆ ಬಂದಿದ್ದ ಸ್ಫಿಂಕ್ಸ್ ರಾಕ್ಷಸಿಯ ಕಾಟವನ್ನು ಒಯ್ದಿಪೌಸ್ ಕಳೆದು ನೆಮ್ಮದಿಯಿಂದ ನಾಡಾಳಿದನು (ಥೀ. ಈ. ಕಥೆ ನೋಡಿ)

ಸಾ. ೨೨೮, ೨೩೭ ಅಂತಿಗೊನೆ ನೆರವಿಲ್ಲದೆ ಒಕ್ಕೈಯಾಗಿದ್ದರಿಂದ ಹೆಣವನ್ನು ಸರಿಯಾಗಿ ಸಂಸ್ಕರಿಸುವುದಕ್ಕೆ ಆಗದೆ, ಅಧೋಲೋಕದ ತೃಪ್ತ್ಯರ್ಥವಾಗಿಯೂ ಶಾಸ್ತ್ರಕ್ಕಾಗಿಯೂ ಒಂದು ಹಿಡಿ ಮಣ್ಣರಚಿ ತನಿಯೆರೆದಿದ್ದಳು.

ಸಾ. ೩೧೪ ಸೃಷ್ಟಿಪೂರ್ವದ ಆದಿ ಅವ್ಯಕ್ತದ್ರವ್ಯ (ಖಾಒಸ್, ಇಂ. ಉ. ಕೇಯಾಸ್) ಇರುಳೂ ಬೆಳಕೂ ಆಗಿ ಬೇರ್ಪಟ್ಟು, ಅವೆರಡರ ಕೂಟದಿಂದ ಭೂದೇವಿ (ಗೇ, ಗಯ, ಸಂಸ್ಕೃತ ಜ್ಮಾ) ಆದಳು. ಅವಳು ಆಕಾಶ ದೇವನೊಡನೆ (ಔರನೊಸ್, ಇಂ. ಉ. ಯೂರನಸ್, ಸಂಸ್ಕೃತ ವರುಣ) ನೆರೆದು ಇತರ ದೇವತೆಗಳನ್ನು ಪಡೆದಳು. ಹೀಗೆ ಉಳಿದ ದೇವತೆಗಳ ತಾಯಾದ್ದರಿಂದ ಅವಳು ದೇವತೆಗಳ ಹಿರಿಯಳಾದಳು.

ಸಾ. ೪೧೭ ಮೂಱುತಣಿ : ಜೇನು, ದ್ರಾಕ್ಷಾಮದ್ಯ, ಹಾಲು ಅಥವಾ ನೀರು— ಈ ಮೂರನ್ನೂ ಬೆರಸಿ ಮೂರು ಸಲ ಕೊಡುವ ತರ್ಪಣ.

ಸಾ. ೫೪೮, ೫೫೦ ಈ ಎರಡು ಸಾಲುಗಳು ಇಸ್ಮೇನೆ ಹೇಳಿದ್ದೆಂದು ಕೆಲವು ಓಲೆಗಳಲ್ಲಿದೆ; ಆದರೆ ಅದು ಲಿಪಿಕಾರರ ಕೈತಪ್ಪೆಂದು ವಿದ್ವಾಂಸರ ಅಭಿಪ್ರಾಯ.

ಸಾ. ೫೪೮ ಹಯ್‌ಮೋನ್ : (ಇಂ. ಉ. ಹೀಮಾನ್)

ಸಾ. ೫೫೧ ಹಯ್‌ದೇಸ್ (ಇಂ. ಉ. ಹೇಡೀಸ್) : ಈ ದೇವತೆಯ ಮತ್ತೊಂದು ಹೆಸರು ಪ್ಲೌತೋನ್ (ಇಂ. ಉ. ಪ್ಲುಟೊ); ಕ್ರೊನೊಸ್ (ಇಂ. ಉ. ಕ್ರೊನಸ್) ಮತ್ತು ರ್ಹಿಯಾ (ಇ. ಉ. ರ್ಹಿಯಾ) ದೇವಿಯರ ಮಗ, ಸ್ಯೂಸ್ ಮತ್ತು ಪೊಸೆಯ್‌ದೋನ್ (ಇಂ. ಉ. ಪೊಸೈಡನ್)ದೇವತೆಗಳ ಸೋದರ; ಇವನ ಹೆಂಡತಿ ಪೆರ್ಸೆಫೊನೆ (ಇಂ. ಉ. ಪರ್ಸೆಫೋನಿ); ಮಕ್ಕಳೆಲ್ಲರೂ ಸೇರಿ ತಂದೆ ಕ್ರೊನೊಸ್ಸನ್ನು ಉರುಳಿಸಿದ ಮೇಲೆ ಬೇರೆ ಬೇರೆ ಒಡೆತನಗಳಿಗೆ ಆಯ್ಕೆ ಹಾಕಿದಾಗ, ಸ್ಯೂಸಿಗೆ ಬಾನೊಡೆತನವೂ ಪೊಸೆಯ್‌ದೋನಿಗೆ ಕಡಲೊಡೆತನವೂ ಹಯ್‌ದೇಸಿಗೆ ಅಡಿನೆಲದೊಡೆತನವೂ ಬಂದುವು.

ಸಾ. ೫೬೩ ಥ್ರೇಕ್ : (ಇಂ. ಉ. ಥ್ರೇಸ್)

ಸಾ. ೫೬೭ ಲಾಬ್ದಕುಸ್ : (ಥೀ. ಈ. ಕಥೆ ನೋಡಿ)

ಸಾ. ೫೭೨ ಅಂತಿಗೊನೆ ಇಸ್ಮೇನೆ ಇಬ್ಬರೂ ಉಳಿದಿದ್ದರೂ, ಇಸ್ಮೇನೆ ಹಿನ್ನೆಲೆಯಲ್ಲಿ ಮರೆಯಾಗಿ ಹೋಗಿ ಅಂತಿಗೊನೆ ಒಬ್ಬಳೇ ಮುಂದೆದ್ದು ಕಾಣುವುದರಿಂದ ‘ ಬೆಳಕೊಂದು ’ ಎಂದು ಹೇಳಿದೆ.

ಸಾ. ೫೭೪ ಹೆಣವನ್ನು ಮಣ್ಣುಮಾಡುವುದು ಸತ್ತವರಿಗೂ ಅಧೋಲೋಕದವರಿಗೂ ಮನುಷ್ಯನು ಹೊತ್ತ ಋಣ. ಆದರೆ ಆ ಕಡವನ್ನು ತೀರಿಸಿಕೊಳ್ಳಲು ಅಂತಿಗೊನೆ ಕೊಟ್ಟ ಮಣ್ಣೇ ಅವಳ ಕೊಲೆಗೆ ಕಾರಣವಾದದ್ದರಿಂದಲೂ, ಕೊಲೆಗಡಿದು ರಕ್ತಸೋರುತ್ತ ಬಿದ್ದವನ ಒಡಲ ಮೇಲೆ ಎರಚಿದ್ದರಿಂದಲೂ ಅದು ಕೊಲೆಮಣ್ಣಾಯಿತು.

ಸಾ. ೫೭೯ ಒಲುಂಪೊಸ್ (ಇಂ. ಉ. ಒಲಿಂಪಸ್): ಉತ್ತರ ಥೆಸಲಿಯಲ್ಲಿಯ ಒಂದು ಬೆಟ್ಟ ; ದೇವತೆಗಳ ಬೀಡು ; ಅದರ ತುದಿಕೋಡಿನಲ್ಲಿ ಸ್ಯೂಸೂ, ಕೆಳಗೆ ಇತರ ದೇವತೆಗಳೂ ವಾಸಮಾಡುತ್ತಾರೆ.

ಸಾ. ೭೨೩ ಏ (ಎ) ರೋಸ್ (ಇಂ. ಉ. ಎರಾಸ್, ಈಯ್‌ರಾಸ್) : ಕಾಮದೇವತೆ ; (ಹೆಸಾಯ್ಡ್ ಪ್ರಕಾರ) ಖಾಒಸ್ಸಿನ (ಇಂ. ಉ. ಕೇಯಾಸ್)

ಮಗ, ಆದಿ ದೇವತೆಗಳಲ್ಲೊಬ್ಬ; (ತರುವಾಯದ ಕಥೆಗಳ ಪ್ರಕಾರ) ಸೂಸ್, ಅರೇಸ್ (ಇಂ. ಉ. ಏರೀಸ್), ಹೆರ್ಮೇಸ್ (ಇಂ. ಉ. ಹರ್ಮೀಸ್)—ಇವರಲ್ಲೊಬ್ಬರಿಗೆ ಅಫ್ರೊದಿತೆಯಲ್ಲಿ ಹುಟ್ಟಿದವನು.

ಸಾ ೭೪೨ ಅಫ್ರೊದಿತೆ (ಇಂ. ಉ. ಆಫ್ರೊಡೈಟಿ): ಪ್ರಣಯ ಮತ್ತು ಸೌಂದರ್ಯಗಳ ಅಧಿದೇವತೆ (ಲಕ್ಷ್ಮಿ?) ; ಸ್ದ್ಯೂಸಿನ ಮತ್ತು ದಿಯೊನೆಯ (ಇ. ಉ. ಡಯೊನಿ) ಮಗಳು ; ಹೇಫಯ್‌ಸ್ತೊಸ್ಸಿನ (ಇಂ. ಉ. ಹಿಫೀಸ್ಟಸ್) ಹೆಂಡತಿ ; ಅರೇಸ್‌ದೇವನಲ್ಲಿ ಮೋಹಗೊಂಡು ಅವನಿಂದ ಹಾರ್ಮೋನಿಯಳನ್ನು ಪಡೆದಳು (ಥೀ. ಈ. ಕಥೆ ನೋಡಿ). ಕ್ಷೇತ್ರವೃದ್ಧಿ, ಉದ್ಯಾನವನ ಮೊದಲಾದುವುಗಳ ಅಧಿದೇವತೆ. ದೇವಾಧಿದೇವರು ಕೂಡ ಅವಳ ಪ್ರಭಾವದಿಂದ ಹೊರಗಲ್ಲ. ಸಮುದ್ರದ ಬೆಳ್ನೊರೆಯಿಂದ ಒಗೆದಳೆಂದು ಕಥೆಯುಂಟು.

ಸಾ. ೭೫೨ ಅಖೆರೋನ್ (ಇಂ. ಉ. ಆಕೆರಾನ್): ಅಧೋಲೋಕದಲ್ಲಿಯ ನದಿಗಳಲ್ಲೊಂದು, ದುಃಖನದಿ.

ಸಾ. ೭೬೩ ಮುಂ. ತಾಂತಲೊಸಿನ (ಇಂ. ಉ. ಟಾಂಟಲಸ್) ಮಗಳಾದ ನಿಯೊಬೆ (ಇಂ. ಉ. ನಯೊಬಿ) ಥೀಬ್ಸಿನ ಅಂಫಿಯೋನನ್ನು (ಇಂ. ಉ. ಅಂಫಿಯಾನ್) ಮದುವೆಯಾಗಿ ಹನ್ನೆರಡು ಚೆಲುವು ಮಕ್ಕಳನ್ನು ಹಡೆದಳು. ಅದಕ್ಕಾಗಿ ಹಿಗ್ಗಿನಲಿದು, ಲೆತೊದೇವಿಗೆ ಎರಡೇ ಮಕ್ಕಳೆಂದೂ ತನಗಾದರೆ ಹನ್ನೆರಡೆಂದೂ ಕೊಬ್ಬಿ ನುಡಿದು ದೇವತೆಯ ಕೋಪವನ್ನು ತಂದುಕೊಂಡಳು. ಲೆತೊವಿಗೆ ಸ್ದ್ಯೂಸಿನಿಂದ ಅಪೊಲ್ಲೋನ್ (ಇಂ. ಉ. ಅಪಾಲೊ) ಎಂಬ ಮಗನೂ ಅರ್ತೆಮಿಸ್ (ಇಂ. ಉ. ಆರ್ಟಿಮಿಸ್) ಎಂಬ ಮಗಳೂ ಇದ್ದರು. ಸಾಮಾನ್ಯಳೊಬ್ಬಳು ದೇವತೆಯಾದ ತಮ್ಮ ತಾಯಿಗಿಂತ ಹೆಚ್ಚೆಂದು ಕೊಚ್ಚಿದ್ದನ್ನು ಕಂಡು ಮಕ್ಕಳಿಬ್ಬರಿಗೂ ರೇಗಿ ನಿಯೊಬೆಯ ಹನ್ನೆರಡು ಮಕ್ಕಳನ್ನೂ ಕೊಂದುಹಾಕಿಬಿಟ್ಟರು. ಮಕ್ಕಳ ಹೆಣಗಳು ಉತ್ತರಕ್ರಿಯೆಯಿಲ್ಲದೆ ಒಂಬತ್ತು ದಿನಗಳು ಬಯಲಲ್ಲಿ ಬಿದ್ದು ಕೆಡೆದು, ಕೊನೆಗೆ ದೇವತೆಗಳ ಕರುಣೆಯಿಂದ ಸಂಸ್ಕಾರ ಕಂಡವು. ನಿಯೊಬೆ ಅತ್ತತ್ತು ಸೊರಗಿ ಸುಣ್ಣವಾಗಿ ಕಡೆಗೆ ದೇವತೆಗಳ ಕೃಪೆಯಿಂದ ಒಂದು ಬಂಡೆಯಾಗಿ, ಮಕ್ಕಳ ಕೊಲೆ ನಡೆದ ಫ್ರುಗಿಯನಾಡಿನಲ್ಲಿಯ (ಇಂ. ಉ. ಫ್ರಿಜಿಯ) ಜನ ಸುಳಿಯದ ಸಿಪ್ಯುಲ ಮಲೆಯಲ್ಲಿ ನಿಂತಳು.

ಸಾ. ೭೭೨ ನಿಯೊಬೆಯ ತಂದೆ ಠಾಂಟಲೊಸ್‌ದೇವತೆ, ತಾಯಿ ಅಟ್ಲಾಸಿನ ಮತ್ತು ಪ್ಲೆಯೋನೆಯ ಮಗಳು ತವುಗೆತ (ಇಂ. ಉ. ಟೆಯಿಜಿಟ)

ಸಾ. ೮೦೬ (ಥೀ. ಈ. ಕಥೆ ನೋಡಿ)

ಸಾ. ೮೧೯ ಪೊಲುನೆಯ್‌ಕೇಸ್ ಅರ್ಗೊಸಿನ ರಾಜಪುತ್ರಿಯನ್ನು ಮದುವೆಯಾಗದಿದ್ದರೆ, ಅಸಹಾಯನಾಗಿ ಉಳಿದು, ಥೇಬಾಯ ಮೇಲೆ ದಂಡೆತ್ತಿ ಬರುತ್ತಿರಲಿಲ್ಲವೆಂಬ ಭಾವದಿಂದ ಆ ಮದುವೆಯೇ ಅವನ ಸಾವಿಗೆ ಕಾರಣವೆನ್ನುತ್ತಾಳೆ.

ಸಾ. ೮೪೨ ಪೆರ್ಸೆಫೊನೆ (ಇಂ. ಉ. ಪರ್ಸೆಫೊನಿ): ಸ್ಯೂಸ್ ಮತ್ತು ದೇಮೇತೇರಳ (ಇಂ. ಉ. ಡಿಮಿಟರ್) ಮಗಳು; ಹಯ್‌ದೇಸ್‌ದೇವನ ಹೆಂಡತಿ; ಪ್ರೇತಗಳ ಮೇಲಿನ ಅಧಿಕಾರ ಇವಳದು; ಮನುಷ್ಯರ ಶಾಪಗಳನ್ನೆಲ್ಲಾ ನೆರವೇರಿಸುವವಳು ಇವಳೆ.

ಸಾ. ೮೬೭ ಕಾದ್ಮೊಸಿನ ಹೆಂಡತಿ ಹಾರ್ಮೊನಿಯ (ಥೀ. ಈ. ಕಥೆ ನೋಡಿ) ಅರೇಸ್ ದೇವನ ಮತ್ತು ಅಫ್ರೊದಿತೆ ದೇವಿಯ ಮಗಳು. ದಿಯೊನೂಸೊಸ್ ದೇವತೆ ಕಾದ್ಮೊಸಿನ ಮಗಳಾದ ಸೆಮೆಲೆಯ ಮಗ. ಹೀಗೆ ದೇವತೆಗಳು ಅಂತಿಗೊನೆಯ ಮನೆತನಕ್ಕೆ ಮೊದಲಿಗರು.

ಸಾ. ೮೭೬ ಮುಂ. ಅರ್ಗೊಸಿನ ದೊರೆ ಅಕ್ರೀಸಿಯೊಸ್ಸಿಗೆ ದನಯೆ (ಇಂ. ಉ. ಡಾನೆಯಿ) ಎಂಬ ಚೆಲುವೆಯಾದ ಮಗಳಿದ್ದಳು. ಅವಳ ಹೊಟ್ಟೆಯಲ್ಲಿ ಹುಟ್ಟುವ ಮಗನಿಂದ ಅಜ್ಜನಿಗೆ ಸಾವೆಂದು ದೇವವಾಣಿಯೊಂದು ನುಡಿದಿತ್ತು. ಅದರಿಂದ ಮಗಳು ಮೈತುಂಬಿ ಬೆಳೆದಂತೆಲ್ಲ ತಂದೆಗೆ ಎದೆಗುದಿ ಹೆಚ್ಚುತ್ತ, ಊರಿನ ನುರಿತ ಶಿಲ್ಪಿಗಳನ್ನೆಲ್ಲ ಕರಸಿ ಕಡಲೆಡೆಯಲ್ಲಿ ಅಂದವಾದ ಕಂಚಿನುಪ್ಪರಿಗೆಯೊಂದನ್ನು ಕಟ್ಟಿಸಿ, ಅದರ ಕೆಳ ಅರೆಯಲ್ಲಿ ಕಳ್ಳು, ಜೇನು, ಬೆಣ್ಣೆ ಮೊದಲಾದ ಇನಿಯುಣಿಸುಗಳನ್ನೆಲ್ಲ ಅಡಕಿ, ಕಣ್ಣುಮನಗಳನ್ನು ಸೆಳೆಯುವಂತೆ ಅಲಂಕರಿಸಿದ್ದ ಮೇಲಿನರೆಯಲ್ಲಿ ಮಗಳನ್ನು ಸೆರೆಯಿಟ್ಟನು. ಆ ಸುಂದರ ಸೆರೆಮನೆಯಲ್ಲೇ ನಿಡುದಿನಗಳನ್ನು ನೂಕಿ ಬಾಳಿನ ಸವಿ ಅರಿಯದೆಯೆ ಹೆಣ್ಣು ಮುದಿಯಾಗುತ್ತ ಬಂದಳು. ಒಂದು ಸಂಜೆ, ಬೈಗಿನ ಹೊಂಗೆಂಪು ಕಡಲಂಚಿನಲ್ಲಿ ಕರಗುತ್ತಿದ್ದುದನ್ನು ತನ್ನ ಕಂಚರೆಯ ಹೊಮ್ಮಂಚದಿಂದ ನೋಡುತ್ತ ಕುಳಿತಿದ್ದಳು. ಹೊತ್ತು ಇಳಿದಂತೆಲ್ಲ ಹೊಂಗದಿರು ಹೊಮ್ಮುತ್ತ ಬಂದದ್ದನ್ನು ಕಂಡು ಬೆರಗಾದಳು. ತನ್ನ ಗೂಡೆಲ್ಲ ಹೊಂಬೆಳಕಿನಿಂದ

ತುಂಬಿತು. ತನ್ನ ಸುತ್ತಲೂ ಹೊಮ್ಮಳೆ ಕರೆಯಿತು. ಬಾಲೆ ಬೆದರಿದಳು. ಆಗ ಮೆಲುದನಿಯೊಂದು ಜ್ಯೂಸ್ ದೇವನು ಬಳಿಯಿರುವುದಾಗಿಯೂ ತನ್ನೊಲವಿನ ಹೆಣ್ಣಿಗೆ ಮಗನೊಬ್ಬನನ್ನು ಕರುಣಿಸುವುದಾಗಿಯೂ ನುಡಿಯಿತು. ತಿಂಗಳುಗಳು ಕಳೆದು ದನೆಯೆಗೆ ಪುಟ್ಟ ಮಗುವೊಂದಾಯಿತು. ಸುದ್ದಿ ದೊರೆಯನ್ನು ಮುಟ್ಟಿದೊಡನೆಯೆ, ತಾಯಿ ಮಕ್ಕಳಿಬ್ಬರನ್ನೂ ಪೆಟ್ಟಿಗೆಯೊಂದರಲ್ಲಿಟ್ಟು ಬಿರುಗಾಳಿಯ ಕಡಲಿನಲ್ಲಿ ತೇಲಿಬಿಟ್ಟನು. ಜ್ಯೂಸ್ ಹೆಣ್ಣಿಗೆ ಮರುಗಿ, ಬಿರುಗಾಳಿಗಳನ್ನೆಲ್ಲ ತಡೆದಿಟ್ಟು, ಪಡುವಲ ಮೆಲುಗಾಳಿಯನ್ನು ಮಾತ್ರ ಸುಳಿಯಗೊಟ್ಟು, ಪೆಟ್ಟಿಗೆಯನ್ನು ಸೆರಿಫೋಸ್ ದ್ವೀಪಕ್ಕೆ ಸಾಗಿಸಿದನು. ಅಲ್ಲಿ ತಾಯಿ ಮಕ್ಕಳಿಬ್ಬರೂ ದಿಕ್ತ್ಯುಸ್ (ಇಂ. ಉ. ಡಿಕ್ಟಿಸ್) ಎಂಬ ಬೆಸ್ತನೊಬ್ಬನ ಮನೆಯಲ್ಲಿ ಬೆಳೆದರು. ಮಗ ಪೆರ್ಸೆಯುಸ್ (ಇಂ. ಉ. ಪರ್ಸ್ಯೂಸ್) ದೊಡ್ಡವನಾಗಿ ಹಲವು ಸಾಹಸಕಾರ್ಯಗಳನ್ನು ನಡಸಿ ವೀರಕೀರ್ತಿಪಡೆದು, ತವರೂರಿಗೆ ಮರಳಬಯಸಿ ಹೊರಟು, ಥೆಸಲಿಗೆ ಬಂದು ಅಲ್ಲಿ ಅರಿಯದೆ ತನ್ನಜ್ಜನನ್ನು ಕೊಂದು ದೇವವಾಣಿಯುನ್ನು ನಿಜಮಾಡಿದನು.

ಸಾ. ೮೮೪ ಮುಂ. ದಿಯೊನೂಸೊಸ್ ದೇವತೆಯ ಪೂಜೆಯನ್ನು ಥೇಬಾಯಲ್ಲಿ ಪೆಂಥ್ಯೂಸ್ ಪ್ರತಿಭಟಿಸಿದಂತೆಯೇ (ಥಿ. ಈ. ಕಥೆ ನೋಡಿ), ಥ್ರೇಸಿನಲ್ಲಿ ಲೂಕರ್ಗೊಸ್ (ಇಂ. ಉ. ಲೈಕರ್ಗಸ್) ಪ್ರತಿಭಟಿಸಿದನು. ದ್ರ್ಯಯಸ್ಸಿನ ಮಗನಾದ ಲೂಕರ್ಗೊಸ್ ಥ್ರೇಸಿನ ಒಂದು ಭಾಗದಲ್ಲಿ ನೆಲಸಿದ್ದ ಏದೋನೊಯ್ (ಏದೋನರ್, ಇಂ. ಉ. ಇಡೋನೈ) ಎಂಬ ಜನರಿಗೆ ಒಡೆಯನಾಗಿದ್ದನು. ಲೂಕರ್ಗೊಸ್ಸಿನ ಕಾಟ ತಡೆಯಲಾರದೆ ದಿಯೊನೂಸೊಸ್ ಕಡಲ ಮರೆಹೊಕ್ಕನು. ಅಲ್ಲಿ ಸಮುದ್ರದೇವಿಯಾದ ಥೆತಿಸ್ (ಇಂ. ಉ. ಥೆಟಿಸ್) ಅವನನ್ನು ಕಾಪಾಡಿದಳು. ದಿಯೊನೂಸೊಸ್ಸಿನ ಪ್ರೇರಣಬಲದಿಂದ ಲೂಕರ್ಗೊಸ್ ಅರಿವು ಮರುಳಿ, ಘೋರಕೃತ್ಯಗಳನ್ನು ನಡಸತೊಡಗಿ, ಕೊನೆಗೆ ದ್ರಾಕ್ಷಿಬಳ್ಳಿಯೆಂದು ಭ್ರಮಿಸಿ ತನ್ನ ಮಗನನ್ನೇ ಕೊಚ್ಚಿಹಾಕಿದನು. ಜ್ಯೂಸ್ ಅವನ ಕಣ್ಣುಗಳನ್ನು ಕುರುಡಿಸಿದನು. ಅವನನ್ನು ಪಂಗಯೂಸ್ ಬೆಟ್ಟದ ಗುಹೆಯಲ್ಲಿ ಸೆರೆಯಿಡುವಂತೆ ಜನರಿಗೆ ದೇವವಾಣಿ ಹೇಳಿತು. ಆ ಗುಹೆಯಲ್ಲಿ ಬಿದ್ದು ತೊಳಲುತಿದ್ದ ಲೂಕರ್ಗೊಸ್ಸನ್ನು ಕೊನೆಗೆ ಕಾಡುಕುದುರೆಗಳೂ ಹುಲಿಗಳೂ ಮೈಸುಲಿದು ಕೊಂದುಹಾಕಿದುವು.

ಸಾ. ೮೮೬ ದಿಯೊನೂಸೊಸ್ (ಸಾ. ೧೪೩ ಟಪ್ಪಣಿಯನ್ನೂ ಥೀ. ಈ. ಕಥೆಯನ್ನೂ ನೋಡಿ)

ಸಾ. ೮೯೧ ಮೌಸಾ (ದೇವಿಯರ್) (ಇಂ. ಉ. ಮ್ಯೂಸ್,): ಕಾವ್ಯ, ನೃತ್ಯ, ಗೀತ ನೊದಲಾದ ಕಲೆಗಳ ಅಧಿದೇವತೆ(ಯರು); ಮೊದಲು ಇವರು ಮೂವರೆಂದು ಭಾವವಿತ್ತು; ಕ್ರಮೇಣ ಇವರ ಸಂಖ್ಯೆ ಒಂಬತ್ತಾಯಿತು.

ಸಾ. ೮೯೩ ಮುಂ. ಬಾಸ್ಪೊರಸ್ ಸಮುದ್ರದ ಕರೆಯೂಕ್ಸೈನ್ (ಕಪ್ಪು) ಸಮುದ್ರದ ಪಶ್ಚಿಮ ಕರೆಯನ್ನು ಕೂಡುವೆಡೆಯಲ್ಲಿರುವ ಬಂಡೆಯ ದ್ವೀಪಗಳಿಗೆ ಕುಅನೆಯ (ಕಪ್ಪು) ದ್ವೀಪಗಳೆಂದು ಹೆಸರಿತ್ತು. ಅಲ್ಲಿ ಸಾಲ್ಮದೇಸೊಸ್ (ಇಂ. ಉ. ಸಾಲ್ಮಿಡೆಸಸ್) ಎಂಬುದೊಂದು ಪಟ್ಟಣ.

ಸಾ. ೮೯೬ ಅರೇಸ್ (ಇಂ. ಉ. ಏರೀಸ್): ಸ್ಯೂಸಿನ ಮತ್ತು ಹೇರಾ (ಇ. ಉ. ಹೀರಾ) ದೇವಿಯ ಮಗ; ಯುದ್ಧದೇವತೆ. ಅಥೇನೆ ಕುಶಲ ಯುದ್ಧದ ಅಧಿದೇವತೆ; ಇವನು ಕೇವಲ ಪಶುಬಲದ ಅಧಿದೇವತೆ. ಇವನಿಗೆ ರಕ್ತಪಾತದಲ್ಲಿ ಅಭಿರುಚಿ; ನ್ಯಾಯಾನ್ಯಾಯಗಳನ್ನು ನೋಡದೆ ಕೇವಲ ಯುದ್ಧದ ದುರಾಶೆಗಾಗಿ ಹಲವು ವೇಳೆ ಪಕ್ಷ ವಹಿಸುತ್ತಾನೆ.

ಸಾ. ೮೯೭ ಮುಂ. ಥ್ರೇಸಿನ ಸಾಲ್ಮದೇಸೊಸ್ಸಿಗೆ ದೊರೆಯಾದ ಫೀನೆಯುಸ್ಸಿಗೆ (ಇಂ. ಉ. ಫಿನ್ಯೂಸ್) ಕ್ಲೆಯೊಪಾತ್ರ (ಇಂ. ಉ. ಕ್ಲಿಯೊಪಾಟ್ರ) ಎಂಬ ಮಡದಿಯಿದ್ದಳು. ಕ್ಲೆಯೊಪಾತ್ರಳ ತಂದೆ ಮರುದ್ದೇವನಾದ ಬೊರೆಯಸ್ (ಇಂ. ಉ. ಬೋರಿಯಸ್), ತಾಯಿ ಅಥೆನ್ಸಿನ ಒರೆಯ್‌ಥುಯಿಯ. ಕ್ಲೆಯೊಪಾತ್ರಳಿಗೆ ಇಬ್ಬರು ಗಂಡುಮಕ್ಕಳಾದರು. ಬರುಬರುತ್ತ ದೊರೆಗೆ ಅವಳಲ್ಲಿ ಒಲವಿಂಗಿ, ಕೊನೆಗೆ ಅವಳನ್ನು ತೊರೆದು ಸೆರೆಯಲ್ಲಿಟ್ಟು ಕಾದ್ಮೊಸಿನ ಸೋದರಿಯಾದ ಎಯ್ದೊಥೆಯಳನ್ನು (ಇಂ. ಉ. ಐಡೊಥಿಯ) ಮದುವೆಯಾದನು. ಅವಳು ಸವತಿಯ ಮಕ್ಕಳಿಬ್ಬರ ಕಣ್ಣುಗಳನ್ನೂ ಕಿತ್ತು, ಅವರನ್ನೂ ಸೆರೆಯಲ್ಲಿಟ್ಟಳು. ಆ ಘೋರವೆಲ್ಲವನ್ನೂ ರಣದೇವನಾದ ಅರೇಸ್ ಬಳಿಯೂರಿನಿಂದ ಕಣ್ಣಾರ ನೋಡುತ್ತಿದ್ದನು.

ಸಾ. ೯೦೬ ಎರೆಕ್ಥಿಯೂಸ್: ಅಟಿಕದ ಒಬ್ಬ ಪುರಾತನ ವೀರ; ಇವನಿಗೆ ಗುಡಿಕಟ್ಟಿ ಪೂಜೆ ಸಲ್ಲುತ್ತಿತ್ತು.

ಸಾ. ೯೧೩ ತೆಯ್‌ರೆಸಿಯಸ್ (ಇಂ. ಉ. ಟೈರೀಸಿಯಸ್): (ಥೀ. ಈ. ಕಥೆ ನೋಡಿ)

ಸಾ. ೯೫೭ ಗ್ರೀಕ್ ಮೂಲದಲ್ಲಿಯ ಏಲೆಕ್ಟ್ರೋನ್ ಎಂಬುದನ್ನು ಹಲವು ಇಂಗ್ಲಿಷ್ ಭಾಷಾಂತರಕಾರರು ಅರ್ಥಸೌಲಭ್ಯಕ್ಕಾಗಿ ಬೆಳ್ಳಿ ಎಂದು ಭಾಷಾಂತರಿಸಿದ್ದಾರೆ. ಅವರ ಮಾರ್ಗವನ್ನೇ ಇಲ್ಲಿ ಅನುಸರಿಸಿದೆ. ಆ ಶಬ್ದಕ್ಕೆ ನಿರ್ದಿಷ್ಟ ಅರ್ಥ ಸರಿಯಾಗಿ ತಿಳಿಯದು. ಸಾಮಾನ್ಯವಾಗಿ ಎರಡು ಅರ್ಥಗಳಿದ್ದಂತೆ ತೋರುತ್ತದೆ: (i) ಪೊನ್ನಂಬರ ಅಥವಾ ಅಂಬರ; (ii) ನಾಲ್ಕು ಪಾಲು ಚಿನ್ನ ಒಂದು ಪಾಲು ಬೆಳ್ಳಿ ಬೆರೆದ ಒಂದು ಲೋಹ.

ಸಾ. ೯೭೨ ತುರನರ್: ಇಂಗ್ಲಿಷಿನ 'ಟೈರಂಟ್' ಪದಕ್ಕೆ ಮೂಲಪದ ಗ್ರೀಕಿನ ತುರನ್ನೊಸ್. ಆ ಪದದ ಅರ್ಥ ನಿರಂಕುಶಾಧಿಕಾರಿ, ಏಕಮಾತ್ರ ಪ್ರಭು ಎಂದು. ತವರ ಹಕ್ಕಿಲ್ಲದೆ ಪಟ್ಟಕ್ಕೆ ಬಂದವರನ್ನು ಕುರಿತು ಬಳಸುತ್ತಿದ್ದ ಪದ. ಮೊದಮೊದಲು ಆ ಪದ ಅಧಿಕಾರಕ್ಕೆ ಬಂದ ಮಾರ್ಗವಷ್ಟನ್ನೇ ಕುರಿತದ್ದಾಗಿದ್ದು ಆಳಿಕೆಯ ಕ್ರಮಕ್ಕೆ ಅಷ್ಟಾಗಿ ಸಂಬಂಧಪಟ್ಟಿರಲಿಲ್ಲ. ಆದರೆ ಬಲು ಬೇಗನೆ ದಬ್ಬಾಳಿಕೆಯ ಪ್ರಜಾಪೀಡಕ ರಾಜನನ್ನು ಕುರಿತು ಆ ಪದ ಉಪಯೋಗವಾಗಬಂತು.

ಸಾ. ೯೯೦ ಕ್ರೂರ ಕನ್ನಿಕೆಯರ್: ಇವರಿಗೆ ಯೂಮೆನಿದೆಯ್ (ಇಂ. ಉ. ಯುಮೆನಿಡೀಸ್), ಎರಿನೂಯೆಸ್ (ಇಂ. ಉ ಇರಿನಿಯೀಸ್) ಎಂದು ಮುಂತಾದ ಹೆಸರುಂಟು. ಇವರ ರೋಮನ್ ಹೆಸರಾದ ಫ್ಯೂರೀಸ್ ಎಂಬುದು ಇಂಗ್ಲಿಷಿನಲ್ಲಿ ಸಾಮಾನ್ಯವಾಗಿ ಬಳಕೆಯಾಗುತ್ತದೆ. ಇವರು ಮತ್ಸರ ತೀರಿಸುವ ದೇವತೆಗಳು. ತುಂಡುತುಂಡಾಗಿ ಕಡಿದುಬಿದ್ದ ಔರನೊಸ್ಸಿನ ರಕ್ತ ಸೋರಿ ಭೂದೇವಿಯಲ್ಲಿ ಹುಟ್ಟಿದವರೆಂದು ಹೆಸಾಯಿಡ್ಡೊ, ನಿಶಾದೇವಿಯ ಮಕ್ಕಳೆಂದು ಈಸ್ಕಿಲಸ್ಸೂ, ಕತ್ತಲೆಗೆ ಭೂದೇವಿಯಲ್ಲಿ ಹುಟ್ಟಿದವರೆಂದು ಸಾಫೊಕ್ಲೀಸೂ ಇವರನ್ನು ವರ್ಣಿಸುತ್ತಾರೆ. ಯುರಿಪಿಡೀಸಿನ ಪ್ರಕಾರ ಇವರ ಸಂಖ್ಯೆ ಮೂರು. ಇವರ ಮನೆ ಅಡಿನೆಲದಲ್ಲಿ; ಮನುಷ್ಯಸಮಾಜಧರ್ಮವನ್ನು ಮೀರಿದವರನ್ನು, ಅದರಲ್ಲೂ ಸಂಬಂಧಿಗಳ ರಕ್ತವನ್ನು ಚೆಲ್ಲಿದವರನ್ನು, ಶಿಕ್ಷಿಸುವುದು ಇವರ ಕೆಲಸ. ಇವರು ನ್ಯಾಯಮೂರ್ತಿಗಳಾದರೂ ನಿಷ್ಕರುಣಿಗಳು. ಹಾವುಕೂದಲು, ಕೆಂಗಣ್ಣು, ಮೊನೆಯುಗುರು, ಕರಿಯುಡುಪು, ಕೈಯಲ್ಲಿ ಕುದುಗೋಲು—ಭಯಂಕರ ಕರಾಳರೂಪ ಇವರದು.

ಸಾ. ೧೦೩೪ ಹಲವು ಪ್ರಧಾನ ದೇವತೆಗಳನ್ನು ಪಲಪೆಸರೊಡೆಯ (ಬಹುನಾಮಧಾರಿ) ಎಂದು ಕರೆಯುವುದು ಗ್ರೀಕ್ ಕವಿಗಳಲ್ಲಿ ವಾಡಿಕೆಯಾಗಿದ್ದರೂ,

ದಿಯೊನೂಸೊಸ್ ದೇವತೆಗೆ ಆ ವಿಶೇಷಣ ಬಹು ಉಚಿತವಾದದ್ದು. ಇವನಿಗೆ ಅರುವತ್ತಕ್ಕೆ ಮೇಲ್ಪಟ್ಟು ಹೆಸರುಗಳಿದ್ದಂತೆ ಕಂಡುಬರುತ್ತದೆ.

ಸಾ. ೧೦೩೫ ದಿಯೊನೂಸೊಸ್ಸಿನ ತಾಯಿ ಕಾದ್ಮೊಸಿನ ಮಗಳಾದ ಸೆಮೆಲೆ.

ಸಾ. ೧೦೩೬ ಈ ದೇವತೆಯ ತಂದೆ ಸ್ಯೂಸ್ (ಥೀ. ಈ. ಕಥೆ ನೋಡಿ)

ಸಾ. ೧೦೩೭ ದಕ್ಷಿಣ ಇಟಲಿಯಲ್ಲಿ ಹಲವು ಗ್ರೀಕ್ ನೆಲಸೆಗಳಿದ್ದುವು ; ಅಲ್ಲಿಯ ವಿಶೇಷ ಕೃಷಿ ದ್ರಾಕ್ಷಿ; ದಿಯೊನೂಸೊಸ್ ದ್ರಾಕ್ಷಾಧಿದೇವತೆ.

ಸಾ. ೧೦೩೯-೪೦ ಎಲ್ಯೂಸಿಸ್: ಪಟ್ಟಣದ ದೇಮೇತೇರಳಿಗೆ (ಇಂ. ಉ. ಡಿಮೀಟರ್) ಮೀಸಲಾದ ಕಣಿವೆ.

ದೇಮೇತೇರ್ : ಕ್ರೊನೊಸ್ಸಿನ ಮತ್ತು ರ್ಹಿಯಾ ದೇವಿಯ ಮಗಳು ; ಸ್ಯೂಸಿನ ಸಹೋದರಿ. ದವಸ, ಧಾನ್ಯ, ಕೃಷಿ ಮೊದಲಾದುವುಗಳ ಅಧಿದೇವತೆ. ಪೆರ್ಸೆಫೊನೆಯ ತಾಯಿ. ಎಲ್ಯೂಸಿಸ್ಸಿನವರಿಗೆ ತನ್ನ ರಹಸ್ಯೋಪಾಸನೆಯನ್ನು ಉಪದೇಶಿಸಿ ಅವರಿಂದ ಪೂಜಿಗೊಂಡಳು. ಇವಳನ್ನು ಆರೋಗ್ಯ, ಜನನ, ಮದುವೆ ಮೊದಲಾದುವುಗಳ ಅಧಿದೇವತೆಯಾಗಿ ಭಾವಿಸಿರುವುದೂ ಕಾಣಬಹುದು.

ಸಾ. ೧೦೪೩ ಮುಂ. ಈ ದೇವತೆಯನ್ನು ಮೊದಲು ಬರಮಾಡಿಕೊಂಡು ಸೇವೆ ಸಲ್ಲಿಸಿದ್ದು ಥೇಬಾಯ್ (ಥೀ. ಈ. ಕಥೆ ನೋಡಿ)

ಸಾ. ೧೦೪೬ ಪರ್ನಾಸೊಸ್ ಬೆಟ್ಟದಲ್ಲಿ ಡೆಲ್ಫಿಯ ಇಕ್ಕೆಲದ ಕಡಿದು ಬಂಡೆಗಳ ಮೇಲೆ ಎರಡು (೨೦೦೦ ಅಡಿ) ಎತ್ತರವಾದ ಕೋಡುಗಳಿವೆ.

ಸಾ. ೧೦೪೮ ಕೋರುಕ ಭಕ್ತರ್ : ಪರ್ನಾಸೊಸ್ ಬೆಟ್ಟದಲ್ಲಿಯ ಕೊರುಕೊಸ್ ಗುಹೆಯ ದಿಯೊನೂಸೊಸ್ ದೇವತೆಯ ಗುಡಿಗೆ ಬರುತ್ತಿದ್ದ ಹೆಂಗಸರು. ಇವರಿಗೆ ಇಂಗ್ಲಿಷಿನಲ್ಲಿ ಕಾರಿಸಿಯನ್ ದೇವಿಯರು ಎಂದು ಹೇಳುತ್ತಾರೆ.

ಸಾ. ೧೦೪೯ ಕಾಸ್ತಲಿಯ : ಪರ್ನಾಸೊಸ್ ಬೆಟ್ಟದಲ್ಲಿ ಡೆಲ್ಫಿಯ ಮೇಲುಗಡೆಯ ಕಡಿದುಗಳಿಂದ ದುಮುಕುವ ಒಂದು ಹೊಳೆ. ಇದರ ನೀರು ಡೆಲ್ಫಿ ದೇವಸ್ಥಾನಕ್ಕೆ ಪವಿತ್ರವಾಗಿತ್ತು.

ಸಾ. ೧೦೫೦ ನೂಸಾ (ಇಂ. ಉ. ನಿಸ): ಬಾಖೊಸ್ಸಿಗೆ ಮೀಸಲಾದ ಹಲವು ಬೆಟ್ಟಗಳ ಹೆಸರು.

ಸಾ. ೧೦೬೦ (ಥೀ. ಈ. ಕಥೆ ನೋಡಿ)

ಸಾ. ೧೦೬೪ ಯೂಬಿಯ ಮತ್ತು ಬಿಯೊಷಿಯಗಳ ನಡುವಣ ಕಡಲಭಾಗ (ಬಲು ಕಿರಿದು, ೪೦ ಅಡಿ ಅಗಲ), ಯೂರಿಪಸ್.

ಸಾ. ೧೦೭೮ (ಥೀ. ಈ. ಕಥೆ ನೋಡಿ)

ಸಾ. ೧೦೯೯ ಯೂರುದಿಕೆ : (ಇಂ. ಉ. ಯುರಿಡಿಸಿ)

ಸಾ. ೧೧೦೫ ಪಲ್ಲಸ್ (ಅಥೇನೆ): ಪ್ರಧಾನ ದೇವತೆಗಳಲ್ಲೊಬ್ಬಳು ; ಸ್ಯೂಸಿನ ಮಗಳು. ತನ್ನ ಮಕ್ಕಳು ತನಗಿಂತಲೂ ಬಲಿಷ್ಠರಾಗುವರೆಂಬ ಭವಿಷ್ಯವೊಂದನ್ನು ನಂಬಿ ಸ್ಯೂಸ್‌ದೇವನು ಬಸಿರಿಯಾಗಿದ್ದ ತನ್ನ ಹೆಂಡತಿ ಮೆತಿಸ್ಸಳನ್ನು ನುಂಗಿಬಿಟ್ಟನೆಂದೂ ಹೇಫಯ್‌ಸ್ತೊಸ್ಸೊ, ಪ್ರೊಮೇಥೆಯೂಸೊ ಸ್ಯೂಸಿನ ತಲೆಯನ್ನು ಕೊಡಲಿಯಿಂದ ಸೀಳಲು ಅಥೇನೆ ಸಶಸ್ತ್ರಳಾಗಿ ಹೊರಬಂದಳೆಂದೂ ಕಥೆ. ಇವಳು ಬುದ್ಧಿಶಕ್ತಿ, ಮಂತ್ರಣ, ಕುಶಲಯುದ್ಧ, ಸ್ತ್ರೀಕಲೆಗಳು, ಶಾಂತಿ, ಕೃಷಿ ಮೊದಲಾದ ಹಲವಕ್ಕೆ ಅಧಿದೇವತೆ. ಗ್ರೀಕ್ ಪಟ್ಟಣಗಳ ರಕ್ಷೆ ಇವಳಿಗೆ ಸೇರಿದ್ದು.

ಸಾ. ೧೧೧೯ ಕೊಡುವಟಿದೇವಿ ; ಹೆಕತೆ ; ಇವಳು ಪೆರ್ಸಯೊಸ್ ಮತ್ತು ಅಸ್ತೆರಿಯೆಯರ ಮಗಳು ; ನೆಲ, ನೀರು, ಬಾನು—ಎಲ್ಲದರ ಮೇಲೆಯೂ ಆಳಿಕೆಯುಳ್ಳವಳು ; ಇವಳನ್ನು ಅರ್ತೆಮಿಸ್ಸಳಿಂದ ಅಭಿನ್ನವಾಗಿ ಭಾವಿಸಿರುವುದೂ ಉಂಟು. ಮಂತ್ರ, ಮೋಡಿ ಮೊದಲಾದ ಇಂದ್ರಜಾಲಗಳ ಅಧಿದೇವತೆ. ಬೆಳುದಿಂಗಳಿನಲ್ಲಿ ಕೂಡುದಾರಿಗಳಲ್ಲಿ ಪ್ರೇತಗಳು, ನರಕದ ನಾಯಿಗಳು ಮೊದಲಾದ ಪರಿವಾರದೊಡನೆ ಕಾಣಿಸುತ್ತಾಳೆ. ಅಂಥ ಕೂಡುದಾರಿಗಳಲ್ಲಿ ತಿಂಗಳ ಕೊನೆಯ ದಿನ ಬಲಿಹಾಕುತ್ತಿದ್ದರು. ಮೂರು ದಾರಿಗಳಲ್ಲೂ ನೋಡುವುದಕ್ಕೆ ಅನುಕೂಲಿಸುವಂತೆ ಇವಳಿಗೆ ಬೆನ್ನಿಗೆ ಬೆನ್ನಾಗಿ ಮೂರು ಮೈಗಳಿದ್ದುವು.

ಪ್ಲೌತೋನ್ : ಇವನಿಗೆ ಮತ್ತೊಂದು ಹೆಸರು ಹಯ್‌ದೇಸ್ (ಸಾ. ೫೫೧ ಟಿಪ್ಪಣಿ ನೋಡಿ)

ಸಾ.೧೨೧೨ ಕೊತ್ತನ್ನು ಮಗ ಎಂದು ಕರೆಯುವುದು ಗ್ರೀಕರಲ್ಲಿ ವಾಡಿಕೆಯಾಗಿತ್ತು.

ಸಾ. ೧೨೨೯ (ಥೀ. ಈ. ಕಥೆ ನೋಡಿ)

ಶಬ್ದಕೋಶ

[ಅಂಕಿ ಸಾಲು ತೋರಿಸುತ್ತದೆ]

ಅ

ಅಗಪಡು ೫೩ ಒಳಪಡು, ಅಧೀನವಾಗು
ಅಗುಟ್ ೨೩೦ (ಗುದ್ದಲಿಯಿಂದ) ಅಗೆ
ಅಡಗು ೯೩೦ ಮಾಂಸ
ಅಡಸು ೮೧ (ಎಡೆಯಲ್ಲಿ) ಬಂದು ಸೇರು, ಅಡಚಿಕೊ
ಅಡಿನೆಲಂ ೭೫೧ ಅಧೋಲೋಕ (Hades)
ಅಡೆ ೧೯೧ ಪಡೆ, ಹೊಂದು
ಅಣಕಂ ೮೮೪ ಅಣಕದ ನುಡಿ, ಕೆಣಕುವ ನುಡಿ
ಅಣಿ ೩೩೫ ಅಣಿಮಾಡು, ಕಟ್ಟು, ರಚಿಸು
ಅಣೆ ೫೬೮ ಕಾಡು
ಅಣ್ಮು ೬೪೪ ಸಾಹಸಮಾಡು
ಅದುಪತ್ತಿ ೧೭೭ ಅದನ್ನು ಹಿಡಿದು, ಆ ಕಾರಣದಿಂದ
ಅನ್ನರ್ ೬೭೧ ಅಂಥವರು
ಅನ್ನೆವರಂ ೪೦೪ ಅಲ್ಲಿಯವರೆಗೆ
ಅರಕುಡಿ ೮೭೧ ರಾಜವಂಶ
ಅರಮಗಳ್ ೮೭೧ ರಾಜಪುತ್ರಿ
ಅರಮಣೆ ೧೬೦ ಸಿಂಹಾಸನ
ಅರಿದು ೧೨೩ ಅಸಾಧ್ಯ
ಅರುಳ್ ೧೧೨೦ ಪ್ರಸಾದ, ಕೃಪೆ, ಅನುಗ್ರಹ
ಅಱಂ ೧೯ ಧರ್ಮ
ಅಱಕೆ ೫ ಕಡಮೆ, ಕೊರತೆ, ನ್ಯೂನತೆ
ಅಱಗುಲಿ ೧೯೦ ಧರ್ಮಘಾತಕ
ಅಱವಟಿಯರ್ ೧೯೨ ಧರ್ಮಮಾರ್ಗಿಗಳು
ಅಱಸು ೪೨ ಹುಡುಕು
ಅಱಿವಿಲ್ಮೆ ೯೬೭ ಅಜ್ಞಾನ
ಅಱಿವುಮರುಳಾಗು ೫೩೮ ಬುದ್ಧಿಭ್ರಮೆಯುಂಟಾಗು
ಅಲೆ ೧೬ ಕಾಡು, ಹಿಂಸೆ ಕೊಡು
ಅಲ್ಲಿಯೋರ್ ೫೩೪ ಪರ (ಅಧೋ) ಲೋಕದವರು
ಅಹಂ ೪೪೩ ಅಹಂಕಾರ
ಅಳವು ೬೩೯ ಶಕ್ತಿ, ಪ್ರಮಾಣ
ಅಳಿಪು ೨೦೪ ಆಸೆ; ೨೮೯ ಆಸೆಮಾಡು
ಅಳ್ಕು ೬೭ ಅಳುಕು, ದಿಗಿಲುಬೀಳು, ಹೆದರು
ಅೞಲ್ ೪ ಬೇಗುದಿ, ದುಃಖ, ವ್ಯಥೆ
ಅೞಿ ೪೨ ಸಾಯಿ; ೨೯೧ ಕೆಡು; ೩೦೩ ಕೆಟ್ಟ, ದುರ್
ಅೞಿಪ ೭೫೮ ಸಾಯಿಸುವ, ಕೆಡಿಸುವ
ಅೞಿಪಾಡು ೫೧೭ ದುರ್ಗತಿ
ಅೞಿಪಾಲ್ ೮೧೮ ದುರದೃಷ್ಟ, ದೌರ್ಭಾಗ್ಯ
ಅೞಿವೆಂಡಿರ್ ೫೪೭ ಕೆಟ್ಟ ಹೆಣ್ಣು
ಅೞ್ಕಱ್ ೨೭೩ ಪ್ರೀತಿಸು
ಅೞ್ಕೆ ೧೧೩೦ ಅಳುವು, ರೋದನ

ಆ

ಆಣ್ ೫೦ ಗಂಡಸು (ಪುಂ, ಗಂಡು)
ಆನ್ ೩೮೮ ಹೊಂದು
ಆರ್ ೯೪ ಕೂಗು, ಅಬ್ಬರಿಸು
ಆರಯ್ ೩೨ ವಿಚಾರಮಾಡು, ಯೋಚಿಸು
ಆರಯ್ಕೆ ೬೮೪ ವಿಚಾರ ಯೋಚನೆ
ಆಱ್ ೩೨ ಸಮರ್ಥವಾಗಿರು
ಆಱ್ಪು ೬೪ ಸಾಮರ್ಥ್ಯ, ಶಕ್ತಿ, ಅಪ್ಪು
ಆಲ್ ೧೦೭೩ ಕೂಗು
ಆಳ್ಕುಡಿ ೧೧೬೫ ಮನುಷ್ಯಕುಲ
ಆಳ್ದನ್ ೬ ಆಳಿದವನು, ಒಡೆಯ, ಪ್ರಭು

ಇ

ಇಡಿ ೮೬೩ ತುಂಬು, ವ್ಯಾಪಿಸು
ಇತ್ತಣವರ್ ೬೦ ಇಲ್ಲಿಯವರು, ಈ ಲೋಕದವರು
ಇದಿರ್ವಿೞ್ ೬೪ ಎದಿರುಬೀಳು, ಪ್ರತಿಭಟಿಸು
ಇನಿಯದು ೧೨ ಸಂತೋಷಕರವಾದ್ದು, ಸವಿಯಾದ್ದು
ಇನಿಯಳ್ ೧೨೧೭ (ಪ್ರೀತಿಪಾತ್ರಳಾದ) [ಹೆಂಡತಿ
ಇನ್ನೆವರಂ ೧೧ ಇಲ್ಲಿಯವರೆಗೆ
ಇರವು ೨೮ ಪಾಡು, ಸ್ಥಿತಿ, ಅವಸ್ಥೆ
ಇರ್ಬಗೆ ೩೬೫ ಎರಡು ಮನಸ್ಸು, ಕಳವಳ
ಇರ್ಮುಡಿಕೋಡು ೧೦೪೬ ಎರಡು ನೆತ್ತಿಯ ಶಿಖರ
ಇರ್ವೊಱೆ ೪೩ ಎರಡು ಸಂಬಂಧ
ಇಱಿ ೪೨ ಚುಚ್ಚು
ಇಲ್ಲಿಯೋರ್ ೫೩೪ ಈ ಲೋಕದವರು
ಇಳಿದು ೪೫೭ ಸುಲಭ

ಉ

ಉಗಿ ೪೬ ಚಿಮ್ಮು, ಚೆಲ್ಲು
ಉರಿಯುಸಿರ್ ೧೦೬೯ ಜ್ವಾಲೆಯೇ ಶ್ವಾಸವಾದ
ಉಱು ೧೮೧ ಸೇರಿರು, ತಕ್ಕದ್ದಾಗಿರು, ಯೋಗ್ಯವಾಗಿರು
ಉಱುಬು ೧೨೦ ಉರವಣಿಸು, ರಭಸದಿಂದ ಬರು, ಕೆರಳು
ಉಸಿರಿ ೩೨೩ ಉಸಿರುಳ್ಳದ್ದು, ಪ್ರಾಣಿ; ೯೮೫ ಇನ್ನೂ ಉಸಿರಾಡುವ ವ್ಯಕ್ತಿ
ಉೞಿ ೨೯೧ ಬದುಕು; ೬೭೩ ಮಾರು; ೬೭೯ ಬಿಡು
ಉೞಿಕೆ ೧೧೨೨ ಉಳಿದದ್ದು, ಅವಶೇಷ

ಎ

ಎಗ್ಗತನಂ ೮೦ ಮೂರ್ಖತನ
ಎಚ್ಚಪಿರ್ ೯೫೨ (ಇಸು) ಹೊಡೆಯುವಿರಿ, ಎಸೆಯುವಿರಿ
ಎಣೆ ೩೮೦ ಈಡು, ಜೋಡು, ಸಮ
ಎಣೆಸಾವು ೧೫೯ ಸಮಸಾವು (ಇಬ್ಬರೂ ಒಂದೇ ರೀತಿ ಸತ್ತದ್ದರಿಂದ)
ಎಣ್ಣು ೯೭೮ ಎಣಿಸು, ಬಗೆ
ಎಂಬೊೞಲ್ ೧೫೦ ನಮ್ಮ ಹೊಳಲು, ರಾಜ್ಯ
ಎರೆ ೨೩ ಉಣಿಸು, ಆಹಾರ; ೫೩ ಬೇಡು, ಪ್ರಾರ್ಥಿಸು
ಎರೆಮಿಗಂ ೨೩೭ ಮಾಂಸಾಹಾರಿ
ಎೞಂಕೆ ೯೨೭ ರೆಕ್ಕೆ
ಎೞಪ ೨೩ ಎರಗುವ, ಬೀಳುವ
ಎಱೆತನಂ ೪೮೩ ದೊರೆತನ, ಪ್ರಭುತ್ವ
ಎಱೆಯನ್ ೯೭೩ ದೊರೆ, ಒಡೆಯ
ಎಸಕಂ ೫೮ ಕೆಲಸ
ಎಸಗು ೫೬ ನಡಸು, ಮಾಡು
ಎಸೆದು ೧೫೦ ಎಸೆದಾಡಿ, ಅಲೆಹೊಡೆತಕ್ಕೆ ಸಿಕ್ಕಿ
ಎಳವೆಯ್ಯಳ್ ೮೭೬ ತರುಣಿ
ಎೞೆ ೨೩೨ ಎಳೆದ ಗುರುತು, ಜಾಡು
ಎಚ್ಚಱ್ ೪೦೦ ಎಚ್ಚರ
ಎತ್ತರಂ ೩೫೮ ಎತ್ತರ, ಉಚ್ಚತೆ
ಎಬ್ಬಿಸು ೪೦೧ ಎಬ್ಬಿಸು

ಒ

ಒಕ್ಕಲಾಗು ೩೬೦ ಭಾಗಿಯಾಗು, ಸೇರಿಬಾಳು
ಒಕ್ಕಡು ೧೨೫ ಬಡಿದುಹಾಕು
ಒಗೆ ೨೯ ಹುಟ್ಟು, ಜನಿಸು
ಒಗೆತಂ ೪೫೪ ಹುಟ್ಟು, ಜನನ
ಒಚ್ಚಿರೆ ೧ (ಒರ್+ಸಿರೆ) ಒಂದೇ ಧಮನಿ, ರಕ್ತನಾಳ
ಒಡಮೆ ೬೩೮ ಒಡವೆ, ಆಸ್ತಿ
ಒಣರ್ ೩೦೦ ಎಣಿಸು, ಭಾವಿಸು
ಒಪ್ಪಮಿಡು ೮೪೯ ಅಲಂಕರಿಸು
ಒರೆ ೨೨೪ ಹೇಳು
ಒರೆಯಿಡು ೧೬೨ ಪರೀಕ್ಷಿಸು
ಒಲ್ ೫೯ ಪ್ರೀತಿಸು

ಒಲ್ಮೆ ೫೯ ಪ್ರೀತಿ
ಒಸಗೆ ೫೫೧ ಉತ್ಸವ, ಸಂಭ್ರಮ
ಒಸರ್ ೩೯೭ ಊರು, ಸ್ರವಿಸು
ಒಸೆ ೧೪೬ ಪ್ರಸಾದಕೊಡು, ಅನುಗ್ರಹಿಸು, ಒಲಿ
ಒಳಗು ೨೦೮ ಮನಸ್ಸು
ಒೞ್ಕು ೭೬೯ ಉಕ್ಕಿಹರಿ, ಪ್ರವಹಿಸು

ಕ

ಕಂಚಱೆ ೮೭೭ ಕಂಚಿನ ಗೂಡು
ಕಟ್ಟಳೆ ೪೭ ವಿಧಿ, ಶಾಸನ, ಆಜ್ಞೆ
ಕಟ್ಟಾಣೆ ೨೫ ಕಠಿನ ಆಜ್ಞೆ
ಕಟ್ಟೊಲ್ಮೆ ೬೬ ಹೆಚ್ಚು ಪ್ರೀತಿ
ಕಡಂ ೫೭೪ ಋಣ, ಕರ್ತವ್ಯ
ಕಡಲಾ ಕಾಲ್ವಾಯ್ ೧೦೬೪ ಕಡಲುಗಾಲುವೆ
ಕಡುಮಿಗಿಲ್ ೧೦೯ ಅತಿ ಹೆಚ್ಚು, ವಿಪರೀತ
ಕಡೆಗಣ್ಚು ೪೭ ಕಡೆಯಾಗಿ ಕಾಣು, ತಿರಸ್ಕರಿಸು
ಕಣಿಯನ್ ೯೬೯ ಕಣಿ ಹೇಳುವವನು. ಭವಿಷ್ಯಜ್ಞ
ಕಣೆ ೬೨೬ ಬಾಣ
ಕದಪು ೫೦೬ ಕೆನ್ನೆ
ಕಪ್ಪಲ್ ೬೬೪ ಹಡಗು
ಕಯ್ದು ೯೯ ಆಯುಧ
ಕರೆ ೧೪೮ ಆಹ್ವಾನ
ಕಱುಬು ೫೩೦ ಹೊಟ್ಟೆಕಿಚ್ಚುಪಡು, ಅಸೂಯೆಪಡು
ಕಱೆ ೬೪೧ ಕಳಂಕ, ದೋಷ
ಕರ್ಚು ೨೩೭ ತೊಳೆ
ಕರ್ಬೊನ್ ೨೪೮ ಕಬ್ಬಿಣ
ಕಲಿ ೧೭೯ ಶೂರ
ಕಲ್ಲಱೆ ೭೯೨ ಕಲ್ಲಿನ ಗೂಡು, ಸಮಾಧಿ, ಗೋರಿ
ಕವರ್ ೬೧೩ ಕಸಿ, ಅಪಹರಿಸು, ಕಿತ್ತುಕೊ
ಕಳ್ ೧೧೯, ಮದ್ಯ, ಹೆಂಡ
ಕಳನ್ ೮೮೨ ಯುದ್ಧರಂಗ
ಕೞಲ್ ೬೬೧ ಉದಿರು, ಕಳಚಿ ಬೀಳು
ಕೞಿದರ್ ೨೦ ಸತ್ತವರು
ಕೞಿಪು ೧೪೮ ಕಳುಹು, ಕಳಿಸು
ಕೞ್ಮು ೫೦೬ ತೊಳೆ
ಕಾಣ್ಕೆ ೧೨೯ (ಕೊಟ್ಟ) ಕಾಣಿಕೆ ಕರ; ೪೪೨ ಕಾಣುವುದು, ದರ್ಶನ
ಕಾನ್ ೭೨೭ (ಬೆಟ್ಟದೆಡೆಯ) ಕಾಡು
ಕಾನ್ಮಿಗಂ ೩೨೬ ಕಾಡುಮೃಗ
ಕಾಯ್ಪು ೮೫೯ ಕಾವು, ಬಿಸಿ, ತೀಕ್ಷ್ಣತೆ
ಕಾಲ್ವಾಯ್ ೧೦೬೪ ಕಾಲುವೆ
ಕಿಟ್ಟ ೧೬೦ ಹತ್ತಿರ
ಕಿೞ್ನೆಲಂ ೨೦ ಅಧೋಲೋಕ, ಪಿತೃಲೋಕ (Hades)
ಕೀೞ್ತನಂ ೨೯ ನೀಚತನ
ಕೀೞ್ವಟೆ ೨೯೧ ದುರ್ಮಾರ್ಗ
ಕುಡಿ ೧೫೯ ಮನೆತನ, ವಂಶ
ಕುಡಿಪೞೆಯರ್ ೮೬೭ ವಂಶದ ಪುರಾತನರು, ಮೊದಲ ತಲೆಯವರು
ಕುತ್ತಂ ೩೪೭ ವ್ಯಾಧಿ, ರೋಗ, ಬೇನೆ
ಕುಱುದಱೊಳ್ ೪೩೦ ಸ್ವಲ್ಪದಲ್ಲಿ, ಹ್ರಸ್ವವಾಗಿ
ಕುಱಿಪಿಡು ೨೯೫ ಗುರುತಿಸು, ನಿರ್ದೇಶಿಸು
ಕುಱುದಾರಿ ೨೧೪ ಚಿಕ್ಕ (ಹ್ರಸ್ವ) ದಾರಿ
ಕುಳಿರ್ಪ ೭೩ ತಣ್ಣಗೆಮಾಡುವ
ಕೂರ್ ೧೦೧ ಹರಿತವಾದ
ಕೂರಂಬು ೩೩೮ ಹರಿತವಾದ ಬಾಣ
ಕೂರುಸಿರಿ ೩೨೩ ಕ್ರೂರಮೃಗ
ಕೆಂಗದಿರ್ ೮೫ ಕೆಂಪು ಕಿರಣ
ಕೆಡಪು ೭೫೦ ಕೆಡವು, ಬೀಳಿಸು
ಕೆಡೆ ೫೯ ಬೀಳು
ಕೆಡೆಯೆಡೆ ೭೯೨ (ಕೊನೆಯಸಲ) ಬಿದ್ದುಕೊಳ್ಳುವ ಸ್ಥಳ, ಮಲಗುವ ಎಡೆ
ಕೆಲಂ ೨೫೮ ಪಕ್ಕ, ಬಳಿ

ಕೆಲರಕ್ಕೆ ೯೮ ಪಕ್ಷರಕ್ಷೆ
ಕೆಲೆ ೧೧೫ ಹಿಗ್ಗಿ ಕೂಗು, ನಲಿದು ಕೂಗು
ಕೆೞಮನೆ ೮೧೬ ಅಧೋಲೋಕ (Hades)
ಕೆೞವನ್ ೯೧೫ ಮುದುಕ
ಕೇರಿ ೨೭ ಬೀದಿ
ಕೊನರಿಸು ೧೧೩೮ (ಚಿಗುರಿಸು) ಸಂತೋಷ ಉಂಟುಮಾಡು
ಕೊರ್ಚು ೮೮೩ ಭೇದಿಸಿ ನುಗ್ಗು
ಕೊಳ್ಗೆ ೨೯೧ ತೆಗೆದುಕೊಳ್ಳುವುದು, ಗ್ರಹಣ
ಕೊಡೆಗಂಪು ೩೯೮ ಕೊಳೆತದ ನಾತ
ಕೋಯಿಲ್ ೧೪೦ ದೇವಸ್ಥಾನ, ಗುಡಿ

ಗ

ಗಱಿವೆತ್ತ ೯೯೯ ಗರಿಪಡೆದ
ಗೞಪು ೧೧೦ ಗಳಹು, ಹರಟು
ಗೆಡೆಗೊಳ್ ೧೦೭೫ ಜತೆಗೊಳ್ಳು
ಗೆಯ್ಮೆ ೨೫೪ ಕೆಲಸ

ಚ

ಚೆಂಬೊನ್ ೪೧೭ ತಾಮ್ರ

ಜ

ಜಡಿ ೪೦೨ ಗದರಿಸು, ಹೆದರಿಸು
ಜರ್ವು ೬೪೩ ಜರ್ಬು
ಜಾಗರಮಾಡು ೭೨೬ ಜಾಗರಣೆಮಾಡು
ಜೋಡು ೮೯ (ಉಕ್ಕಿನ) ಕವಚ
ಜೋಲ್ ೪೨೫ ಬಗ್ಗು ; ೪೫೭ ಶಕ್ತಿಗುಂದು

ತ

ತಗೆ ೨೦೭ ತಂಗು, ನಿಲ್ಲು (ನಾಮಪದ) ; (ಪಲತಗೆಗಳ್=Many stops)
ತಡವೆ ೩೮೩ ಸಲ, ಸರದಿ
ತಣಿ ೬೦ ತೃಪ್ತಿಹೊಂದು
ತಣಿಯೆಱೆ ೨೨೮ ತರ್ಪಣಕೊಡು
ತನಿಯಾಗಿ ೮೩೫ ಒಂಟಿಯಾಗಿ
ತರಂ ೭೭ ಸರಿ, ಕ್ರಮ
ತಱಿಸಲ್ ೬೯೬ ನಿಶ್ಚಯಿಸು
ತಱಿಸಲವು ೨೫೬ ನಿಶ್ಚಯ
ತಳಿ ೧೦೪೪ ಬಿತ್ತು
ತಳಿ ೧೬೧ ಧರಿಸು
ತಳ್ವು ೨೧೧ ತಡಮಾಡು
ತೞ್ಕೆ ೫೯ ತಕ್ಕೆ, ಆಲಿಂಗನ
ತೞ್ಬು ೧೦೫೧ ತಬ್ಬು, ಆಲಿಂಗಿಸು
ತಿಟ್ಟು ೧೦೨೯ ಎತ್ತರವಾದ ಸ್ಥಳ, ದಿಣ್ಣೆ
ತಿಱಿ ೧೧೨೧ ಕೊಯ್ಯು
ತುಡುಕು ೧೧೫ ಆತುರದಿಂದ ಹಿಡಿ(ದುಕೊ)
ತುಯ್ ೩೧೨ ಎಳೆದಾಡು
ತುರನರ್ ೯೭೨ ನಿರಂಕುಶಾಧಿಕಾರಿಗಳು (Tyrants)
ತುಱುಗಲ್ ೪೦೬ ಗುಂಪು
ತೆರೆಮಸಗು ೧೧೩ (ಕ್ಷುಬ್ಧ ಸಮುದ್ರದಂತೆ) ಅಲೆ ಉಕ್ಕು. ಹೆಚ್ಚಾಗು, ಕೆರಳು
ತೆಱೆದು ೭೧ ಸ್ಪಷ್ಟವಾಗಿ
ತೊಡವು ೬೫೩ ಆಭರಣ, ಭೂಷಣ
ತೊಣೆನಡೆಯರ್ ೯೧೨ ಜತೆನಡಗೆಯುಳ್ಳವರು
ತೊನೆ ೧೦೧ ತೂಗು, ತೂಗಿ ನಾಟು
ತೊಳಪ ೪೦೩ ತೊಳಗುವ, ಪ್ರಕಾಶಿಸುವ
ತೊೞಲ್ ೨೧೩ ಅಲೆ, ಹಿಂಸೆಪಡು
ತೊೞ್ತು ೧೮೫ ತೊತ್ತು, ದಾಸ, ಗುಲಾಮ (ತೊೞ್ತುವೆಸನ್ = ದಾಸ್ಯ, ಗುಲಾಮಗಿರಿ)
ತೋಡು ೫೪೬ ಈಡು, ಜೋಡು, ಸಮ

ದ

ದೞವಾಯ್ ೧೨೬ ದಳವಾಯಿ, ಸೇನಾಪತಿ
ದೀವಿ ೮೯೨ ದ್ವೀಪ
ದುಗುಡಂ ೧೧೩೪ ದುಃಖ, ವ್ಯಥೆ

ನ

ನಚ್ಚು ೩೦೭ ಆಸೆ, ಭರವಸೆ
ನಂಜಿಡಿದ ೫೦೭ ವಿಷಪೂರಿತ

ನಣ್ಪುನೆತ್ತರ್ ೪೬ ನಂಟಿನ ರಕ್ತ, ಸಂಬಂಧಿಗಳ ರಕ್ತ
ನರೆಗಡಲ್ ೩೧೩ ನರೆಬಣ್ಣದ ಸಮುದ್ರ
ನಲ್ ೫೭ ಒಳ್ಳೆಯ, ಸು-
ನಲಿ ೨೩ ಸಂತೋಷಿಸು
ನಲ್ಮೆ ೩೫೨ ಒಳ್ಳೆಯದು, ಒಳ್ಳಿತು, ಒಳ್ಪು
ನಲ್ಲದು ೮೦ ಒಳ್ಳೆಯದು
ನಲ್ಲಪಾಲ್ ೩೮೪ ಒಳ್ಳೆಯ ಅದೃಷ್ಟ, ಸೌಭಾಗ್ಯ
ನವಿರ್ ೯೯ ಕೂದಲು
ನವಿರೇೞ್ ೯೨೧ ಗುಡಿಗಟ್ಟು, ರೋಮಾಂಚವಾಗು
ನಸೆ ೭೩೮ ಕಾಮ
ನಾಣ್ಗೆಯ್ ೧೮೯ ನಾಚಿಕೆಪಡಿಸು, ಅವಮಾನಗೊಳಿಸು
ನಾಣ್ಮೆ ೬೫೮ ನಾಚಿಕೆ
ನಾೞ್ನುಡಿ ೯೬೫ ನಾಣ್ನುಡಿ, ಗಾದೆ
ನಿಡಿದು ೨೧೪ ಉದ್ದ
ನಿಡುನಾಲಗೆ ೧೧೦ ಉದ್ದವಾದ (ಜಂಬದ) ನಾಲಗೆ
ನಿಱಿ ೧೯ ಕ್ರಮ, ನ್ಯಾಯ
ನಿಱಿಗೆ ೬೩೦ ಕ್ರಮ
ನಿಱಿಸು ೪೬೧ ಸ್ಥಾಪಿಸು
ನಿರ್ನೆರಂ ೧೧೦೧ ಕಾರಣವಿಲ್ಲದೆ, ಸುಮ್ಮನೆ
ನಿಸಿದಿ ೨೩೫ ಸಮಾಧಿ, ಗೋರಿ
ನೀರುಸಿರಿ ೩೨೪ ನೀರು ಪ್ರಾಣಿ, ಜಲಚರ
ನುಡಿಯಾಟಂ ೩೦೧ ನುಡಿಗಳನ್ನು ಹೊರಳಿಸಿ ಪ್ರಯೋಗಿಸುವುದು (Play upon words)
ನುಣ್ಣನಪ್ಪ ೩೫೦ ಸೂಕ್ಷ್ಮವಾದ
ನೆಗೞ್ ೫೪ ನಡೆ, ಆಚರಿಸು
ನೆಗೞ್ಕೆ ೨೨೩ ನಡೆದದ್ದು, ವಿದ್ಯಮಾನ, ಸಂಗತಿ
ನೆಣಂ ೯೩೦ ಕೊಬ್ಬು
ನೆತ್ತರ್ ೧ ರಕ್ತ
ನೆತ್ತಿ ೧೧೯ ತಲೆ; ೯೦೯ ಶಿಖರ
ನೆಮ್ಮು ೧೬೬ ಆಧಾರಮಾಡಿಕೊ, ಆನಿಕೊ, ಭಾರಬಿಡು
ನೆರಂ ೧೨೪ ನೆರವು, ಸಹಾಯ
ನೆರನೆಮ್ಮು ೧೧೩ ಸಹಾಯವಾಗಿಟ್ಟುಕೋ, ನೆರವೆಂದು ನಚ್ಚು
ನೆರಪು ೧೪೯ ಸೇರಿಸು, ಕೂಡಿಸು
ನೆರೆನೆಲನ್ ೮೯೬ ಪಕ್ಕದೂರಿನವನು
ನೆರೆಪೊನಲ್ ೬೬೦ ಪ್ರವಾಹ ಬಂದ ಹೊಳೆ
ನೆರೆಯರ್ ೪೬೦ ನೆರೆ (ಹೊರೆ)ಯವರು
ನೆಱಪು ೩ ಪೂರ್ಣಮಾಡು
ನೆಱೆ ೧೪ ಚೆನ್ನಾಗಿ, ಪೂರ್ಣವಾಗಿ
ನೆಱೆಗೊಳ್ ೮೪೪ ಪೂರ್ಣಗೊಳ್ಳು
ನೇಣ್ಗೋಣರ್ ೨೮೭ ನೇಣು (ಉರಲು) ಹಾಕಿಕೊಂಡ (ಕುತ್ತಿಗೆಯ)ವರು
ನೇರಂ ೩೯೯ ದಿಕ್ಕು
ನೇರ್ಪು ೬೮ ಸರಿ
ನೇರ್ಮೆ ೧೯ ಸರಿ
ನೇಲ್ ೧೧೪೨ ನೇಲು, ತೂಗು
ನೇಸಱ್ ೮೫ ಸೂರ್ಯ

ಪ

ಪಕ್ಕಾಗು ೭೮ ಭಾಗಿಯಾಗು, ಗುರಿಯಾಗು
ಪಕ್ಕು ೩೮೮ ಹಕ್ಕು
ಪಗಲ್ ೯ ದಿನ
ಪಗೆಸುಯ್ ೧೨೦ ಹಗೆಯನ್ನು (ಉಸಿರಿನಲ್ಲಿ) ಕಾರು (ನಿಡುಸುಯ್, ಬಿಸುಸುಯ್ ಮೊದಲಾದವುಗಳಂತೆ)
ಪಟ್ಟು ೫೯ ಮಲಗಿ
ಪಡಪು ೫೨೭ ಪಡೆದದ್ದು, ಲಾಭ
ಪಡಲಿಡು ೪೦೭ ಬೀಳಿಸು, ಉದಿರಿಸು
ಪಡೆ ೧೩ ಸೈನ್ಯ
ಪಡೆಯೊಡೆಯನ್ ೬ ಸೇನಾಪತಿ
ಪತ್ತುಗೆ ೧೫೬ ಹಿಡಿತ, ನಿಷ್ಠೆ, ಭಕ್ತಿ
ಪದನ್ ೬೭೯ ಹದ
ಪದುಳಂ ೨೫೩ ಕ್ಷೇಮ, ನೆಮ್ಮದಿ

ಪಯ್ಯನ್ ೯೩೪ ಹುಡುಗ
ಪರಪಿಡು ೬೫೦ ಹರಡು
ಪರಪು ೫೬೪ ಹರವು, ವಿಸ್ತಾರ (Expanse)
ಪರಿ ೯೧ ಓಡು ; ೧೦೪೯ ಪ್ರವಹಿಸು
ಪರಿಗೆ ೯೦ ಗುರಾಣಿ
ಪಱಿ ೩೮೮ ಕತ್ತರಿಸು
ಪಱವೆ ೩೭೨ ಹಕ್ಕಿ (ಪಾಱು=ಹಾರು)
ಪಲರ್ಮೆ ೨೦೭ ಹಲವು ಸಾರಿ
ಪಸಿಯೊರಟು ೪೫೪ ರಾಗದ್ವೇಷಾದಿ ಮನಃ ಕಷಾಯಗಳು ಸಂಸ್ಕೃತವಾಗದಿರುವ
ಪೞಸು ೬೧೧ ಹಳಸು (Become Stale)
ಪೞಿ ೪೦ ಹಳಿವು, ನಿಂದೆ, ಅಪಕೀರ್ತಿ
ಪೞು ೩೨೭ ಕಾಡು
ಪೞನರೆಯ ೯೧೧ ಬಹಳ ಹಳೆಯದಾಗಿ ತಲೆ ನರೆತ, ಬಹು ಪುರಾತನ
ಪಚ್ಕೆ ೪೧೩ ಹಾಸಿಗೆ ; ೮೧೧ ಮಲಗುವುದು, ಶಯನ
ಪಾರ್ ೨೨ ನೋಡು
ಪಾಸಱೆ ೧೧೨೪ ಹಾಸುಗಲ್ಲು, ಕಲ್ಲು ಹಾಸಿಗೆ
ಪಾಸು ೭೨೫ ಹಾಸು, ಹಾಸಿಗೆ
ಪಿಕ್ಕು ೯೩೯ ಹಿಕ್ಕು, ಕಿತ್ತುತೆಗೆ
ಪಿನ್ನಣಿಕೆ ೩೭೬ ತರುವಾಯದ ಯೋಚನೆ (After-thought)
ಪಿನ್‌ನೋಯ್ ೨೧೨ ಪಶ್ಚಾತ್ತಾಪಪಡು
ಪಿರಿದಾಗಿ ೭೨ ಹೆಚ್ಚಾಗಿ
ಪಿರಿದುಮೆಡೆ ೬೬೮ ಹೆಚ್ಚು ಪಾಲು, ಪ್ರಾಯಿಕ
ಪಿರಿದೆಣಿಸು ೧೬೯ ಹೆಚ್ಚೆಂದು ತಿಳಿ
ಪಿರಿಯಪಾಲ್ ೨೯೦ ಪ್ರಾಯಶಃ, ಪ್ರಾಯಿಕವಾಗಿ
ಪಿರ್ಗು ೪೬೩ ಹಿಗ್ಗು
ಪೀರ್ ೧೦೫ ಹೀರು, ಕುಡಿ
ಪುಟ್ಟಱಿವು ೫೪೦ ನೈಸರ್ಗಿಕ ಬುದ್ಧಿ
ಪುದುಕುಱಿ ೩೬೪ ಕೂಡಿ ಯೋಚಿಸು
ಪುದುವಪ್ಪ ೯೮೬ ಸೇರಿದ
ಪುದುವಾೞ್ ೩೬೩ ಕೂಡಿಬಾಳು, ಒಂದೇ ಮನೆಯಲ್ಲಿ ವಾಸಮಾಡು
ಪುರಿನೇಣ್ ೪೪ ಹೊಸೆದ ಹಗ್ಗ
ಪೂಣ್ ೩೫೫ (ಪ್ರತಿಜ್ಞೆಮಾಡಿ) ಕೈಕೊಳ್ಳು
ಪೂೞ್ಕೆ ೪೬೮ (ಹೆಣ) ಹೂಳುವುದು
ಪೆಣೆ ೩೫೭ ಹೆಣೆ, ಸೇರಿಸು, ಓತಪ್ರೋತಮಾಡು
ಪೆತ್ತಪೆನ್ ೪೮೧ ಪಡೆಯುತ್ತೇನೆ (ಪೆಱು)
ಪೆರ್ಕುಡಿ ೨೯ ದೊಡ್ಡ ವಂಶ
ಪೆರ್ಮನೆ ೨೯ ದೊಡ್ಡ ವಂಶ
ಪೆರ್ಮೆ ೧೭೬ ಶ್ರೇಷ್ಠತೆ, ಗೌರವ, ಹಿರಿಮೆ
ಪೆರ್ಮೆಯಾಳ್ ೧೮೧ ಮಹಾಪುರುಷ
ಪೆಱತು ೨೦೦ ಬೇರೆ(ಯದು)
ಪೆಱವು ೫೪೫ ಬೇರೆಯವು, ಇತರ
ಪೆಱು ೨೮೮ ಪಡೆ, ಹೊಂದು
ಪೇರಡಿ ೧೦೬೫ ಹೆಮ್ಮಡಿ, ಪೂಜ್ಯಪಾದ
ಪೇರುಲಿ ೧೦೫೫ ದೊಡ್ಡ ಘೋಷ
ಪೊಂಕಂ ೮೮೭ ಉಬ್ಬು, ಉತ್ಸಾಹ
ಪೊಣರ್ ೫೦೯ ಹೋರಾಡು, ಪ್ರತಿಭಟಿಸು
ಪೊನ್ ೧೧೧ ಹೊನ್ನು, ಚಿನ್ನ (ಲೋಹ, Metal)
ಪೊನಲ್ ೮೭ ಹೊನಲು, ಹೊಳೆ, ಪ್ರವಾಹ
ಪೊನಲ್ ವರಿ ೧೧೨ ಹೊನಲಾಗಿ ಹರಿ, ಪ್ರವಾಹವಾಗಿ ಬರು
ಪೊಂದು ೧೮೦ ಸಾಯಿ
ಪೊಂಬಗಲ್ ೮೫ ಹೊನ್ನಿನ (ಕಿರಣವುಳ್ಳ) ಹಗಲು
ಪೊಯ್ಲು ೨೩೦ ಹೊಯಿಲು, ಏಟು
ಪೊರೆ ೧–೪ ಕಾಪಾಡು
ಪೊರೆನೆತ್ತರಳ್ ೪೬೬ ಹತ್ತಿರದ ರಕ್ತಸಂಬಂಧಿ
ಪೊರೆಯಿರ್ ೨೪೨ ಹತ್ತಿರವಿರು
ಪೊರ್ದು ೧೨೪೩ ಹೊದ್ದು, ಸೇರು
ಪೊರ್ದುಗೆ ೩೫೭ ಹೊಂದಿಕೆ, ಸಾಂಗತ್ಯ
ಪೊಱಗಾಗು ೧೩೮ ಎಣಿಕೆಗೆ ಸೇರದಿರು, ಅಪವಾದವಾಗಿರು (Be an exception)
ಪೊಱಗಿಡು ೨೬೪ ಹೊರಬೀಳು, ಪ್ರಕಾಶವಾಗು

ಪೊಲೆ ೯೩೮ ಹೊಲೆ, ಅಪವಿತ್ರವಾದ್ದು, ಅಮೇಧ್ಯ
ಪೊಲೆಗೆಯ್ ೪೪ ಅಪವಿತ್ರಮಾಡು, ಕಲು
ಪೊಲ್ಲ ೭೬೦ ಕೆಟ್ಟ [ಷಿತಮಾಡು, ಕೆಡಿಸು
ಪೊಲ್ಲದು ೧೯೪ ಕೆಟ್ಟದ್ದು
ಪೊಲ್ಲೆಣಿಕೆ ೧೧೨೨ ಕೆಟ್ಟ (ತಗದ) ಯೋಚನೆ
ಪೊೞಲ್ ೨೭ ಹೊಳಲು, ಊರು, ರಾಜ್ಯ
ಪೊೞಲನಣಿವ ೩೩೫ ರಾಜ್ಯ ಕಟ್ಟುವ
ಪೊೞಲರ್ ೧೨೧ ಊರಿನವರು, ಪ್ರಜೆಗಳು
ಪೊೞ್ತು ೩೨೩ ಹೊತ್ತು
ಪೋರ್ ೫೦ ಹೋರು, ಯುದ್ಧಮಾಡು ; ೧೭೮ ಯುದ್ಧ

ಬ

ಬಗೆ ೩೩ ಯೋಚಿಸು
ಬಟ್ಟಂ ೪೦೩ ಮಂಡಲ
ಬರಿ ೧೧೫೮ ಪಕ್ಕೆ
ಬರ್ಬರದ ೯೭೫ (ಗ್ರೀಕಲ್ಲದ) ಅರ್ಥವಾಗದ, ಕರ್ಕಶ (Barbarous)
ಬಲ್ಲಿದನ್ ೫೧ ಬಲಶಾಲಿ
ಬಸಿಱ್ ೪೫೦ ಬಸಿರು, ಹೊಟ್ಟೆ
ಬಳವಿ ೧೦೮೨ ಏಳಿಗೆ, ವೃದ್ಧಿ
ಬೞಿ, ವೞಿ ೩೪೧ ಮಾರ್ಗ, ದಾರಿ
ಬೞಿಯಟ್ಟು ೧೪೮ ದೂತನನ್ನು ಕಳಿಸು
ಬಾನ್ ೪೦೫ ಆಕಾಶ
ಬಾನವರ್ ೫೫೯ ದೇವತೆಗಳು
ಬಾನ್ಮೀನ್ ೧೦೬೮ (ಆಕಾಶದ) ನಕ್ಷತ್ರ
ಬಾಳ್ ೧೧೫೮ ಕತ್ತಿ
ಬಾೞ್ ೩ ಬಾಳು, ಬದುಕು
ಬಾೞ್ವೆ ೪೪೧ ಬಾಳು, ಬದುಕು, ಜೀವನ
ಬಿಗುರ ಬೆಱಗು ೭೩೪ ಭಯಗೊಡಿದ ಆಶ್ಚರ್ಯ
ಬಿಡುತೆ ೪೭೭ ಬಿಡುಗಡೆ
ಬೀೞ್ಕೆ ೯೬೭ ಬೀಳು, ಪತನ
ಬೆಱಗು ೭೭೪ ಆಶ್ಚರ್ಯ ; ೪೧೮ ದಿಗ್ಭ್ರಮೆ
ಬೆಸಗೊಳ್ ೫೭೬ (ಕೆಲಸವೇನೆಂದು) ಕೇಳು
ಬೆಸನ್ ೧೧೪೦ ಹೇಳಿದ ಕೆಲಸ, ಆಜ್ಞೆ
ಬೇಳ್ ೯೪೧ ಹೋಮ, ಬಲಿ
ಬೇಳ್ಕಟ್ಟೆ ೯೭೮ ಹೋಮಕುಂಡ, ಯಜ್ಞವೇದಿಕೆ, ಬಲಿಪೀಠ (Altar)
ಬೇಳ್ವೆ ೯೭೯ ಹೋಮ, ಯಜ್ಞ, ಬಲಿ

ಮ

ಮುಗುಳ್ದು ೯೫೦ ಮತ್ತೆ
ಮಡಲಿಡು ೬೫೭ ಕುಡಿಯೊಡೆದು ಹಬ್ಬು, [ವೃದ್ಧಿಯಾಗು
ಮಡಿ ೧೨ ಸಾಯಿ
ಮಣಲ್ ೫೬೫ ಮರಳು
ಮಣಿ ೫೪ ಬಾಗು (ಸೇವಿಸು)
ಮಣ್ಕುಪ್ಪೆ ೬೬ ಸಮಾಧಿಯ ಮೇಲಿನ ದಿಬ್ಬ
ಮಣ್ಮಾಡು ೭೦ ಹೆಣ ಹೂಳು, ಉತ್ತರಕ್ರಿಯೆ ಮಾಡು
ಮದವಳ್ ೫೪೪ ಮದುವೆ (ಗೊತ್ತಾದ) ಹೆಣ್ಣು (Bride, Betrothed)
ಮದಿಲ್ ೮೮೭ ಕೋಟೆಯ ಗೋಡೆ
ಮದುಮನೆ ೨೪೬ ಮದುವೆಯ ಮನೆ (Bridal chamber)
ಮದುವಾಸು ೫೯೭ ಮದುವೆಯ ಹಾಸಿಗೆ
ಮನೆವಾೞ್ತೆ ೬೧೯ ಮನೆವಾರ್ತೆ, ಗೃಹಕೃತ್ಯ
ಮರಲ್ ೧೮೪ ಹಿಂದಿರುಗು
ಮಱುಗು ಪಾಡು ೨೬೪ ಮರುಕ ಹುಟ್ಟಿಸುವ ಪಾಡು, ಶೋಚನೀಯಾವಸ್ಥೆ
ಮಱುನಲಿ ೧೩೨ (ಜನರ ನಲಿವಿಗೆ) ಪಡಿಯಾಗಿ, ಜವಾಬಾಗಿ, ನಲಿ
ಮಱೆ ೧೦೦೬ ಕಾಪು, ರಕ್ಷೆ
ಮಱೆನುಡಿ ೯೭೫ ಅರ್ಥವಾಗದ ಮಾತು
ಮಲೆ ೧೧೩ ಮೇಲೆ ಬಿದ್ದು ಕಾಡು ; ೩೭೨ ಬೆಟ್ಟ
ಮಸಗು ೧೧೩ ಕೆರಳು, ಉಕ್ಕು
ಮಸಣ ೨೪೬ ಶ್ಮಶಾನ, ರುದ್ರಭೂಮಿ
ಮಸುಳ್ ೯೩೧ ಮಸುಕಾಗು, ಕಾಂತಿಗುಂದು

ಮಾಟಂ ೨೪೫ ಮಾಡಿದ್ದು, ಕೃತ್ಯ
ಮಾಱಾಡು ೨೩೯ ಕೊಟ್ಟುತೆಗೆ, ಅದಲು ಬದಲು ಮಾಡು (Exchange, Bandy)
ಮಾಱಾನ್ ೪೮೯ ಎದಿರಿಸಿ. ಹೋರು, ಪ್ರತಿಭಟಿಸು
ಮಾಱ್ಪೊಳ್ ೮೭ ಪ್ರತಿಬಿಂಬಿಸು
ಮಾಱ್ಮಲೆ ೧೮೮೪ ಎದಿರಿಸಿ ಕಾಡು, ಪ್ರತಿಭಟಿಸು
ಮಾಡ್ಕೆ ೫೭ ರೀತಿ, ವಿಧಾನ ; ೧೬೨ ಮಾಡುವುದು
ಮಿಗಿಲ ಮಂತಣಂ ೧೪೯ ವಿಶೇಷ ಮಂತ್ರಸಭೆ
ಮಿಗು ೨೭ ಮೀರು, ಅತಿಕ್ರಮಿಸು
ಮೀನ್ ೧೦೬೮ ನಕ್ಷತ್ರ
ಮುಗಿಲ್ ೪೮೬ ಮೋಡ
ಮುಡಿ ೯೭ ತಲೆ ; ೯೯ ತಲೆಯುಡಿಗೆ, ಸೀಸಕ; ೧೦೪೬ ನೆತ್ತಿ
ಮುಡಿಗೆಯ್ ೪೧೮ (ತಣಿಯೆರೆದು) ಅಭಿಷೇಕ ಮಾಡು, ಶೀರ್ಷಾಲಂಕಾರ ಮಾಡು (ಕಿರೀಟವಿಟ್ಟಂತೆ)
ಮುಡಿಗೊಳ್ ೮೬೫ ಪೂರ್ಣಗೊಳ್ಳು, ಕೊನೆಗೊಳ್ಳು
ಮುಡಿಪು ೨೬೮ ಕಟ್ಟಿಟ್ಟ ಹರಕೆ ; ೧೦೩೩ ಪೂರ್ಣಮಾಡು
ಮುಡಿಯಪಾಡು ೭೫೪ ಕೊನೆಯ ಹಾಡು
ಮುನ್‌ಕುಱಿಪು ೯೨೨ ಮುನ್‌ಸೂಚನೆ
ಮುನ್‌ಗದಿರ್ ೮೬ ಮೊದಲ ಕಿರಣ, ಅರುಣೋದಯ
ಮುಂದಿಟ್ಟು ೯೩ ಮುಂದು (ಕಾರಣ) ಮಾಡಿಕೊಂಡು
ಮುನ್ನಱಿಕೆ ೫೩೩ ಮುನ್‌ತಿಳಿವಳಿಕೆ, ಮುಂದಾಲೋಚನೆ
ಮುನ್ನುಸಿರ್ ೬೯ ಮುಂದಾಗಿ ಹೇಳು
ಮುನ್‌ಪಾರ್ ೫೯೩ ಭವಿಷ್ಯ ನೋಡು
ಮುನ್‌ಪಾರ್ವನ್ ೯೧೬ ಭವಿಷ್ಯ ನೋಡಿ ಹೇಳುವವನು
ಮುನ್‌ಬಗೆ ೩೭೬ ಮೊದಲ ಮನಸ್ಸು
ಮುಯ್‌ಕಾಱು ೯೦೦ ಸೇಡು, ಪ್ರತೀಕಾರ, ಪ್ರತಿದ್ವೇಷ-ಕಾರು
ಮುಯ್ಯು ೧೯೮ ಹೆಗಲು, ಭುಜ
ಮುಱಿ ೩೧ ಒಡೆ, ಭಂಗಮಾಡು ; ೩೨೯ ಪಳಗಿಸು
ಮುಸುಱ್ ೧೧೨೯ ಮುತ್ತಿಕೊ
ಮೆಯ್‌ಗೊಳ್ ೮೮೯ ಮೈಮೇಲೆ ಬರು, ಆವೇಶಗೊಳ್ಳು
ಮೆಯ್‌ದೆಗೆ ೯೨ ಹಿಮ್ಮೆಟ್ಟು
ಮೆಯ್ಯಱಿವು ೧೧೫೯ (ಮೈಮೇಲಿನ) ಪ್ರಜ್ಞೆ
ಮೇಟಿ ೧೦೬೮ ಮುಂದಾಳು, ನಾಯಕ
ಮೊಱೆಪಾರ್ ೮೫೩ ಶರಣಹೊಗು, ಮರೆಹೊಗು
ಮೊಟ್ಗು ೧೦೮ ಬಗ್ಗು, ವಶವಾಗು, ಸೋಲು

ವ

ವಾಯ್ (ಬಾಯ್) ೮೬ ಬಾಗಿಲು, ದ್ವಾರ
ವಯಂ ೬೭೨ ವಯಸ್ಸು

ಸ

ಸಂದ ೫೮೫ ಪ್ರಸಿದ್ಧ (ಸಲ್)
ಸಬಳಂ ೧೮೧ ಈಟಿ
ಸಮೆದ ೪೧೭ ಮಾಡಿದ
ಸಯ್ ೭೬ ನಿಲ್ಲು, ತಡೆ
ಸವಿಯೆರೆ ೨೩ ರುಚಿಯಾದ ಆಹಾರ
ಸಾರೆ ೮೯೨ ಹತ್ತಿರ
ಸುರಿಗೆ ೯೦೧ ಕತ್ತಿ, ಕಠಾರಿ
ಸೂೞ್ ೨೦೩ ಸೂಳು, ಸರದಿ, ಸಲ
ಸೆಡಪು ೭೩ (ಭಯ ಮೊ. ಗಳಿಂದ) ಸೆಡೆತುಕೊಳ್ಳುವಂತೆ ಮಾಡು, ಬಿಗಿದುಕೊಳ್ಳುವಂತೆ ಮಾಡು
ಸೆಡೆ ೪೫೬ ಬಿಗಿದುಕೊ, ಬಿಗಿಯ ಮೇಲಿರು
ಸೋಲಂ ೭೩೭ (ಸೋಲಿಸುವ ಶಕ್ತಿ) ಮೋಹ